ಬುಧವಾರ, ಏಪ್ರಿಲ್ 23, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಕೇಶ್ ಮಿಂಚು

ಲಖನೌನಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಕೇಶ್ ಕುಮಾರ್ 4 ವಿಕೆಟ್ ಗಳಿಸಿ, ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಅವರನ್ನು ವಿಕೆಟ್‌ಕೀಪರ್ ಕೆ.ಎಲ್. ರಾಹುಲ್ ಅಭಿನಂದಿಸಿದರು





ಕಣಿವೆಯಲ್ಲಿ ಮರಣ ಮೃದಂಗ









1) ಜಮ್ಮು–ಕಾಶ್ಮೀರ ಸಚಿವೆ ಸಕೀನಾ ಇಟೂ ಅವರು ಉಗ್ರರ ದಾಳಿಯಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುವೊಬ್ಬರನ್ನು ಮಂಗಳವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು 2) ಅನಂತನಾಗ್‌ನಲ್ಲಿ ಭದ್ರತಾ ಪಡೆಗಳ ಸಿಬ್ಬಂದಿ ಪ್ರಯಾಣಿಕರನ್ನು ತೀವ್ರ ತಪಾಸಣೆಗೆ ಒಳಪಡಿಸಿದರು 3) ಉಗ್ರರ ದಾಳಿಯಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬಗಳ ಸದಸ್ಯರ ರೋದನ

–ಪಿಟಿಐ ಚಿತ್ರಗಳು

ಕಾಶ್ಮೀರಕ್ಕೆ ತೆರಳಿದ ರಾಜ್ಯದ ತಂಡ

ಬೆಂಗಳೂರು: ಕಾಶ್ಮೀರದಲ್ಲಿ ಭಯೋತ್ಪಾದಕರ ದಾಳಿಯಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಕರ್ನಾಟಕಕ್ಕೆ ಕರೆತರಲು, ರಾಜ್ಯದ ಅಧಿಕಾರಿಗಳು ಮತ್ತು ಪೊಲೀಸರ ತಂಡವು ಕಾಶ್ಮೀರಕ್ಕೆ ಹೊರಟಿದೆ. ಕನ್ನಡಿಗರ ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಘಟನೆ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ತುರ್ತು ಸಭೆ ನಡೆಸಿದರು. 'ಕನ್ನಡಿಗರನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರಲು ಕ್ರಮ ತೆಗೆದುಕೊಳ್ಳಿ. ಮೃತ ವ್ಯಕ್ತಿಯ ಶವವನ್ನು ತ್ವರಿತವಾಗಿ ತರಲು ಅಗತ್ಯ ವ್ಯವಸ್ಥೆ ಮಾಡಿ' ಎಂದು ಸೂಚಿಸಿದರು.

'ರಾಜ್ಯದ ತಂಡಕ್ಕೆ ಅಗತ್ಯ ನೆರವು ನೀಡಿ' ಎಂದು ಕರ್ನಾಟಕದ ದೆಹಲಿ ನಿವಾಸಿ ಆಯುಕ್ತರಿಗೂ ಸೂಚಿಸಿದರು.

ಅದರ ಬೆನ್ನಲ್ಲೇ ಐಪಿಎಸ್ ಅಧಿಕಾರಿ ಆರ್.ಚೇತನ್ ನೇತೃತ್ವದ ಪೊಲೀಸ್ ತಂಡ ಮತ್ತು ಅಧಿಕಾರಿಗಳ ತಂಡವು ಕಾಶ್ಮೀರಕ್ಕೆ ಹೊರಟಿದೆ.

ಭೇಲ್ ಪೂರಿ ತಿನ್ನುವಾಗಲೇ ದಾಳಿ ನಡೆಸಿದ ಉಗ್ರರು • 24ಕ್ಕೆ ಶಿವಮೊಗ್ಗಕ್ಕೆ ಮರಳಬೇಕಿದ್ದ ಕುಟುಂಬ

ಮಗನ ಸಾಧನೆ ಸಂಭ್ರಮಿಸಲು ತೆರಳಿದ್ದರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಈಚೆಗಷ್ಟೇ ಪ್ರಕಟವಾಗಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶದಲ್ಲಿ ಪುತ್ರ ಅಭಿಜಯ ವಾಣಿಜ್ಯ ವಿಭಾಗದಲ್ಲಿ ಶೇ 98 ಅಂಕ ಗಳಿಸಿದ್ದ. ಆ ಖುಷಿಗೆ ಕುಟುಂಬವನ್ನು ಕಾಶ್ಮೀರ ಪ್ರವಾಸಕ್ಕೆ ಕರೆದೊಯ್ದಿದ್ದ ಶಿವಮೊಗ್ಗದ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ ರಾವ್ (47) ಮಂಗಳವಾರ ಪಹಲ್ಗಾಮ್‌ನಲ್ಲಿ ಉಗ್ರರ ಗುಂಡಿಗೆ ಬಲಿಯಾಗಿದ್ದಾರೆ. ವಿಷಯ ತಿಳಿದು ಅವರ ಬಳಗ, ಸ್ನೇಹಿತರಿಗೆ ಆಘಾತವಾಗಿದೆ.

ಮಂಜುನಾಥ ರಾವ್, ಇಲ್ಲಿನ ವಿಜಯನಗರ ಬಡಾವಣೆಯ ಮೂರನೇ ಕ್ರಾಸ್ ನಿವಾಸಿ. ಶಿವಮೊಗ್ಗದ ವಿದ್ಯಾಭಾರತಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಪುತ್ರನ ಫಲಿತಾಂಶ ಬಂದ ನಾಲ್ಕು ದಿನಕ್ಕೆ (ಏ.19) ಕುಟುಂಬ ಸಮೇತ ಕಾಶ್ಮೀರಕ್ಕೆ ತೆರಳಿದ್ದರು. ಏ.24ರಂದು ಕುಟುಂಬ ಶಿವಮೊಗ್ಗಕ್ಕೆ



ಕಾಶ್ಮೀರದಲ್ಲಿ ಉಗ್ರರಿಂದ ಕೊಲೆಯಾಗುವ ಮುನ್ನ ಶಿವಮೊಗ್ಗದ ಮಂಜುನಾಥ್ ಅವರು ತಮ್ಮ ಪತ್ನಿಯೊಂದಿಗೆ ಕೊನೆಯದಾಗಿ ಮಾಡಿದ್ದ ವಿಡಿಯೊ ದೃಶ್ಯ

ವಾಪಸ್ ಬರಬೇಕಿತ್ತು.

ಇವರ ಪತ್ನಿ ಪಲ್ಲವಿ ಮ್ಯಾಮ್ಕೋಸ್‌ನ ಬೀರೂರು ಶಾಖೆಯಲ್ಲಿ ವ್ಯವಸ್ಥಾಪಕಿ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ತಂದೆ ಮಹಾಬಲ ರಾವ್ ನಿಧನರಾಗಿದ್ದು, ತಾಯಿ ಸುಮತಿ ಹಾಗೂ ಕುಟುಂಬದೊಂದಿಗೆ ವಾಸವಿದ್ದರು. ತಾಯಿಗೆ ಪುತ್ರ ಮೃತಪಟ್ಟಿರುವ ವಿಷಯ ಗೊತ್ತಿರಲಿಲ್ಲ. 'ನನ್ನ ಮಗನಿಗೆ ಏನೂ ಆಗಿಲ್ಲ ಅಲ್ಲವಾ? ಮಗ, ಸೊಸೆ, ಮೊಮ್ಮಗ ಸುರಕ್ಷಿತವಾಗಿ ವಾಪಸ್ ಬರುತ್ತಾರಲ್ಲವಾ? ಮನೆಗೆ ಬಂದವರನ್ನು ಅವರು ಕೇಳುತ್ತಿದ್ದದ್ದು ಕಂಡುಬಂತು. ತೀರ್ಥಹಳ್ಳಿಯಲ್ಲಿದ್ದ ತಂಗಿ ವಿಷಯ ತಿಳಿದು ಆಗಷ್ಟೇ ತವರಿಗೆ ಬಂದಿದ್ದರು.

'ಮಧ್ಯಾಹ್ನ 3.30ಕ್ಕೆ ಪಲ್ಲವಿ ಕರೆ ಮಾಡಿ, ಭೇಲ್‌ಪೂರಿ ತಿನ್ನುತ್ತಿದ್ದಾಗಲೇ ಭಯೋತ್ಪಾದಕರ ದಿಢೀರ್ ದಾಳಿ ನಡೆಯಿತು. ಪತಿ ಸಾವಿಗೀಡಾದರು ಎಂಬ ವಿಷಯ ತಿಳಿಸಿದರು. ಸಾಗರದಿಂದ ತೆರಳಿದ್ದ ಪ್ರವಾಸಿಗರ ತಂಡ ಅವರ ಜೊತೆ ಇದೆ. ಅವರೊಂದಿಗೆ ನಾವೂ ಕೂಡ ಸಂಪರ್ಕದಲ್ಲಿದ್ದೇವೆ' ಎಂದು ಮಂಜುನಾಥ ರಾವ್ ಮನೆಗೆ ಭೇಟಿ ನೀಡಿದ್ದ ಮ್ಯಾಮ್ಕೋಸ್ ಉಪಾಧ್ಯಕ್ಷ ಎಚ್.ಎಸ್. ಮಹೇಶ್ ಮಾಧ್ಯಮದವರಿಗೆ ತಿಳಿಸಿದರು.

'ಜಮ್ಮು-ಕಾಶ್ಮೀರದ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ಅಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ಮೇಲೆ ಮಂಜುನಾಥ ರಾವ್ ಅವರ ಪಾರ್ಥಿವ ಶರೀರವನ್ನು ಶಿವಮೊಗ್ಗಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ' ಎಂದು ಶಿವಮೊಗ್ಗ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮಂಜುನಾಥ ರಾವ್ ನಿವಾಸಕ್ಕೆ ಶಿವಮೊಗ್ಗ ಶಾಸಕ ಎಸ್.ಎನ್.ಚನ್ನಬಸಪ್ಪ, ಸಂಸದ ಬಿ.ವೈ. ರಾಘವೇಂದ್ರ, ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಭೇಟಿ ನೀಡಿದರು.

'ಐಸ್ ಕ್ರೀಂ ನಮ್ಮ ಜೀವ ಉಳಿಸಿತು!'

'ದಾರಿ ಮಧ್ಯೆ ಐಸ್‌ಕ್ರೀಂ ತಿನ್ನಲು ನಮ್ಮ ತಂಡ ನಿಂತದ್ದರಿಂದ ಪಹಲ್‌ಗಾಮ್‌ನಲ್ಲಿ ಭಯೋತ್ಪಾದಕರ ದಾಳಿ ನಡೆದ ಸ್ಥಳ ತಲುಪಲು ತಡವಾಯಿತು. ಇಲ್ಲದಿದ್ದರೆ ನಾವೂ ದುರಂತಕ್ಕೆ ಸಾಕ್ಷಿ ಆಗಿರುತ್ತಿದ್ದೆವು. ದೇವರ ದಯೆಯಿಂದ ಬದುಕಿದ್ದೇವೆ' ಎಂದು ಬೆಂಗಳೂರಿನ ನ್ಯೂ ತಿಪ್ಪಸಂದ್ರ ಬಡಾವಣೆಯ ನಿವಾಸಿ ಸುಮನಾ ಭಟ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸುಮನಾ ಭಟ್ ಸೇರಿದಂತೆ ಟೈಮೆಕ್ಸ್ ಸಂಸ್ಥೆಯ 17 ಜನ ಉದ್ಯೋಗಿಗಳು ಜಮ್ಮುವಿಗೆ ಹೋಗಿ ಅಲ್ಲಿಂದ ಮಂಗಳವಾರ ಪಹಲ್‌ಗಾಮ್‌ಗೆ ತೆರಳಿದ್ದರು.

'ಭಯೋತ್ಪಾದಕರ ದಾಳಿ ನಡೆದ ಸ್ಥಳವನ್ನು ನಮ್ಮ ಗೈಡ್ ಮಿನಿ ಸ್ವಿಟ್ಜರ್ಲೆಂಡ್ ಎಂದು ಬಣ್ಣಿಸಿದ್ದರು. ಹೀಗಾಗಿ ನಾವೂ ಭಾರೀ ಕೌತುಕದಿಂದಲೇ ಕುದುರೆ ಮೇಲೆ ಅಲ್ಲಿಗೆ ಹೊರಟಿದ್ದೆವು. ನಾವು ಐಸ್‌ಕ್ರೀಂ ತಿನ್ನುತ್ತಾ ನಿಂತಿದ್ದರಿಂದ ನಮ್ಮೊಂದಿಗಿದ್ದ ಬೇರೆ ಪ್ರವಾಸಿಗರು ಮುಂದೆ ಹೋಗಿದ್ದರು. ಆ ಸ್ಥಳ ಇನ್ನು ಮೂರು ಕಿ.ಮೀ ಇರುವಾಗ ಕುದುರೆಯಿಂದ ನಮ್ಮನ್ನು ಇಳಿಸಿದ ಘೋಡಾವಾಲಾಗಳು ವಾಪಸ್ ಹೋಗುವಂತೆ ಹೇಳಿ ಅವರೆಲ್ಲ ಅಲ್ಲಿಂದ ಓಡಿಹೋದರು. ನಾವು ಜೀವ ಭಯದಲ್ಲೇ ಮೂರು ಕಿ.ಮೀ ನಡೆದುಕೊಂಡು ಪಹಲ್‌ಗಾಮ್‌ನ ನಮ್ಮ ಹೋಟೆಲ್‌ಗೆ ಬಂದೆವು. ಅಲ್ಲಿ ಲಗೇಜ್ ತೆಗೆದುಕೊಂಡು ಭಾರತೀಯ ಸೇನೆಯ ವಾಹನಗಳಲ್ಲಿ ಜಮ್ಮುವಿಗೆ ಮರಳಿದೆವು' ಎಂದು ಸುಮನಾ ಭಟ್ ತಿಳಿಸಿದರು.

ಬೆಂಗಳೂರಿನ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್ ಪಟ್ಟಣದಲ್ಲಿ ನಡೆದ ಉಗ್ರರ ದಾಳಿಯಲ್ಲಿ ಬೆಂಗಳೂರಿನ ಮತ್ತಿಕೆರೆಯ ನಿವಾಸಿ ಭರತ್ ಭೂಷಣ್ ಎಂಬುವರು ಮೃತಪಟ್ಟಿದ್ದಾರೆ.

ಭರತ್ ಅವರು ಪತ್ನಿ ಸುಜಾತಾ ಹಾಗೂ ಮೂರು ವರ್ಷದ ಪುತ್ರನ ಜೊತೆಗೆ ಕಾಶ್ಮೀರದ ಪ್ರವಾಸಕ್ಕೆ ತೆರಳಿದ್ದರು. ಸುಜಾತಾ ಹಾಗೂ ಮೂರು ವರ್ಷದ ಮಗು ಪಾರಾಗಿದ್ದಾರೆ. ಸುಜಾತಾ ಅವರೊಂದಿಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಮಾತನಾಡಿದ್ದಾರೆ. ಈ ಸಂಬಂಧ ಅವರು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಭರತ್ ಭೂಷಣ್ ಅವರು ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಅವರ ತಂಗಿಯ ಗಂಡನ ಸ್ನೇಹಿತ ಎಂದು ಗೊತ್ತಾಗಿದೆ.

ದಾಳಿ: ಜಮ್ಮುವಿನಲ್ಲೂ ಭದ್ರತೆ ಹೆಚ್ಚಳ

ಜಮ್ಮು (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ದಾಳಿ ಖಂಡಿಸಿ ವಿವಿಧ ಸಂಘಟನೆಗಳು ಜಮ್ಮುವಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು, ಜಮ್ಮುವಿನಲ್ಲೂ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ಕಾಂಗ್ರೆಸ್ ಘಟಕ, ಹಲವು ಬಲಪಂಥೀಯ ಸಂಘಟನೆಗಳು ಕೂಡ ಬುಧವಾರ ಜಮ್ಮುವಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಕರೆ ನೀಡಿವೆ.

ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಪೊಲೀಸ್ ನಿಯಂತ್ರಣ ಕೇಂದ್ರದಲ್ಲಿ ಜಮ್ಮು ಪ್ರಾದೇಶಿಕ ವಿಭಾಗೀಯ ಆಯುಕ್ತ ರಮೇಶ್ ಕುಮಾರ್, ಐಜಿಪಿ ಭೀಮ್‌ಸೇನ್ ಅವರು ಸಭೆ ನಡೆಸಿದರು.

ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಅರೆಸೇನಾ ಪಡೆಗಳನ್ನು ಈಗಾಗಲೇ ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ.

ಬುಧವಾರ ಬೆಳಿಗ್ಗೆ ನಡೆಯುವ



ಪಹಲ್ಗಾಮ್‌ನಲ್ಲಿ ದಾಳಿ ನಡೆದ ಬೆನ್ನಲ್ಲೇ, ಅನಂತನಾಗ್ ಜಿಲ್ಲೆಯಲ್ಲಿ ಗಸ್ತು ತಿರುಗಿದ ಸೇನಾ ಯೋಧರು

–ಪಿಟಿಐ ಚಿತ್ರ

ಪ್ರತಿಭಟನೆಯಲ್ಲಿ ಜಮ್ಮು ನಗರ ಹಾಗೂ ಗ್ರಾಮೀಣ ಘಟಕದ ಎಲ್ಲ ನಾಯಕರು ಹಾಗೂ ಕಾರ್ಯಕರ್ತರು ಪಕ್ಷದ ಕೇಂದ್ರ ಕಚೇರಿಯ ಮುಂದೆ ಹಾಜರಾಗಬೇಕು ಎಂದು ಕಾಂಗ್ರೆಸ್ ಪಕ್ಷವು ತಿಳಿಸಿದೆ.

ಉಳಿದಂತೆ ಶಿವಸೇನಾ (ಯುಬಿಟಿ), ಡೋಗ್ರಾ, ರಾಷ್ಟ್ರೀಯ ಬಜರಂಗದಳ, ವಾಣಿಜ್ಯ ಒಕ್ಕೂಟ, ವಕೀಲರು, ವಿವಿಧ ಮಾರುಕಟ್ಟೆಗಳು ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

'ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟ'

ಸರ್ವಪಕ್ಷಗಳ ಸಭೆ ಕರೆಯಲು ಕಾಂಗ್ರೆಸ್ ಆಗ್ರಹ • ಕಠಿಣ ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ನಡೆದಿರುವ ಉಗ್ರರ ದಾಳಿಯನ್ನು ಬಲವಾಗಿ ಖಂಡಿಸಿರುವ ವಿರೋಧ ಪಕ್ಷಗಳು ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸುವುದಾಗಿ ಮಂಗಳವಾರ ಹೇಳಿವೆ.

'ಜಮ್ಮು–ಕಾಶ್ಮೀರದಲ್ಲಿ ಸಹಜಸ್ಥಿತಿ ಇದೆ ಎಂದು ಟೊಳ್ಳು ಹೇಳಿಕೆಗಳನ್ನು ನೀಡುವ ಬದಲು ಈ ಕೃತ್ಯಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಹೊಣೆ ಹೊರಬೇಕು' ಎಂದು ಆಗ್ರಹಿಸಿವೆ.

'ಇದು ಸಾಮೂಹಿಕ ಇಚ್ಛಾಶಕ್ತಿ ಪ್ರದರ್ಶಿಸುವ ಸಮಯ. ಕೇಂದ್ರ ಸರ್ಕಾರ ಕೂಡಲೇ ಸರ್ವಪಕ್ಷಗಳ ಸಭೆ ಕರೆದು, ಎಲ್ಲ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಈ ದಾಳಿಗೆ ಪರಿಣಾಮಕಾರಿ ಪ್ರತ್ಯುತ್ತರ ನೀಡಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಒತ್ತಾಯಿಸಿದ್ದಾರೆ.

'ಪ್ರವಾಸಿಗರನ್ನು ಗುರಿಯಾಗಿಸಿ ನಡೆದಿರುವ ಈ ನೀಚ ಕೃತ್ಯ ಮಾನವೀಯತೆಗೇ ಕಪ್ಪುಚುಕ್ಕೆ ಇದ್ದಂತೆ. ರಾಷ್ಟ್ರದ ಭದ್ರತೆಯೇ ಪ್ರಮುಖವಾದದ್ದು. ಹೀಗಾಗಿ ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭಯೋತ್ಪಾದಕರ ದಾಳಿಯಿಂದ ಬಹಳ ದುಃಖಿತಳಾಗಿರುವೆ. ಇದು ಅತ್ಯಂತ ಖಂಡನೀಯ ಹಿಂಸಾಕೃತ್ಯ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಉಗ್ರರ ದಾಳಿ ಅತ್ಯಂತ ಖಂಡನೀಯ. ತಪ್ಪಿತಸ್ಥರು ಕಠಿಣ ಶಿಕ್ಷೆ ಅರ್ಹರು

ಅಸಾದುದ್ದೀನ್ ಒವೈಸಿ
ಎಐಎಂಐಎಂ ಮುಖ್ಯಸ್ಥ

'ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ಇಡೀ ದೇಶವೇ ಒಟ್ಟಾಗಿ ಹೋರಾಡಲಿದೆ' ಎಂದಿರುವ ಖರ್ಗೆ, ಈ ದಾಳಿಯಲ್ಲಿ ತಮ್ಮವರನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಸಂತಾಪ ಹೇಳಿದ್ದಾರೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದೂ ಹಾರೈಸಿದ್ದಾರೆ.

'ಇದು ಹೇಡಿತನದ ಕೃತ್ಯ' ಎಂದು ಹೇಳಿರುವ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಇದು ಖಂಡನೀಯ ಹಾಗೂ ಹೃದಯವಿದ್ರಾವಕ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಜಮ್ಮು–ಕಾಶ್ಮೀರದಲ್ಲಿ ಸಹಜಸ್ಥಿತಿ ನೆಲಸಿದೆ ಎಂದು ಸುಳ್ಳು ಹೇಳುವ ಬದಲು ಇಂತಹ ಬರ್ಬರ ಘಟನೆಗಳು ಮತ್ತೆ ಮರುಕಳಿಸದಂತೆ ಹಾಗೂ ಮುಗ್ಧ ಭಾರತೀಯರು ಈ ರೀತಿ ಪ್ರಾಣ ಕಳೆದುಕೊಳ್ಳುವುದನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು' ಎಂದೂ ರಾಹುಲ್ ಆಗ್ರಹಿಸಿದ್ದಾರೆ.

ದಾಳಿ ಖಂಡನೀಯ

ಯಾವುದೇ ದೃಷ್ಟಿಯಿಂದ ನೋಡಿದರೂ ಇದು ಖಂಡನೀಯ ದಾಳಿ. ಭಯೋತ್ಪಾದಕ ದಾಳಿ ಕುರಿತ ಚಿತ್ರಗಳು ಭಯಂಕರ ಹಾಗೂ ಹೃದಯವಿದ್ರಾವಕ. ಜಮ್ಮು–ಕಾಶ್ಮೀರದಲ್ಲಿ ಸುರಕ್ಷಿತ ವಾತಾವರಣ ನಿರ್ಮಿಸಿದಾಗ ಮಾತ್ರ ಸ್ಥಳೀಯರು ಹಾಗೂ ಪ್ರವಾಸಿಗರು ಕೂಡ ಸುರಕ್ಷಿತವಾಗಿರುತ್ತಾರೆ

ಅಖಿಲೇಶ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಇದು ಹೇಡಿತನದ ಕೃತ್ಯ

ಉಗ್ರರು ನಡೆಸಿರುವ ಈ ಹೇಡಿತನದ ದಾಳಿ ಖಂಡನೀಯ. ಮುಗ್ಧರನ್ನು ಗುರಿಯಾಗಿಸಿದ ನಡೆದ ಕೃತ್ಯ ಮಾನವೀಯತೆ ಮೇಲಿನ ದಾಳಿ. ಎಲ್ಲ ಬಗೆಯ ಭಯೋತ್ಪಾದನೆಯನ್ನು ಪಕ್ಷ ಖಂಡಿಸುತ್ತದೆ. ಈ ದುಃಖದ ಗಳಿಗೆಯಲ್ಲಿ ದೇಶವೇ ಒಗ್ಗಟ್ಟಾಗಿದೆ

ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು

ಈ ಹೀನ ಕೃತ್ಯ ಎಸಗಿದವರ ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗುವುದನ್ನು ಕೇಂದ್ರ ಸರ್ಕಾರ ಖಾತ್ರಿಪಡಿಸಬೇಕು. ಜಮ್ಮು–ಕಾಶ್ಮೀರ ಜನರ ಸಮಸ್ಯೆಗಳಿಗೆ ರಾಜಕೀಯ ಪರಿಹಾರ ಕಂಡುಕೊಳ್ಳಲು ಕೇಂದ್ರ ಕ್ರಮ ಕೈಗೊಳ್ಳಬೇಕು

ಸಿಪಿಎಂ

ಕೋಮು ಸಂಕಥನ ಸೃಷ್ಟಿಗೆ ಬಳಕೆ ಸಾಧ್ಯತೆ

ಈ ಭಯೋತ್ಪಾದಕ ದಾಳಿಯನ್ನು ಆಕ್ರಮಣಕಾರಿ ದೇಶಭಕ್ತಿ ಮತ್ತು ಕೋಮು ಸಂಕಥನ ಸೃಷ್ಟಿಗೆ ಬಳಸಿಕೊಳ್ಳುವ ಪ್ರಯತ್ನಗಳು ನಡೆಯಬಾರದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶದಾದ್ಯಂತ ಜನರು ಒಟ್ಟಾಗಿ ನಿಲ್ಲುವುದು ಅಗತ್ಯ. ಇಂತಹ ದುರಂತಗಳನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ವಿಭಜಕ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕು.

ಜಮ್ಮು–ಕಾಶ್ಮೀರದಲ್ಲಿ ಸಹಜಸ್ಥಿತಿ ಇರುವ ಬಗ್ಗೆ ಹಾಗೂ ರಾಷ್ಟ್ರೀಯ ಭದ್ರತೆ ಕುರಿತು ಕೇಂದ್ರ ಸರ್ಕಾರ ಎದೆ ತಟ್ಟಿಕೊಳ್ಳುತ್ತಿದೆ. ವಾಸ್ತವದಲ್ಲಿ ಇಲ್ಲಿನ ನಿವಾಸಿಗಳು, ವಲಸೆ ಕಾರ್ಮಿಕರು ಹಾಗೂ ಈಗ ಪ್ರವಾಸಿಗರ ಮೇಲೆ ದಾಳಿ ಹೆಚ್ಚುತ್ತಿದೆ ಎಂದು ಹೇಳಿದೆ.

ಸಿಪಿಎಂ(ಎಂಎಲ್)

ಕಳೆದ 25 ವರ್ಷಗಳಲ್ಲಿ ಸಾರ್ವಜನಿಕರ ಮೇಲೆ ಕಾಶ್ಮೀರದಲ್ಲಿ ನಡೆದ ಉಗ್ರರ ದಾಳಿಗಳು

- **ಮಾರ್ಚ್, 2000:** ಸಿಖ್ ಸಮುದಾಯದ ಮೇಲೆ ದಾಳಿ. **36** ಸಾವು
- **ಆಗಸ್ಟ್, 2000:** ಅಮರನಾಥ ಯಾತ್ರಿಗಳು ಸೇರಿದಂತೆ ಸಾರ್ವಜನಿಕರ ಮೇಲೆ ದಾಳಿ. **32** ಸಾವು
- **ಜುಲೈ, 2001:** ಅಮರನಾಥ ಯಾತ್ರಿಗಳ ಮೇಲೆ ದಾಳಿ. **13** ಸಾವು
- **ಅಕ್ಟೋಬರ್, 2001:** ಶಾಸಕರ ಭವನ ಸಂಕೀರ್ಣದ ಮೇಲೆ ಆತ್ಮಾಹುತಿ ಬಾಂಬ್ ದಾಳಿ. **36** ಸಾವು
- **ನವೆಂಬರ್, 2002:** ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾಂಬ್ ದಾಳಿ. **19** ಸಾವು
- **ಮಾರ್ಚ್, 2003:** ಕಾಶ್ಮೀರಿ ಪಂಡಿತರ ಮೇಲೆ ದಾಳಿ. **24** ಸಾವು
- **ಜೂನ್, 2005:** ಸಾರ್ವಜನಿಕರ ಮೇಲೆ ದಾಳಿ. **13** ಸಾವು
- **ಜೂನ್, 2006:** ಸಾರ್ವಜನಿಕರ ಮೇಲೆ ದಾಳಿ. **9** ಸಾವು
- **ಜುಲೈ, 2017:** ಅಮರನಾಥ ಯಾತ್ರಿಗಳಿದ್ದ ಬಸ್ ಮೇಲೆ ದಾಳಿ. **8** ಸಾವು
- **ಜೂನ್, 2024:** ಹಿಂದೂ ಯಾತ್ರಿಗಳಿದ್ದ ಬಸ್ ಮೇಲೆ ದಾಳಿ. **9** ಸಾವು
- **ಅಕ್ಟೋಬರ್, 2024:** ವಲಸೆ ಕಾರ್ಮಿಕರು, ಡಾಕ್ಟರ್ ಮೇಲೆ ಗುಂಡಿನ ದಾಳಿ. **7** ಸಾವು

ಪುಣೆ ಕುಟುಂಬಕ್ಕೆ ನೆರವು–ಶಿಂದೆ

ಪ್ರಜಾವಾಣಿ ವಾರ್ತೆ



ಏಕನಾಥ ಶಿಂದೆ

ಮುಂಬೈ: ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ ಗಾಯಗೊಂಡಿರುವ ಪುಣೆ ಮೂಲದ ಜಗದಾಳೆ ಕುಟುಂಬದ ನೆರವಿಗೆ ಧಾವಿಸಿದ್ದಾಗಿ ಮಹಾರಾಷ್ಟ್ರ ಸರ್ಕಾರ ಮಂಗಳವಾರ ಹೇಳಿದೆ.

'ಜಗದಾಳೆ ಕುಟುಂಬಕ್ಕೆ ಎಲ್ಲ ನೆರವು ನೀಡುತ್ತೇವೆ' ಎಂದು ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರು ತಿಳಿಸಿದರು.

ಉಗ್ರರ ದಾಳಿಯಿಂದಾಗಿ ಉದ್ಭವಿಸಿರುವ ಪರಿಸ್ಥಿತಿ ಅವಲೋಕಿಸುವುದಕ್ಕಾಗಿ ನಡೆದ ಸಭೆ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇರಲಿದೆ ಎಂದು ನಾನು ಭರವಸೆ ನೀಡುತ್ತೇನೆ. ಈ ದುಷ್ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ರಮ ತೆಗೆದುಕೊಳ್ಳುವರು' ಎಂದು ಶಿಂದೆ ಹೇಳಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಡಿಸಿಎಂ ಅಜಿತ್ ಪವಾರ್ ಸಹ ಸಭೆಯಲ್ಲಿ ಪಾಲ್ಗೊಂಡಿದ್ದರು. ಪುಣೆಯ ಅಸಾವರಿ ಜಗದಾಳೆ, ಪ್ರಗತಿ ಜಗದಾಳೆ, ಸಂತೋಷ್ ಜಗದಾಳೆ, ಕೌಸ್ತುಭ ಜಗದಾಳೆ ಹಾಗೂ ಸಂಗೀತಾ ಗಬೋಟೆ ಜಮ್ಮು–ಕಾಶ್ಮೀರಕ್ಕೆ ತೆರಳಿದ್ದು, ಈ ಪೈಕಿ ಸಂತೋಷ್ ಹಾಗೂ ಕೌಸ್ತುಭ ಅವರಿಗೆ ಗುಂಡು ತಗುಲಿ, ಗಾಯಗಳಾಗಿವೆ.

ಆಗ್ರಹ: ಮಹಾರಾಷ್ಟ್ರದ ಕುಟುಂಬಕ್ಕೆ ನೆರವು ನೀಡುವಂತೆ ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರನ್ನು ಎನ್‌ಸಿಪಿ(ಎಸ್‌ಪಿ) ಸಂಸದೆ ಸುಪ್ರಿಯಾ ಸುಳೆ ಆಗ್ರಹಿಸಿದ್ದಾರೆ.

ಪಾಕಿಸ್ತಾನದ ವಿರುದ್ಧ ಪ್ರತಿಭಟನೆ

ಜಮ್ಮು (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿ ಖಂಡಿಸಿ ರಾಷ್ಟ್ರೀಯ ಬಜರಂಗ ದಳ ಮತ್ತು ಭಾರತೀಯ ಜನತಾ ಮೋರ್ಚಾ ಸಂಘಟನೆಗಳು ಮಂಗಳವಾರ ಜಮ್ಮುವಿನ ವಿವಿಧೆಡೆ ಪ್ರತಿಭಟನೆ ನಡೆಸಿದವು. ಪಾಕಿಸ್ತಾನದ ವಿರುದ್ಧ ಘೋಷಣೆಗಳನ್ನು ಕೂಗಿ, ಅದರ ಧ್ವಜವನ್ನು ಸುಡಲಾಯಿತು.

'ಜಮ್ಮು ಮತ್ತು ಕಾಶ್ಮೀರದಿಂದ ಭಯೋತ್ಪಾದಕರನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಹಿಂದೂಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಅಮರನಾಥ ಯಾತ್ರೆಯು ಆರಂಭಗೊಳ್ಳುವುದರಲ್ಲಿ ಇತ್ತು. ಯಾತ್ರೆಗಾಗಿ ನೋಂದಣಿ ಪ್ರಕ್ರಿಯೆಯು ಆರಂಭಗೊಂಡಿತ್ತು. ಇದೇ ವೇಳೆಯೇ ದಾಳಿ ನಡೆದಿದೆ' ಎಂದು ಬಜರಂಗ ದಳದ ಅಧ್ಯಕ್ಷ ರಾಕೇಶ್ ಕುಮಾರ್ ಹೇಳಿದರು.

'ಜನರನ್ನು ಕೊಲ್ಲುವ ಮುನ್ನ ಅವರ ಗುರುತನ್ನು ಕೇಳಲಾಯಿತು ಎಂದು ದಾಳಿಯಲ್ಲಿ ಬದುಕುಳಿದವರು ಹೇಳುತ್ತಿದ್ದಾರೆ. ಇದೊಂದು ಉದ್ದೇಶಿತ ದಾಳಿ ಎಂದು ಇದರಿಂದ ತಿಳಿಯುತ್ತದೆ' ಎಂದರು.

ನಾನು ಮತ್ತು ಉಷಾ ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇವೆ. ಇದೊಂದು ಭಯಾನಕ ದಾಳಿಯಾಗಿದೆ.

ಜೆ.ಡಿ. ವ್ಯಾನ್ಸ್, ಅಮೆರಿಕ ಉಪಾಧ್ಯಕ್ಷ

'ಭಾರತದೊಂದಿಗೆ ಇಸ್ರೇಲ್ ನಿಲ್ಲಲಿದೆ'

ಜೆರುಸಲೇಮ್(ಪಿಟಿಐ): 'ಜಮ್ಮು–ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ನಡೆದಿರುವ ಉಗ್ರರ ದಾಳಿಯಿಂದ ಅತೀವ ದುಃಖವಾಗಿದೆ' ಎಂದು ಹೇಳಿರುವ ಇಸ್ರೇಲ್, ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ತಾನು ಭಾರತದೊಂದಿಗೆ ನಿಲ್ಲುವುದಾಗಿ ಹೇಳಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯನ್ ಝಾರ್, ದಾಳಿಯಲ್ಲಿ ಮೃತಪಟ್ಟಿರುವವರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

ಪ್ರಧಾನಿ ಮೋದಿ ಬೆಂಬಲಿಸಿದ್ದಕ್ಕೆ ನಿಂದಿಸಿದರು: ಸಂತ್ರಸ್ತರು

'ಉಗ್ರರು ಇಸ್ಲಾಮಿಕ್ ಸಾಲು ಪಠಿಸಲು ಹೇಳಿದರು...'

ಮುಂಬೈ (ಪಿಟಿಐ): ಭಯೋತ್ಪಾದಕರು ಬಂದಾಗ ಕುಟುಂಬವು ಭಯದಿಂದ ಡೇರೆಯೊಂದರ ಒಳಗೆ ಅಡಗಿತ್ತು. 54 ವರ್ಷ ವಯಸ್ಸಿನ ಸಂತೋಷ್ ಜಗದಾಳೆ ಎನ್ನುವವರಿಗೆ ಹೊರಬರಲು ಹೇಳಿದ ಉಗ್ರರು, ಇಸ್ಲಾಮಿಕ್ ಸಾಲುಗಳನ್ನು ಹೇಳಲು ಸೂಚಿಸಿದರು.

ಅವರಿಗೆ ಅದನ್ನು ಹೇಳಲು ಬರದೆ ಇದ್ದಾಗ, ಸಂತೋಷ್ ಅವರ ಮೇಲೆ ಮೂರು ಬಾರಿ ಗುಂಡು ಹಾರಿಸಿದರು. ಒಮ್ಮೆ ತಲೆಗೆ, ಕಿವಿಯ ಹಿಂದೆ ಒಮ್ಮೆ ಹಾಗೂ ಬೆನ್ನಿಗೆ ಒಮ್ಮೆ ಗುಂಡು ಹಾರಿಸಲಾಯಿತು.

ಸಂತೋಷ್ ಅವರ 26 ವರ್ಷ ವಯಸ್ಸಿನ ಮಗಳು ಅಸಾವರಿ ಅವರು ತಮ್ಮ ಕುಟುಂಬ ಎದುರಿಸಿದ ಭಯಾನಕ ಪರಿಸ್ಥಿತಿಯ ವಿವರಗಳನ್ನು ಸುದ್ದಿಸಂಸ್ಥೆಯ ಜೊತೆ ಹಂಚಿಕೊಂಡಿದ್ದಾರೆ.

ಸಂತೋಷ್ ಅವರು ನೆಲದ ಮೇಲೆ ಬಿದ್ದ ನಂತರ ಉಗ್ರರು ಅವರ ಪಕ್ಕದಲ್ಲೇ ಇದ್ದ ಇನ್ನೊಬ್ಬರ (ಯುವತಿಯ ಸಂಬಂಧಿ) ಮೇಲೆ ಹಲವು ಸುತ್ತು ಗುಂಡು ಹಾರಿಸಿದರು. 'ನಾವು ಐವರು ಅಲ್ಲಿಗೆ ಹೋಗಿದ್ದೆವು. ಗುಂಡಿನ ದಾಳಿ ನಡೆದಾಗ ಬೈಸರನ್ ಕಣಿವೆಯಲ್ಲಿ



ಗಾಯಗೊಂಡ ಪ್ರವಾಸಿಗರೊಬ್ಬರನ್ನು ವೈದ್ಯಕೀಯ ಸಿಬ್ಬಂದಿಯು ಅನಂತನಾಗ್‌ನ ಆಸ್ಪತ್ರೆಯೊಂದಕ್ಕೆ ಕರೆದೊಯ್ದರು

–ಎಎಫ್‌ಪಿ ಚಿತ್ರ

ಇದ್ದೆವು' ಎಂದು ಅವರು ಹೇಳಿದ್ದಾರೆ.

ತಮ್ಮ ತಂದೆ ಮತ್ತು ಸಂಬಂಧಿ ಮೃತಪಟ್ಟಿದ್ದಾರೆಯೇ ಅಥವಾ ಬದುಕಿದ್ದಾರೆಯೇ ಎಂಬುದು ಅಸಾವರಿ ಅವರಿಗೆ ತಿಳಿದಿಲ್ಲ. ಅಸಾವರಿ, ಅವರ ತಾಯಿ ಮತ್ತು ಇನ್ನೊಬ್ಬರು ಮಹಿಳೆಯನ್ನು ಉಗ್ರರು ಬಿಟ್ಟು ಕಳುಹಿಸಿದರು. ಸ್ಥಳೀಯರು ಮತ್ತು ಭದ್ರತಾ ಸಿಬ್ಬಂದಿ ಈ ಮೂವರನ್ನು ಪಹಲ್ಗಾಮ್ ಕ್ಲಬ್‌ಗೆ ಕರೆತಂದರು.

ಅಸಾವರಿ ಅವರು ಪುಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕುಟುಂಬವು ಬೈಸರನ್‌ಗೆ ಪ್ರವಾಸಕ್ಕೆ ತೆರಳಿತ್ತು. ಗುಂಡಿನ ದಾಳಿ ನಡೆಸಿದ ಉಗ್ರರು ಸ್ಥಳೀಯ ಪೊಲೀಸರ ಸಮವಸ್ತ್ರವನ್ನು ಹೋಲುವ ಬಟ್ಟೆ ಧರಿಸಿದ್ದರು.

'ನಾವು ರಕ್ಷಣೆಗಾಗಿ ಹತ್ತಿರದಲ್ಲಿದ್ದ ಡೇರೆಯೊಂದಕ್ಕೆ ತಕ್ಷಣವೇ ತೆರಳಿದೆವು. ನಮ್ಮ ಜೊತೆ ಆರೇಳು ಮಂದಿ ಇತರ ಪ್ರಯಾಣಿಕರೂ ಇದ್ದರು. ನಾವು ರಕ್ಷಣೆಗಾಗಿ ನೆಲದ ಮೇಲೆ ಉರುಳಿಕೊಂಡೆವು. ಗುಂಡಿನ ಚಕಮಕಿಯು ಭದ್ರತಾ ಸಿಬ್ಬಂದಿ ಮತ್ತು ಭಯೋತ್ಪಾದಕರ ನಡುವೆ ನಡೆಯುತ್ತಿದೆ ಎಂದು ನಾವು ಭಾವಿಸಿದ್ದೆವು' ಎಂದು ಅಸಾವರಿ ಹೇಳಿದರು.

'ಭಯೋತ್ಪಾದಕರ ಗುಂಪು ಹತ್ತಿರದ ಡೇರೆಯೊಂದರ ಬಳಿ ಬಂದು ಗುಂಡಿನ ದಾಳಿ ನಡೆಸಿತು. ನಂತರ ಅವರು ನಾವಿದ್ದ ಡೇರೆಯ ಬಳಿ ಬಂದು ನನ್ನ ಅಪ್ಪನಿಗೆ ಹೊರಗೆ ಬರಲು ಹೇಳಿದರು. ನಂತರ ಆ ಉಗ್ರರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾವು ಬೆಂಬಲ ನೀಡುತ್ತಿದ್ದೇವೆ ಎಂದು ನಮ್ಮನ್ನು ನಿಂದಿಸಿದರು. ಅದಾದ ನಂತರದಲ್ಲಿ, ಕಾಶ್ಮೀರಿ ಉಗ್ರರು ಮುಗ್ಧರನ್ನು, ಮಕ್ಕಳನ್ನು, ಮಹಿಳೆಯರನ್ನು ಕೊಲ್ಲುತ್ತಾರೆ ಎಂಬುದನ್ನು ನಿರಾಕರಿಸುವ ಕೆಲವು ಮಾತುಗಳನ್ನು ಆಡಿದರು' ಎಂದು ಅಸಾವರಿ ವಿವರಿಸಿದರು.

ಗುಂಡಿನ ದಾಳಿ ನಡೆದಾಗ ಸಹಾಯಕ್ಕೆ ಯಾರೂ ಇರಲಿಲ್ಲ. ಪೊಲೀಸರು ಅಥವಾ ಸೇನಾ ಸಿಬ್ಬಂದಿ ಅಲ್ಲಿ ಇರಲಿಲ್ಲ. ಅವರೆಲ್ಲ 20 ನಿಮಿಷ ನಂತರ ಬಂದರು. ಅಲ್ಲಿದ್ದ ಸ್ಥಳೀಯರು ಕೂಡ ಇಸ್ಲಾಮಿಕ್ ಸಾಲುಗಳನ್ನು ಪಠಿಸುತ್ತಿದ್ದರು ಎಂದರು.

ತುರ್ತು ಸಹಾಯವಾಣಿ ಆರಂಭ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬೆನ್ನಲ್ಲೇ, ಪ್ರವಾಸಿಗರ ನೆರವಾಗುವ ನಿಟ್ಟಿನಲ್ಲಿ ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಮಂಗಳವಾರ ತುರ್ತು ಸಹಾಯವಾಣಿ ಆರಂಭಿಸಿದೆ.

'ಇಲ್ಲಿನ ಅನಂತನಾಗ್ ಜಿಲ್ಲೆಯಲ್ಲಿ 24x7 ತುರ್ತು ಸಹಾಯ ಕೇಂದ್ರ ಆರಂಭಿಸಿದ್ದು, ಯಾವುದೇ ಮಾಹಿತಿ, ಅಗತ್ಯ ನೆರವು ಬೇಕಿದ್ದರೂ ಸಂಪರ್ಕಿಸಬಹುದು' ಎಂದು ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ತುರ್ತು ಸಹಾಯವಾಣಿ	
ಅನಂತನಾಗ್	01932222337 7780885759 9697982527
ಶ್ರೀನಗರ	01942457543 01942483651 7006058623

ಬುಧವಾರ, ಏಪ್ರಿಲ್ 23, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 112 | ಪುಟ 16

• www.prajavani.net

prajavani.net prajavani prajavani prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಟು- ಎದಿರೇಟು



ನನ್ನ ಪ್ರಕಾರ ಸಂಸತ್ ಸರ್ವೋಚ್ಚ. ಯಾವುದೇ ಒಂದು ಪ್ರಾಧಿಕಾರ ಸಂಸತ್‌ಗಿಂತ ದೊಡ್ಡದು ಎಂಬ ಮಾಹಿತಿ ಸಂವಿಧಾನದಲ್ಲಿ ಇಲ್ಲ.
ಜಗದೀಪ ಧನಕರ್, ಉಪರಾಷ್ಟ್ರಪತಿ



ಸಂಸತ್ ಅಥವಾ ಕಾರ್ಯಾಂಗ ಪರಮೋಚ್ಚ ಅಲ್ಲ. ಸಂವಿಧಾನವೇ ಪರಮೋಚ್ಚ.
ಕಪಿಲ್ ಸಿಬಲ್, ರಾಜ್ಯಸಭಾ ಸಂಸದ


ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,595 ▲	24,167 ▲	₹1.05 ಲಕ್ಷ (ಬೆಂಗಳೂರು) ▲	₹1.01 ಲಕ್ಷ (ಬೆಂಗಳೂರು) ▼	85.19 ▼

ಪಹಲ್ಗಾಮ್ ಬಳಿಯ ಬೈಸರನ್ ಕಣಿವೆಯಲ್ಲಿ ದುಷ್ಕೃತ್ಯ • ತಾನೇ ದಾಳಿ ನಡೆಸಿರುವುದಾಗಿ ಹೇಳಿಕೊಂಡ 'ದಿ ರೆಸಿಸ್ಟೆನ್ಸ್ ಫ್ರಂಟ್' • ಅಮೆರಿಕದ ಉಪಾಧ್ಯಕ್ಷರ ಭಾರತ ಭೇಟಿ ಸಂದರ್ಭದಲ್ಲಿಯೇ ದಾಳಿ

ಕಾಶ್ಮೀರದಲ್ಲಿ ಮತ್ತೆ ಉಗ್ರರ ಅಟ್ಟಹಾಸ

ಶ್ರೀನಗರ (ಪಿಟಿಐ): ಕಾಶ್ಮೀರದ ಪಹಲ್ಗಾಮ್ ಪಟ್ಟಣದ ಸನಿಹದಲ್ಲಿ ಇರುವ, ದೃಶ್ಯಕಾವ್ಯದಂತೆ ಕಾಣುವ ಹುಲ್ಲು-ಗಾವಲಿನಲ್ಲಿ ಖುಷಿಯಿಂದ ಸಮಯ ಕಳೆಯುತ್ತಿದ್ದ ಪ್ರವಾಸಿಗರ ಮೇಲೆ ಭಯೋತ್ಪಾದಕರು ಮಂಗಳವಾರ ಮನಬಂದಂತೆ ಗುಂಡು ಹಾರಿಸಿದ್ದಾರೆ. ಗುಂಡಿನ ದಾಳಿಗೆ ಸಿಲುಕಿ 28 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ಪ್ರವಾಸಿಗರು.

ಅಲ್ಲದೆ, ಉಗ್ರರ ಗುಂಡಿಗೆ ಸಿಲುಕಿ ಕನಿಷ್ಠ 20 ಮಂದಿ ಗಾಯಗೊಂಡಿದ್ದಾರೆ. ಮಂಗಳವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಈ ದಾಳಿ ನಡೆದಿದೆ. ಮೃತಪಟ್ಟ-ವರಲ್ಲಿ ಇಬ್ಬರು ವಿದೇಶಿಯರು, ಇಬ್ಬರು ಸ್ಥಳೀಯರು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.



'ಈಚಿನ ವರ್ಷಗಳಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆದ ಇತರ ಯಾವುದೇ ದಾಳಿಗಳಿಗಿಂತ ಇದು ದೊಡ್ಡದು' ಎಂದು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಹೇಳಿದ್ದಾರೆ.


ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಭಾರತಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲಿಯೇ ಈ ದಾಳಿ ನಡೆದಿದೆ. ಪುಲ್ವಾಮಾದಲ್ಲಿ ಭಯೋತ್ಪಾದಕರು 2019ರ ಫೆಬ್ರುವರಿಯಲ್ಲಿ ಆತ್ಮಾಹುತಿ ದಾಳಿ ನಡೆಸಿದ ನಂತರದ ಅತಿದೊಡ್ಡ ದಾಳಿ ಇದು ಎಂದು ಹೇಳಲಾಗಿದೆ.

ಪಾಕಿಸ್ತಾನದಲ್ಲಿ ನೆಲೆಗೊಂಡಿರುವ ನಿಷೇಧಿತ ಭಯೋತ್ಪಾದಕ ಸಂಘಟನೆ 'ಲಷ್ಕರ್-ಎ-ತಯ್ಯಬಾ'ದ ಜೊತೆ ನಂಟು ಹೊಂದಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್' ಈ ದಾಳಿಯನ್ನು ತಾನೇ ನಡೆಸಿರುವುದಾಗಿ ಹೇಳಿಕೊಂಡಿದೆ.

ಭಯೋತ್ಪಾದಕರು ಜಮ್ಮುವಿನ ಕಿಶ್ತವಾಢ ದಿಂದ, ಕೋಕರ್ನಾಗ್ ಮೂಲಕ ಬೈಸರನ್‌ಗೆ ಬಂದಿರಬಹುದು ಎಂದು ಅಧಿಕಾರಿಗಳು ಊಹಿಸಿದ್ದಾರೆ.


ಪ್ರಧಾನಿಗೆ ಮಾಹಿತಿ: ಸೌದಿ ಅರೇಬಿಯಾ ಭೇಟಿಯಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಯೋತ್ಪಾದಕರ ದಾಳಿ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಹಿತಿ ನೀಡಿದ್ದಾರೆ. ಪ್ರಧಾನಿ ಮೋದಿ ಸೌದಿ ಪ್ರವಾಸ ಮೊಟಕುಗೊಳಿಸಿದ್ದಾರೆ.

ಭಯೋತ್ಪಾದಕರ ದಾಳಿ ನಡೆದ ಸ್ಥಳದ್ದು ಎನ್ನಲಾದ ಕೆಲವು ವಿಡಿಯೊಗಳು ಅಲ್ಲಿ ಏನಾಯಿತು ಎಂಬುದನ್ನು ದಾಖಲಿಸಿವೆ. ಮೃತದೇಹಗಳು ಮತ್ತು ಮಹಿಳೆಯರು ಅಳುತ್ತಿರುವ ದೃಶ್ಯಗಳು ಅದರಲ್ಲಿವೆ. ಆದರೆ, ಈ ವಿಡಿಯೊಗಳ ಖಚಿತತೆ ಬಗ್ಗೆ ಮಾಹಿತಿ ಇಲ್ಲ.





ಭಯೋತ್ಪಾದಕರ ದಾಳಿಯಲ್ಲಿ ಗಾಯಗೊಂಡವರನ್ನು ಪೊಲೀಸರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯು ಅನಂತನಾಗ್‌ನ ಆಸ್ಪತ್ರೆಯೊಂದಕ್ಕೆ ಕರೆದೊಯ್ದರು –ಎಎಫ್‌ಪಿ ಚಿತ್ರ (ಎಡಚಿತ್ರ) ಉಗ್ರರ ದಾಳಿಯಲ್ಲಿ ಮೃತರಾದ ಸಂಗಾತಿಯ ಬಳಿ ಮಹಿಳೆಯ ರೋದನ (ಬಲಚಿತ್ರ)



ಶೋಧ ಕಾರ್ಯಾಚರಣೆಗೆ ಇಳಿದ ಯೋಧ

ದಾಳಿ ನಡೆಯುವುದಕ್ಕೂ ಮೊದಲು ಸ್ಥಳದಲ್ಲಿ ಪರಿಸ್ಥಿತಿ ಸಹಜವಾಗಿ ಇತ್ತು. ಜನರು ಖುಷಿಯಿಂದ ಕಾಲ ಕಳೆಯುತ್ತಿದ್ದರು. ಆದರೆ, ದಾಳಿಯ ನಂತರದಲ್ಲಿ ಮೃತದೇಹಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದವು, ಜನರು ಸಹಾಯಕ್ಕೆ ಅಂಗಲಾಚುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ಅಲ್ಲಿನ ಭಯಾನಕ ಕ್ಷಣಗಳ ಬಗ್ಗೆ ವಿವರ ಹಂಚಿಕೊಂಡಿದ್ದಾರೆ. ಐದು ಮಂದಿ ದಾಳಿ ನಡೆಸಿದರು ಎಂದು ಕೆಲವರು ತಿಳಿಸಿದ್ದಾರೆ.

'ನನ್ನ ಗಂಡನ ತಲೆಗೆ ಗುಂಡಿಕ್ಕಲಾಯಿತು. ಏಳು ಮಂದಿ ಇತರರು ದಾಳಿಯಲ್ಲಿ ಗಾಯಗೊಂಡಿದ್ದಾರೆ' ಎಂದು ಮಹಿಳೆಯೊಬ್ಬರು ಸುದ್ದಿಸಂಸ್ಥೆಗೆ ದೂರವಾಣಿ ಮೂಲಕ ತಿಳಿಸಿದ್ದಾರೆ. ಗುಂಡಿನ ಮೊರೆತ ಕೇಳಿದ ತಕ್ಷಣ ಅಲ್ಲಿ ಭೀತಿ ಆವರಿಸಿತು. ಪ್ರವಾಸಿಗರು ತಮ್ಮನ್ನು ರಕ್ಷಿಸಿಕೊ-ಳ್ಳಲು ಓಡಿದರು. ಆದರೆ ಆ ವಿಶಾಲವಾದ ಬಯಲಿನಲ್ಲಿ ಅಡಗಲು ಸ್ಥಳಗಳೇ ಇರಲಿಲ್ಲ ಎಂದು ಇನ್ನೊಬ್ಬ ಮಹಿಳೆ ತಿಳಿಸಿದ್ದಾರೆ.

ಜನರ ಮೇಲೆ ಗುಂಡು ಹಾರಿಸುವ ಮೊದಲು ಭಯೋತ್ಪಾದಕರು ಅವರ ಹೆಸರು ಕೇಳುತ್ತಿದ್ದರು ಎಂದು ಮಹಿಳೆಯೊಬ್ಬರು ತಿಳಿಸಿದ್ದಾರೆ.

ದಾಳಿ ನಡೆದ ನಂತರದಲ್ಲಿ ಇಡೀ ಜಿಲ್ಲಾಡಳಿತ ಹಾಗೂ ಪೊಲೀಸ್ ಸಿಬ್ಬಂದಿಯನ್ನು ಅಲ್ಲಿ ನಿಯೋಜಿಸಲಾಗಿದೆ. ನೆರವಿಗೆ ಆಂಬುಲೆನ್ಸ್‌ಗಳನ್ನು ಕಳುಹಿಸಲಾಗಿದೆ. ಬೈಸರನ್‌ಗೆ ಕಾಲ್ನಡಿಗೆಯಲ್ಲಿ ಅಥವಾ ಕುದುರೆಗಳ ಮೂಲಕ ಮಾತ್ರ ತೆರಳಲು ಸಾಧ್ಯವಿರುವ ಕಾರಣ, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಹೆಲಿಕಾಪ್ಟರ್ ನೆರವನ್ನೂ ಪಡೆಯಲಾಯಿತು. ಗಾಯಗೊಂಡ ಕೆಲವರನ್ನು ಸ್ಥಳೀಯರು ತಮ್ಮ ಗಿಡ್ಡತಳಿಯ ಕುದುರೆಗಳ ಮೇಲೆ ಕರೆತಂದಿದ್ದಾರೆ.

ಗುಂಡಿನ ದಾಳಿ ನಡೆದಿರುವ ಆರಂಭಿಕ ಮಾಹಿತಿ ಸಿಕ್ಕ ತಕ್ಷಣ ಸೇನೆ, ಸಿಆರ್‌ಪಿಎಫ್ ಮತ್ತು ಸ್ಥಳೀಯ ಪೊಲೀಸರು ಬೈಸರನ್‌ಗೆ ಧಾವಿಸಿದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

11ನೇ ಪುಟ ನೋಡಿ

28 ಸಾವು

ಇಬ್ಬರು ಕನ್ನಡಿಗರು ಬಲಿ

ಬೆಂಗಳೂರು: ಕಾಶ್ಮೀರದಲ್ಲಿ ನಡೆದ ಉಗ್ರರ ದಾಳಿಯಲ್ಲಿ ಇಬ್ಬರು ಕನ್ನಡಿಗರು ಸಹ ಬಲಿಯಾಗಿದ್ದಾರೆ. ಕುಟುಂಬದೊಂದಿಗೆ ಪ್ರವಾಸಕ್ಕೆ ತೆರಳಿದ್ದ ಶಿವಮೊಗ್ಗದ ಮಂಜುನಾಥ್ ರಾವ್ ಹಾಗೂ ಬೆಂಗಳೂರಿನ ಭರತ್ ಭೂಷಣ್ ಉಗ್ರರ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ನೆರವು ನೀಡಲು ಸಚಿವ ಸಂತೋಷ್ ಲಾಡ್ ನೇತೃತ್ವದ ತಂಡ ರಾಜ್ಯದ ತಂಡವೂ ಪಹಲ್ಗಾಮ್‌ಗೆ ತೆರಳುತ್ತಿದೆ.

ಪುಟಾಣಿ ಸ್ವಿಟ್ಜರ್ಲೆಂಡ್‌ನಲ್ಲಿ ರಕ್ತದೋಕುಳಿ

ರೆಸಾರ್ಟ್‌ಗಳ ಪಟ್ಟಣ ಎಂದೇ ಖ್ಯಾತಿ ಪಡೆದಿರುವ ಪಹಲ್ಗಾಮ್‌ನಿಂದ ಆರು ಕಿ.ಮೀ. ದೂರದಲ್ಲಿರುವ ಬೈಸರನ್‌ನಲ್ಲಿ ವಿಶಾಲವಾದ ಹುಲ್ಲುಗಾವಲು ಇದೆ. ಇದನ್ನು ಪೈನ್ ಅರಣ್ಯ, ಪರ್ವತಗಳು ಸುತ್ತುವರೆದಿವೆ. ಇದು ದೇಶ ವಿದೇಶಗಳ ಪ್ರವಾಸಿಗರಿಗೆ ಮತ್ತು ಚಾರಣಿಗರಿಗೆ ಅಚ್ಚುಮೆಚ್ಚಿನ ತಾಣ.


1980ರ ದಶಕದಲ್ಲಿ ಸಿನಿಮಾ ನಿರ್ದೇಶಕರು ಈ ಪ್ರದೇಶವನ್ನು ಹುಡುಕಿಕೊಂಡು ಬರುತ್ತಿದ್ದರು. ಪುಟಾಣಿ ಸ್ವಿಟ್ಜರ್ಲೆಂಡ್ ಎಂಬ ಹೆಗ್ಗಳಿಕೆ ಪಡೆದಿರುವ ಇಲ್ಲಿಗೆ ಶಸ್ತ್ರಸಜ್ಜಿತರಾಗಿ ನುಗ್ಗಿದ ಭಯೋತ್ಪಾದಕರು, ಅಲ್ಲಿ ತಿಂಡಿ-ತಿನಿಸುಗಳ ಅಂಗಡಿಗಳ ಮುಂದೆ ಅಡ್ಡಾಡುತ್ತಿದ್ದ, ಗಿಡ್ಡತಳಿಯ ಕುದುರೆಗಳ ಮೇಲೆ ಸವಾರಿ ನಡೆಸುತ್ತಿದ್ದ, ಪಿಕ್‌ನಿಕ್‌ನ ಖುಷಿ ಸವಿಯುತ್ತಿದ್ದ ಪ್ರವಾಸಿಗರ ಮೇಲೆ ಗುಂಡು ಹಾರಿಸಲು ಆರಂಭಿಸಿದರು ಎಂದು ಅಧಿಕಾರಿಗಳು ಮತ್ತು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.



ಭಯೋತ್ಪಾದಕರ ದಾಳಿಯನ್ನು ನಾನು ಬಲವಾಗಿ ಖಂಡಿಸುತ್ತೇನೆ. ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು, ದಾಳಿಯಿಂದ ತೊಂದರೆಗೆ ಒಳಗಾದವರಿಗೆ ಸಾಧ್ಯವಿರುವ ಎಲ್ಲ ನೆರವು ನೀಡಲಾಗುತ್ತಿದೆ. ಹೀನ ಕೃತ್ಯದ ಹಿಂದಿರುವವರಿಗೆ ಶಿಕ್ಷೆಯಾಗುತ್ತದೆ... ಭಯೋತ್ಪಾದನೆ ವಿರುದ್ಧ ಹೋರಾಡುವ ನಮ್ಮ ದೃಢಸಂಕಲ್ಪ ಇನ್ನಷ್ಟು ಬಲವಾಗುತ್ತದೆ
ನರೇಂದ್ರ ಮೋದಿ, ಪ್ರಧಾನಿ



ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯು ಆಘಾತಕಾರಿ, ನೋವಿನ ಸಂಗತಿ. ಅಮಾಯಕರ ಮೇಲಿನ ಅಮಾನವೀಯ ದಾಳಿಗೆ ಕ್ಷಮೆ ಇಲ್ಲ
ದ್ರೌಪದಿ ಮುರ್ಮು, ರಾಷ್ಟ್ರಪತಿ



ಪ್ರವಾಸಿಗರ ಮೇಲಿನ ದಾಳಿ ಆಕ್ರೋಶ ಮೂಡಿಸಿದೆ. ಮೃತರ ಕುಟುಂಬದ ಸದಸ್ಯರಿಗೆ ಸಂತಾಪಗಳು. ಈ ದಾಳಿಯಲ್ಲಿ ಭಾಗಿಯಾದವರನ್ನು ಬಿಡುವುದಿಲ್ಲ. ಅವರು ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ



ನಮ್ಮ ಪ್ರವಾಸಿಗರ ಮೇಲಿನ ದಾಳಿಯು ಒಂದು ದೌರ್ಜನ್ಯ. ದಾಳಿ ನಡೆಸಿದವರು ಮೃಗಗಳು, ಅವರು ಮನುಷ್ಯರಲ್ಲ, ಅವರು ಖಂಡನಾರ್ಹರು. ಯಾವ ಪದ ಬಳಸಿ ಖಂಡಿಸಿದರೂ ಸಾಕಾಗದು. ಮೃತರ ಕುಟುಂಬಗಳಿಗೆ ನನ್ನ ಸಹಾನುಭೂತಿ ಇದೆ
ಒಮರ್ ಅಬ್ದುಲ್ಲಾ, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ

ರಂಗಮಂಜುಗೆ ರಾಜ್ಯದಲ್ಲಿ ಮೊದಲ ಸ್ಥಾನ

ಯುಪಿಎಸ್‌ಸಿ ಪರೀಕ್ಷೆ: ಕರ್ನಾಟಕದ 30ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ



ರಂಗಮಂಜು

ಬೆಂಗಳೂರು: ಕೇಂದ್ರೀಯ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕರ್ನಾಟಕದ 30ಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಹತೆ ಪಡೆದಿದ್ದು, 24ನೇ ರ್‍ಯಾಂಕ್ ಪಡೆದ ಬೆಂಗಳೂರಿನ ರಂಗಮಂಜು ರಾಜ್ಯಕ್ಕೆ ಮೊದಲಿಗರಾಗಿ ಹೊರಹೊಮ್ಮಿದ್ದಾರೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಕೋಡಿಯಾಲ ಹೊಸಪೇಟೆ ಗ್ರಾಮದ ವೈದ್ಯ ಡಾ.ಸಚಿನ್ ಬಿ. ಗುತ್ತೂರು 41ನೇ ರ್‍ಯಾಂಕ್, ತೇಜಸ್ವಿ ಪ್ರಸಾದ್ ದೇಶಪಾಂಡೆ 99ನೇ ರ್‍ಯಾಂಕ್ ಹಾಗೂ ಅನುಪ್ರಿಯ ಸಕ್ಯ 120ನೇ ರ್‍ಯಾಂಕ್ ಪಡೆದಿದ್ದಾರೆ.

ರಂಗಮಂಜು ಅವರ ತಂದೆ ಆರ್. ರಮೇಶ್ ಐಪಿಎಸ್ ಅಧಿಕಾರಿಯಾಗಿದ್ದರು. ಮೂಲತಃ ರಾಮನಗರದ ಅವರು ದಶಕಗಳ ಹಿಂದೆಯೇ ಬೆಂಗಳೂರಿನಲ್ಲಿ ನೆಲೆಗೊಂಡಿದ್ದಾರೆ. ತಂದೆಯ ನಿಧನದ (2019) ನಂತರ ಅವರಂತೆಯೇ ಅಧಿಕಾರಿಯಾಗಬೇಕು ಎಂಬ ಸಂಕಲ್ಪದಲ್ಲಿ ರಂಗಮಂಜು ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿ, 6ನೇ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

'ನನ್ನ ಸಾಧನೆಗೆ ತಂದೆಯೇ ಸ್ಫೂರ್ತಿ. ಅವರ ನಿಧನದ ನಂತರ ತಾಯಿ ಎನ್. ಸುನೀತಾ ಅವರು ಪ್ರೋತ್ಸಾಹ ನೀಡಿದರು. ಯಾವ ಅಕಾಡೆಮಿಯಲ್ಲೂ ತರಬೇತಿ ಪಡೆಯದೆ, ಮನೆಯಲ್ಲೇ ಕುಳಿತು ಸತತ ಅಧ್ಯಯನ ನಡೆಸಿದೆ. ಕೋವಿಡ್ ಸಮಯದಲ್ಲಿ ಯಶಸ್ಸು ಸಿಗಲಿಲ್ಲ. ಕೊನೆಯ ಪ್ರಯತ್ನದಲ್ಲಿ ಸಂದರ್ಶನಕ್ಕೆ ಅವಕಾಶ ಸಿಕ್ಕಿತ್ತು. ಯಶಸ್ವಿಯೂ ಆದೆ. ಕರ್ನಾಟಕದಲ್ಲಿ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುವ ಇಚ್ಛೆ ಇಟ್ಟುಕೊಂಡಿದ್ದೇನೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಶಕ್ತಿ ದುಬೆಗೆ ಮೊದಲ ರ್‍ಯಾಂಕ್



ಶಕ್ತಿ ದುಬೆ

ನವದೆಹಲಿ(ಪಿಟಿಐ): ಕಳೆದ ವರ್ಷದ ನಾಗರಿಕ ಸೇವೆಗಳ ಪರೀಕ್ಷೆಯ ಫಲಿತಾಂಶವನ್ನು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಮಂಗಳವಾರ ಪ್ರಕಟಿಸಿದ್ದು, ಶಕ್ತಿ ದುಬೆ ಅವರು ಮೊದಲ ರ್‍ಯಾಂಕ್ ಪಡೆದಿದ್ದಾರೆ.

ಹರ್ಷಿತಾ ಗೋಯಲ್ ಹಾಗೂ ಡೋಂಗ್ರೆ ಅರ್ಚಿತ್ ಪರಾಗ್ ಅವರು ಕ್ರಮವಾಗಿ 2 ಮತ್ತು 3ನೇ ರ್‍ಯಾಂಕ್ ಪಡೆದಿದ್ದಾರೆ. ಶಾಹ ಮಾರ್ಗಿ ಚಿರಾಗ್ ಹಾಗೂ ಆಕಾಶ್ ಗರ್ಗ್ ಕ್ರಮವಾಗಿ 4 ಮತ್ತು 5ನೇ ಸ್ಥಾನ ಪಡೆದಿದ್ದು, ಮೊದಲ ಐದು ರ್‍ಯಾಂಕ್ ಪಡೆದವರ ಪೈಕಿ ಮೂವರು ಮಹಿಳೆಯರು ಇದ್ದಾರೆ.

ಶಕ್ತಿ ದುಬೆ ಅವರು ಅಲಹಾಬಾದ್ ವಿಶ್ವವಿದ್ಯಾಲಯದಿಂದ ಜೀವರಸಾಯನ ವಿಜ್ಞಾನ ಪದವಿ ಪಡೆದಿದ್ದಾರೆ. ರಾಜಕೀಯಶಾಸ್ತ್ರ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ.

2ನೇ ಸ್ಥಾನ ಪಡೆದಿರುವ ಹರ್ಷಿತಾ ಗೋಯಲ್ ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿ ಪೂರೈಸಿದ್ದಾರೆ. ಇವರು ಐಚ್ಛಿಕ ವಿಷಯ ಗಳನ್ನಾಗಿ ರಾಜಕೀಯಶಾಸ್ತ್ರ ಹಾಗೂ ಅಂತರರಾಷ್ಟ್ರೀಯ ಸಂಬಂಧಗಳು ತೆಗೆದುಕೊಂಡಿದ್ದರು ಎಂದು ಯುಪಿಎಸ್‌ಸಿ ಪ್ರಕಟಣೆ ತಿಳಿಸಿದೆ.

6ನೇ ಪುಟ ನೋಡಿ

ಬಂಗಾರ ಇನ್ನಷ್ಟು ತುಟ್ಟಿ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ ಬೆಲೆಯು ₹1 ಲಕ್ಷ ದಾಟಿದ್ದು, ಸಾರ್ವಕಾಲಿಕ ದಾಖಲೆ ಬರೆದಿದೆ.

ಸದ್ಯ ಮದುವೆ ಋತು ಶುರುವಾಗಿದ್ದು, ಮೇ ತಿಂಗಳ ಅಂತ್ಯದವರೆಗೆ ನಡೆಯಲಿದೆ. ವಧು-ವರ ಕುಟುಂಬಗಳಲ್ಲಿ ಸಂಭ್ರಮ ಮನೆ ಮಾಡಿದೆ. ಮತ್ತೊಂದೆಡೆ ಅಕ್ಷಯ ತೃತೀಯ (ಏಪ್ರಿಲ್ 30) ಕೂಡ ಸಮೀಪಿಸುತ್ತಿದೆ. ಇದರ ಬೆನ್ನಲ್ಲೇ ಬಂಗಾರ ತುಟ್ಟಿಯಾಗಿರುವುದು ಆಭರಣ ಪ್ರಿಯರಿಗೆ ನಿರಾಶೆ ತಂದಿದೆ.

ಶುಭ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಆಭರಣ ತಯಾರಕರು ಮತ್ತು ದಾಸ್ತಾನುಗಾರರು ಹಳದಿ ಲೋಹದ ಸಂಗ್ರಹಕ್ಕೆ ಮುಂದಾಗಿದ್ದಾರೆ. ಇದು ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯ ಹಾದಿ ಹಿಡಿಯಲು ಕಾರಣವಾಗಿದೆ ಎಂದು ಚಿನಿವಾರ ಪೇಟೆ ತಜ್ಞರು ತಿಳಿಸಿದ್ದಾರೆ.

ಅಲ್ಲದೆ, ಭಾರತೀಯರಿಗೆ ಚಿನ್ನದ ಜೊತೆಗೆ ಅವಿನಾಭಾವ ಸಂಬಂಧ ಬೆಸೆದುಕೊಂಡಿದೆ.

ಮಂಗಳಕರ ದಿನಗಳಂದು ಚಿನ್ನ ಖರೀದಿಸಿದರೆ ಅಥವಾ ಅದರ ಮೇಲೆ ಹೂಡಿಕೆ ಮಾಡಿದರೆ ಸಂಪತ್ತು ವೃದ್ಧಿಸಲಿದೆ ಎಂಬ ಸಾಂಪ್ರದಾಯಿಕ ನಂಬಿಕೆ ಬೇರೂರಿದೆ. ಇದರಿಂದ ಚಿನ್ನದ ಬೇಡಿಕೆ ಹೆಚ್ಚಿದೆ ಎಂದು ಹೇಳಿದ್ದಾರೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,800 ಹೆಚ್ಚಳವಾಗಿದ್ದು, ₹1,01,600ಕ್ಕೆ ಮಾರಾಟವಾಗಿದೆ. 10 ಗ್ರಾಂ ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ₹2,800 ಏರಿಕೆಯಾಗಿದ್ದು, ₹1,02,100 ಆಗಿದೆ.

ಕಳೆದ ವರ್ಷದ ಡಿಸೆಂಬರ್‌ನಿಂದ ಇಲ್ಲಿಯವರೆಗೆ 10 ಗ್ರಾಂ ಚಿನ್ನದ ದರವು ₹22,650 (ಶೇ 29ರಷ್ಟು) ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಚಿನಕುರುಳಿ


ಪ್ರಕಾಶ್ ಶೆಟ್ಟಿ



ಶಿಲಾದಿತ್ಯ ವಿರುದ್ಧ ಸಿಡಿದೆದ್ದ ಕನ್ನಡಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ರಸ್ತೆಯ ಗೋಪಾಲನ್ ಮಾಲ್ ಬಳಿ ದ್ವಿಚಕ್ರ ವಾಹನ ಸವಾರ, ಕನ್ನಡಿಗ ಎಸ್.ಜೆ.ವಿಕಾಸ್ ಕುಮಾರ್ (26) ಅವರ ಮೇಲೆಯೇ ವಾಯುಪಡೆ ಕೋಲ್ಕತ್ತ ನೆಲೆಯ ವಿಂಗ್ ಕಮಾಂಡರ್ ಶಿಲಾದಿತ್ಯ ಬೋಸ್ ಹಲ್ಲೆ ನಡೆಸಿರುವುದು ಬಯಲಾಗಿದ್ದು, ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.



ಶಿಲಾದಿತ್ಯ ಹಲ್ಲೆ ನಡೆಸುತ್ತಿರುವ ದೃಶ್ಯ

ಆರೋಪಿ ಕೋಲ್ಕತ್ತದಲ್ಲೇ ಇರುವ ಮಾಹಿತಿ ಸಿಕ್ಕಿದೆ. ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಭಾನುವಾರ ಬೆಳಿಗ್ಗೆ ರಸ್ತೆಯಲ್ಲಿ ಶಿಲಾದಿತ್ಯ ಬೋಸ್ ಹಾಗೂ ಬಿಪಿಒ ಕಂಪನಿ ಉದ್ಯೋಗಿ ಎಸ್.ಜೆ. ವಿಕಾಸ್ ಕುಮಾರ್ ಅವರ ಮಧ್ಯೆ ನಡೆದಿದ್ದ ಬೀದಿ ಕಾಳಗಕ್ಕೆ ಸಂಬಂಧಿಸಿದಂತೆ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು- ಪ್ರತಿದೂರು ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

10ನೇ ಪುಟ ನೋಡಿ

ಕನ್ನಡಿಗರ ಕೆಣಕುವುದು ದುಷ್ಟತನ: ಮುಖ್ಯಮಂತ್ರಿ

ಕರ್ನಾಟಕ ಮತ್ತು ಕನ್ನಡಿಗರ ಬಗ್ಗೆ ಶಿಲಾದಿತ್ಯ ಬೋಸ್ ಇಲ್ಲಸಲ್ಲದ ಆರೋಪ ಮಾಡಿ ಕನ್ನಡಿಗರ ಸ್ವಾಭಿಮಾನ ಕೆಣಕುವ ದುಷ್ಟತನ ಮೆರೆದಿದ್ದಾರೆ. ಕನ್ನಡಿಗರು ಮಾತೃಭಾಷೆಯ ಬಗ್ಗೆ ಅಭಿಮಾನ ಹೊಂದಿರುವವರೇ ಹೊರತು ದುರಭಿಮಾನಿಗಳಲ್ಲ. ಭಾಷೆಯ ವಿಚಾರಕ್ಕೆ ವಿನಾಕಾರಣ ಇತರರ ಮೇಲೆ ಹಲ್ಲೆ ಮಾಡುವ ಅಥವಾ ನಿಂದಿಸುವ ಸಣ್ಣತನ ಕನ್ನಡಿಗರದ್ದು ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಕಡೆಗಣನೆ: ಕೆಎಸ್‌ಡಿಎಲ್ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) ತನ್ನ ಉತ್ಪನ್ನಗಳ ಮೇಲೆ ಕನ್ನಡವನ್ನು ಕಡೆಗಣಿಸುತ್ತಿದ್ದು, ಈ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರನ್ನು ಆಗ್ರಹಿಸಿದ್ದಾರೆ.

ಸಚಿವರಿಗೆ ಪತ್ರ ಬರೆದಿರುವ ಅವರು, 'ರಾಜ್ಯದಲ್ಲಿ ತಯಾರಾಗುವ ಎಲ್ಲ ಕೈಗಾರಿಕೆ ಮತ್ತು ಗ್ರಾಹಕ ಉತ್ಪನ್ನಗಳ ಮೇಲೆ ಹೆಸರು ಹಾಗೂ ಅವುಗಳ ಬಳಕೆಯ ಕುರಿತಾದ ನಿರ್ದೇಶನ ಅನ್ನು ಕನ್ನಡದಲ್ಲಿಯೂ ಮುದ್ರಿಸಬೇಕು. ಈ ಬಗ್ಗೆ ಕೈಗಾರಿಕೆ ಇಲಾಖೆ ಆದೇಶ ಹೊರಡಿಸಿದೆ. ಆದರೆ, ಕೆಎಸ್‌ಡಿಎಲ್ ಈ ಆದೇಶಕ್ಕೆ ಕಿಮ್ಮತ್ತು ನೀಡದಿರುವುದು ವಿಷಾದನೀಯ. ಕೂಡಲೇ ಸಂಸ್ಥೆ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಬೇಕು' ಎಂದು ಒತ್ತಾಯಿಸಿದ್ದಾರೆ.

'ಸಂಸ್ಥೆ ಉತ್ಪಾದಿಸುವ ಮೈಸೂರು ಸ್ಯಾಂಡಲ್ ಸೋಪು ಕನ್ನಡಿಗರ ಹೆಮ್ಮೆಯ ಪ್ರತೀಕವಾಗಿದೆ. ಸಂಸ್ಥೆಯು ತನ್ನ ಉತ್ಪನ್ನಗಳ ಮೇಲೆ ಕನ್ನಡಕ್ಕೆ ಆದ್ಯತೆ ನೀಡದಿರುವುದು ಆಕ್ಷೇಪಾರ್ಹ.

'ಸಂಸ್ಥೆಯ ಕನ್ನಡ ವಿರೋಧಿ ಧೋರಣೆ ಖಂಡಿಸಿ ಹಲವು ಕನ್ನಡ ಪರ ಸಂಘಟನೆಗಳು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿವೆ. ಸಂಸ್ಥೆಯ ಎಲ್ಲ ಉತ್ಪನ್ನಗಳ ಮೇಲೆ ಕನ್ನಡಕ್ಕೆ ಮೊದಲ ಪ್ರಾಶಸ್ತ್ಯವನ್ನು ನೀಡಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಸೂಚಿಸಬೇಕು' ಎಂದು ತಿಳಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ನಿವಾಸಿಗಳು ತೋಡಿಕೊಂಡ ಅಳಲು

ಶುಲ್ಕ ಕಟ್ಟಿ ವರ್ಷವಾದರೂ ಬಾರದ 'ಕಾವೇರಿ'

• ಗಾಣಧಾಳು ಶ್ರೀಕಂಠ

ಬೆಂಗಳೂರು: ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿ ವರ್ಷವಾಗುತ್ತಿದ್ದರೂ ನಗರದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆಯಲ್ಲಿರುವ ಹತ್ತಾರು ಹೆಚ್ಚು ಮನೆಗಳಿಗೆ ಕಾವೇರಿ ನೀರಿನ ಸಂಪರ್ಕ ನೀಡುತ್ತಿಲ್ಲ.

ಗೊಟ್ಟಿಗೆರೆ(ಸುಗಮ ಟ್ರಾವೆಲ್ ಗೋಡೌನ್ ಸಮೀಪ) ನಿವಾಸಿಗಳು ವರ್ಷದ ಹಿಂದೆ ಹೊಸ ನೀರಿನ ಸಂಪರ್ಕಕ್ಕಾಗಿ ಜಲಮಂಡಳಿಗೆ ಅರ್ಜಿ ಸಲ್ಲಿಸಿ, ಶುಲ್ಕವನ್ನೂ ಪಾವತಿಸಿದ್ದಾರೆ. ಕಾವೇರಿ ನೀರು ಪೂರೈಕೆಗಾಗಿ ಮನೆಯವರೇ ಕೊಳವೆಗಳನ್ನೂ ಅಳವಡಿಸಿದ್ದಾರೆ. ಹೊಸ ಮೀಟರ್‌ಗಳನ್ನೂ ತಂದು ಮನೆಗಳ ಸಮೀಪ ಜೋಡಿಸಿಟ್ಟಿದ್ದಾರೆ. ಆದರೆ, ಮನೆಗಳಿಗೆ ನೀರು ಸರಬರಾಜು ಮಾಡುತ್ತಿಲ್ಲ.

'ನಮ್ಮ ಭಾಗದಲ್ಲಿ ಎಂಟರಿಂದ ಹತ್ತು ಮನೆಗಳಿಗೂ ಕಾವೇರಿ ನೀರು ಬರುತ್ತಿಲ್ಲ. ಪಕ್ಕದ ರಸ್ತೆಯಲ್ಲಿರುವ ಎಲ್ಲ ಮನೆಗಳಿಗೂ ನೀರು ಬರುತ್ತದೆ. ಈ ಕುರಿತು ಜಲಮಂಡಳಿ ಎಂಜಿನಿಯರ್‌ಗಳಿಗೆ ದೂರು ಕೊಟ್ಟಿದ್ದೇವೆ. ದೂರು ಪುಸ್ತಕದಲ್ಲೂ ನಮೂದಿಸಿದ್ದೇವೆ. ಆದರೆ ಯಾವುದೇ ಕ್ರಮವಾಗಿಲ್ಲ' ಎಂದು ಇಲ್ಲಿನ ನಿವಾಸಿ ಮಧು ಅಳಲು ತೋಡಿಕೊಂಡರು.

ಮುಖ್ಯಾಂಶಗಳು

- ಶುಲ್ಕ ಪಾವತಿಸಿ ವರ್ಷ ಕಳೆದರೂ ನೀರಿಲ್ಲ
- ಮನವಿ ಮಾಡಿಯಾಗಿದೆ, ದೂರೂ ನೀಡಿದ್ದೇವೆ
- 'ನೀರು ಪೂರೈಸಿ, ಟ್ಯಾಂಕರ್ ವೆಚ್ಚದ ಹೊರೆ ತಪ್ಪಿಸಿ'

'ಮೊದಲಿನಿಂದಲೂ ಟ್ಯಾಂಕರ್ ನೀರನ್ನೇ ಅವಲಂಬಿಸಿದ್ದೇವೆ. ಕಾವೇರಿ 5ನೇ ಹಂತದ ಯೋಜನೆ ಆರಂಭವಾದ ಕೂಡಲೇ, ನಾವೆಲ್ಲ ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿ, ಸಾವಿರಾರು ರೂಪಾಯಿ ಶುಲ್ಕ ಪಾವತಿಸಿದ್ದೇವೆ. ನೀರಿನ್ನೂ ಬರುತ್ತಿಲ್ಲ. ಸಮಸ್ಯೆ ಪರಿಹಾರಕ್ಕೆ ಯಾರನ್ನು ಸಂಪರ್ಕಿಸಬೇಕೆಂದು ತಿಳಿಯುತ್ತಿಲ್ಲ' ಎಂದು ಮತ್ತೊಬ್ಬ ನಿವಾಸಿ ಧ್ರುವ ಬೇಸರ ವ್ಯಕ್ತಪಡಿಸಿದರು.

'ಈ ಭಾಗಕ್ಕೆ ಕಾವೇರಿ ನೀರು ಸರಬರಾಜು ಮಾಡಬೇಕೆಂದರೆ 80 ಅಡಿ ಮುಖ್ಯ ರಸ್ತೆಯಲ್ಲಿ ಎರಡು ಕೊಳವೆಗಳನ್ನು ಅಳವಡಿಸಬೇಕು. ಅದಕ್ಕೆ ಬೇರೆ ಇಲಾಖೆಯಿಂದ ಅನುಮತಿ ಪಡೆಯಬೇಕಂತೆ. ಶುಲ್ಕ ಪಾವತಿಸಬೇಕಂತೆ. ಹೀಗೆ ಹಲವು ಕಾರಣಗಳನ್ನು ಹೇಳುತ್ತಾ, ನೀರಿನ ಸಂಪರ್ಕ ನೀಡುವುದಕ್ಕೆ ವಿಳಂಬ ಮಾಡುತ್ತಿದ್ದಾರೆ' ಎಂದು ನಿವಾಸಿಗಳು ದೂರಿದರು. 'ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಾಗ, ಶುಲ್ಕ ಪಾವತಿಸುವಾಗ, ಮನೆಗಳಿಗೆ ಕೊಳವೆಗಳನ್ನು ಅಳವಡಿಸುವಾಗ ಏನೂ ಹೇಳಲಿಲ್ಲ. ಈಗ ಅಡಚಣೆಗಳ ಬಗ್ಗೆ ಹೇಳಿದರೆ ಹೇಗೆ' ಎಂದು ಅವರು ಪ್ರಶ್ನಿಸಿದರು.

'ಇದೇ ಭಾಗದಲ್ಲಿರುವ ದೊಡ್ಡ ದೊಡ್ಡ ಅಂಗಡಿಗಳಿಗೆ, ಹೋಟೆಲ್‌ಗಳಿಗೆ ರಾತ್ರೋ ರಾತ್ರಿ ಕೊಳವೆಗಳನ್ನು ಅಳವಡಿಸಿ ನೀರು ಕೊಡುವುದುಂಟಾಗುತ್ತದೆ. ಆದರೆ, ನಮ್ಮ ಮನೆಗಳಿಗೆ ನೀರಿನ ಸಂಪರ್ಕ ಕೊಡುವುದಕ್ಕೆ ಯಾಕೆ ಆಗುತ್ತಿಲ್ಲ' ಎಂದು ನಿವಾಸಿಗಳು ಪ್ರಶ್ನಿಸುತ್ತಾರೆ.



ಕಾವೇರಿ ನೀರು ಪೂರೈಕೆಯಾಗದ ಗೊಟ್ಟಿಗೆರೆಯ ರಸ್ತೆ



ಮನೆಗಳಿಗೆ ಜೋಡಿಸಲು ಬಡಾವಣೆಯಲ್ಲಿಟ್ಟಿರುವ ನೀರಿನ ಮೀಟರ್‌ಗಳು

> ಸುತ್ತಮುತ್ತಲ ರಸ್ತೆಗಳಲ್ಲಿ, ಬಡಾವಣೆಗಳಲ್ಲಿ ಕೊಳವೆ ಅಳವಡಿಸಿದ್ದಾರೆ, ಅಲ್ಲಿಗೆ ನೀರು ಬರುತ್ತಿದೆ. ನಮ್ಮ ರಸ್ತೆಗೆ ಕೊಳವೆ ಜೋಡಿಸಿದ್ದರೂ ನೀರು ಬರುತ್ತಿಲ್ಲ.
> – ಗೊಟ್ಟಿಗೆರೆ ನಿವಾಸಿಗಳು

> ಎಲ್ಲ ಬಡಾವಣೆಗಳಿಗೂ ಹಂತ ಹಂತವಾಗಿ ಕಾವೇರಿ ನೀರಿನ ಸಂಪರ್ಕ ನೀಡಲಾಗುತ್ತಿದೆ. ಈ ಬಡಾವಣೆಯಲ್ಲಿ ನೀರು ಪೂರೈಕೆ ಸ್ಥಿತಿ ತಿಳಿದು ಕ್ರಮ ಕೈಗೊಳ್ಳಲಾಗುತ್ತದೆ.
> –ಜಲಮಂಡಳಿ ಅಧಿಕಾರಿಗಳು

ಕೆಂಗೇರಿ ಕರಗ: ಶಕ್ತ್ಯೋತ್ಸವ ಸಂಪನ್ನ

ಕೆಂಗೇರಿ: ಐತಿಹಾಸಿಕ ಕೆಂಗೇರಿ ಯಲ್ಲಮ್ಮ ದೇವಿಯ 49ನೇ ವರ್ಷದ ಕರಗ ಶಕ್ತ್ಯೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಂಪ್ರದಾಯದಂತೆ ಕರಗವನ್ನು ಹೊತ್ತ ಹೇಮಂತ್ ಕುಮಾರ್, ದೇವಾಲಯದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಬಳಿಕ ಶನಿವಾರ ಮಧ್ಯ ರಾತ್ರಿ 1.55ಕ್ಕೆ ದೇಗುಲದಿಂದ ಹೊರಟು ಕರಗ ಮೆರವಣಿಗೆಯು ಕೆಂಗೇರಿಯ ರಾಜಬೀದಿಗಳಲ್ಲಿ ಸಾಗಿತು. ಸಹಸ್ರಾರು ಭಕ್ತರು ಗೋವಿಂದನ ನಾಮಸ್ಮರಣೆ ಮಾಡುತ್ತಾ, ಕರಗಕ್ಕೆ ಮಲ್ಲಿಗೆ ಹೂವಿನ ಪುಷ್ಪಾರ್ಚನೆ ಮಾಡಿದರು. ಹಸಿ ಕರಗದ ಮಂಟಪ ಆವರಣದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಸಂಶೋಧನೆ–ಅನ್ವೇಷಣಾ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನೂತನ ಶೈಕ್ಷಣಿಕ ವಿಭಾಗದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು 'ವೋಲ್ವರ್ ಹ್ಯಾಂಪ್ಟನ್- ಬೆಂಗಳೂರು ಸಂಶೋಧನಾ ಮತ್ತು ಅನ್ವೇಷಣಾ ಕೇಂದ್ರ'ವನ್ನು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ವಿವಿಯ ಮತ್ತು ಬ್ರಿಟನ್‌ನ ಪುರಾತನ 'ವೋಲ್ವರ್ ಹ್ಯಾಂಪ್ಟನ್' ವಿಶ್ವವಿದ್ಯಾಲಯದ ಜಂಟಿ ಸಹಭಾಗಿತ್ವದಲ್ಲಿ ಆರಂಭವಾಗಿರುವ ನೂತನ ಸಂಶೋಧನಾ ಕೇಂದ್ರ, ರಾಜ್ಯದ ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ' ಎಂದರು.

ನಂತರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ 'ವೋಲ್ವರ್ ಹ್ಯಾಂಪ್ಟನ್'– ಬೆಂಗಳೂರು ಕೇಂದ್ರದ ನಿರ್ದೇಶಕ ಪ್ರೊ. ಸುರೇಶ್ ರೇಣುಕಪ್ಪ, 'ಹವಾಮಾನ ಬದಲಾವಣೆ, ಆರೋಗ್ಯ ರಕ್ಷಣೆ, ಸ್ಮಾರ್ಟ್ ಸಿಟಿ ಮತ್ತು ಸ್ಮಾರ್ಟ್ ಗ್ರಾಮಗಳ ನಿರ್ಮಾಣ, ಆಹಾರ ಭದ್ರತೆ, ತ್ಯಾಜ್ಯದಿಂದ ಆದಾಯ ಗಳಿಕೆ, ಮಾಲಿನ್ಯ ನಿಯಂತ್ರಣ ಮತ್ತು ಬ್ರ್ಯಾಂಡ್ ಬೆಂಗಳೂರು ಯೋಜನೆ ಸೇರಿದಂತೆ ಮಹತ್ವದ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗೆ ಕೇಂದ್ರದಲ್ಲಿ ಆದ್ಯತೆ ನೀಡಲಾಗುತ್ತದೆ' ಎಂದು ತಿಳಿಸಿದರು.

ರೇಣುಕಾ, ಅಕ್ಷತಾಗೆ ಪ್ರಕಾಶಕರ ಸಂಘದ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಪ್ರಕಾಶಕರ ಸಂಘ ನೀಡುವ 'ನಂಜನಗೂಡು ತಿರುಮಲಾಂಬಾ ಪ್ರಶಸ್ತಿ'ಗೆ ರಾಯಚೂರಿನ ಬಂಡಾರ ಪ್ರಕಾಶನದ ರೇಣುಕಾ ಕೋಡುಗುಂಟಿ ಹಾಗೂ 'ಎಂ. ಗೋಪಾಲಕೃಷ್ಣ ಅಡಿಗ ಪ್ರಶಸ್ತಿ'ಗೆ ಶಿವಮೊಗ್ಗದ ಅಹರ್ನಿಶಿ ಪ್ರಕಾಶನದ ಅಕ್ಷತಾ ಹುಂಚದಕಟ್ಟೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಇದೇ 23ರಂದು ಬೆಳಿಗ್ಗೆ 11 ಗಂಟೆಗೆ ಎನ್. ಆರ್. ಕಾಲೋನಿಯ ಬಿ.ಎಂ.ಶ್ರೀ. ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ.

ಪುಸ್ತಕೋದ್ಯಮದಲ್ಲಿ ತೊಡಗಿಕೊಂಡಿರುವ ಸಾಹಿತ್ಯಲೋಕ ಪಬ್ಲಿಕೇಷನ್ಸ್‌ನ ರಘುವೀರ್, ಅಮೂಲ್ಯ ಪುಸ್ತಕದ ಕೃಷ್ಣ ಚೆಂಗಡಿ, ಅವ್ವ ಪುಸ್ತಕಾಲಯದ ಅನಂತ್ ಕುಣಿಗಲ್, ಕದಂಬ ಪ್ರಕಾಶನದ ನಾಗೇಶ್ ಹಾಗೂ ಬುಕ್ ಸರ್ಕಲ್‌ನ ಶ್ರೀನಾಥ್ ಅವರಿಗೆ ಪುಸ್ತಕ ಗೌರವ ಪುರಸ್ಕಾರ ವಿತರಿಸಲಾಗುತ್ತದೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸುತ್ತಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ನ.ರವಿಕುಮಾರ ತಿಳಿಸಿದ್ದಾರೆ.



ರೇಣುಕಾ ಕೋಡುಗುಂಟಿ



ಅಕ್ಷತಾ ಹುಂಚದಕಟ್ಟೆ

ಜಾತಿ ದೃಢೀಕರಣ ಪತ್ರ ಕಡ್ಡಾಯ

ಬೆಂಗಳೂರು: ಪೌರಕಾರ್ಮಿಕರು ಸಿಂಧುತ್ವ ಪ್ರಮಾಣಪತ್ರ ಪಡೆಯಲು ಜಾತಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದರು.

ಬಿಬಿಎಂಪಿಗೆ ಆಯ್ಕೆಯಾಗಿರುವ ಪೌರಕಾರ್ಮಿಕರಿಗೆ ಜಾತಿ ಸಿಂಧುತ್ವ ಪ್ರಮಾಣಪತ್ರ ವಿತರಿಸಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು, ಅಕ್ಷರದ ಅರಿವು ಹೊಂದಿರಬೇಕು, ಹಾಗೂ ಸರ್ಕಾರದ ನಿಯಮಾನುಸಾರ ಎಲ್ಲ ಅಗತ್ಯ ದಾಖಲೆ ಸಲ್ಲಿಸಬೇಕು ಎಂದರು.

ಅಭ್ಯರ್ಥಿಗಳು ಸಿಂಧುತ್ವ ಪ್ರಮಾಣ ಪತ್ರ ನೀಡುವಾಗ ಜಾತಿ ಪ್ರಮಾಣಪತ್ರವನ್ನು ದೃಢೀಕರಿಸಿ ನೀಡಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು. ಸಿಂಧುತ್ವ ಪ್ರಮಾಣಪತ್ರಕ್ಕಾಗಿ ಹೆಚ್ಚಿನ ಅರ್ಜಿಗಳು ಬಂದಿದ್ದು, ಅಭ್ಯರ್ಥಿಗಳ ಸ್ಥಳೀಯ ವಿಚಾರಣೆ ನಡೆಸಿ, ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ನೋಡಲ್ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಬಿಬಿಎಂಪಿ ವಿಶೇಷ ಆಯುಕ್ತ ಅಬೀಬ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣ್ ರೆಡ್ಡಿ, ಬೆಂಗಳೂರು ನಗರ ಜಿ.ಪಂ. ಉಪ ನಿರ್ದೇಶಕ ಜುಂಜಯ್ಯ, ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಶ್ರೀನಿವಾಸ್, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ವಿಜಯ್ ಕುಮಾರ್ ಉಪಸ್ಥಿತರಿದ್ದರು.

'ಎಐ' ಎಲ್ಲ ಕ್ಷೇತ್ರಕ್ಕೂ ವಿಸ್ತರಿಸಲಿದೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಇಂದಿನ ಅಧುನಿಕ ಜಗತ್ತಿನಲ್ಲಿ ಕೃತಕ ಬುದ್ಧಿಮತ್ತೆಯು ಬಹಳ ವೇಗವಾಗಿ ಬೆಳೆಯುತ್ತಿದ್ದು, ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸುವ ಕಾಲ ದೂರವಿಲ್ಲ ಎಂದು ಅಖಿಲ ಭಾರತ ತಾಂತ್ರಿಕ ಪರಿಷತ್ತಿನ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್ ಹೇಳಿದರು.

ಕೆ.ಆರ್.ಪುರ ಸಮೀಪದ ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳ 'ಪ್ರಾಜೆಕ್ಟ್ ಪ್ರದರ್ಶನ' ಮತ್ತು ಪ್ರಾತ್ಯಕ್ಷಿಕೆಗಳ 'ಓಪನ್ ಹೌಸ್' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಉದ್ಯಮಕ್ಕೆ ಅಗತ್ಯವಿರುವ ಕೌಶಲ ಕರಗತ ಮಾಡಿ ಕೊಳ್ಳಬೇಕು. 21ನೇ ಶತಮಾನದಲ್ಲಿ ಜನಿಸಿರುವ ವಿದ್ಯಾರ್ಥಿಗಳು ಬಹಳ ಪುಣ್ಯವಂತರು. ಅವರ ಮುಂದೆ ವಿಪುಲ ಅವಕಾಶಗಳಿವೆ. ಸ್ವಂತ ಉದ್ಯಮ ಸ್ಥಾಪಿಸುವ, ನೂರಾರು ಜನರಿಗೆ ಉದ್ಯೋಗ ಸೃಷ್ಟಿ ಮಾಡುವ ಅವಕಾಶ ಹೊಂದಿದ್ದಾರೆ' ಎಂದರು.

ಕೇಂಬ್ರಿಡ್ಜ್ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಿ. ಕೆ. ಮೋಹನ್ ಮಾತನಾಡಿ, 'ಕೇಂಬ್ರಿಡ್ಜ್ ವಿದ್ಯಾಸಂಸ್ಥೆಯು ಅತ್ಯುತ್ತಮ ಶಿಕ್ಷಣವನ್ನು ಒದಗಿಸಲು ಬದ್ಧವಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ' ಎಂದರು.

ಪ್ರಾಜೆಕ್ಟ್ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ನೂರೈವತ್ತಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ಪ್ರದರ್ಶಿಸಿದರು. ಬೆಂಗಳೂರು ಮತ್ತು ಸುತ್ತಮುತ್ತಲಿನ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿಗಳು, ಪೋಷಕರು ಆಗಮಿಸಿದ್ದರು. ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದ ಕಾರ್ಯನಿರ್ವಾಹಕ ಅಧಿಕಾರಿ ನಿತಿನ್ ಮೋಹನ್, ಪ್ರಾಂಶುಪಾಲರಾದ ಜಿ. ಇಂದುಮತಿ, ಸಲಹೆಗಾರ ಬಾಲಸುಬ್ರಹ್ಮಣ್ಯ ಇದ್ದರು.

ಲಕ್ಷ್ಮೀನಾರಾಯಣ ಗೌರವಾಧ್ಯಕ್ಷ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ಸಾಹಿತಿ ಆರ್. ಲಕ್ಷ್ಮೀನಾರಾಯಣ ಆಯ್ಕೆಯಾಗಿದ್ದಾರೆ.

ಸಾಹಿತಿ ಪಿ.ವಿ. ನಾರಾಯಣ ಅವರ ನಿಧನದಿಂದ ಈ ಹುದ್ದೆ ತೆರವಾಗಿತ್ತು. ಪ್ರತಿಷ್ಠಾನದ ಮಾಜಿ ಅಧ್ಯಕ್ಷ ರಾದ ಆರ್. ಲಕ್ಷ್ಮೀನಾರಾಯಣ ಅವರು, 30 ಕೃತಿಗಳನ್ನು ರಚಿಸಿದ್ದಾರೆ. ನಾಲ್ಕು ದಶಕಗಳು ಪ್ರಾಧ್ಯಾಪಕ ರಾಗಿದ್ದ ಅವರು, ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ಪ್ರಶಸ್ತಿ ಪಡೆದಿದ್ದಾರೆ. ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಿಧನ ವಾರ್ತೆ

ಕೆ.ಎಚ್.ಬೈರಪ್ಪ

ಯಲಹಂಕ: ಹುಣಸಮಾರನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಎಚ್.ಬೈರಪ್ಪ(86)ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು.



ಮೃತರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸ್ವಗ್ರಾಮ ಕೋಡಗಲಹಟ್ಟಿಯಲ್ಲಿ ಬುಧವಾರ ಮಧ್ಯಾಹ್ನ 1.30ಕ್ಕೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಾಸರಹಳ್ಳಿ: ವರ್ಗಾವಣೆಯಾದ ಇ.ಇಯಿಂದ ಕಾರ್ಯಾದೇಶ; ಸಿಟಿಸಿ, ಹಾಜರಾತಿ ಪುಸ್ತಕ ತಿದ್ದಿರುವ ಆರೋಪ

₹25 ಕೋಟಿ ವೆಚ್ಚದ ಕಾಮಗಾರಿಯಲ್ಲಿ ಅಕ್ರಮ?

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿಯ ದಾಸರಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ಮುಖ್ಯ ಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ ನಡೆದಿರುವ ₹25 ಕೋಟಿ ವೆಚ್ಚದ ಕಾಮಗಾರಿಯಲ್ಲಿ ಲೋಪದೋಷಗಳಿದ್ದು, ಬಿಲ್ ಪಾವತಿಗೆ ತಡೆ ನೀಡಬೇಕು ಎಂದು ಒತ್ತಾಯಿಸಲಾಗಿದೆ.

ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಮಾಜಿ ಶಾಸಕ ಆರ್. ಮಂಜುನಾಥ ಅವರು ಈ ಸಂಬಂಧ 44 ಪುಟಗಳ ದಾಖಲೆಯೊಂದಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದು, ಈ ಕಾಮಗಾರಿ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

‘ಬಿಬಿಎಂಪಿಗೆ ಸೇರಿದ 110 ಹಳ್ಳಿಗಳ ಅಭಿವೃದ್ಧಿ ಯೋಜನೆಯಲ್ಲಿ ದಾಸರಹಳ್ಳಿ ವಲಯದಲ್ಲಿ ಶೆಟ್ಟಿಹಳ್ಳಿ, ಬೃಂದಾವನ ಬಡಾವಣೆ, ಬಾಬಣ್ಣ ಲೇಔಟ್, ಸಪ್ತಗಿರಿ ಬಡಾವಣೆ, ಎನ್‌ಎಂಎಚ್ ಲೇಔಟ್, ಶ್ರೀದೇವಿ ಲೇಔಟ್ ಸುತ್ತ-ಮುತ್ತಲಿನ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳ ಯೋಜನೆ ನಿರ್ವಹಣೆ ಸಲಹಾ ಸಂಸ್ಥೆಯಾಗಿ (ಪಿಎಂಸಿ) ಮೆಕಾಡೆಜ್ ಕೋರ್ ಟೆಕ್ನಾಲಜಿ ಸಂಸ್ಥೆಗೆ 2024ರ ಮಾರ್ಚ್ 24ರಂದು ಕಾರ್ಯಾದೇಶ ನೀಡಲಾಗಿದೆ. ಕಾರ್ಯಾದೇಶ ನೀಡಿರುವ ದಾಸರಹಳ್ಳಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಧರಣೇಂದ್ರ ಕುಮಾರ್ ಅವರು ಮಾರ್ಚ್ 11ರಂದೇ ವರ್ಗಾವಣೆಯಾಗಿದ್ದರು. ವರ್ಗಾವಣೆಯಾದ ಎರಡು ದಿನಗಳ ನಂತರ ಧರಣೇಂದ್ರ ಕುಮಾರ್ ಕಾರ್ಯಾದೇಶಕ್ಕೆ ಸಹಿ ಹಾಕಿರುವುದು ಕಾನೂನುಬಾಹಿರ’ ಎಂದು ದೂರಿದ್ದಾರೆ.

‘ಎರಡು ಪ್ರಭಾರ ವರ್ಗಾವಣೆಯ ಪ್ರಮಾಣಪತ್ರಗಳನ್ನು (ಸಿಟಿಸಿ) ಸಿದ್ಧ-ಪಡಿಸಿರುವುದು ಅಪರಾಧವಾಗಿದ್ದು, ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದನ್ನೂ ತಿದ್ದಿದ್ದಾರೆ. ದಾಸರಹಳ್ಳಿ ವಿಭಾಗದ ಹಾಜರಾತಿ ಪುಸ್ತಕದಲ್ಲಿ ಮಾರ್ಚ್ 11ರಿಂದಲೇ ಧರಣೇಂದ್ರ ಕುಮಾರ್ ವರ್ಗಾವಣೆಯಾಗಿದ್ದಾರೆಂದು ಬರೆಯಲಾಗಿದೆ. ಕೇಂದ್ರ ಕಚೇರಿಯಲ್ಲಿರುವ ಟಿವಿಸಿಸಿ ವಿಭಾಗಕ್ಕೆ ವರ್ಗಾವಣೆಯಾಗಿದ್ದ ಧರಣೇಂದ್ರಕುಮಾರ್ ಮಾರ್ಚ್ 12ರಿಂದ ಹಾಜರಾತಿ ಪುಸ್ತಕದಲ್ಲಿ ಅಲ್ಲೂ ಸಹಿ ಮಾಡಿದ್ದಾರೆ. ನಂತರ ಹಾಜರಾತಿ ಪುಸ್ತಕದಲ್ಲಿ ತಿದ್ದಲಾಗಿದೆ’ ಎಂದಿರುವ ಮಂಜುನಾಥ್, ಮಾಹಿತಿ ಹಕ್ಕು ಕಾರ್ಯಕರ್ತ ಎಂ.ಎಚ್. ನಂದೀಶ್ ಅವರು ಪಡೆದಿರುವ ದಾಖಲೆಗಳನ್ನೂ ದೂರಿನೊಂದಿಗೆ ಲಗತ್ತಿಸಿದ್ದಾರೆ.

‘ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಆಗಿದ್ದ ಕೆ.ವಿ. ರವಿ ಅವರ ಮಾರ್ಗದರ್ಶನದಲ್ಲಿ ಹಾಜರಾತಿ ಪುಸ್ತಕ ಹಾಗೂ ಸಿಟಿಸಿ ಪ್ರತಿಯಲ್ಲಿ ತಿದ್ದುಪಡಿ ಮಾಡಲಾಗಿದ್ದು, ಅರ್ಹವಿಲ್ಲದ ಸಂಸ್ಥೆಗೆ ಕಾರ್ಯಾದೇಶ ನೀಡಲು ಸಹಕರಿಸಿರುವ ಎಲ್ಲ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಾರ್ಯಾದೇಶದಂತೆ ಎಲ್ಲ ಕಾಮಗಾರಿಗಳೂ ನಡೆದಿಲ್ಲದಿದ್ದರೂ ಬಿಲ್ ಪಾವತಿಸಲು ಅಧಿಕಾರಿಗಳು ಮುಂದಾಗಿದ್ದಾರೆ. ಯಾವುದೇ ರೀತಿಯ ಬಿಲ್‌ಗಳನ್ನು ಪಾವತಿ ಮಾಡಬಾರದು’ ಮಂಜುನಾಥ್ ಆಗ್ರಹಿಸಿದ್ದಾರೆ.



ರಾಜಕೀಯದಲ್ಲಿ ನಾವು ಬಲಿ: ಧರಣೇಂದ್ರ ಕುಮಾರ್

‘ದಾಸರಹಳ್ಳಿಯಲ್ಲಿ ಹಾಲಿ ಹಾಗೂ ಹಿಂದಿನ ಶಾಸಕರ ನಡುವಿನ ರಾಜಕೀಯದಲ್ಲಿ ನಾವು, ಅಧಿಕಾರಿಗಳು ಬಲಿಯಾಗುತ್ತಿದ್ದೇವೆ. ₹25 ಕೋಟಿ ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ನಾನು ಕಾರ್ಯಾದೇಶವನ್ನಷ್ಟೇ ನೀಡಿದ್ದೇನೆ’ ಎಂದು ಕಾರ್ಯಪಾಲಕ ಎಂಜಿನಿಯರ್ ಧರಣೇಂದ್ರ ಕುಮಾರ್ ತಿಳಿಸಿದರು.

‘2024ರ ಮಾರ್ಚ್ 11ಕ್ಕೆ ಕಾರ್ಯಪಾಲಕ ಎಂಜಿನಿಯರ್ ಹುದ್ದೆಯಿಂದ ವರ್ಗಾವಣೆಯಾಯಿತು. ಅಂದೇ ಪ್ರಭಾರ ವರ್ಗಾವಣೆಯ ಪ್ರಮಾಣಪತ್ರ (ಸಿಟಿಸಿ) ತಯಾರಿಸಲಾಗಿತ್ತು. ಸಹಿಯನ್ನೂ ಮಾಡಿದ್ದೆ. ಆದರೆ, ದಾಸರಹಳ್ಳಿ ವಲಯದ ಮುಖ್ಯ ಎಂಜಿನಿಯರ್ ಅವರ ಆದೇಶದಂತೆ ಮಾರ್ಚ್ 14ರವರೆಗೆ ನಾನು ಅಲ್ಲಿ ಕಾರ್ಯನಿರ್ವಹಿಸಿದ್ದೆ. ಹೀಗಾಗಿ, ಮಾರ್ಚ್ 14ರಂದು ಅಧಿಕೃತವಾಗಿ ಸಿಟಿಸಿ ನೀಡಿ ಬಂದಿದ್ದೇನೆ. ಮಾರ್ಚ್ 13ರಂದು ಕಾಮಗಾರಿಗೆ ಕಾರ್ಯಾದೇಶ ನೀಡಿದ್ದೇನೆ ಅಷ್ಟೇ. ಯಾವ ರೀತಿ ಕಾಮಗಾರಿ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ. ಯಾವುದೇ ತನಿಖೆಗೂ ಸಿದ್ಧ’ ಎಂದು ಪ್ರತಿಕ್ರಿಯಿಸಿದರು.

ಕಾಮಗಾರಿ ಬದಲು: ಮಂಜುನಾಥ



‘ಮೂಲ ವಿಸ್ತೃತ ಯೋಜನಾ ವರದಿಯಲ್ಲಿದ್ದ (ಡಿಪಿಆರ್) ಕಾಮಗಾರಿಗಳನ್ನು ಬಿಟ್ಟು, ಅಭಿವೃದ್ಧಿಯಾಗಿರುವ ರಸ್ತೆಗಳನ್ನೇ ₹25 ಕೋಟಿ ಕಾಮಗಾರಿಗಳಲ್ಲಿ ಸೇರಿಸಿ, ಅಕ್ರಮವಾಗಿ ಬಿಲ್ ತಯಾರಿಸಿದ್ದಾರೆ. ವರ್ಗಾವಣೆಯಾಗಿರುವ ಎಂಜಿನಿಯರ್ ಅವರು ಕಾರ್ಯಾದೇಶ ನೀಡಿರುವುದು ಕಾನೂನುಬಾಹಿರ. ಈ ಬಗ್ಗೆ ಕ್ರಮ ಕೈಗೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ವಲಯ ಆಯುಕ್ತರಿಗೂ ದೂರು ನೀಡಿದ್ದೇನೆ’ ಎಂದು ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಮಾಜಿ ಶಾಸಕ ಆರ್. ಮಂಜುನಾಥ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೃಹತ್ ಸ್ವಚ್ಛತಾ ಅಭಿಯಾನ

458 ಸ್ಥಳಗಳಲ್ಲಿ ತ್ಯಾಜ್ಯ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 10 ದಿನಗಳ ಬೃಹತ್ ಸ್ವಚ್ಛತಾ ಅಭಿಯಾನವನ್ನು ಸೋಮವಾರದಿಂದ ಆರಂಭಿಸಿದ್ದು, ಎರಡು ದಿನಗಳಲ್ಲಿ 458 ಸ್ಥಳಗಳಲ್ಲಿ ಸುಮಾರು 3,570 ಟನ್ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳನ್ನು ತೆರವುಗೊಳಿಸಲಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದಲ್ಲಿ (ಬಿಎಸ್‌ಡಬ್ಲ್ಯುಎಂಎಲ್) ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ, ಸಿಬ್ಬಂದಿ ಸ್ವಚ್ಛತಾ ಕಾರ್ಯ ನಡೆಸುತ್ತಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿ, ಖಾಲಿ ಜಾಗದಲ್ಲಿ ಬಿದ್ದಿರುವ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳು, ಮರದ ದಿಮ್ಮಿ, ಕೊಂಬೆಗಳನ್ನು ತೆರವು-ಗೊಳಿಸಲಾಗುತ್ತಿದೆ.

1,533 ಸ್ಥಳಗಳ ಗುರುತು: ನಗರದ 8 ವಲಯಗಳಲ್ಲಿ 1,533 ಸ್ಥಳಗಳಲ್ಲಿ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳಿರುವುದನ್ನು ಗುರುತಿಸಲಾಗಿದ್ದು, ಅವುಗಳಲ್ಲಿ 458 ಸ್ಥಳಗಳಲ್ಲಿ ತ್ಯಾಜ್ಯ ತೆರವುಗೊಳಿಸಲಾಗಿದೆ. ಉಳಿದ 1,075 ಸ್ಥಳಗಳಲ್ಲಿ ಶೀಘ್ರವಾಗಿ ತ್ಯಾಜ್ಯ ತೆರವುಗೊಳಿಸಲಾಗುವುದು. ಎಂಟೂ ವಲಯಗಳಲ್ಲಿ 13ಕ್ಕೂ ಹೆಚ್ಚು ಜೆಸಿಬಿ, 10ಕ್ಕೂ ಹೆಚ್ಚು ಟಿಪ್ಪರ್, 60ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು ಹಾಗೂ 170ಕ್ಕೂ ಹೆಚ್ಚು ಸಿಬ್ಬಂದಿಯನ್ನು ಬಳಸಿಕೊಂಡು ಸ್ವಚ್ಛತಾ ಕಾರ್ಯವನ್ನು ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆ ಬದಿ, ಖಾಲಿ ಜಾಗಗಳಲ್ಲಿ ತ್ಯಾಜ್ಯವನ್ನು ಬಿಸಾಡದೆ, ಪ್ರತಿನಿತ್ಯ ಮನೆ-ಮನೆಗೆ ಭೇಟಿ ನೀಡಿ ತ್ಯಾಜ್ಯ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ತ್ಯಾಜ್ಯವನ್ನು ನೀಡಬೇಕು ಎಂದು ಅಧಿಕಾರಿಗಳು ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

ಸಹಾಯವಾಣಿಗೆ ಕರೆ ಮಾಡಿ: ನಗರದಲ್ಲಿ ಕಸ ಬಿಸಾಡುವ ಸ್ಥಳಗಳು ಕಂಡಲ್ಲಿ ಪಾಲಿಕೆಯ ಸಹಾಯವಾಣಿ 1533ಗೆ ಅಥವಾ ಸಹಾಯ 2.0 ಆ್ಯಪ್ ಮೂಲಕವೂ ದೂರುಗಳನ್ನು ನೀಡಬಹುದು ಎಂದು ಬಿಬಿಎಂಪಿ ತಿಳಿಸಿದೆ.



ಬಿಬಿಎಂಪಿಯ ಪೌರ ಕಾರ್ಮಿಕರು ರಸ್ತೆಯಲ್ಲಿನ ತ್ಯಾಜ್ಯ ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಿದರು

‘ಸೋಂಕು ನಿರ್ವಹಣೆಗೆ ಮಾರ್ಗಸೂಚಿ ಪಾಲಿಸಿ’

ಪ್ರಜಾವಾಣಿ ವಾರ್ತೆ

ಯಲಹಂಕ: ಸಹಕಾರ ನಗರದ ಲೈಫ್‌ಕೇರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ಹೃದ್ರೋಗ ಹಾಗೂ ಮಧುಮೇಹಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ‘ಐಲೆಟ್-2025’ ರಾಷ್ಟ್ರಮಟ್ಟದ ಸಮಾವೇಶ ಏರ್ಪಡಿಸಲಾಗಿತ್ತು.

ಸಮಾವೇಶದಲ್ಲಿ ದೇಶದಾದ್ಯಂತ 500ಕ್ಕೂ ಹೆಚ್ಚು ವೈದ್ಯರೂ ಸೇರಿದಂತೆ ವಿವಿಧ ತಜ್ಞರು ಹಾಗೂ ಆರೋಗ್ಯವಲಯದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮಧುಮೇಹ, ಹೃದ್ರೋಗ, ಸ್ಥೂಲಕಾಯ, ಅಧಿಕ ರಕ್ತದೊತ್ತಡ ಕಾಯಿಲೆಗಳ ಕುರಿತು ನಡೆಯುತ್ತಿರುವ ಇತ್ತೀಚಿನ ಸಂಶೋಧನೆಗಳು, ಬೆಳವಣಿಗೆ, ನೂತನ ಚಿಕಿತ್ಸಾಕ್ರಮಗಳು ಹಾಗೂ ರೋಗಿಯ ಆರೈಕೆಗೆ ಸಂಬಧಿಸಿದಂತೆ ಚರ್ಚಾಗೋಷ್ಠಿ, ಪ್ರಬಂಧಮಂಡನೆ ಮತ್ತು ಕಾರ್ಯಾಗಾರಗಳು ನಡೆದವು.

ವಿಜಯಾ ಕಾಲೇಜಿನಲ್ಲಿ ಗುರುವಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ ವಿಜಯಾ ಕಾಲೇಜಿನ 80ನೇ ವಾರ್ಷಿಕೋತ್ಸವ, ಗುರುವಂದನೆ ಮತ್ತು ಹಳೆಯ ವಿದ್ಯಾರ್ಥಿಗಳ ಸಮ್ಮಿಲನ-2025 ಸೋಮವಾರ ನೆರವೇರಿತು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ‘ಹಳೆಯ ವಿದ್ಯಾರ್ಥಿಗಳು, ನಿವೃತ್ತ ಪ್ರಾಧ್ಯಾಪಕರು ಮತ್ತು ಕಾಲೇಜಿನ ಅಭಿಮಾನಿಗಳನ್ನು ಒಂದುಗೂಡಿಸಿದ ಈ ಕಾರ್ಯಕ್ರಮ ಉತ್ಸವವಾಗಿದೆ’ ಎಂದರು.

ವಿಜಯಾ ವಾಣಿಜ್ಯ ಹಳೆಯ ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ರಾಜಶೇಖರ್ ಅವರು, ಉಪನ್ಯಾಸಕರು ಹಾಗೂ ಕಾಲೇಜಿನ ದಿನಗಳನ್ನು ಸ್ಮರಿಸಿಕೊಂಡರು.

ಶಿಕ್ಷಣ ತಜ್ಞ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ರಚನಾ ಸಮಿತಿ ಸದಸ್ಯರಾಗಿದ್ದ ಎಂ.ಕೆ. ಶ್ರೀಧರ್, ಸರ್ವಮಂಗಳ ಸ್ಮಾರಕ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕೆ.ಆರ್. ಸೋಮಶೇಖರ್, ನಟ- ಚಿತ್ರ ನಿರ್ದೇಶಕ ಸುಚೇಂದ್ರ ಪ್ರಸಾದ್, ಬಿ.ಎಚ್.ಎಸ್. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಟಿ. ಎ. ಬಾಲಕೃಷ್ಣ ಅಡಿಗ ಅವರನ್ನು ಸನ್ಮಾನಿಸಲಾಯಿತು. ಗುರುವಂದನೆ ಮತ್ತು ಹಳೆಯ ವಿದ್ಯಾರ್ಥಿಗಳ ಸಮ್ಮಿಲನದ ಅಂಗವಾಗಿ ನಿವೃತ್ತ ಉಪನ್ಯಾಸಕರನ್ನು ಸನ್ಮಾನಿಸಲಾಯಿತು.



ವಿಜಯಾ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಲಾಯಿತು

ಗ್ರೂಪ್ ‘ಬಿ’ಗೆ ಪರಿಗಣಿಸಲು ಬಲಿಜ ಮಹಾಸಭಾ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಬಲಜಿಗ ಅಥವಾ ಬಣಜಿಗ ಸಮುದಾಯವನ್ನು ಉದ್ಯೋಗ ಹಾಗೂ ಶಿಕ್ಷಣದ ಉದ್ದೇಶಕ್ಕಾಗಿ ಹಿಂದುಳಿದ ವರ್ಗಗಳ ಪ್ರವರ್ಗ ‘ಬಿ’ ಮತ್ತು ‘ಡಿ’ ಎರಡರಲ್ಲೂ ವರ್ಗೀಕರಣ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಅಸಾಂವಿಧಾನಿಕ’ ಎಂದು ಹೈಕೋರ್ಟ್ ಸಹ ಹೇಳಿದ್ದು, ಸಮುದಾಯವನ್ನು ಗ್ರೂಪ್ ‘ಬಿ’ಯಲ್ಲೇ ಪರಿಗಣಿಸಬೇಕು ಎಂದು ಕರ್ನಾಟಕ ಬಲಿಜ ಮಹಾಸಭಾ ಒತ್ತಾಯಿಸಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದ ಸಭಾದ ಅಧ್ಯಕ್ಷ ಪಿ.ಸಿ. ಮೋಹನ್ ಮತ್ತಿತರರು, ಗೊಂದಲವನ್ನು ತಕ್ಷಣಕ್ಕೆ ಪರಿಹರಿಸಬೇಕು ಎಂದು ಕೋರಿದರು.

ವಿಜಯವಾಡ ಪಾಲಿಕೆ ನಿಯೋಗ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯವಾಡ ಮಹಾನಗರ ಪಾಲಿಕೆ ಉಪ ಮೇಯರ್ ನೇತೃತ್ವದಲ್ಲಿ ಕಾರ್ಪೊರೇಟರ್‌ಗಳು, ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳ ಕುರಿತ ಅಧ್ಯಯನ ನಡೆಸಿದರು.

ಬಿಬಿಎಂಪಿಯ ಸಂಪೂರ್ಣ ಕಾರ್ಯವೈಖರಿಯ ಕುರಿತು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನಿಯೋಗಕ್ಕೆ ವಿವರಣೆ ನೀಡಿದರು.

ನಾಗರಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವ ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್‌ನಲ್ಲಿ (ಐಸಿಸಿಸಿ) ದೂರು ಕೇಂದ್ರ, ಸಹಾಯ 2.0 ತಂತ್ರಾಂಶ, ಅದರ ಜೊತೆಗೆ 1533 ಸಹಾಯವಾಣಿ ಬಗ್ಗೆ ಮಾಹಿತಿ ನೀಡಿದರು. ಕಸ ವಿಲೇವಾರಿ, ವಿದ್ಯುತ್ ದೀಪ, ರಸ್ತೆ ಗುಂಡಿಗಳು, ರಾಜಕಾಲುವೆ ಹಾಗೂ ಚರಂಡಿ ಸ್ವಚ್ಛತೆ ಸವಾಲಿನ ವಿಷಯಗಳಾಗಿದ್ದು, ಅವುಗಳ ಮೇಲೆ ಹೆಚ್ಚಿನ ಆದ್ಯತೆ ನೀಡಿ, ಸಮಸ್ಯೆ ಬಗಹರಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಘನ ತ್ಯಾಜ್ಯ ವಿಲೇವಾರಿಗಾಗಿ ಪ್ರತ್ಯೇಕವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತವನ್ನು ಸ್ಥಾಪಿಸಲಾಗಿದೆ. ಅದರ ಮೂಲಕ ತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. ಮಳೆಗಾಲದ ಪ್ರಾರಂಭಕ್ಕೂ ಮುಂಚಿತವಾಗಿಯೇ ರಾಜಕಾಲುವೆ, ಚರಂಡಿಗಳ ಸ್ವಚ್ಛತೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೋರಮಂಗಲ ಕಣಿವೆಯ ಕೆ-100 (ನಾಗರಿಕ ಜಲಮಾರ್ಗ) ಯೋಜನೆಯ ಸ್ಥಳಕ್ಕೆ ವಿಜಯವಾಡ ಮಹಾನಗರ ಪಾಲಿಕೆ ನಿಯೋಗದ ಸದಸ್ಯರು ಭೇಟಿ ನೀಡಿದ್ದರು. ಟೆಂಡರ್ ಶ್ಯೂರ್ ಹಾಗೂ ವೈಟ್ ಟಾಪಿಂಗ್ ರಸ್ತೆಗಳನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯವಾಡ ಮಹಾನಗರ ಪಾಲಿಕೆ ಉಪ ಮೇಯರ್ ಅವತು ಶ್ರೀಶೈಲಜ ರೆಡ್ಡಿ, ವೈಸಿಪಿ ನಾಯಕ ವೆಂಕಟಸತ್ಯನಾರಾಯಣ, ಟಿಡಿಪಿ ನಾಯಕ ಉಮಿದಿ ವೆಂಕಟೇಶ್ವರ ರಾವ್, ಬಿಜೆಪಿ ನಾಯಕ ಬುಲ್ಲ ವಿಜಯ್ ಕುಮಾರ್, ಪಾಲಿಕೆ ಸದಸ್ಯರು ನಿಯೋಗದಲ್ಲಿದ್ದರು.



ವಿಜಯವಾಡ ಮಹಾನಗರ ಪಾಲಿಕೆ ನಿಯೋಗದ ಸದಸ್ಯರನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸನ್ಮಾನಿಸಿದರು



ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನೆ ಸಂಸ್ಥೆಯು (ಬಿಎಂಸಿಆರ್‌ಐ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ 2025ನೇ ಸಾಲಿಗೆ 256 ಎಂಬಿಬಿಎಸ್ ಪದವೀಧರರು ಪ್ರಮಾಣಪತ್ರಗಳನ್ನು ಸ್ವೀಕರಿಸಿದರು. ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಪದಕ ಹಾಗೂ ಪ್ರಶಸ್ತಿಪತ್ರಗಳೊಂದಿಗೆ ಸಂಭ್ರಮಿಸಿದರು

ಸಂವಿಧಾನ ಸಂರಕ್ಷಕರ ಸಮಾವೇಶ ಏ. 26ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಊರು, ಕೇರಿ, ಹಾಡಿ, ಬೀದಿಗಳಲ್ಲಿ ‘ಸಂವಿಧಾನ ಸಂರಕ್ಷಕ ಪಡೆ’ ಹೆಸರಿನಲ್ಲಿ ದೇಶಪ್ರೇಮಿ ತಂಡಗಳನ್ನು ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡುವ ಉದ್ದೇಶದಿಂದ ಇದೇ 26ರಂದು ದಾವಣಗೆರೆಯಲ್ಲಿ ಸಂವಿಧಾನ ಸಂರಕ್ಷಕರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಎದ್ದೇಳು ಕರ್ನಾಟಕ ಹಾಗೂ ಸಂವಿಧಾನ ಸಂರಕ್ಷಕರ ಸಮಾವೇಶ ಸ್ವಾಗತ ಸಮಿತಿ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಬಿ.ಟಿ. ಲಲಿತಾ ನಾಯಕ್, ಜೆ.ಎಂ. ವೀರಸಂಗಯ್ಯ, ಯೂಸೂಫ್ ಕನ್ನಿ, ತಾರಾ ರಾವ್, ರೆವರೆಂಡ್ ಚಂದ್ರಪ್ರಸಾದ್, ನೂರ್ ಶ್ರೀಧರ್, ‘2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವನ್ನು ಕೆಳಗೆ ಇಳಿಸಲು ಬೂತ್ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಈಗ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕೊಟ್ಟ ಮಾತನ್ನು ತಪ್ಪಿದೆ’ ಎಂದು ಆರೋಪಿಸಿದರು.

‘ಹಿಂದಿನ ಬಿಜೆಪಿ ಸರ್ಕಾರ ತಂದಿದ್ದ ಜನವಿರೋಧಿ ನೀತಿಗಳನ್ನು ಮುಂದುವರಿಸುತ್ತಿದ್ದು, ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ, ಆಡಳಿತದಲ್ಲಿ ಗಮನಾರ್ಹ ಬದಲಾವಣೆ ಆಗಿಲ್ಲ. ಸಂವಿಧಾನ ವಿರೋಧಿ ಶಕ್ತಿಗಳ ವಿರುದ್ಧ ಸರಿಯಾಗಿ ಕೆಲಸ ಮಾಡುತ್ತಿಲ್ಲ’ ಎಂದು ಹೇಳಿದರು.

‘ಸಾಹಿತಿ ಬರಗೂರು ರಾಮಚಂದ್ರಪ್ಪ, ಚಿತ್ರನಟ ಪ್ರಕಾಶ್ ರಾಜ್, ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ, ಚಿಂತಕ ಪರಕಾಲ ಪ್ರಭಾಕರ್, ಮುಸ್ಲಿಂ ಸಮುದಾಯದ ಮುಖಂಡ ಮಹಮ್ಮದ್ ಸಲೀಂ, ಸಂಯುಕ್ತ ಕಿಸಾನ್ ಮೋರ್ಚಾದ ಸುನೀಲಂ, ಸಿನಿಮಾ ನಿರ್ದೇಶಕಿ ಕವಿತಾ ಲಂಕೇಶ್, ಶೋಷಿತ ಸಮುದಾಯಗಳ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ದಲಿತ ಮುಖಂಡರಾದ ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ’ ಎಂದರು.

‘ಯಶಸ್ವಿನಿ’ ಚಿಕಿತ್ಸಾ ವೆಚ್ಚ ಶೇ 55 ಹೆಚ್ಚಳ: ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಸದಸ್ಯರಿಗೆ ನೀಡುತ್ತಿರುವ ಶಸ್ತ್ರ ಚಿಕಿತ್ಸೆಗಳ ದರಗಳನ್ನು ಶೇ 55ರಷ್ಟು ಹೆಚ್ಚಳ ಮಾಡಲು ಶಾಸಕ ಡಾ.ಎನ್.ಟಿ. ಶ್ರೀನಿವಾಸ ಅವರ ಅಧ್ಯಕ್ಷತೆಯ ಸಮಿತಿ ಶಿಫಾರಸು ಮಾಡಿದೆ.

ಪರಿಷ್ಕರಣೆ ಕುರಿತು ವರದಿಯನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಸಲ್ಲಿಸಿದ್ದು, ಚಿಕಿತ್ಸಾ ವೆಚ್ಚ ಹೆಚ್ಚಳದ ಪ್ರಸ್ತಾಪದಿಂದಾಗಿ ಸರ್ಕಾರಕ್ಕೆ ₹68.75 ಕೋಟಿ ಹೆಚ್ಚಿನ ಹೊರೆ ಬೀಳಲಿದೆ. ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು 2022-23ರಿಂದ ಮರುಜಾರಿಗೊಳಿಸಲಾಗಿತ್ತು. ಆದರೆ, 2017-18 ಅವಧಿಯಲ್ಲಿ ನಿಗದಿ ಮಾಡಿದ ಚಿಕಿತ್ಸಾ ದರಗಳೇ ಆಗಿದ್ದವು. ಪ್ರಸ್ತುತ ಮಾರುಕಟ್ಟೆ ದರಗಳಿಗೆ ಹೋಲಿಸಿದಲ್ಲಿ ಅತ್ಯಂತ ಕಡಿಮೆ ಇರುವ ಕಾರಣ ಪ್ರಮುಖ ಆಸ್ಪತ್ರೆಗಳು ಯೋಜನೆಯಡಿ ಚಿಕಿತ್ಸೆ ನೀಡಲು ಹಿಂದೇಟು ಹಾಕುತ್ತಿದ್ದವು. ಹಾಗಾಗಿ, ದರ ಪರಿಷ್ಕರಣೆ ಮಾಡಲು ಸಮಿತಿ ರಚಿಸಲಾಗಿತ್ತು. ಸಮಿತಿ ಶೇ 50ರಿಂದ 55ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿದೆ.

ಈಗಿನ ಯಶಸ್ವಿನಿ ಯೋಜನೆಯಲ್ಲಿ 2,128 ಚಿಕಿತ್ಸೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಇರುವ ಚಿಕಿತ್ಸೆಗಳಲ್ಲಿ 6 ಚಿಕಿತ್ಸೆಗಳನ್ನು ತಜ್ಞರ ಸಲಹೆಯಂತೆ ಕೈಬಿಡಲಾಗಿದೆ. ಅದೇ ರೀತಿ ವೈದ್ಯಕೀಯ ಕ್ಷೇತ್ರದಲ್ಲಿ ಹೊಸದಾಗಿ ರೇಡಿಯಾಲಜಿ, ಸಿಟಿವಿಎಸ್, ಕ್ಯಾನ್ಸರ್ ಕಾಯಿಲೆ ಸೇರಿ 69 ಹೊಸ ಚಿಕಿತ್ಸೆಗಳನ್ನು ಸೇರಿಸಲಾಗಿದೆ. ಒಟ್ಟು 2,191 ಚಿಕಿತ್ಸೆ ಗಳನ್ನು ನಿಗದಿಗೊಳಿಸಲಾಗಿದೆ. ಯಶಸ್ವಿನಿ ಯೋಜನೆಯಡಿ 2024-25ರಲ್ಲಿ 68,159 ಫಲಾನುಭವಿಗಳು ₹117.79 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿದ್ದಾರೆ. 2025–26ನೇ ಸಾಲಿನಲ್ಲಿ 75 ಸಾವಿರ ಫಲಾನುಭವಿಗಳು ಚಿಕಿತ್ಸೆ ಪಡೆಯುವ ಅಂದಾಜು ಇದೆ.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಅತಿಥಿಗಳು: ಸುಧೀರ್ ಕೃಷ್ಣಸ್ವಾಮಿ, ಅಧ್ಯಕ್ಷತೆ: ಬಿ.ಎ. ಸಾವಲೆ, ಉಪಸ್ಥಿತಿ: ಸುಧಾಕರ್ ಎಸ್. ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ, ಸರ್ ಸಿ.ವಿ. ರಾಮನ್ ರಸ್ತೆ, ಸದಾಶಿವನಗರ, ಮಧ್ಯಾಹ್ನ 2

ರಾಜ್ಯಮಟ್ಟದ ಪೌರಾಣಿಕ ನಾಟಕ ರಂಗೋತ್ಸವ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ರಂಗಸ್ವಾಮಿ, ಉದ್ಘಾಟನೆ: ಸಿ.ಕೆ. ರಾಮಮೂರ್ತಿ, ಅತಿಥಿಗಳು: ಮಹೇಶ ಜೋಶಿ, ಮಂಜುನಾಥ ರೆಡ್ಡಿ, ಆರ್. ರಾಮಚಂದ್ರ, ರಾಜು ಮಳವಳ್ಳಿ, ಚಂದಾಪಾಂಡೆ ಅಮ್ಮಾ, ಗೌರವಾರ್ಪಣೆ: ಪ್ರತಿಭಾ ನಾರಾಯಣ, ಭಾಗ್ಯಶ್ರೀ ರವಿಕುಮಾರ್, ಸನ್ಮಾನಿತರು: ಮೋಹನ್ ಬಾಬು, ಪ್ರೇಮಾ, ಲಕ್ಷ್ಮಣ ಮಾಲೂರು, ರೇಣುಕಾ, ಮೈಸುಗುರ್ ಗಂಗಾಧರ್, ಆರ್. ವಿಶ್ವನಾಥ್, ವಿದ್ಯಾ, ‘ನರಕಾಸುರ ವಧೆ’ ನಾಟಕ ಪ್ರದರ್ಶನ: ರಚನೆ: ಟಿ. ವರದರಾಜು, ನಿರ್ದೇಶನ: ಡಿ.ಕೆ. ಸಿಂಧೆ, ಆಯೋಜನೆ: ಛಾಯಾ ಭಾನು ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3ರಿಂದ


ಮಾಸದ ಮಾತು-11: ‘ಕರ್ನಾಟಕದ ಅಭಿವೃದ್ಧಿಯಲ್ಲಿ ಮೈಸೂರು ಸಂಸ್ಥಾನದ ಕೊಡುಗೆ’ ಉಪನ್ಯಾಸ: ಧರ್ಮೇಂದ್ರ ಕುಮಾರ್ ಅರೇನಹಳ್ಳಿ ಶಿವಶಂಕರ್, ಸನ್ಮಾನಿತರು: ಮಹೇಶ್ ಅಂಗಡಿ, ಅತಿಥಿ: ಎಚ್. ಲಿಂಗರಾಜ್, ಆಯೋಜನೆ ಮತ್ತು ಸ್ಥಳ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ಬಿ. ವಿಜಯಕುಮಾರ್ ಸಭಾಂಗಣ, ವಿಮಾನಪುರ, ಮಧ್ಯಾಹ್ನ 3.30

ಜೆ.ಎಂ. ಪ್ರಹ್ಲಾದ್ ಅವರ ಐದು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಚಿಂದೋಡಿ ಬಂಗಾರೇಶ್, ಬಿ. ರಾಮ ಮೂರ್ತಿ, ಎನ್.ಎಸ್. ಶ್ರೀಧರಮೂರ್ತಿ, ಲಕ್ಷ್ಮಿಶ್ರೇಯಾಂಸಿ, ಉಪಸ್ಥಿತಿ: ಬಿ.ಎಸ್. ವಿದ್ಯಾರಣ್ಯ, ಆಯೋ ಜನೆ: ಚಾರುಮತಿ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಮೂರನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಸಂಜೆ 5

ತಿಂಗಳ ಉಪನ್ಯಾಸ ಕಾರ್ಯಕ್ರಮ: ‘ಆಫ್ರಿಕನ್ ಸಾಹಿತ್ಯ–ಕನ್ನಡ ಅನುದಾದಗಳು’ ಉಪನ್ಯಾಸ: ಸಿ. ನಾಗಣ್ಣ, ಪ್ರಾಸ್ತಾವಿಕ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ನೂತನ ಸಂಘಕ್ಕೆ ಚಾಲನೆ, ಅಂಬೇಡ್ಕರ್ ಜಯಂತಿ, ವಿಶ್ವ ಪುಸ್ತಕ ದಿನಾಚರಣೆ, ವಿಶೇಷ ಉಪನ್ಯಾಸ: ‘ಸಮಕಾಲೀನ ಸಂದರ್ಭದಲ್ಲಿ ಪುಸ್ತಕಗಳು’ ಉಪನ್ಯಾಸ: ರಹಮತ್ ತರೀಕೆರೆ, ಅತಿಥಿ: ಆರ್. ಪೂರ್ಣಿಮಾ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಪ್ರಾಸ್ತಾವಿಕ: ಗುರುಪ್ರಸಾದ್ ಡಿ.ಎನ್., ಉಪಸ್ಥಿತಿ: ಮಮತಾ, ಬಸವರಾಜ ಸೂಳಿಬಾವಿ, ಮಾಧವ ಐತಾಳ್, ರಾಜೇಶ್ವರಿ, ಅಕ್ಷತಾ ಹುಂಚದಕಟ್ಟೆ, ಆಯೋಜನೆ: ಕರ್ನಾಟಕ ಪುಸ್ತಕ ಮಾರಾಟಗಾರರು, ಪ್ರಕಾಶಕರು ಹಾಗೂ ಲೇಖಕರ ಸಂಘ, ಸ್ಥಳ: ದೇವರಾಜ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ಶಿವಕುಮಾರ ಸ್ವಾಮೀಜಿ ಜಯಂತಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲರ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಎಚ್. ಕೆ. ಪಾಟೀಲ, ಎಂ.ಬಿ. ಪಾಟೀಲ, ಅಭಿನಂದನೆ, ಪ್ರಶಸ್ತಿ ಪ್ರದಾನ: ಶಿವರಾಜ ಪಾಟೀಲ, ಅತಿಥಿಗಳು: ಅಶೋಕ ಹಿಂಚಗೇರಿ, ಉದಯ ಹೊಳ್ಳ, ಕೆ.ಜಿ. ರಾಘವನ್, ಕೆ. ಶಶಿಕಿರಣ ಶೆಟ್ಟಿ, ಎಸ್.ಎಸ್. ಮಿತ್ತಲಕೋಡ, ವಿವೇಕ ಸುಬ್ಬಾರೆಡ್ಡಿ, ಅಧ್ಯಕ್ಷತೆ: ಎನ್. ದೇವದಾಸ್, ಆಯೋಜನೆ: ಡಾ. ಶಿವಕುಮಾರ್ ಸ್ವಾಮಿಗಳ ಜಯಂತೋತ್ಸವ ಹಾಗೂ ಗೌ.ನ್ಯಾ. ನಾಡೋಜ ಶಿವರಾಜ ಪಾಟೀಲರ ಅಭಿನಂದನಾ ಸಮಿತಿ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30



ಶಿವರಾಜ ವಿ. ಪಾಟೀಲ

ನವನಿರ್ಮಾಣ ಶಿಲ್ಪಿಗಳಿಗೆ ನುಡಿನಮನ, ಹಾಸ್ಯಬ್ರಹ್ಮ ಬೀಚಿ ಜನ್ಮದಿನ: ಭಾಗವಹಿಸುವವರು: ಉಲ್ಲಾಸ ರಾಯಸಂ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6ರಿಂದ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಬೆಳಿಗ್ಗೆ 8ಕ್ಕೆ ಶ್ರೀರಾಮಪಟ್ಟಾಭಿಷೇಕ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ವಿದ್ಯಾ ಭೂಷಣ, ಪ್ರಾದೇಶಾಚಾರ್, ಬೆಂಗಳೂರು ವಿ. ಪ್ರವೀಣ್, ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 6.30

ಜಿಲ್ಲಾ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿಕೆ

‘ರಾಷ್ಟ್ರಧ್ವಜ ಇಳಿಸಿ, ಭಗವಾಧ್ವಜ ಏರಿಸುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರೆಸ್ಸೆಸ್) ವೈಷ್ಣವ ರಾಷ್ಟ್ರೀಯತೆಯನ್ನು ನಮ್ಮ ಮೇಲೆ ಹೇರುವ ಪ್ರಯತ್ನ ಮಾಡುತ್ತಿದೆ. 2047ರ ವೇಳೆಗೆ ಈ ದೇಶದ ರಾಷ್ಟ್ರಧ್ವಜ ಇಳಿಸಿ, ಭಗವಾಧ್ವಜ ಏರಿಸುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ದಲಿತ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು.

‘ಬಂಡವಾಳಶಾಹಿ ಹಾಗೂ ಪುರೋಹಿತಶಾಹಿಗಳು ಈಗಾಗಲೇ ಜಗತ್ತಿನ ಶೇ 99ರಷ್ಟು ಭಾಗವನ್ನು ಆಕ್ರಮಣ ಮಾಡಿಕೊಂಡಿವೆ. ಎಲ್ಲ ದೇಶಗಳಲ್ಲಿ ಬಲಪಂಥವೇ ಮುನ್ನೆಲೆಯಲ್ಲಿದೆ. ರಾಷ್ಟ್ರೀಯತೆಯನ್ನು ತಪ್ಪಾಗಿ ಅರ್ಥೈಸಿ, ವೈಷ್ಣವ ರಾಷ್ಟ್ರೀಯತೆಯನ್ನು ನಮ್ಮ ಮೇಲೆ ಹೇರಲಾಗುತ್ತಿದೆ. ಆರೆಸ್ಸೆಸ್ ಹೇಳುತ್ತಿರುವುದು ಇದೇ ರಾಷ್ಟ್ರೀಯತೆ. ಅದನ್ನು ಕಾರ್ಯಗತ ಮಾಡಲು ತನ್ನದೇ ಕಾರ್ಯಸೂಚಿಯನ್ನು ಅದು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುತ್ತಿದೆ. ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದಂತೆ ತೀರ್ಪನ್ನು ಬರೆದದ್ದು ಏಕವ್ಯಕ್ತಿಯಲ್ಲವೆಂದು ಆರೆಸ್ಸೆಸ್ ಹೇಳಿಕೊಂಡಿದೆ. ‘ಬೌದ್ಧಿಕ್’ ಎಂಬ ಘಟಕವನ್ನು ನಿರ್ಮಿಸಿದ್ದರಿಂದ ಇಂತಹ ತೀರ್ಪು ಸಾಧ್ಯವಾಯಿತೆಂದು ಆರೆಸ್ಸೆಸ್ ಕಚೇರಿಯಲ್ಲಿ ಪ್ರಸ್ತಾಪಿಸಲಾಗಿದೆ. ನ್ಯಾಯಾಧೀಶರು ಅವರದ್ದೇ ಅಂತಃಪ್ರಜ್ಞೆ ಮೂಲಕ ಕೆಲಸ ಮಾಡುತ್ತಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗಿದೆ’ ಎಂದರು.



ಬರಗೂರು ರಾಮಚಂದ್ರಪ್ಪ ಮತ್ತು ಕೋಟಿಗಾನಹಳ್ಳಿ ರಾಮಯ್ಯ ಅವರು ಗಿಡಕ್ಕೆ ನೀರೆರೆಯುವ ಮೂಲಕ ಸಮ್ಮೇಳನ ಉದ್ಘಾಟಿಸಿದರು. ಗೌಡಗೆರೆ ಮಾಯುಶ್ರೀ, ಮಾವಳ್ಳಿ ಶಂಕರ್, ಬಾನಂದೂರು ಕೆಂಪಯ್ಯ, ಅರ್ಜುನ ಗೊಳಸಂಗಿ, ಸುಭಾಷ್ ಹೂದ್ಲೂರಾ ಮತ್ತು ಮಂಜುಳಾ ಪಿ. ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಅಂಬೇಡ್ಕರ್ ಅವರು ಸತ್ತ ಪ್ರಾಣಿಗಳ ಮಾಂಸ ತಿನ್ನದಂತೆ, ಶುಭ್ರವಾದ ಬಟ್ಟೆಗಳನ್ನು ಧರಿಸುವಂತೆ ತಮ್ಮ ಭಾಷಣಗಳಲ್ಲಿ ದಲಿತರನ್ನುದ್ದೇಶಿಸಿ ಹೇಳುತ್ತಿದ್ದರು. ಈಗ ಕಾಲ ಬದಲಾಗಿದ್ದು, ಶುಭ್ರ ಬಟ್ಟೆ ಧರಿಸುವ ಜತೆಗೆ ಸತ್ತ ಪ್ರಾಣಿಗಳ ಮಾಂಸವನ್ನು ದಲಿತರು ತಿನ್ನುತ್ತಿಲ್ಲ. ಆದರೆ, ಮುಂದೆ ಬರುವ ಕಾಲಘಟ್ಟದಲ್ಲಿ ಆರ್ಥಿಕ, ಧಾರ್ಮಿಕ, ರಾಜಕೀಯ ಸಂರಚನೆಗಳು ದಲಿತರಿಗೆ ಈ ನೆಲದಲ್ಲಿ ಸತ್ತ ಪ್ರಾಣಿಗಳೂ ಸಿಗದ ಸ್ಥಿತಿಗೆ ಕೊಂಡೊಯ್ಯುವ ಸಾಧ್ಯತೆಯಿದೆ. ಆ ರೀತಿ ಆರೆಸ್ಸೆಸ್ ತನ್ನ ಸಿದ್ಧಾಂತಗಳನ್ನು ಎಲ್ಲರ ಮೇಲೆ ಹೇರುತ್ತಿದೆ. ಇನ್ನೂ ಎಚ್ಚರಗೊಳ್ಳದಿದ್ದರೆ ಸಾಕ್ಷರರಾಗಿಯೂ ಪ್ರಯೋಜನವಿಲ್ಲ’ ಎಂದು ಹೇಳಿದರು.

ನಿಲ್ಲದ ದೌರ್ಜನ್ಯ: ಸಾಹಿತಿ ಬರಗೂರು ರಾಮಚಂದ್ರಪ್ಪ, ‘ದೇಶದಲ್ಲಿ ಶಿಕ್ಷಣವನ್ನು ಸೆರೆಮನೆಯಲ್ಲಿ ಇಡಲಾಗಿತ್ತು. ಅದು ಬೀದಿಗೆ ಬಂದಾಗ ಸೈದ್ಧಾಂತಿಕ ಪಲ್ಲಟವಾಯಿತು. ಅಸ್ಪೃಶ್ಯರೆಂದು ಗುರುತಿಸಲ್ಪಟ್ಟಿದ್ದವರು ತಮ್ಮ ಅನುಭವವನ್ನು ತಾವೇ ಹೇಳಿಕೊಳ್ಳಲು ಸಾಧ್ಯವಾಯಿತು. ಸಾಮಾಜಿಕ ಅವಮಾನ ಎಲ್ಲದಕ್ಕಿಂತ ದೊಡ್ಡ ಅವಮಾನ. ಜಾತಿ, ವರ್ಗದ ಕಾರಣದ ತಾರತಮ್ಯವನ್ನು ಹೋಗಲಾಡಿಸಬೇಕಿದೆ. ದಲಿತರ ಮೇಲಿನ ದೌರ್ಜನ್ಯಗಳು ನಿರಂತರ ನಡೆಯುತ್ತಿವೆ. ರಾಷ್ಟ್ರೀಯ ದಲಿತ ಹಕ್ಕು ಅಭಿಯಾನದ ವರದಿ ಪ್ರಕಾರ 18 ನಿಮಿಷಕ್ಕೆ ದಲಿತರೊಬ್ಬರ ಮೇಲೆ ದೌರ್ಜನ್ಯ ನಡೆಯುತ್ತಿದೆ. ದಲಿತರ ಮೇಲಿನ ದೌರ್ಜನ್ಯ ಖಂಡಿಸುವ ಚಳವಳಿ ಅಗತ್ಯವಿದೆ’ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಸಂಕರ್, ‘ಏಕ ಭಾರತದ ಬಗ್ಗೆ ಕೆಲವರು ಮಾತನಾಡುತ್ತಿದ್ದಾರೆ. ಆದರೆ, ನಾವು ಇದಕ್ಕೆ ಅವಕಾಶ ನೀಡಬಾರದು. ದಲಿತರ ಹತ್ಯಾಕಾಂಡಕ್ಕೆ ಸಿಗದಷ್ಟು ಮನ್ನಣೆ ಇವತ್ತು ಜನಿವಾರಕ್ಕೆ ಸಿಗುತ್ತಿದೆ’ ಎಂದು. ವಿಷಾದಿಸಿದರು.

‘ಉದ್ಯೋಗಕ್ಕೆ ಪೂರಕವಾದ ಶಿಕ್ಷಣ ಅಗತ್ಯ’

‘ರವಿ ಸಂಭ್ರಮ–2025’ ಕಾರ್ಯಕ್ರಮದಲ್ಲಿ ಡಾ. ಜಿ.ಪರಮೇಶ್ವರ ಅಭಿಮತ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘90ರ ದಶಕದ ನಂತರದಲ್ಲಿ ದೇಶದಾದ್ಯಂತ ಪ್ರತಿ ವರ್ಷ 15 ಲಕ್ಷ ಎಂಜಿನಿಯರಿಂಗ್ ಪದವೀಧರರು ತಯಾರಾಗುತ್ತಿದ್ದು, ಅದರಲ್ಲಿ ಶೇ 10ರಷ್ಟು ಮಂದಿಗೆ ಮಾತ್ರ ಉದ್ಯೋಗ ಲಭ್ಯವಾಗುತ್ತಿದೆ’ ಎಂದು ಗೃಹಸಚಿವ ಡಾ. ಜಿ.ಪರಮೇಶ್ವರ ಅವರು ತಿಳಿಸಿದರು.

ಮಾಗಡಿ ಮುಖ್ಯರಸ್ತೆಯಲ್ಲಿರುವ ಈಸ್ಟ್ ವೆಸ್ಟ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ದಿ. ಸಿ.ಎನ್.ರವಿಕಿರಣ್ ಅವರ ಜನ್ಮದಿನಾಚರಣೆ ಪ್ರಯುಕ್ತ ಈಸ್ಟ್ ವೆಸ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಹಮ್ಮಿಕೊಂಡಿದ್ದ ‘ರವಿಸಂಭ್ರಮ–2025’ ಕಾರ್ಯಕ್ರಮ ಉದ್ಘಾಟಿಸಿ ಮತ್ತು ರವಿಕಿರಣ್ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದರು.



ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ. ಜಿ. ಪರಮೇಶ್ವರ, ಶಾಸಕ ಎಸ್. ಟಿ.ಸೋಮಶೇಖರ್ ಇತರರು ಹಾಜರಿದ್ದರು.

‘ಉದ್ಯೋಗಕ್ಕೆ ಪೂರಕವಾದ ಶಿಕ್ಷಣ ಅಗತ್ಯ. ಈ ನಿಟ್ಟಿನಲ್ಲಿ ಕೈಗಾರಿಕಾ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರ ಎರಡೂ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿದರೆ ಎಲ್ಲರಿಗೂ ಉದ್ಯೋಗ ಸಿಗಲಿದೆ. ಪ್ರಪಂಚದ ಎಲ್ಲೆಡೆ ಸಿಗುವ ತಂತ್ರಜ್ಞಾನದ ಶಿಕ್ಷಣ ನಮ್ಮ ಮಕ್ಕಳಿಗೂ ಸಿಗಬೇಕು ಎಂಬ ಉದ್ದೇಶದಿಂದ ಹಲವು ವೈವಿಧ್ಯಮಯ ಶಿಕ್ಷಣ ನೀಡಲು ನಮ್ಮ ಸರ್ಕಾರ ಮುಂದಾಗಿದೆ’ ಎಂದರು.

‘ವಿಜ್ಞಾನ–ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿವೆ. ಈ ವೇಗಕ್ಕೆ ತಕ್ಕಂತೆ ಹೆಜ್ಜೆ ಹಾಕಬೇಕು’ ಎಂದು ಸಲಹೆ ನೀಡಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಮಾತನಾಡಿದರು. ಈಸ್ಟ್ ವೆಸ್ಟ್ ಶಿಕ್ಷಣ-ಸಂಸ್ಥೆಗಳ ಅಧ್ಯಕ್ಷೆ ರಶ್ಮಿಕಿರಣ್, ಸಂಸ್ಥೆಯ ಕಾರ್ಯದರ್ಶಿ ತೇಜಸ್ ಕಿರಣ್, ಚಿತ್ರನಟ ಶ್ರೀಮುರಳಿ, ಸಂಸ್ಥೆಯ ನಿರ್ದೇಶಕ ಪುರುಷೋತ್ತಮ್ ಮಾತನಾಡಿದರು.

ಬಸ್ ಪಲ್ಟಿ: 40ಕ್ಕೂ ಅಧಿಕ ಮಂದಿಗೆ ಗಾಯ

ಕನಕಪುರ: ತಾಲ್ಲೂಕಿನ ಸಂಗಮದ ತಿರುವಿನಲ್ಲಿ ಮಂಗಳವಾರ ಖಾಸಗಿ ಬಸ್ ಪಲ್ಟಿಯಾಗಿ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಹತ್ತು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಎಲ್ಲರೂ ಬೆಂಗಳೂರಿನ ನಿವಾಸಿಗಳು. ಬೆಟ್ಟದ ಹಲಸೂರು ಗ್ರಾಮದ ಚರ್ಚ್‌ನಲ್ಲಿ ಉತ್ಸವದ ಬಳಿಕ ಸಂಗಮಕ್ಕೆ ಪ್ರವಾಸ ಹೋಗುವಾಗ ಈ ಘಟನೆ ನಡೆದಿದೆ.

ಕಸ ಎಸೆದಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ

ಬೆಂಗಳೂರು: ಚಲಿಸುತ್ತಿದ್ದ ಆಟೊದಲ್ಲಿ ಕುಳಿತು ಕಸ ಎಸೆದು ಹೋಗುತ್ತಿದ್ದವರನ್ನು ತಡೆದು ಪ್ರಶ್ನಿಸಿದ್ದಕ್ಕೆ ಮೂವರು ಆರೋಪಿಗಳು ಪ್ರಾಧ್ಯಾಪಕರೊಬ್ಬರ ಮೇಲೆ ಹಲ್ಲೆ ನಡೆಸಿದ ಘಟನೆ ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಜೆಎಚ್‌ಬಿಸಿಎಸ್ ಲೇಔಟ್‌ನಲ್ಲಿ ನಡೆದಿದೆ. ಘಟನೆ ಸಂಬಂಧ ಮೂವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ದಯಾನಂದ ಸಾಗರ್ ಕಾಲೇಜಿನ ಪ್ರಾಧ್ಯಾಪಕ ಅರಬಿಂದೊ ಗುಪ್ತಾ ಹಲ್ಲೆಗೆ ಒಳಗಾದವರು. ಏಪ್ರಿಲ್ 21ರಂದು ಘಟನೆ ನಡೆದಿದೆ.



ಅರಬಿಂದೊ ಗುಪ್ತಾ

‘ಆಟೊದಲ್ಲಿ ಬಂದವರು ಕಸ, ಗ್ಲಾಸ್‌ಗಳನ್ನು ರಸ್ತೆಗೆ ಎಸೆಯುತ್ತಿದ್ದರು. ಇದನ್ನು ಪ್ರಶ್ನಿಸಿ, ಕಸ ಎಸೆಯದಂತೆ ಸೂಚಿಸಿದೆ. ಆಟೊದಿಂದ ಕೆಳಕ್ಕೆ ಇಳಿದು ಹಲ್ಲೆ ನಡೆಸಿದರು’ ಎಂದು ಅರಬಿಂದೊ ಹೇಳಿದ್ದಾರೆ.

ಅರಬಿಂದೋ ಗುಪ್ತಾ ಅವರು ಘಟನೆ ಸಂಬಂಧ ಕುಮಾರಸ್ವಾಮಿ ಲೇಔಟ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

2 ಕಾಲೇಜುಗಳಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಪಶ್ಚಿಮ ವಿಭಾಗದ ಎರಡು ಕಾಲೇಜುಗಳಿಗೆ ಹುಸಿ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತು, ಆರ್.ವಿ. ಕಾಲೇಜಿಗೆ ಹುಸಿ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದು, ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಸಿ.ಎಂ., ಡಿಸಿಎಂಗೆ ಬೆದರಿಕೆ ಇ–ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕೊಲೆ ಮಾಡುವುದಾಗಿ ಕಿಡಿಗೇಡಿಯೊಬ್ಬ ಇ–ಮೇಲ್ ಮೂಲಕ ಸಂದೇಶ ಕಳುಹಿಸಿ ಬೆದರಿಕೆ ಹಾಕಿದ್ದಾನೆ. ಈ ಸಂದೇಶ ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಿಂಧಾರ್ ರಜಪೂತ್ ಹೆಸರಿನ ಇ–ಮೇಲ್‌ನಿಂದ ಈ ಬೆದರಿಕೆ ಸಂದೇಶ ಬಂದಿದೆ ಎಂಬುದು ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇಬ್ಬರನ್ನೂ ಕೊಲೆ ಮಾಡಿ ಫ್ರಿಜ್ ಮತ್ತು ಟ್ರ್ಯಾಲಿ ಬ್ಯಾಗ್‌ಗೆ ತುಂಬುವುದಾಗಿ ಇ–ಮೇಲ್ ಸಂದೇಶದಲ್ಲಿ ಬೆದರಿಕೆ ಹಾಕಲಾಗಿದೆ. ಈ ಬೆದರಿಕೆ ಇ–ಮೇಲ್ ಅನ್ನು ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವರು, ನಗರ ಪೊಲೀಸ್ ಕಮಿಷನರ್‌ಗೂ ರವಾನೆ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ರಾಮಪುರದ ಪ್ರಭಾಕರ್‌ಗೆ ₹1 ಕೋಟಿ ಸಾಲ ಕೊಟ್ಟಿದ್ದೇನೆ. ಆದರೆ, ಆತ ಈವರೆಗೂ ಸಾಲ ವಾಪಸ್ ಕೊಟ್ಟಿಲ್ಲ. ಆದಷ್ಟು ಬೇಗ ಪ್ರಭಾಕರ್‌ಗೆ ಸಾಲ ವಾಪಸ್ ಕೊಡಲು ಹೇಳಿ. ಪ್ರಭಾಕರ್ ತನ್ನ ನಾದಿನಿ ಹಾಗೂ ಪೋಷಕರ ಮನೆಯಲ್ಲಿ ಹಣ ಅಡಗಿಸಿಟ್ಟಿದ್ದಾನೆ. ಪ್ರಭಾಕರ್‌ಗೆ ಇಬ್ಬರು ಮಕ್ಕಳು ಇದ್ದಾರೆ. ಇತ್ತೀಚೆಗೆ ಒಬ್ಬ ಮಗನನ್ನು ಮದುವೆ ಮಾಡಿದ್ದಾನೆ. ಸಾಲದ ಹಣವನ್ನು ವಾಪಸ್ ನೀಡಲು ಆತನಿಗೆ ಆದಾಯ ಮೂಲ ಇಲ್ಲ. ಹೀಗಾಗಿ, ಪ್ರಭಾಕರ್‌ನನ್ನು ಕೊಲೆ ಮಾಡುತ್ತೇನೆ’ ಎಂದು ಅದೇ ಇ–ಮೇಲ್‌ನಲ್ಲಿ ಉಲ್ಲೇಖಿಸಿದ್ದಾನೆ.

₹2 ಕೋಟಿ ಮೌಲ್ಯದ ಬೆಟ್ಟಿಂಗ್ ಚಿಪ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಹಾಗೂ ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಟಿಕೆಟ್ ಮಾರುತ್ತಿದ್ದ ಬುಕ್ಕಿಗಳು ಹಾಗೂ ಮಧ್ಯವರ್ತಿಗಳನ್ನು ಸಿಸಿಬಿ ಪೊಲೀಸರು (ವಿಶೇಷ ತನಿಖಾ ತಂಡ) ಬಂಧಿಸಿದ್ದಾರೆ.

ನಗರದ ಒಂಬತ್ತು ಠಾಣೆಗಳ ವ್ಯಾಪ್ತಿಯಲ್ಲಿ ಏ. 2ರಿಂದ 18ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಯಿತು ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಬಂಧಿತರು ಬೆಟ್ಟಿಂಗ್‌ಗೆ ಬಳಸುತ್ತಿದ್ದ ₹2 ಕೋಟಿಗೂ ಹೆಚ್ಚು ಮೌಲ್ಯದ ಬೆಟ್ಟಿಂಗ್ ಚಿಪ್ಸ್, ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಲು ಸಂಗ್ರಹಿಸಿದ್ದ 50 ಟಿಕೆಟ್, ನಗದು, ಮೊಬೈಲ್ ಫೋನ್, ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ಆರೋಪಿಗ ಖಾತೆ ವಹಿವಾಟು ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದರು.

ಸಿಟಿ ಮಾರುಕಟ್ಟೆ ಠಾಣೆ, ಸುಬ್ರಮಣ್ಯಪುರ, ಸಿ.ಕೆ.ಅಚ್ಚುಕಟ್ಟು, ಜೀವನ್ ಬಿಮಾ ನಗರ, ಯಲಹಂಕ, ಕಬ್ಬನ್ ಪಾರ್ಕ್, ಕೋಣನಕುಂಟೆ, ಬ್ಯಾಡರಹಳ್ಳಿ, ಬಸವೇಶ್ವರನಗರ ಠಾಣೆಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು ಎಂದು ಮಾಹಿತಿ ನೀಡಿದರು.

‘ಚಿನ್ನಸ್ವಾಮಿ ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಹೆಚ್ಚಿನ ಬೆಲೆಗೆ ಟಿಕೆಟ್ ಮಾರುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು’ ಎಂದರು.

ಪಂಟರ್‌ಗಳಿಗೆ ಮಾಹಿತಿ ರವಾನೆ: ಕೆಲ ಆರೋಪಿಗಳು ಐಪಿಎಲ್ ಪಂದ್ಯದ ಆರಂಭಕ್ಕೂ ಮುನ್ನ ಲಾಡ್ಜ್‌ನಲ್ಲಿ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದರು. ಅವರನ್ನೂ ಬಂಧಿಸಲಾಗಿದೆ. ಕ್ರೀಡಾಂಗಣದಲ್ಲೇ ಕುಳಿತು ಪಂಟರ್‌ಗಳಿಗೆ ಪ್ರತಿ ಬಾಲ್‌ನ ಮಾಹಿತಿ ರವಾನೆ ಮಾಡುತ್ತಿದ್ದ ಮಧ್ಯವರ್ತಿಗಳನ್ನೂ ಬಂಧಿಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಮೈದಾನದಲ್ಲಿ ಕುಳಿತು ವೀಕ್ಷಿಸುವ ಪಂದ್ಯಕ್ಕೂ, ಪಂದ್ಯದ ಟಿ.ವಿ ಪ್ರಸಾರಕ್ಕೂ ಕೆಲ ಸೆಕೆಂಡ್ ಅಂತರ ಇರುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು, ಪ್ರತಿ ಬಾಲ್‌ನ ಮೇಲೆ, ಫೋರ್, ಸಿಕ್ಸ್, ನೋ ಬಾಲ್, ವೈಡ್ ಎಸೆತದ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

₹30.15 ಲಕ್ಷ ಮೌಲ್ಯದ ವಸ್ತುಗಳು ಜಪ್ತಿ, ನಾಲ್ವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ‘ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಗಳಲ್ಲಿ ನಾಲ್ವರನ್ನು ಬಂಧಿಸಿ, ₹30.15 ಲಕ್ಷ ಮೌಲ್ಯದ ಚಿನ್ನಾಭರಣ ಮತ್ತು ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಇತ್ತೀಚೆಗೆ ಎಚ್‌ಆರ್‌ಬಿಆರ್ ಲೇಔಟ್‌ನ ಮುಖ್ಯರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ಮಹಿಳೆಯೊಬ್ಬರ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿದ್ದ ಆರೋಪಿಗಳನ್ನು ಬಾಣಸವಾಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಈ ಬಗ್ಗೆ ಬಾಣಸವಾಡಿ ಠಾಣೆಯಲ್ಲಿ ದೂರುದಾರರು ಪ್ರಕರಣ ದಾಖಲಿಸಿದ್ದರು. ತನಿಖೆ ಕೈಗೊಂಡ ಪೊಲೀಸರು ಹೊರಮಾವು ನಿವಾಸಿಗಳಾದ ಸಂದೀಪ್ ವಿ. (44), ರಜತ್ ವಿ. (38) ಎಂಬ ಸಹೋದರರನ್ನು ಬಂಧಿಸಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಆರೋಪಿಗಳಿಂದ ₹1.15 ಲಕ್ಷ ಮೌಲ್ಯದ ಚಿನ್ನದ ಸರ ಜಪ್ತಿ ಮಾಡಲಾಗಿದೆ. ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನದ ಡಿಕ್ಕಿಯಲ್ಲಿ, ಅಪಹರಿಸಿದ್ದ ಚಿನ್ನದ ಸರ ಇಟ್ಟಿದ್ದರು’ ಎಂದು ತಿಳಿಸಿದರು.

ಕೋಣನಕುಂಟೆ ಠಾಣೆಯ ವ್ಯಾಪ್ತಿಯಲ್ಲಿ ಚಿನ್ನದ ಸರ ಕಳ್ಳತನ ಮಾಡಿದ್ದ ಆರೋಪದ ಮೇಲೆ ತಮಿಳುನಾಡಿನ ರಮೇಶ್ (25) ಎಂಬಾತನನ್ನು ಬಂಧಿಸಲಾಗಿದೆ.

ವೀವರ್ಸ್ ಕಾಲೊನಿ ನಿವಾಸಿ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರು, ವೀವರ್ಸ್ ಕಾಲೊನಿ ಚೌಡೇಶ್ವರಿ ದೇವಸ್ಥಾನದ ಆರೋಪಿ ಬಂಧಿಸಿದರು. ಆರೋಪಿಯು ಚಿನ್ನದ ಸರ ಹಾಗೂ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿದ್ದರಿಂದ ರಮೇಶ್‌ನನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

‘ಆರೋಪಿ ಚಿನ್ನದ ಸರವನ್ನು ಶಿವಮೊಗ್ಗದ ಮುತ್ತೂಟ್ ಫೈನಾನ್ಸ್‌ನಲ್ಲಿ ಅಡವಿಟ್ಟಿದ್ದು, ದ್ವಿಚಕ್ರ ವಾಹನಗಳನ್ನು ಪಿಳ್ಳಗಾನಹಳ್ಳಿಯ ಬಿಎಂಟಿಸಿ ಬಸ್ ಡಿಪೊ ಹಿಂಭಾಗದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದಾಗಿ ತಿಳಿಸಿದ್ದಾನೆ. ಈತನಿಂದ ₹8 ಲಕ್ಷ ಮೌಲ್ಯದ ಏಳು ದ್ವಿಚಕ್ರ ವಾಹನ, 15 ಗ್ರಾಂ ತೂಕದ ಚಿನ್ನದ ಸರ ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿದರು.

ಘಟನೆಯಿಂದ ಕೆಲಸ ಕಳೆದುಕೊಂಡಿದ್ದೇನೆ: ಹಲ್ಲೆಗೊಳಗಾದ ವಿಕಾಸ್ ಕುಮಾರ್ ಅಳಲು

ಠಾಣೆ ಎದುರು ಕನ್ನಡ ಸಂಘಟನೆಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ವಿಕಾಸ್ ಕುಮಾರ್ ಮೇಲೆ ವಿಂಗ್ ಕಮಾಂಡರ್ ಶಿಲಾದಿತ್ಯ ಬೋಸ್ ಅವರು ಹಲ್ಲೆ ನಡೆಸಿರುವುದು ಗೊತ್ತಾದ ಬಳಿಕ ಸೋಮವಾರ ತಡರಾತ್ರಿಯೇ ಬೈಯಪ್ಪನಹಳ್ಳಿ ಠಾಣೆಯ ಎದುರು ಜಮಾಯಿಸಿದ ಕನ್ನಡ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು. ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಶಿಲಾದಿತ್ಯ ಬೋಸ್ ಅವರನ್ನು ಬಂಧಿಸಬೇಕು. ಪೊಲೀಸ್ ತಂಡವು ಕೂಡಲೇ ಕೋಲ್ಕತ್ತಕ್ಕೆ ತೆರಳಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರಬೇಕು ಎಂದು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಮಾತನಾಡಿ, 'ಮೊದಲ ದೂರಿನಲ್ಲಿ ವಾಯುಪಡೆ ಮಹಿಳಾ ಅಧಿಕಾರಿ ದೂರು ನೀಡಿದ್ದಾರೆ. ವಿಮಾನ ನಿಲ್ದಾಣಕ್ಕೆ ಪತಿ ಶಿಲಾದಿತ್ಯ ಬೋಸ್ ಅವರನ್ನು ಕರೆದೊಯ್ಯುವಾಗ ಬೈಕ್ ಸವಾರ ಹಲ್ಲೆ ನಡೆಸಿದ್ದಾರೆ. ಕಾರಿಗೂ ಹಾನಿ ಮಾಡಿದ್ದಾರೆ ಎಂದು ದೂರು ನೀಡಿದ್ದರು. ಎರಡನೇ ದೂರಿನಲ್ಲಿ ಬೈಕ್ ಸವಾರ ವಿಕಾಸ್ ಕುಮಾರ್ ದೂರು ನೀಡಿದ್ದು, ತನ್ನ ವಿರುದ್ಧ ದೂರು ನೀಡಿರುವ ಮಹಿಳೆಯ ಪತಿಯೇ ಹಲ್ಲೆ ನಡೆಸಿ, ಕುತ್ತಿಗೆ ಹಿಸುಕಿ ಹತ್ಯೆಗೆ ಯತ್ನಿಸಿದ್ದಾರೆ ಎಂಬುದಾಗಿ ಉಲ್ಲೇಖಿಸಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಹೇಳಿದರು.

'ಸಾಮಾಜಿಕ ಮಾಧ್ಯಮದಲ್ಲಿ ವಿಂಗ್ ಕಮಾಂಡರ್ ಹಾಕಿರುವ ವಿಡಿಯೊದಲ್ಲಿ ಹೇಳಿರುವ ಕೆಲವೊಂದು ಅಂಶಗಳು ವಾಸ್ತವಾಂಶಕ್ಕೆ ದೂರವಾಗಿವೆ. ತನಿಖೆ ನಡೆಯುತ್ತಿರುವುದರಿಂದ ಹೆಚ್ಚಿನ ವಿವರಗಳನ್ನು ಹೇಳಲು ಸಾಧ್ಯವಿಲ್ಲ. ಘಟನಾ ಸ್ಥಳದಲ್ಲಿ ಇದ್ದವರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ಉದ್ಯೋಗ ಕಳೆದುಕೊಂಡೆ': ಘಟನೆ ಕುರಿತು ಹಲ್ಲೆಗೆ ಒಳಗಾದ ವಿಕಾಸ್ ಕುಮಾರ್ ಅವರು 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಕನ್ನಡ ಸಂಘಟನೆಗಳು ನನಗೆ ಬೆಂಬಲ ನೀಡಿವೆ. ಪೊಲೀಸರು ನನ್ನ ದೂರನ್ನು ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ನ್ಯಾಯ ಕೊಡಿಸುವ ಭರವಸೆ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಎರಡು ವರ್ಷಗಳ ಹಿಂದೆ ತಂದೆ ತೀರಿಕೊಂಡಿದ್ದಾರೆ. ನಾನೇ ದುಡಿದು ತಾಯಿಯನ್ನು ನೋಡಿಕೊಳ್ಳಬೇಕು. ಇದೀಗ ಕೆಲಸಕ್ಕೂ ತೊಂದರೆ ಆಗಿದೆ. ದೈಹಿಕ ಮತ್ತು ಮಾನಸಿಕವಾಗಿ ನೊಂದಿದ್ದೇನೆ. ಕಮಿಷನರ್ ಕೆಲಸಕ್ಕೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎಂದು ಹೇಳಿದ್ದರು. ಆದರೆ, ಕಂಪನಿಯ ಎಚ್.ಆರ್‌ನವರು ಕರೆ ಮಾಡಿ ಕೆಲಸದಿಂದ ವಜಾಗೊಳಿಸುವ ಮಾತನಾಡಿದ್ದಾರೆ' ಎಂದು ಅಳಲು ತೋಡಿಕೊಂಡಿದ್ದಾರೆ.

'ವಿಂಗ್ ಕಮಾಂಡರ್ ಅವರು ಭಾಷೆಯ ವಿಷಯ ತೆಗೆದಿದ್ದಾರೆ. ನಾನು ಕನ್ನಡ, ಇಂಗ್ಲಿಷ್, ಹಿಂದಿ ಸೇರಿ ಐದು ಭಾಷೆ ಮಾತನಾಡುತ್ತೇನೆ. ಸುಳ್ಳು ದೂರು ನೀಡಿ, ಈ ರೀತಿ ಮಾಡಿದ್ದಾರೆ' ಎಂದು ಹೇಳಿದ್ದಾರೆ.

'ಸೇನೆಯ ಅಧಿಕಾರಿಯಾಗಿ ಅವರೇ ಈ ರೀತಿ ತಪ್ಪು ಮಾಡಿ ನನ್ನ ಮಗನ ಮೇಲೆ ಆರೋಪ ಹೊರಿಸಿರುವುದು ಯಾವ ನ್ಯಾಯ? ಘಟನೆಯ ಬಳಿಕ ನಾವು ಸುಮ್ಮನಾಗಿದ್ದೆವು. ಅವರೇ ವಿಡಿಯೊ ಮಾಡಿ ವಿಷಯವನ್ನು ದೊಡ್ಡದು ಮಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಆಗಬೇಕು' ಎಂದು ವಿಕಾಸ್ ತಾಯಿ ಆಗ್ರಹಿಸಿದ್ದಾರೆ.

ವಾಯುಪಡೆ ಅಧಿಕಾರಿ ಮೇಲೆ ಕ್ರಮಕ್ಕೆ ಸೂಚನೆ: ಸಿಎಂ


ಸಿದ್ದರಾಮಯ್ಯ

ಬೆಂಗಳೂರು: ಬೆಂಗಳೂರಿನಲ್ಲಿ ವಾಹನಗಳು ತಗುಲಿದ ಸಂಬಂಧದ ಜಗಳದಲ್ಲಿ ಕನ್ನಡಿಗ ವಿಕಾಸ್ ಕುಮಾರ್ ಮೇಲೆ ತೀವ್ರ ಹಲ್ಲೆ ಮಾಡಿರುವ ವಾಯುಪಡೆ ಅಧಿಕಾರಿ ಶಿಲಾದಿತ್ಯ ಬೋಸ್ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಆಯುಕ್ತರಿಗೆ ಸೂಚಿಸಿದ್ದಾರೆ.

ಈ ಸಂಬಂಧ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, 'ಪ್ರಕರಣವನ್ನು ರಾಜ್ಯ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಅನ್ಯಾಯಕ್ಕೊಳಗಾದ ವ್ಯಕ್ತಿಗೆ ನ್ಯಾಯ ಕೊಡಿಸಲು ಬದ್ಧವಾಗಿದೆ' ಎಂದಿದ್ದಾರೆ.

'ರಾಷ್ಟ್ರೀಯ ಮಾಧ್ಯಮಗಳು ತಮ್ಮ ಜವಾಬ್ದಾರಿ ಮತ್ತು ವೃತ್ತಿಧರ್ಮ ಮರೆತು ಯಾರೋ ಒಬ್ಬ ಮಾಡಿದ ಆಧಾರರಹಿತ ಆರೋಪವನ್ನು ಹಿಡಿದುಕೊಂಡು ಇಡೀ ಕರ್ನಾಟಕದ ಘನತೆಗೆ ಮಸಿಬಳಿಯುವ ಕೆಲಸವನ್ನು ಮಾಡಿದ್ದು ನಿಜಕ್ಕೂ ವಿಷಾದನೀಯ. ಇದರಿಂದ ಪ್ರತಿಯೊಬ್ಬ ಕನ್ನಡಿಗನ ಮನಸಿಗೆ ಘಾಸಿಯಾಗಿದೆ' ಎಂದು ಹೇಳಿದ್ದಾರೆ.

'ಕನ್ನಡಿಗರು ಉದ್ವೇಗ ಅಥವಾ ಪ್ರಚೋದನೆಗಳಿಗೆ ಒಳಗಾಗಿ ಕಾನೂನು ಕೈಗೆತ್ತಿಕೊಳ್ಳುವ ಕೆಲಸ ಮಾಡಬಾರದು. ಕನ್ನಡಿಗರಿಂದ ಆಯ್ಕೆಯಾದ ಕನ್ನಡದ್ದೇ ಸರ್ಕಾರ ಕರ್ನಾಟಕದಲ್ಲಿದೆ. ನಿನ್ನೆಯ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರು ಯಾರೇ ಆಗಿರಲಿ, ಯಾವ ಹುದ್ದೆಯಲ್ಲೇ ಇರಲಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ' ಎಂದಿದ್ದಾರೆ.

ಬಾಲ್ಯ ವಿವಾಹಗಳ ತಡೆಗೆ ಜಿಲ್ಲಾಧಿಕಾರಿ ಸೂಚನೆ

ಪ್ರಜಾವಾಣಿ ವಾರ್ತೆ


ಜಿ. ಜಗದೀಶ

ಬೆಂಗಳೂರು: ನಗರ ಜಿಲ್ಲೆಯಲ್ಲಿ ಯಾವ ಭಾಗದಲ್ಲೂ ಬಾಲ್ಯ ವಿವಾಹಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಾಲ್ಯ ವಿವಾಹಗಳು ನಡೆಯದಂತೆ ಎಲ್ಲ ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಹಣಾಧಿಕಾರಿಗಳು, ತಹಶೀಲ್ದಾರರು, ಬಾಲ, ವಿವಾಹ ನಿಷೇಧ ಅಧಿಕಾರಿಗಳು ಹಾಗೂ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳ ಸಭೆಯಲ್ಲಿ ಆದೇಶಿಸಿದರು.

ಏಪ್ರಿಲ್ 30ರಂದು ಅಕ್ಷಯ ತೃತೀಯ ದಿನವಾಗಿದ್ದು, ಜಿಲ್ಲೆಯಲ್ಲಿ ಸಾಮೂಹಿಕ ವಿವಾಹಗಳು ಹಾಗೂ ವೈಯಕ್ತಿಕ ವಿವಾಹಗಳು ಹೆಚ್ಚಾಗಿ ಆಯೋಜನೆಯಾಗುವ ಸಂಭವವಿದೆ. ಅಂತಹ ಸಂದರ್ಭಗಳಲ್ಲಿ ಅಪ್ರಾಪ್ತ ವಯಸ್ಸಿನವರ ವಿವಾಹಗಳು ಜರುಗುವ ಸಾಧ್ಯತೆಗಳು ಅಧಿಕವಾಗಿವೆ. ಹೀಗಾಗಿ, ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ-2016 ರ ಸೆಕ್ಷನ್ 13(4)ರಂತೆ ವಿವಾಹಗಳನ್ನು ತಡೆಗಟ್ಟುವ ಅಧಿಕಾರವಿದೆ. ಇದನ್ನು ಅಧಿಕಾರಿಗಳು ಬಳಸಿಕೊಳ್ಳಬೇಕು ಎಂದರು.

ಜಿಲ್ಲಾ, ತಾಲ್ಲೂಕು, ವಾರ್ಡ್ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬಾಲ್ಯವಿವಾಹಗಳು ನಡೆಯದಂತೆ ನಿಗಾವಹಿಸಬೇಕು. ಬೆಂಗಳೂರು ನಗರ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡಲು ಶ್ರಮಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕರಿಗೆ ಬಾಲ್ಯ ವಿವಾಹ ನಡೆಯುವ ಮಾಹಿತಿ ಲಭ್ಯವಾದರೆ ಸಹಾಯವಾಣಿ ಸಂಖ್ಯೆ 1098 ಅಥವಾ 112ಗೆ ಕರೆ ಮಾಡಬೇಕು ಎಂದು ಹೇಳಿದರು.

ಸ್ಮಾರ್ಟ್ ಮೀಟರ್ ವಿರುದ್ಧ ಅಭಿಯಾನ

ಪ್ರಜಾವಾಣಿ ವಾರ್ತೆ


ಅಶ್ವತ್ಥನಾರಾಯಣ

ಬೆಂಗಳೂರು: 'ಸ್ಮಾರ್ಟ್ ಮೀಟರ್ ಅಳವಡಿಕೆ ಯೋಜನೆಯಲ್ಲಿ ₹15,000 ಕೋಟಿಯಷ್ಟು ಅಕ್ರಮವಾಗಿದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಬಿಜೆಪಿಯಿಂದ ಅಭಿಯಾನ ಆರಂಭಿಸಿದ್ದೇವೆ' ಎಂದು ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಲು ಅವಕಾಶವಿಲ್ಲ. ಹೀಗಿದ್ದೂ ಕಡ್ಡಾಯ ಮಾಡಲಾಗಿದೆ. ಜತೆಗೆ ಕಪ್ಪು ಪಟ್ಟಿಯಲ್ಲಿದ್ದ ಕಂಪನಿ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಲೋಕಾಯುಕ್ತ, ಮಹಾಲೇಖಪಾಲರಿಗೆ (ಸಿಎಜಿ) ದೂರು ನೀಡಿದ್ದೇವೆ' ಎಂದರು.

'ಈಗ ಹೊಸ ಸಂಪರ್ಕಗಳಿಗಷ್ಟೇ ಸ್ಮಾರ್ಟ್ ಮೀಟರ್ ಎನ್ನುತ್ತಿದ್ದಾರೆ. ಅದನ್ನು ಹಳೆಯ ಗ್ರಾಹಕರಿಗೂ ವಿಸ್ತರಿಸಿದರೆ, ಪ್ರತಿಯೊಬ್ಬರೂ ₹1.5 ಲಕ್ಷ ಪಾವತಿಸಬೇಕಾಗುತ್ತದೆ. 2.50 ಕೋಟಿ ಮೀಟರ್‌ಗಳಿಗೆ ಎಷ್ಟು ಮೊತ್ತವಾಗುತ್ತದೆ ಎಂಬುದನ್ನು ಊಹಿಸಿ' ಎಂದರು.

'ಇಂಧನ ಇಲಾಖೆಯಲ್ಲಿ ಲೆಕ್ಕಪರಿಶೋಧನೆಯೇ ಇಲ್ಲದಂತಾಗಿದೆ. ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕು ಎಂಬ ಉದ್ದೇಶದಿಂದಲೇ ಲೋಕಾಯುಕ್ತ ಮತ್ತು ಸಿಎಜಿಗೆ ದೂರು ನೀಡಿದ್ದೇವೆ. ಜನರಲ್ಲಿ ಜಾಗೃತಿ ಮೂಡಿಸಲು ಆನ್‌ಲೈನ್ ಸಹಿ ಅಭಿಯಾನವನ್ನೂ ಆರಂಭಿಸಿದ್ದೇವೆ' ಎಂದರು.

'ಇಲ್ಲಿ ಖಜಾನೆ ಕಾಯಬೇಕಾದವರೇ ಲೂಟಿ ಹೊಡೆಯುತ್ತಿದ್ದಾರೆ. ಸದನದಲ್ಲಿ ಈ ಬಗ್ಗೆ ಪ್ರಶ್ನೆ ಎತ್ತಿದರೂ ಪ್ರಯೋಜನವಾಗಿಲ್ಲ. ಇದಕ್ಕೆಲ್ಲಾ ಹೋರಾಟವೇ ಮದ್ದು' ಎಂದರು.

ಬಿಜೆಪಿ ಶಾಸಕರಾದ ಎಸ್.ಆರ್. ವಿಶ್ವನಾಥ್, ಸಿ.ಕೆ.ರಾಮಮೂರ್ತಿ, ಧೀರಜ್ ಮುನಿರಾಜು ಅವರು ಅಶ್ವತ್ಥನಾರಾಯಣ ನೇತೃತ್ವದಲ್ಲಿ ಸೋಮವಾರ ಲೋಕಾಯುಕ್ತ ಎಸ್‌ಪಿಯನ್ನು ಭೇಟಿ ಮಾಡಿ ದೂರು ನೀಡಿದ್ದರು.

ತನಿಖೆ ನಡೆಯಲಿ: ಸಚಿವ ಜಾರ್ಜ್

ಕಡೂರು (ಚಿಕ್ಕಮಗಳೂರು): 'ಪ್ರತಿ ಬಾರಿ ಹಿಟ್ ಆ್ಯಂಡ್ ರನ್ ಮಾಡುತ್ತಿದ್ದ ಅಶ್ವತ್ಥ ನಾರಾಯಣ ಅವರು ಮೊದಲ ಬಾರಿಗೆ ಒಳ್ಳೆಯ ಕಾರ್ಯ ಮಾಡಿದ್ದಾರೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಂಧನ ಇಲಾಖೆಯ ಸ್ಮಾರ್ಟ್ ಮೀಟರ್ ಖರೀದಿಯಲ್ಲಿ ಅವ್ಯವಹಾರ ನಡೆದಿದ್ದು, ಸಚಿವ ಜಾರ್ಜ್ ಅವರ ಪಾತ್ರವೂ ಇದೆ ಎಂದು ಅಶ್ವತ್ಥನಾರಾಯಣ ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವುದು ಒಳ್ಳೆಯ ಕಾರ್ಯ. ಯಾವಾಗಲೂ ಹೇಳಿಕೆ ನೀಡಿ ನಾಪತ್ತೆಯಾಗುತ್ತಿದ್ದ ಅವರು ಈಗ ಕ್ರಮ ಬದ್ಧವಾದ ಕಾರ್ಯ ಮಾಡಿದ್ದಾರೆ. ಲೋಕಾಯುಕ್ತ ತನಿಖೆಗೆ ಪೂರ್ಣ ಸಹಕಾರ ನೀಡುತ್ತೇನೆ. ತನಿಖೆ ನಡೆಯಲಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ' ಎಂದರು.

ರಾಕೇಶ್ ಮಲ್ಲಿ ವಿಚಾರಣೆ; ಅಂಗರಕ್ಷಕ ವಶಕ್ಕೆ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ತಾಲ್ಲೂಕಿನ ಬಿಡದಿ ಬಳಿ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ ರಿಕ್ಕಿ ಅಂಗರಕ್ಷಕ ಮನ್ನಪ್ಪ ವಿಠ್ಠಲ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣದ ಮೊದಲ ಆರೋಪಿ ಕಾಂಗ್ರೆಸ್ ಮುಖಂಡ ರಾಕೇಶ್ ಮಲ್ಲಿಯನ್ನು ಮಂಗಳವಾರ ಬಿಡದಿ ಠಾಣೆಯಲ್ಲಿ ತನಿಖಾಧಿಕಾರಿಗಳು ವಿಚಾರಣೆ ನಡೆಸಿದರು.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ರಿಕ್ಕಿಯ ಮೂವರು ಅಂಗರಕ್ಷಕರು, ಚಾಲಕ ಸೇರಿದಂತೆ ಮನೆಯಲ್ಲಿದ್ದ ಏಳು ಮಂದಿಯನ್ನು ಸತತ ಮೂರು ದಿನ ವಿಚಾರಣೆಗೆ ಒಳಪಡಿಸಿದ್ದರು. ಈ ವೇಳೆ ವಿಠ್ಠಲ್ ಮೇಲೆ ಅನುಮಾನ ಬಂದಿದ್ದರಿಂದ ವಶಕ್ಕೆ ಪಡೆದಿದ್ದರು ಎಂದು ಮೂಲಗಳು ತಿಳಿಸಿವೆ.

ವಿಚಾರಣೆ ನಡುವೆ ವಿಠ್ಠಲ್‌ಗೆ ಎದೆನೋವು ಕಾಣಿಸಿಕೊಂಡಿದ್ದರಿಂದ ಸ್ಥಳೀಯ ಆಸ್ಪತ್ರೆಯಲ್ಲಿ ಮೊದಲು ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಾಕ್ಷಿಗಳ ಜತೆಗೆ ದರ್ಶನ್ ಓಡಾಟ: ಆಕ್ಷೇಪ

ಯಾವ ಸಾಕ್ಷ್ಯಗಳ ಆಧಾರದಲ್ಲಿ ದರ್ಶನ್ ಬಂಧನ: ಸುಪ್ರೀಂ ಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ


ದರ್ಶನ್

ನವದೆಹಲಿ: 'ರೇಣುಕಸ್ವಾಮಿ ಮೃತದೇಹ ಸಿಕ್ಕ ಎರಡು ದಿನಗಳಲ್ಲಿ ನಟ ದರ್ಶನ್ ಅವರನ್ನು ಬಂಧಿಸಲು ಸಿಕ್ಕ ಸಾಕ್ಷ್ಯಗಳೇನು' ಎಂದು ಸುಪ್ರೀಂ ಕೋರ್ಟ್ ನ್ಯಾಯಪೀಠವು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಆರ್. ಮಹದೇವನ್ ಪೀಠವು ಮಂಗಳವಾರ ನಡೆಸಿತು. ಪಂಚನಾಮೆ ಮಾಡಿದ್ದು ಯಾವಾಗ, ಐವರು ಸಾಕ್ಷಿಗಳು ಯಾರು ಎಂಬುದರ ಮಾಹಿತಿ ನೀಡಬೇಕು' ಎಂದು ನ್ಯಾಯಪೀಠವು ರಾಜ್ಯ ಸರ್ಕಾರದ ವಕೀಲರಿಗೆ ಸೂಚಿಸಿತು.

ರಾಜ್ಯ ಸರ್ಕಾರದ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ ಹಾಗೂ ದರ್ಶನ್ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ವಾದಿಸಿದರು. ವಾದ ಆಲಿಸಿದ ನ್ಯಾಯಪೀಠವು ವಿಚಾರಣೆಯನ್ನು ಮೇ 14ಕ್ಕೆ ಮುಂದೂಡಿತು.

'ಎಲ್ಲ ಆರೋಪಿಗಳಿಗೆ ಜಾಮೀನು ಸಿಕ್ಕಿದೆಯಾ' ಎಂದು ನ್ಯಾಯಪೀಠ ಪ್ರಶ್ನಿಸಿತು. ಆಗ ಲೂತ್ರಾ, 'ಎಲ್ಲರಿಗೂ ಜಾಮೀನು ಸಿಕ್ಕಿದೆ. ಏಳು ಆರೋಪಿಗಳ ಜಾಮೀನು ರದ್ದುಪಡಿಸುವಂತೆ ಅರ್ಜಿ ಸಲ್ಲಿಸಲಾಗಿದೆ' ಎಂದರು. 'ಕೊಲೆಗೆ ಕಾರಣ ಏನು' ಎಂದು ನ್ಯಾಯಮೂರ್ತಿ ಪಾರ್ದಿವಾಲಾ ಪ್ರಶ್ನಿಸಿದರು.

'ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದು ಕೊಲೆಗೆ ಕಾರಣ' ಎಂದು ಲೂತ್ರಾ ಅವರು ಪ್ರಕರಣದ ಬಗ್ಗೆ ವಿವರಿಸಿದರು. ಜಾಮೀನು ನೀಡಿರುವ ಹೈಕೋರ್ಟ್ ಆದೇಶವನ್ನೂ ಅವರು ಉಲ್ಲೇಖಿಸಿದರು. ಪ್ರಕರಣದ ವಿಚಾರಣೆ ಯಾವ ಹಂತದಲ್ಲಿದೆ ಎಂದು ನ್ಯಾಯಮೂರ್ತಿ ಕೇಳಿದರು. 'ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಕೆಯಾಗಿದೆ. ಶಸ್ತ್ರಚಿಕಿತ್ಸೆ ನೆಪದಲ್ಲಿ ಆರೋಪಿ ಜಾಮೀನು ಪಡೆದಿದ್ದಾರೆ, ಆದರೆ, ದರ್ಶನ್ ಸಾರ್ವಜನಿಕವಾಗಿ ಸಾಕ್ಷಿಗಳ ಜತೆಗೆ ಓಡಾಡುತ್ತಿದ್ದಾರೆ. ಇದರಿಂದಾಗಿ, ಪ್ರಕರಣದ ವಿಚಾರಣೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ' ಎಂದು ಲೂತ್ರಾ ಅವರು ಪೀಠದ ಗಮನಕ್ಕೆ ತಂದರು. ದರ್ಶನ್ ರಾಜಕಾರಣಿಯೇ ಎಂದು ಪೀಠ ಕೇಳಿತು. ಅದಕ್ಕೆ ಪ್ರತಿಕ್ರಿಯಿಸಿದ ಲೂತ್ರಾ, 'ಕನ್ನಡದ ಪ್ರಸಿದ್ಧ ಚಿತ್ರನಟ' ಎಂದರು.

'ರೇಣುಕಸ್ವಾಮಿ ಮೃತದೇಹ ನೋಡಿದ ವ್ಯಕ್ತಿ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಅವರು ಹೇಳಿದರು. '11 ದಿನಗಳ ನಂತರ ಆ ವ್ಯಕ್ತಿಯ ಹೇಳಿಕೆ ದಾಖಲಿಸಲಾಗಿದೆ ಎಂದು ದರ್ಶನ್ ಪರ ವಕೀಲರು ವಾದಿಸಿದರು. 'ಅಲ್ಲಿಯವರೆಗೆ ಪೊಲೀಸರು ಏನು ಮಾಡುತ್ತಿದ್ದರು. ಏಳು ಆರೋಪಿಗಳ ಹೆಸರನ್ನು ಆ ವ್ಯಕ್ತಿ ಹೇಳಿದ್ದಾರಾ' ಎಂದು ನ್ಯಾಯಪೀಠ ಕೇಳಿತು. 'ರೇಣುಕಸ್ವಾಮಿಯನ್ನು ಶೆಡ್‌ನಲ್ಲಿ ಕೊಲೆ ಮಾಡಲಾಗಿದೆ' ಎಂದು ಲೂತ್ರಾ ಹೇಳಿದರು. 'ಮೃತದೇಹವನ್ನು ಆರೋಪಿಗಳು ಎಸೆದು ಹೋಗಿದ್ದರಾ' ಎಂದು ನ್ಯಾಯಮೂರ್ತಿ ಕೇಳಿದರು. ಹೌದು ಎಂದು ಸರ್ಕಾರಿ ವಕೀಲರು ಪ್ರತಿಕ್ರಿಯಿಸಿದರು. 'ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಪ್ರಕರಣದ ದೃಶ್ಯಗಳು ಸೆರೆಯಾಗಿವೆ. ಘಟನೆಗೆ ಸಂಬಂಧಿಸಿದ ಫೋಟೋಗಳಿವೆ. ರೇಣುಕಸ್ವಾಮಿಗೆ ವಿದ್ಯುತ್ ಶಾಕ್ ನೀಡಲಾಗಿದೆ. ಹಲ್ಲೆಯಿಂದಾಗಿ ದೇಹದ ಪ್ರಮುಖ ಭಾಗಗಳಲ್ಲಿ ರಕ್ತ ಹೆಪ್ಪುಗಟ್ಟಿದೆ' ಎಂದು ಲೂತ್ರಾ ವಾದಿಸಿದರು.

ದರ್ಶನ್ ಪರ ಅಭಿಷೇಕ್ ಸಿಂಘ್ವಿ ವಾದ

ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, 'ನನ್ನ ಕಕ್ಷಿದಾರರು ಕೊಲೆ ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ ಹಾಗೂ ಯಾವುದೇ ದಾಖಲೆ ಇಲ್ಲ' ಎಂದರು. ಆಗ ಲೂತ್ರಾ ಅವರು ಪೂರಕ ಸಾಕ್ಷ್ಯಗಳ ಬಗ್ಗೆ ವಿವರ ನೀಡಿದರು. 'ಮೂರು ಸೆಕೆಂಡ್‌ಗಳ ವಿಡಿಯೊ ತೋರಿಸಲಾಗುತ್ತಿದೆ. ಆದರೆ, ಆ ವಿಡಿಯೊದಲ್ಲಿ ದರ್ಶನ್ ಇಲ್ಲ' ಎಂದು ಸಿಂಘ್ವಿ ಸ್ಪಷ್ಟಪಡಿಸಿದರು. 'ಅದರಲ್ಲಿ ಹಲ್ಲೆ ಮಾಡುತ್ತಿರುವ ದೃಶ್ಯ ಇದೆಯಲ್ಲ. ಆ ವಿಡಿಯೊ ಮಾಡಿದವರು ಯಾರು' ಎಂದು ನ್ಯಾಯಪೀಠ ಪ್ರಶ್ನಿಸಿತು. ದರ್ಶನ್ ಅವರಿಗೆ ಮದುವೆಯಾಗಿದೆಯಾ ಎಂದೂ ನ್ಯಾಯಮೂರ್ತಿ ಕೇಳಿದರು. ಹೌದು ಎಂದು ವಕೀಲರು ಉತ್ತರಿಸಿದರು. 'ಸಂದೇಶ ಕಳುಹಿಸಿದ್ದು ದರ್ಶನ್ ಪತ್ನಿಗಾ' ಎಂದೂ ನ್ಯಾಯಮೂರ್ತಿ ಪ್ರಶ್ನಿಸಿದರು. 'ಅಲ್ಲ, ಅವರ ಮಿಸ್ಟ್ರೆಸ್‌ಗೆ' ಎಂದು ಸಿಂಘ್ವಿ ಪ್ರತಿಕ್ರಿಯಿಸಿದರು.

'ಮೃತದೇಹ ಪತ್ತೆಯಾದ ಒಂಬತ್ತು ದಿನಗಳ ಬಳಿಕ ಪ್ರಕರಣದ ಸಾಕ್ಷಿಗಳ ಹೇಳಿಕೆ ಪಡೆಯಲಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ. ಜತೆಗೆ, ಪ್ರಕರಣ ನಡೆದ ಜಾಗದ ಮಾಲೀಕ ದರ್ಶನ್ ಅಲ್ಲ. ಅದಕ್ಕೂ ದರ್ಶನ್‌ಗೂ ಸಂಬಂಧ ಇಲ್ಲ. ಕಾನೂನುಬಾಹಿರವಾಗಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಂಘ್ವಿ ವಾದಿಸಿದರು.

ಜನಿವಾರ, ಹಿಜಾಬ್- ತಾರತಮ್ಯ ಏಕೆ: ಹೋರಾಟಗಾರ್ತಿ ಆಲಿಯಾ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಉಡುಪಿ: ಸಿಇಟಿ ಪರೀಕ್ಷಾರ್ಥಿಗಳ ಜನಿವಾರ ತೆಗೆಸಿದ ವಿವಾದದ ಕುರಿತು ಹಿಜಾಬ್ ಹೋರಾಟಗಾರ್ತಿ ಆಲಿಯಾ ಅಸಾದಿ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಜನಿವಾರ ಹಾಕಿದ ಕಾರಣಕ್ಕೆ ಪರೀಕ್ಷೆ ಬಹಿಷ್ಕರಿಸಲ್ಪಟ್ಟ ಬ್ರಾಹ್ಮಣರ ಮತ್ತು ಹಿಜಾಬ್ ಕಾರಣ ಪರೀಕ್ಷೆ ಬಹಿಷ್ಕಾರಕ್ಕೊಳಗಾದ ಮುಸ್ಲಿಂ ಹೆಣ್ಣುಮಕ್ಕಳ ನೋವು ಒಂದೇ ಅಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ಮತ್ಯಾಕೆ ತಾರತಮ್ಯ... ಜನಿವಾರ ಬ್ರಾಹ್ಮಣರಿಗೆ ಎಷ್ಟು ಅಗತ್ಯವೋ ಹಿಜಾಬ್ ಕೂಡ ನಮಗೆ ಅಷ್ಟೇ ಅಗತ್ಯ. ಇಲ್ಲಿ ಜನಿವಾರ ಬೇಡವೆಂದ ಅಧಿಕಾರಿಯನ್ನು ತಕ್ಷಣ ಅಮಾನತು ಮಾಡ್ತಾರೆ, ಹಿಜಾಬಿಗಳಿಗೆ ಕಾಲೇಜು ಗೇಟ್ ಬಂದ್ ಮಾಡಿದ ಅಧಿಕಾರಿಗೆ ಯಾವ ಶಿಕ್ಷೆಯೂ ಇಲ್ಲ' ಎಂದಿದ್ದಾರೆ.

'ಬ್ರಾಹ್ಮಣ ವಿದ್ಯಾರ್ಥಿಗೆ ಉಚಿತ ಸೀಟ್ ನೀಡುತ್ತೀರಿ, ನಮ್ಮನ್ನು ಇದುವರೆಗೂ ಪರೀಕ್ಷೆ ಬರೆದಿದ್ದೀರೋ ಇಲ್ಲವೋ ಎಂದು ಸೌಜನ್ಯಕ್ಕಾದರೂ ಕೇಳಿಲ್ಲ, ಇದು ನಮ್ಮ ವ್ಯವಸ್ಥೆ' ಎಂದು ಅವರು ಬರೆದುಕೊಂಡಿದ್ದಾರೆ.


ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಬೆಂಗಳೂರು ಸಹೋದರರಾದ ಎಂ.ಬಿ. ಹರಿಹರನ್ ಮತ್ತು ಎಸ್ ಅಶೋಕ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಮಂಗಳವಾರ ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

25, 26ರಂದು 'ಚುಂಚಾದ್ರಿ ಉತ್ಸವ 2025'

ಬೆಂಗಳೂರು: ರಾಜ್ಯ ಚುಂಚಾದ್ರಿ ಮಹಿಳಾ ಪ್ರತಿಷ್ಠಾನ, ಮಾತೃ ಮಿಲನ ಕ್ರೀಡೆ ಹಾಗೂ ಸಾಂಸ್ಕೃತಿಕ ಸಂಘ ಮತ್ತು ವಿಶ್ವ ಒಕ್ಕಲಿಗರ ಮಹಿಳಾ ವೇದಿಕೆಯ ಸಹಯೋಗದೊಂದಿಗೆ ಏಪ್ರಿಲ್ 25 ಮತ್ತು 26 ರಂದು ಮಹಾಲಕ್ಷ್ಮಿಪುರದ ಬಿಜಿಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣದಲ್ಲಿ 'ಚುಂಚಾದ್ರಿ ಉತ್ಸವ 2025' ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮಹಿಳೆಯರಿಗಾಗಿ ವಿಶೇಷ ಕ್ರೀಡೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸರ್ಕಾರದಿಂದ ಮಹಿಳೆಯರಿಗೆ ಸಿಗಬಹುದಾದ ಸವಲತ್ತುಗಳ ಕುರಿತ ಮಾಹಿತಿ ಹಂಚಿಕೆ ಕಾರ್ಯಾಗಾರವನ್ನೂ ಹಮ್ಮಿಕೊಳ್ಳಲಾಗಿದೆ.

ಏ.25ರಂದು ಬೆಳಿಗ್ಗೆ 10 ಗಂಟೆಗೆ ಕ್ರೀಡೋತ್ಸವ, ಏ.26ರಂದು ಬೆಳಿಗ್ಗೆ 10ಕ್ಕೆ ಸಾಂಸ್ಕೃತಿಕೋತ್ಸವ ಉದ್ಘಾಟನೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕ ಗೋಪಾಲಯ್ಯ ಮತ್ತಿತರರು ಭಾಗವಹಿಸಲಿದ್ದಾರೆ. ಸಂಜೆ ಸಮಾರೋಪದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪಾಲ್ಗೊಳ್ಳಲಿದ್ದಾರೆ ಎಂದು ಕಾರ್ಯಕ್ರಮದ ಆಯೋಜಕಿ ಭಾರತಿ ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ 'ಭಾರತ್ ಪ್ರಿಂಟ್ ಎಕ್ಸ್‌ಪೊ'

ಬೆಂಗಳೂರು: ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘವು ನಗರದ ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ(ಬಿಐಇಸಿ)ದಲ್ಲಿ ಏಪ್ರಿಲ್ 24ರಿಂದ ಮೂರು ದಿನಗಳ 'ಭಾರತ್ ಪ್ರಿಂಟ್ ಎಕ್ಸ್‌ಪೊ' ಪ್ರದರ್ಶನವನ್ನು ಏರ್ಪಡಿಸಿದೆ.

ದಕ್ಷಿಣ ಭಾರತದ ಮುದ್ರಣ ಮತ್ತು ಪ್ಯಾಕೇಜಿಂಗ್ ಕ್ಷೇತ್ರದಲ್ಲಿನ ಬೆಳವಣಿಗೆಗಳು ಈ ವಸ್ತು ಪ್ರದರ್ಶನದಲ್ಲಿ ಅನಾವರಣಗೊಳ್ಳಲಿವೆ.

ಏ.24ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಮುದ್ರಣಕಾರರ ಒಕ್ಕೂಟದಿಂದ ಎಕ್ಸ್‌ಪೊ ಆಯೋಜಿಸಲಾಗಿದೆ. ಇದು ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘ ಹಾಗೂ ರೀ ಇನ್ವೆನ್ಷನ್ ಇವೆಂಟ್ಸ್ ಪ್ರೈ. ಲಿ. ಮೊದಲ ಆವೃತ್ತಿಯಾಗಿದೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಲಾಜಿಲ್ಲದೆ ಕೆರೆ ಒತ್ತುವರಿ ತೆರವು: ಸಿಎಂ

ಬೆಂಗಳೂರು: 'ಕೆರೆ ಒತ್ತುವರಿಗಳನ್ನು ಯಾವುದೇ ಮುಲಾಜಿಲ್ಲದೆ ತೆರವು ಮಾಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಜತೆಗೆ ಮಂಗಳವಾರ ಸಭೆ ನಡೆಸಿದ ಅವರು, ಕೆರೆಗಳ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಕೆರೆಗಳ ಸುತ್ತ ಬಫರ್ ಜೋನ್ ನಿಗದಿ ಪಡಿಸಲು ತಾಂತ್ರಿಕ ಸಮಿತಿ ರಚಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ 41,875 ಕೆರೆಗಳಿದ್ದು, ಅವುಗಳ ಪೈಕಿ 31,033 ಕೆರೆಗಳ ಸರ್ವೆ ಕಾರ್ಯವಷ್ಟೇ ಆಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಸಿದ್ದರಾಮಯ್ಯ ಅವರು, 'ಉಳಿದ 10,710 ಕೆರೆಗಳ ಸರ್ವೆ ಕಾರ್ಯವನ್ನು ಎರಡು ತಿಂಗಳ ಒಳಗೆ ಪೂರ್ಣಗೊಳಿಸಿ' ಎಂದು ಸೂಚಿಸಿದರು.

'ಕೆರೆಗಳು ಮಲಿನವಾಗುವುದನ್ನು ತಡೆಯಲು ಸಂಸ್ಕರಣ ಘಟಕಗಳನ್ನು ಸ್ಥಾಪಿಸಬೇಕು. ಇದಕ್ಕಾಗಿ ಪ್ರಸ್ತಾವನೆ ಸಲ್ಲಿಸಿ' ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು. 'ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆಯಿಂದ ಆದಾಯ ಗಳಿಸಲು ಸಾಧ್ಯವಾಗುವಂತೆ ಆನ್‌ಲೈನ್‌ನಲ್ಲಿ ಟೆಂಡರ್ ಕರೆಯಿರಿ' ಎಂದು ಮೀನುಗಾರಿಕೆ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಅಂಗವಿಕಲರ ಆರೋಗ್ಯ ಸ್ಥಿತಿಗತಿ ಸಮೀಕ್ಷಾ ವರದಿ ಬಿಡುಗಡೆ

'ಎರಡು ಜಿಲ್ಲೆಗಳಲ್ಲಿ ಶೇ 70ರಷ್ಟು ಅಂಗವಿಕಲರಿಗಿಲ್ಲ ವಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಶೇ 70ರಿಂದ ಶೇ 96ರಷ್ಟು ಅಂಗವಿಕಲರಿಗೆ ಆರೋಗ್ಯ ವಿಮೆ ದೊರೆತಿಲ್ಲ, ಶೇ 90ರಷ್ಟು ಮಂದಿ ಯಾವುದೇ ಸಹಾಯಕ ಸಾಧನ ಬಳಸುತ್ತಿಲ್ಲ ಹಾಗೂ ಶೇ 95ರಷ್ಟು ಅಂಗವಿಕಲರ ಕುಟುಂಬದ ವಾರ್ಷಿಕ ಆದಾಯ ₹1 ಲಕ್ಷಕ್ಕಿಂತ ಕಡಿಮೆ ಇದೆ...


ಇವು ಆಸ್ಥಾ ಹಾಗೂ ಅಂಗವಿಕಲರ ರಾಷ್ಟ್ರೀಯ ಉದ್ಯೋಗ ಉತ್ತೇಜನ ಕೇಂದ್ರದ(ಎನ್‌ಸಿಪಿಇಡಿಪಿ) ಸಹಯೋಗದಲ್ಲಿ ಈ ಎರಡೂ ಜಿಲ್ಲೆಗಳಲ್ಲಿ ನಡೆಸಿರುವ 'ಅಂಗವಿಕಲರ ಆರೋಗ್ಯ ಸ್ಥಿತಿ–ಗತಿಗಳ ಸಮೀಕ್ಷೆ'ಯ ವರದಿಯಲ್ಲಿರುವ ಪ್ರಮುಖ ಅಂಶಗಳು.

ಎರಡೂ ಜಿಲ್ಲೆಗಳ 758 ಅಂಗವಿಕಲರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. 2024–25ರಲ್ಲಿ 12 ತಿಂಗಳ ಅವಧಿಯಲ್ಲಿ ಈ ಸಮೀಕ್ಷೆ ನಡೆದಿದೆ. ಅಂಗವಿಕಲರ ಮುಖ್ಯ ಆಯುಕ್ತರ ಕಚೇರಿ (ಸಿಸಿಪಿಡಿ) ಮತ್ತು ಅಂಗವಿಕಲ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿಗಳು ಸಮೀಕ್ಷೆಗೆ ಸಹಕಾರ ನೀಡಿವೆ.


ಅಂಗವಿಕಲರ ಆರೋಗ್ಯ ಸ್ಥಿತಿಗತಿಗೆ ಸಂಬಂಧಿಸಿದ ಇಂಥ ಹಲವು ಅಂಶಗಳಿರುವ ಈ ವರದಿಯನ್ನು ನಗರದಲ್ಲಿ ಮಂಗಳವಾರ ನಡೆದ ಕಾರ್ಯಾಗಾರದಲ್ಲಿ ಬಿಡುಗಡೆ ಮಾಡಲಾಯಿತು.

ವರದಿಯ ಪ್ರಮುಖ ಅಂಶಗಳು:

- ಒಟ್ಟು ಅಂಗವಿಕಲರ ಸಂಖ್ಯೆಯಲ್ಲಿ ಅರ್ಧದಷ್ಟು ಮಂದಿ ತಾವು ಪಡೆಯುವ ಮಾಸಿಕ ಪಿಂಚಣಿ (₹2000)ಯಲ್ಲಿ ಕಾಲು ಭಾಗದಷ್ಟನ್ನು ಮಾನಸಿಕ ಆರೋಗ್ಯಕ್ಕಾಗಿ ವೆಚ್ಚ ಮಾಡುತ್ತಿದ್ದಾರೆ.
- ಬಹಳಷ್ಟು ಅಂಗವಿಕಲರು ಸರ್ಕಾರಿ ಯೋಜನೆಗಳನ್ನು ಪಡೆಯಲು ಅವಶ್ಯವಿರುವ ಅಂಗವಿಕಲರ ಗುರುತಿನ ಚೀಟಿ ಹೊಂದಿಲ್ಲ ಎಂಬುದು ಸಮೀಕ್ಷಾ ವರದಿಯಲ್ಲಿ ಉಲ್ಲೇಖವಾಗಿದೆ.
- ಬಹುತೇಕ ಅಂಗವಿಕಲರು ನಿರುದ್ಯೋಗಿಗಳು. ಜೀವನೋಪಾಯಕ್ಕಾಗಿ ತಮ್ಮ ಕುಟುಂಬಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದು ವರದಿ ಹೇಳಿದೆ.
- ಅಂಗವಿಕಲರಿಗೆ ಲಭ್ಯವಾಗುತ್ತಿರುವ ಆರೋಗ್ಯ ಸೇವೆಯ ಸ್ಥಿತಿ ಮತ್ತು ಸೇವೆಗಳಲ್ಲಿನ ಅಂತರವನ್ನು ನಿವಾರಿಸಲು ಮತ್ತು ಅಂಗವಿಕಲರ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ವಿಮಾ ಯೋಜನೆಗಳು ಮತ್ತು ಮೂಲಸೌಕರ್ಯ ವಿನ್ಯಾಸಗೊಳಿಸುವುದು ಅನಿವಾರ್ಯ ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ. ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ಆಸ್ಥಾ ಸಂಸ್ಥೆಯವರು ತಿಳಿಸಿದರು.


ಆಸ್ಥಾ ಹಾಗೂ ಎನ್‌ಸಿಪಿಇಡಿಪಿ ಸಹಯೋಗದಲ್ಲಿ ನಡೆಸಿರುವ 'ಅಂಗವಿಕಲರ ಆರೋಗ್ಯ ಸ್ಥಿತಿಗತಿಗಳ ಸಮೀಕ್ಷಾ ವರದಿ'ಯನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು. ಆಸ್ಥಾ ಸಂಸ್ಥೆಯ ಮುಖ್ಯ ಸಂಯೋಜಕ ಸುನೀಲ್ ಜೈನ್, ತುಮಕೂರು ವಿಶ್ವವಿದ್ಯಾಲಯದ ಪ್ರೊ.ಪರಶುರಾಮ್, ಮನಶ್ಶಾಸ್ತ್ರಜ್ಞ ರಾಮಕೃಷ್ಣ ರಾವ್, ಹೃದ್ರೋಗ ತಜ್ಞ ಡಾ. ವಿವೇಕ್ ಜವಳಿ, ಎನ್‌ಸಿಪಿಇಡಿಪಿ ಕಾರ್ಯನಿರ್ವಹಕ ನಿರ್ದೇಶಕ ಅರ್ಮಾನ್ ಅಲಿ, ಡಾ. ವಹಿದಾ ಉಪಸ್ಥಿತರಿದ್ದರು

ತಂತ್ರಜ್ಞಾನ







ದ್ರವರೂಪದ ಮೃದು ಬ್ಯಾಟರಿ

ಅಮೃತೇಶ್ವರಿ ಬಿ.

ಬ್ಯಾಟರಿಗಳು ಎಲೆಕ್ಟ್ರಾನಿಕ್ ಸಾಧನಗಳ ಜೀವಾಳ. ಅವು ವಿದ್ಯುತ್ ಶಕ್ತಿಯನ್ನು ತನ್ನೊಳಗೆ ಸಂಗ್ರಹಿಸಿಕೊಂಡು ಎಲೆಕ್ಟ್ರಾನಿಕ್ ಸಾಧನಗಳಿಂದ ಕೆಲಸ ಮಾಡಿಸುತ್ತವೆ. ಇವು ಹೆಚ್ಚಿನ ಸಾಮರ್ಥ್ಯವುಳ್ಳವಾಗಿರಬೇಕು, ದೀರ್ಘಕಾಲ ಬಾಳಿಕೆ ಬರಬೇಕು, ಸುರಕ್ಷಿತವೂ ಆಗಿರಬೇಕು; ಜೊತೆಗೆ ಅಗ್ಗವಾಗಿರಬೇಕು. ಇಂತಹ ಗುಣಲಕ್ಷಣಗಳ ಬ್ಯಾಟರಿಗಳು ಇದುವರೆಗೂ ಘನರೂಪದಲ್ಲಿದ್ದು, ಗಾತ್ರದಲ್ಲಿ ದೊಡ್ಡವು. ಬ್ಯಾಟರಿಗಳ ಅವಶ್ಯಕತೆ ಹತ್ತುಹಲವು ಸಾಧನಗಳಲ್ಲಿದೆ. ವಾಹನಗಳು, ಗೃಹಬಳಕೆ ಸಾಧನಗಳಂತಹವುಗಳು ಮಾತ್ರವಲ್ಲ, ಶ್ರವಣಸಾಧನಗಳು, ಸಾಫ್ಟ್ ರೋಬೋಟಿಕ್ಸ್, ಆರೋಗ್ಯನಿಯಂತ್ರಕ ಸೆನ್ಸಾರುಗಳು, ಇಯರ್ ಫೋನ್, ಸ್ಮಾರ್ಟ್ ವಾಚು – ಮೈಮೇಲೆ ಧರಿಸುವಂತಹ ಇಂತಹ ಸಾಧನಗಳಲ್ಲಿಯೂ ಬ್ಯಾಟರಿ ಅವಶ್ಯವಾಗಿ ಬೇಕು.

ಮೈಮೇಲೆ ಧರಿಸಬಲ್ಲಂತಹ ಸಾಧನಗಳ ಬ್ಯಾಟರಿಗಳು ನಮ್ಯವಾಗಿದ್ದು, ಮೃದು ಹಾಗೂ ಹಿಗ್ಗುವಂತವಾಗಿದ್ದರೆ ನಮ್ಮ ದೇಹಕ್ಕೆ ಹೊಂದಿಕೊಂಡು ಸುಖಕರವಾಗಿರುತ್ತದೆ; ಬಳಸಲು ಸುಲಭವೂ ಆಗುತ್ತದೆ. ಅದಕ್ಕೆಂದೇ ಈಗ ಬ್ಯಾಟರಿಗಳು ದ್ರವರೂಪದಲ್ಲಿ, ಅರ್ಥಾತ್ ಟೂತ್ ಪೇಸ್ಟಿನ ಹದದಲ್ಲಿರುವ ಅರೆದ್ರಾವಣದ ರೂಪದಲ್ಲಿ ಲಭ್ಯವಿದೆಯಂತೆ! ಇವು ಯಾವುದೇ ಆಕಾರವನ್ನೂ ಪಡೆದುಕೊಳ್ಳಬಲ್ಲವು. ಇಂತಹ ಎಲ್ಲ ವಿಶೇಷ ಗುಣಲಕ್ಷಣಗಳುಳ್ಳ ನವೀನ ಮಾದರಿಯ ಬ್ಯಾಟರಿಯೊಂದನ್ನು ಸ್ವೀಡನ್ನಿನ ಲಿಂಕೋಪಿಂಗ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ತಯಾರಿಸಿದ್ದಾರಂತೆ.

ಹೌದು, ಮೃದು ಹಾಗೂ ಹಿಗ್ಗಬಲ್ಲ ('ಸ್ಟ್ರೆಚಬಲ್') ಬ್ಯಾಟರಿಗಳನ್ನು ಎಂತಹ ಸಾಧನಗಳಲ್ಲಿಯಾದರೂ, ಯಾವುದೇ ಆಕಾರದಲ್ಲಿಯಾದರೂ ಬಳಸಬಹುದು. ಇಂತಹ ಬ್ಯಾಟರಿಗಳನ್ನು ತಯಾರಿಸಲು ಈ ಹಿಂದೆಯೂ ಪ್ರಯತ್ನಗಳು ನಡೆದಿವೆ. ಆಗ ರಬ್ಬರುಗಳನ್ನು ಬಳಸಿಕೊಳ್ಳಲಾಗಿತ್ತು. ಜೊತೆಗೆ ಸುಸ್ಥಿರವಲ್ಲದ ಲೋಹಗಳಾಧಾರಿತ ವಸ್ತುಗಳನ್ನು ಬಳಸುತ್ತಿದ್ದರು. ಅಲ್ಲದೆ ಅವುಗಳೊಳಗೆ ತುಂಬಿಸುವ ಎಲೆಕ್ಟ್ರೋಡ್‌ಗಳನ್ನು ಹೆಚ್ಚೆಚ್ಚು ಬಳಸಬೇಕಿತ್ತು. ಎಲೆಕ್ಟ್ರೋಡ್‌ಗಳೆಂದರೆ ವಿದ್ಯುತ್ತನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲ ಧನ ಹಾಗೂ ಋಣತುದಿಗಳುಳ್ಳ ವಿದ್ಯುತ್ ವಾಹಕ ವಸ್ತುಗಳು. ಇವುಗಳ ಸಾಮರ್ಥ್ಯ ಹೆಚ್ಚಿದ್ದರೂ ಘನರೂಪದ ಎಲೆಕ್ಟ್ರೋಡ್‌ಗಳನ್ನು ಬಳಸುತ್ತಿದ್ದುದರಿಂದ ಅವು ಕಠಿಣವಾಗಿರುತ್ತಿದ್ದವು. ಎಲ್ಲ ರೀತಿಯ, ಅದರಲ್ಲೂ ಮೈಮೇಲೆ ಧರಿಸಬಲ್ಲಂತಹ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಸಾಂಪ್ರದಾಯಿಕ ಬ್ಯಾಟರಿಗಳನ್ನು ಬಳಸಲಾಗುತ್ತಿರಲಿಲ್ಲ. ಹಾಗಾಗಿ ಬ್ಯಾಟರಿಗಳನ್ನು ಹೊಸ ರೂಪಕ್ಕೆ ತರಲು ಇವರು ಮಾಡಿದ ಉಪಾಯವೆಂದರೆ ಘನರೂಪದ ಎಲೆಕ್ಟ್ರೋಡ್‌ಗಳನ್ನು ದ್ರವರೂಪಕ್ಕೆ ಪರಿವರ್ತಿಸಿಬಿಡುವುದು. ದ್ರವವಸ್ತುಗಳಿಗೆ ನಿರ್ದಿಷ್ಟ ಆಕಾರವಿರುವುದಿಲ್ಲ; ಸುಲಭವಾಗಿ ಬೇಕೆಂದ ರೂಪಕ್ಕೆ ತಂದು ಬೇಕೆಂದ ಸಾಧನಗಳೊಳಗೆ ಬ್ಯಾಟರಿಯಾಗಿ ಬಳಸಬಹುದು; ನಮ್ಮ ಮೈಮೇಲೆ ಸುಲಭವಾಗಿ ಧರಿಸಬಹುದು. ಬ್ಯಾಟರಿಯ ಜೀವಾಳವೇ ಎಲೆಕ್ಟ್ರೋಡ್.

ಈ ಎಲೆಕ್ಟ್ರೋಡನ್ನೇ ದ್ರವವಾಗಿಸಿಬಿಟ್ಟರೆ ಹೇಗೆ? ಇದು ಸಂಶೋಧಕರಾದ ಐಮನ್ ರೆಹಮನುದ್ದೀನ್ ಮತ್ತು ಸಂಗಡಿಗರ ಉಪಾಯ! ಇದುವರೆಗೂ ಇಂತಹ ಪ್ರಯತ್ನಗಳು ನಡೆದಿಲ್ಲ ಎಂದೇನಿಲ್ಲ. ದ್ರವರೂಪದ ಗ್ಯಾಲಿಯಂ ಲೋಹವನ್ನು ಬಳಸಿಕೊಂಡು ಬ್ಯಾಟರಿಗಳನ್ನು ತಯಾರಿಸಲು ಪ್ರಯತ್ನಿಸಿದ್ದರೂ ಇದು ಕೇವಲ ಧನವಿದ್ಯುತ್ ವಾಹಕ('ಆ್ಯನೋಡ್')ವಾಗಿ ಕೆಲಸ ಮಾಡುತ್ತಿತ್ತು. ಬ್ಯಾಟರಿಯಲ್ಲಿ ಧನ ಹಾಗೂ ಋಣತುದಿಗಳೆರಡೂ ಇರಬೇಕಾದ್ದು ಅತ್ಯವಶ್ಯ. ಜೊತೆಗೆ ಈ ಗ್ಯಾಲಿಯಂ ಬ್ಯಾಟರಿ ಚಾರ್ಜಿಂಗ್ ಮತ್ತು ಡಿಸ್ ಚಾರ್ಜಿಂಗ್ ಸಮಯದಲ್ಲಿ ಗಟ್ಟಿಯಾಗಿಬಿಡುತ್ತಿತ್ತು. ಅರ್ಥಾತ್ ಇದರ ಬಳಕೆ ಸಾಧ್ಯವಾಗುತ್ತಿರಲಿಲ್ಲ. ಇದಲ್ಲದೆ ಅನೇಕ ವೇಳೆ ಅಪರೂಪದ ಧಾತುಗಳನ್ನು ಬಳಸಿ ಮೃದು ಬ್ಯಾಟರಿಗಳನ್ನು ತಯಾರಿಸಿದ್ದುರೂ, ಅವುಗಳ ಲಭ್ಯತೆಯೂ ಕಡಿಮೆ; ಬೆಲೆಯೂ ಹೆಚ್ಚು. ಪರಿಸರದ ಮೇಲೂ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತಿದ್ದವು.

ಇದಕ್ಕೆಲ್ಲ ಪರಿಹಾರವಾಗಿ ಸಂಶೋಧಕರಾದ ಐಮನ್ ರೆಹಮನುದ್ದೀನ್ ಮತ್ತು ಸಂಗಡಿಗರು ವಿಶೇಷ ಬ್ಯಾಟರಿಯೊಂದನ್ನು ರೂಪಿಸಿದ್ದಾರೆ. ಇದಕ್ಕೆ ಇವರು ಬಳಸಿರುವುದು ವಿದ್ಯುತ್ತನ್ನು ಹರಿಯಗೊಡುವ ಪ್ಲಾಸ್ಟಿಕ್ ಅಥವಾ ಕಾಂಜುಗೇಟೆಡ್ ಪಾಲಿಮರ್‌ಗಳು ಮತ್ತು ಕಾಗದ ಉತ್ಪಾದನೆಯಲ್ಲಿ ಉಪಉತ್ಪನ್ನವಾಗಿ ಹೊರಹೊಮ್ಮುವ ಲಿಗ್ನಿನ್. ಇಲ್ಲಿ ಲಿಗ್ನಿನ್ ಋಣವಿದ್ಯುತ್ ವಾಹಕವಾಗಿಯೂ ('ಕ್ಯಾಥೋಡ್'), ಕಾಂಜುಗೇಟೆಡ್ ಪಾಲಿಮರ್ ಧನವಿದ್ಯುತ್ ವಾಹಕವಾಗಿಯೂ ('ಆ್ಯನೋಡ್') ಕೆಲಸ ನಿರ್ವಹಿಸುತ್ತವೆ. ಈ ಬ್ಯಾಟರಿಯನ್ನು ಸುಮಾರು 500 ಬಾರಿ ರೀಚಾರ್ಜ್ ಮಾಡಿ ಡಿಸ್‌ಚಾರ್ಜ್ ಮಾಡಬಹುದಂತೆ!

ಮುಂದಿನ ಹತ್ತು ವರ್ಷಗಳಲ್ಲಿ ಮೊಬೈಲ್ ಫೋನ್, ಸ್ಮಾರ್ಟ್ ವಾಚ್, ಕಂಪ್ಯೂಟರುಗಳಲ್ಲದೇ, ಇನ್ಸುಲಿನ್ ಪಂಪು, ಪೇಸ್ ಮೇಕರ್ಸ್, ಶ್ರವಣಸಾಧನಗಳು, ಸಾಫ್ಟ್ ರೋಬೋಟಿಕ್ಸ್, ಎಲೆಕ್ಟ್ರಾನಿಕ್ ದಿರಿಸುಗಳಂತಹ ಸುಮಾರು ಒಂದು ಲಕ್ಷ ಕೋಟಿ ಎಲೆಕ್ಟ್ರಾನಿಕ್ ಸಾಧನಗಳನ್ನು ಇಂಟರ್ನೆಟ್‌ಗೆ ಜೋಡಿಸಬೇಕಾಗುತ್ತದೆಯಂತೆ. ಈ ಎಲ್ಲ ಸಾಧನಗಳು ಬಳಕೆದಾರರಿಗೆ ಯಾವುದೇ ಕಿರಿಕಿರಿಯಿಲ್ಲದೆ ಉಪಯೋಗಿಸುವಂತಾಗಬೇಕಾದರೆ ಹೊಸ ರೀತಿಯ ಬ್ಯಾಟರಿಗಳ ಅವಶ್ಯಕತೆಯಿದೆಯಲ್ಲವೇ?

ಈ ದ್ರವರೂಪದ ಪಾಲಿಮರ್ ಬ್ಯಾಟರಿಯಲ್ಲಿ ಬಳಸಿಕೊಂಡಿರುವ ಪಾಲಿಮರ್ ಹಾಗೂ ಲಿಗ್ನಿನ್ ನಮ್ಮ ಪರಿಸರದಲ್ಲಿ ಹೇರಳವಾಗಿ ಸಿಗುವಂತಹವು. ಅಲ್ಲದೇ, ಕಾಗದದ ತಯಾರಿಕೆಯ ಉಪಉತ್ಪನ್ನವಾದ ಲಿಗ್ನಿನ್ ಅನ್ನು ತ್ಯಾಜ್ಯವಾಗಿ ಬಿಸಾಡದೆ ಮೌಲ್ಯವರ್ಧಿತ ವಸ್ತುವನ್ನಾಗಿ ಬಳಸಿಕೊಳ್ಳಲಾದೀತು. ಈ ಸಂಶೋಧನೆಯ ಮುಂದಿನ ಹೆಜ್ಜೆ ಬ್ಯಾಟರಿಯ ವೋಲ್ಟೇಜ್ ಸಾಮರ್ಥ್ಯವನ್ನು ವೃದ್ಧಿಸುವುದು. ಭೂಮಿಯಲ್ಲಿ ಸಾಮಾನ್ಯವಾಗಿ ಸಿಗುವ ಸತು ಹಾಗೂ ಮ್ಯಾಂಗನೀಸ್‌ಗಳನ್ನು ಬಳಸಿಕೊಂಡು ಈ ದ್ರವರೂಪಿ ಪಾಲಿಮರ್ ಬ್ಯಾಟರಿಯ ವೋಲ್ಟೇಜನ್ನು ಪರೀಕ್ಷೆ ಮಾಡಲಿದ್ದಾರಂತೆ, ಐಮನ್ ಮತ್ತು ಸಂಗಡಿಗರು.

ಭಾರಿ ಗಾತ್ರದ ಬ್ಯಾಟರಿಗಳಲ್ಲಿ ರಾಸಾಯನಿಕಗಳ ಪ್ರಮಾಣವೂ ಹೆಚ್ಚಿರುವುದಲ್ಲದೆ, ಎಲ್ಲ ರೀತಿಯ ಎಲೆಕ್ಟ್ರಾನಿಕ್ ಸಾಧನಗಳಿಗೂ ಇದು ಒಗ್ಗುವುದಿಲ್ಲ. ವಿಶೇಷವಾಗಿ ಮೈಮೇಲೆ ಧರಿಸಬಲ್ಲಂತಹ ಎಲೆಕ್ಟ್ರಾನಿಕ್ ಸಾಧನಗಳಿಗೆ ಸೂಕ್ತವಾದ ಬ್ಯಾಟರಿಗಳನ್ನು ತಯಾರಿಸುವುದು ಅನಿವಾರ್ಯವೂ ಹೌದು. ದೇಹದೊಳಗೆ ಇರಿಸಿಬೇಕಾದ ಸಾಧನಗಳು, ನರಕಸಿ ಮಾಡುವಂತಹ ಸಾಧನಗಳು, ಸಾಫ್ಟ್ ಬ್ಯಾಂಡೇಜುಗಳಂತಹ ವೈದ್ಯಕೀಯ ಸಾಧನಗಳಲ್ಲಂತೂ ಇದು ಬಹಳ ಪ್ರಯೋಜನಕಾರಿ. ಒಟ್ಟಾರೆ ಈ ದ್ರವರೂಪಿ ಸ್ಟ್ರೆಚಬಲ್ ಬ್ಯಾಟರಿಯ ಬಳಕೆಯ ಸಾಧ್ಯತೆಗಳ ಅನಾವರಣಕ್ಕೆ ಕುತೂಹಲದಿಂದ ಕಾಯೋಣ.


ಮನಸ್ಸನ್ನು ತಿಳಿಯಬಲ್ಲ ಸ್ಟಿಕರ್

ನೇಸರ ಕಾಡನಕುಪ್ಪೆ

ನಮ್ಮ ಮನಸ್ಸಿನ ಎಲ್ಲ ಆಲೋಚನೆಗಳನ್ನೂ ಭಾವನೆಗಳನ್ನೂ ಮಾತಿನಲ್ಲಿ ಹೇಳಲಾಗುವುದಿಲ್ಲ. ಎಲ್ಲ ಭಾವನೆಗಳನ್ನು ಮುಖದಲ್ಲಿ ತೋರಿಸಲೂ ಆಗುವುದಿಲ್ಲ. ಎಷ್ಟೋ ಸಂದರ್ಭಗಳ ಪರಿಸ್ಥಿತಿಗಳಿಗೆ ಹಿಂಜರಿದು ಭಾವನೆಗಳನ್ನು ನಮ್ಮ ಮನಸ್ಸಿನಲ್ಲೇ ಅದುಮಿಟ್ಟುಕೊಳ್ಳಬೇಕಾಗುತ್ತದೆ. ಆದರೆ, ಈ ರೀತಿ ಮಾಡುವುದರಿಂದ ಒತ್ತಡ ಹೆಚ್ಚಾಗಿ ಹೃದಯಕ್ಕೆ ಸಂಬಂಧಿಸಿದ, ಮನಸ್ಸಿನ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳೂ ಎದುರಾಗಬಹುದು. ಇದಕ್ಕೇನಾದರೂ ಪರಿಹಾರವಿದೆಯೇ?

ಮನೋವಿಜ್ಞಾನಿಗಳು ಮನಸ್ಸಿನ ಕಸರತ್ತು ಮುಂತಾದ ಪರಿಹಾರಗಳನ್ನೇನೋ ಹೇಳುತ್ತಾರೆ. ವಿಜ್ಞಾನಿಗಳು ಈ ಸಮಸ್ಯೆಗೆ ಮತ್ತೊಂದು ಪರ್ಯಾಯ ಪರಿಹಾರವನ್ನು ಕಂಡುಹಿಡಿದಿದ್ದಾರಂತೆ. ಚರ್ಮಕ್ಕೆ ಅಂಟಿಸಬಹುದಾದ ಈ ಸ್ಟಿಕರ್, ಮನಸ್ಸನ್ನು ಅರ್ಥ ಮಾಡಿಕೊಳ್ಳಬಲ್ಲದಂತೆ. ಹೀಗೆ ಅರ್ಥಮಾಡಿಕೊಂಡು ನಿರಂತರವಾಗಿ ಮೊಬೈಲ್ ಫೋನ್ ಅಥವಾ ಕಂಪ್ಯೂಟರ್‌ಗೆ ಅದು ದತ್ತಾಂಶವನ್ನೂ ರವಾನೆ ಮಾಡುತ್ತಿರುತ್ತದೆ. ನಾವು ಅದುಮಿಟ್ಟಕೊಂಡ ಭಾವನೆಗಳು ಯಾವುದು ಎಂಬುದು ಈ ಮೂಲಕ ತಿಳಿಯಲಿದೆಯಂತೆ!

ಅಮೆರಿಕದ ಪೆನ್ಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾನಿಲಯದ ಎಂಜಿನಿಯರಿಂಗ್ ವಿಜ್ಞಾನ ಮತ್ತು ಮೆಕ್ಯಾನಿಕ್ಸ್ ವಿಭಾಗದ ಸಹ ಪ್ರಾಧ್ಯಾಪಕ ಜಾನ್ಯೂ ಲ್ಯಾರಿ ಶೆಂಗ್ ಅವರ ತಂಡವು ಈ ಸಂಶೋಧನೆಯನ್ನು ನಡೆಸಿದೆ. ಇವರು ಸಂಶೋಧಿಸಿರುವ ಈ ಸ್ಟಿಕರನ್ನು ದೇಹದ ಯಾವುದೇ ಭಾಗದ ಚರ್ಮದ ಮೇಲೆ ಅಂಟಿಸಬಹುದಾಗಿದೆ. ಬ್ಯಾಟರಿಯ ಮೂಲಕ ಕೆಲಸಮಾಡುವ ಈ ಸ್ಟಿಕರ್‌ನ ಬ್ಯಾಟರಿಯನ್ನು ರೀಚಾರ್ಜ್ ಕೂಡ ಮಾಡಬಹುದಂತೆ.



ಕಾರ್ಯಾಚರಣೆ: ಮಿದುಳಿನಲ್ಲಿ ದೇಹದ ಎಲ್ಲ ಅಂಗಗಳ ಕಾರ್ಯಾಚರಣೆಯ ಸಂಜ್ಞೆಗಳು ಮೊದಲು ರೂಪುಗೊಳ್ಳುತ್ತವೆ. ಬಳಿಕ ಅವು, ನರಮಂಡಲದ ಮೂಲಕ ದೇಹದ ವಿವಿಧ ಭಾಗಗಳಿಗೆ ಸಂಜ್ಞಾನುಸಾರವಾಗಿ ಸಂಚರಿಸುತ್ತವೆ. ದೇಹದ ಎಲ್ಲ ಸ್ನಾಯು, ಅಂಗಗಳು ಪ್ರತಿಕ್ಷಣವೂ ಈ ಸಂಜ್ಞೆಗಳನ್ನು ಸ್ವೀಕರಿಸಿಯೇ ಕಾರ್ಯನಿರ್ವಹಿಸುವುದು. ಅಂತೆಯೇ, ನಮ್ಮ ಮಿದುಳಿನಲ್ಲಿ ನಡೆಯುವ ಎಲ್ಲ ಆಲೋಚನೆ, ಲೆಕ್ಕಾಚಾರ, ಭಾವನೆಗಳು ಗಣಿತದ ಲೆಕ್ಕಾಚಾರಗಳ ಭಾಗವೇ ಆಗಿರುತ್ತವೆ. ಪ್ರತಿಯೊಂದು ಆಲೋಚನೆಯೂ ಅಂಕಿ–ಸಂಖ್ಯೆಗಳ ಲೆಕ್ಕಾಚಾರದಲ್ಲಿ ನಡೆದು, ಬಳಿಕ ಅವು ಮುಖಭಾವನೆಗಳಾಗಿ, ಮಾತುಗಳಾಗಿ, ದೇಹಭಾಷೆಯಾಗಿ ಪರಿವರ್ತನೆಯಾಗುತ್ತವೆ. ಮಾನವ ಬುದ್ಧಿಶಕ್ತಿಗೆ ಕೆಲವು ಭಾವನೆಗಳನ್ನು ತಡೆದಿಟ್ಟುಕೊಳ್ಳಬಹುದಾದ ಸಾಮರ್ಥ್ಯವಿರುತ್ತದೆ. ಈ ಭಾವನೆಗಳನ್ನು ವ್ಯಕ್ತಪಡಿಸದಿರುವ ಶಕ್ತಿಯೂ ಮನುಷ್ಯನಿಗೆ ಇದೆ.

ವೈಯಕ್ತಿಕ ಪರಿಸ್ಥಿತಿಗಳಲ್ಲಿ, ವೃತ್ತಿಯ ಸಂದರ್ಭಗಳಲ್ಲಿ ಹಲವೊಮ್ಮೆ ಅಂದುಕೊಂಡಿದ್ದನ್ನೆಲ್ಲಾ ಹೇಳುವ, ಅಥವಾ ಭಾವನೆಗಳನ್ನು ವ್ಯಕ್ತಪಡಿಸುವ ಅವಕಾಶ ಸಿಗದೇ ಇರಬಹುದು. ಆದರೆ, ಈ ವರ್ತನೆಯಿಂದ ಮನಸ್ಸಿನ ಮೇಲೆ, ದೇಹದ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳು ಆಗುತ್ತವೆ ಎಂಬುದನ್ನು ಮನೋವಿಜ್ಞಾನಿಗಳು ಹಾಗೂ ಮನೋವೈದ್ಯರು ಬಹುಕಾಲದಿಂದಲೂ ಹೇಳಿಕೊಂಡು ಬರುತ್ತಿದ್ದಾರೆ. ಈ ಭಾವನೆಗಳನ್ನು ಅರಿತುಕೊಳ್ಳುವುದೇ ಇದಕ್ಕೆ ಪರಿಹಾರ ಎನ್ನುವುದು ಈ ತಜ್ಞರ ಲೆಕ್ಕಾಚಾರ. ಅದರಂತೆ ಈ ಸ್ಟಿಕರ್ ಕಾರ್ಯನಿರ್ವಹಿಸುತ್ತದೆ. ಮಿದುಳಿನಲ್ಲಿ ನಡೆಯುವ ಪ್ರತಿಯೊಂದು ಲೆಕ್ಕಾಚಾರಕ್ಕೂ ಒಂದು ಸಂಜ್ಞೆಯು ವಿದ್ಯುತ್ತಿನ ರೂಪದಲ್ಲಿ ದೇಹದಲ್ಲಿ ಸಂಚರಿಸುತ್ತದೆ ಎಂದು ನರವಿಜ್ಞಾನಿಗಳು ಬಹಳ ಹಿಂದೆಯೇ ಕಂಡುಹಿಡಿದಿದ್ದಾರೆ. ವಿದ್ಯುತ್ ಸ್ವರೂಪದ ಈ ಸಂಜ್ಞೆಗಳನ್ನು ಈ ಸ್ಟಿಕರ್ ಗುರುತಿಸಿ ಓದಬಲ್ಲ ಶಕ್ತಿಯನ್ನು ಹೊಂದಿದೆ. ಪ್ರತಿ ವಿದ್ಯುತ್ ಸಂಜ್ಞೆಯ ಒಳಗೂ ಒಂದು ಸಂದೇಶ ಅಡಕವಾಗಿರುತ್ತದೆ. ಅದು ದೇಹದ ಅಂಗಗಳ ಕಾರ್ಯನಿರ್ವಹಣೆಯ ಕುರಿತು ಆಗಿರಬಹುದು; ಅಥವಾ ಭಾವನೆಯೊಂದಕ್ಕೆ ಸಂಬಂಧಪಟ್ಟಿರಬಹುದು. ಸ್ಟಿಕರ್‌ನಲ್ಲಿ ಅಡಕಗೊಳಿಸಿರುವ ಸೆನ್ಸರ್‌ಗಳು ಈ ವಿದ್ಯುತ್ ಸಂಜ್ಞೆಗಳನ್ನು ಗುರುತಿಸಿ, ಅವುಗಳಲ್ಲಿರುವ ಸಂದೇಶವನ್ನು ಅರ್ಥ ಮಾಡಿಕೊಳ್ಳುತ್ತವೆ.

ನ್ಯಾನೋ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಾಗಿರುವ ಈ ಸ್ಟಿಕರ್‌ನಲ್ಲಿ ಕೃತಕಬುದ್ಧಿಮತ್ತೆಯ ಆಧಾರಿತ ರೇಡಿಯೋ ಟ್ರಾನ್ಸ್‌ಮಿಟರ್ ಮತ್ತು ನ್ಯಾನೋ ಬ್ಯಾಟರಿಗಳು ಇರುತ್ತವೆ. ದೇಹದ ಉಷ್ಣಾಂಶ ಹಾಗೂ ನರಮಂಡಲದ ವಿದ್ಯುತ್ತನ್ನು ಬಳಸಿಕೊಂಡು ಬ್ಯಾಟರಿ ರೀಚಾರ್ಜ್ ಆಗುತ್ತದೆ. ನಮ್ಮ ಚರ್ಮದಂತೆಯೇ ಹಿಗ್ಗುವ ಮತ್ತು ಕುಗ್ಗುವ ಗುಣಗಳನ್ನು ಈ ಸ್ಟಿಕರ್ ಹೊಂದಿದೆ. ಹಾಗಾಗಿ, ಚರ್ಮದ ಹಿಗ್ಗು–ಕುಗ್ಗುವಿಕೆಗಳಿಗೆ ಇದು ಹರಿದು ಹೋಗುವುದಿಲ್ಲ. ಅಲ್ಲದೇ, ಇದು ಮಾನವಚರ್ಮದಂತಹ ಸಂರಚನೆಯನ್ನೇ ಹೋಲುವುದರಿಂದ, ನೀರಿನಿಂದಲೂ ಹಾಳಾಗುವ ಸಾಧ್ಯತೆಗಳು ಕಡಿಮೆ.

ಬಳಕೆ: ಎಷ್ಟೋ ವೈದ್ಯಕೀಯ ಅಗತ್ಯಗಳಲ್ಲಿ ಈ ಸ್ಟಿಕರನ್ನು ಬಳಸಬಹುದಾಗಿದೆ. ಮನೋವಿಜ್ಞಾನಕ್ಷೇತ್ರಕ್ಕಂತೂ ಇದು ವರದಾನವಾಗಲಿದೆ. ವೈದ್ಯರಿಗೆ ಮನೋರೋಗಿಗಳ ಕಾಯಿಲೆಗಳನ್ನು ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟ. ರೋಗಿಗಳು ಹೇಳುವ ವಿಚಾರಗಳನ್ನು ಆಧರಿಸಿಯೇ ಅವರು ಚಿಕಿತ್ಸೆಯನ್ನು ನೀಡಬೇಕು. ಕೆಲವೊಮ್ಮೆ ಮನೋರೋಗಿಗಳು ನಿಖರವಾದ ಮಾಹಿತಿಯನ್ನು ನೀಡದಿರುವ ಸಾಧ್ಯತೆ ಇರುತ್ತದೆ. ಆಗ ವೈದ್ಯರು ನೀಡುವ ಚಿಕಿತ್ಸೆಯೂ ತಪ್ಪಾಗಬಹುದು. ಆದರೆ, ಈ ಸ್ಟಿಕರ್‌ನಲ್ಲಿ ಎಲ್ಲ ಭಾವನೆಗಳಿಗೆ ಸಂಬಂಧಿಸಿದ ಮಾಹಿತಿಯು ಅಡಕವಾಗಿರುವ ಕಾರಣ, ಅಥವಾ ಇದು ಕಂಪ್ಯೂಟರ್‌ಗೆ ಎಲ್ಲ ದತ್ತಾಂಶವನ್ನು ನೀಡುವ ಕಾರಣ, ವೈದ್ಯರಿಗೆ ರೋಗಿಯ ನಿಖರವಾದ ಮಾಹಿತಿ ಮತ್ತು ಪರಿಸ್ಥಿತಿಗಳು ಅರ್ಥವಾಗುತ್ತವೆ. ಆದ್ದರಿಂದ ಚಿಕಿತ್ಸೆಯು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎನ್ನುತ್ತಾರೆ, ವಿಜ್ಞಾನಿಗಳು.

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ರಾಸಾಯನಿಕ ಕ್ರಿಯೆ ನಡೆದಿದೆ ಎನ್ನಲು ಈ ಕೆಳಗಿನ ಯಾವುದೆಲ್ಲವೂ ಸಹಾಯ ಮಾಡುತ್ತದೆ?

1) ಸ್ಥಿತಿ ಬದಲಾವಣೆ
2) ಬಣ್ಣದಲ್ಲಿ ಬದಲಾವಣೆ
3) ಅನಿಲದ ಬಿಡುಗಡೆ
4) ತಾಪದಲ್ಲಿ ಬದಲಾವಣೆ

ಮೇಲಿನ ಯಾವೆಲ್ಲವೂ ಸರಿಯಾಗಿದೆ?

ಉತ್ತರ ಸಂಕೇತಗಳು

ಎ) 1 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 4 ಮಾತ್ರ ಡಿ) 1 ರಿಂದ 4ರ ತನಕ ಎಲ್ಲವೂ

ಉತ್ತರ:– (ಡಿ) 1 ರಿಂದ 4ರ ತನಕ ಎಲ್ಲವೂ

2) ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ಕ್ರಿಯೆಗಳನ್ನು ಏನೆಂದು ಕರೆಯುವರು?

ಎ) ಬಹಿರುಷ್ಣ ಕ್ರಿಯೆ ಬಿ) ಅಂತರುಷ್ಣ ಕ್ರಿಯೆ
ಸಿ) ಸ್ಥಾನಪಲ್ಲಟ ಕ್ರಿಯೆ ಡಿ) ಪ್ರಕ್ಷೇಪನ ಕ್ರಿಯೆ.

ಉತ್ತರ:– (ಎ) ಬಹಿರುಷ್ಣ ಕ್ರಿಯೆ

3) ಕ್ರಿಯೆಗಳಿಂದ ವಸ್ತುಗಳು ಆಕ್ಸಿಜನ್ ಕಳೆದುಕೊಳ್ಳುವುದು ಅಥವಾ ಹೈಡ್ರೋಜನ್ ಪಡೆದುಕೊಳ್ಳುವುದಕ್ಕೆ ಏನೆಂದು ಕರೆಯುವರು?

ಎ) ಉತ್ಕರ್ಷಣ ಬಿ) ಅಪಕರ್ಷಣ
ಸಿ) ದ್ವಿಸ್ಥಾನಪಲ್ಲಟ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಅಪಕರ್ಷಣ

4) ಕಬ್ಬಿಣದ ಚೂರುಗಳಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಏನಾಗುತ್ತದೆ? ಸರಿಯಾದ ಉತ್ತರವನ್ನು ಗುರುತು ಹಾಕಿ

ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ
ಬಿ) ಕ್ಲೋರಿನ್ ಅನಿಲ ಮತ್ತು ಕಬ್ಬೀನದ ಹೈಡ್ರಾಕ್ಸೈಡ್ ಉಂಟಾಗುತ್ತದೆ.
ಸಿ) ಯಾವುದೇ ಕ್ರಿಯೆ ನಡೆಯುವುದಿಲ್ಲ
ಡಿ) ಕಬ್ಬಿಣದ ಲವಣ ಮತ್ತು ನೀರು ಉಂಟಾಗುತ್ತವೆ

ಉತ್ತರ:– (ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ

5) ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಯಿಸಿದಾಗ .... ಮತ್ತು ....ಆಗಿ ವಿಭಜನೆಗೊಳ್ಳುವುದು

ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಬಿ) ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಆಕ್ಸಿಜನ್
ಸಿ) ಮ್ಯಾಂಗನಿಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಡಿ) ಕಾರ್ಬನ್ ಮೊನಾಕ್ಸೈಡ್ ಮತ್ತು ಹೈಡ್ರೋಜನ್

ಉತ್ತರ:–(ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

6) ಕಬ್ಬಿಣವು ತಾಮ್ರದ ಸಲ್ಫೇಟ್‌ನಲ್ಲಿರುವ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿ ಕಬ್ಬಿಣದ ಸಲ್ಫೇಟ್ ಆಗುವುದರಿಂದ ದ್ರಾವಣದ................. ಆಗುವುದು

ಎ) ಅಳತೆ ಬದಲಾವಣೆ ಬಿ) ಕಿಣ್ವಗಳು ನಾಶವಾಗುವುದು
ಸಿ) ಬಣ್ಣ ಬದಲಾವಣೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:–(ಸಿ) ಬಣ್ಣ ಬದಲಾವಣೆ

7) $Fe_2o_2 + 2Al \longrightarrow Al_2 + 2\,Fe$

ಮೇಲಿನ ಕ್ರಿಯೆಯು ಇದಕ್ಕೆ ಉದಾಹರಣೆಯಾಗಿದೆ.

ಎ) ಸಂಯೋಗ ಕ್ರಿಯೆ ಬಿ) ದ್ವಿ ಸ್ಥಾನಪಲ್ಲಟ ಕ್ರಿಯೆ
ಸಿ) ವಿಭನೆ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ (ಡಿ) ಸ್ಥಾನಪಲ್ಲಟ ಕ್ರಿಯೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ರಾಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಒಂದು ವಸ್ತುವಿನ ರಾಸಾಯನಿಕ ಗುಣಗಳಲ್ಲಿ ಬದಲಾವಣೆ ಉಂಟು ಮಾಡುವ ಕ್ರಿಯೆಯನ್ನು ರಾಸಾಯನಿಕ ಕ್ರಿಯೆ ಎನ್ನುವರು.

2) ಕಬ್ಬಿಣದ ವಸ್ತುಗಳಿಗೆ ಬಣ್ಣವನ್ನು ಏಕೆ ಹಚ್ಚುತ್ತಾರೆ?

ಉತ್ತರ:– ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಕಬ್ಬಿಣದ ವಸ್ತುಗಳಿಗೆ ಬಣ್ಣ ಚ್ಚುತ್ತಾರೆ.

3) ಪ್ರಕ್ಷೇಪನ ಕ್ರಿಯೆ ಎಂದರೇನು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಜಲ ವಿಲೀನಗೊಳ್ಳದ ವಸ್ತು ಉಂಟಾಗುವುದನ್ನು ಪ್ರಕ್ಷೇಪನ ಕ್ರಿಯೆ ಎನ್ನುವರು

4) ಯಾವುದನ್ನು ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆ ಎನ್ನುವರು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಪಡೆದುಕೊಂಡರೆ ಅದು ಉತ್ಕರ್ಷಣಗೊಂಡಿದೆ ಎನ್ನುತ್ತೇವೆ.

ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಕಳೆದುಕೊಂಡರೆ ಅದು ಅಪಕರ್ಷಣಗೊಂಡಿದೆ ಎನ್ನುತ್ತೇವೆ.

5) ರೆಡಾಕ್ಸ್ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡರೆ ಮತ್ತೊಂದು ಪ್ರತಿವರ್ತಕವು ಅಪಕರ್ಷಣ ಗೊಳ್ಳುತ್ತದೆ ಇಂತಹ ಕ್ರಿಯೆಗಳನ್ನು ಉತ್ಕರ್ಷಣ–ಅಪಕರ್ಷಣ ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು

6) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ

ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:–

ನಶಿಸುವಿಕೆ:– ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು. ಉದಾ:– ಕಬ್ಬಿಣ ತುಕ್ಕು ಹಿಡಿಯುವುದು

ಕಮಟುವಿಕೆ:– ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:– ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತದೆ

7) ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು. ಏಕೆ?

ಉತ್ತರ:– ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಗೆ ತೆರೆದಿಟ್ಟಾಗ ಆಕ್ಸಿಜನ್ನೊಡನೆ ವರ್ತಿಸಿ ಮೇಲ್ಪದರವು ಮೆಗ್ನೀಷಿಯಂ ಆಕ್ಸೈಡ್ ಆಗಿರುತ್ತದೆ. ಆದ್ದರಿಂದ ಅದನ್ನು ಸ್ವಚ್ಛಗೊಳಿಸಬೇಕು

(ಮುಂದುವರಿಯುವುದು)

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

PUC- PHYSICS

Chapter – 1

ELECTRIC CHARGES AND FIELDS

1. Which statement among the following is false regarding Gauss's law?

(a) Gauss's law holds for any closed surface.
(b) In Gauss's law, the term "q" on the right side of the equation represents the total charge enclosed within the surface.
(c) When a system exhibits symmetry, Gauss's law may not be beneficial for calculating the electrostatic field.
(d) Gauss's law is derived from Coulomb's law, which contains an inverse square dependence on distance.

Ans: (c) When a system exhibits symmetry, Gauss's law may not be particularly useful for calculating the electrostatic field.

2. Assume a system inside which there are different types of charges, but the total charge is practically zero. At points outside the given region

a) the electric field must be zero.
b) the electric field is caused solely by the dipole moment of the charge distribution.
c) For large distances (r) from the origin, the dominant electric field is inversely proportional to r^3.
d) if a charged particle is moved along a closed path away from a region, the work done will not be zero.

Ans: (c) For large distances (r) from the origin, the dominant electric field is inversely proportional to r^3.

3. If a parrot sits on a bare high-voltage power line, it will:

a) receive a mild shock
b) receive a strong shock
c) be killed instantly
d) not be affected significantly.

Ans: (d) not be affected significantly

4. Electric field intensity due to an infinitely long straight uniformly charged wire at a distance *r* from the wire varies as

a) r b) r^{-1}
c) r^2 d) r^{-2}

Ans:-b

5. Electric field intensity due to uniformly charged thin infinite non-conducting plane sheet of surface charge density σ at a distance *r* is

a) $\frac{\sigma}{\epsilon_0}$ b) $\frac{\sigma}{2\epsilon_0}$
c) $\frac{\sigma}{2r}$ d) $\frac{\sigma}{2\epsilon_0 r}$


Ans:-b

6. If two conducting spheres are charged separately and then connected, the following may occur:

(a) The electrostatic energy of the spheres will be conserved.
(b) the total charge on the spheres is conserved
(c) Both the electrostatic energy and charge will be conserved.
(d) None of the above.


Ans: (b) the total charge on the spheres is conserved

7. Which of the following graphs represent the variation of electric field intensity E(*r*) due to a charged spherical shell of radius R with distance *r* from its centre?



Ans:-C

8. Which of the following graphs represent the variation of electric field intensity E(*r*) due to a charged solid sphere of radius R with distance *r* from its centre.



Ans;-d

9. The force per unit charge is known as ________.

a) Electric current b) Electric potential
c) Electric field d) Electric space

Ans: (c) Electric field

Expln: The force per unit charge is known as the electric field.

10. What is the dielectric constant of a metal?

a) -1 b) 0
c) 1 d) Infinite

Ans: (d) Infinite

Expln: The dielectric constant of metals is infinite. The dielectric constant of metal is infinite, as the net electric field inside the metal is zero.

11. The quantisation of charge indicates that

a) Charge, which is a fraction of charge on an electron, is not possible
b) A charge cannot be destroyed
C) Charge exists on particles
d) There exists a minimum permissible charge on a particle

Ans: (a) Charge, which is a fraction of charge on an electron, is not possible

Expln: The quantisation of charge means that when we say something has some charge, we mean by that that how many times the charge of electrons it has. Because the whole charge is associated with an electron.

ಸಂಕ್ಷಿಪ್ತ ಸುದ್ದಿ

ಬಾಲಕನಿಗೆ ಆಟೊ ಕೊಟ್ಟ ಮಾಲೀಕನಿಗೆ ₹1.41 ಕೋಟಿ ದಂಡ

ಗಂಗಾವತಿ (ಕೊಪ್ಪಳ ಜಿಲ್ಲೆ): ಬಾಲಕನೊಬ್ಬ ಆಟೊ ಚಲಾಯಿಸುವಾಗ ಅಪಘಾತ ಮಾಡಿ ವ್ಯಕ್ತಿಯೊಬ್ಬರ ಸಾವಿಗೆ ಕಾರಣವಾಗಿದ್ದಕ್ಕೆ ಆಟೊ ಮಾಲೀಕನಿಗೆ ₹1.41 ಕೋಟಿ ದಂಡ ವಿಧಿಸಿ ಗಂಗಾವತಿ ಹಿರಿಯ ಸಿವಿಲ್ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

2021ರ ಮಾರ್ಚ್ 10ರಂದು ಯಲಬುರ್ಗಾದಲ್ಲಿ ಅಪಘಾತ ನಡೆದಿತ್ತು. ಯಲಬುರ್ಗಾದ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಗಂಗಾವತಿ ನಿವಾಸಿ ರಾಜಶೇಖರ ಪಾಟೀಲ್ ಅವರು ಮೃತಪಟ್ಟಿದ್ದರು. ಆಟೊ ಚಲಾಯಿಸುತ್ತಿದ್ದ 17 ವರ್ಷದ ಬಾಲಕನ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ದೂರು ದಾಖಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ ಎಸ್.ಗಾಣಿಗೇರ ಅವರು ಬಾಲಕನಿಗೆ ಆಟೊ ಚಲಾಯಿಸಲು ಕೊಟ್ಟಿದ್ದ ಮಾಲೀಕನಿಗೆ ದೊಡ್ಡ ಮೊತ್ತದ ದಂಡ ವಿಧಿಸಿದ್ದಾರೆ. ದಂಡದ ಮೊತ್ತವನ್ನು ರಾಜಶೇಖರ ಕುಟುಂಬಕ್ಕೆ ಪರಿಹಾರವಾಗಿ ನೀಡುವಂತೆಯೂ ಸೂಚಿಸಿದ್ದಾರೆ.

'ಹೆಚ್ಚುವರಿ 1 ಲಕ್ಷ ಟನ್ ಜೋಳ ಖರೀದಿ'

ಬೆಂಗಳೂರು: '2024-2025ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಒಂದು ಲಕ್ಷ ಟನ್ ಜೋಳ ಖರೀದಿಸಲು ತೀರ್ಮಾನಿಸಲಾಗಿದೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹ್ಮದ್‌ಖಾನ್ ಮತ್ತು ಬಳ್ಳಾರಿಯ ರೈತರ ನಿಯೋಗದ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಹೆಚ್ಚು ಜೋಳ ಬೆಳೆಯುವ ಬಳ್ಳಾರಿ, ರಾಯಚೂರು, ವಿಜಯನಗರ ಜಿಲ್ಲೆಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ಸರ್ಕಾರದ ವತಿಯಿಂದ ಬೆಂಬಲ ಬೆಲೆ ಯೋಜನೆಯಡಿ ಜೋಳ ಖರೀದಿಸಲು ತೀರ್ಮಾನಿಸಲಾಗಿದೆ. ಹೈಬ್ರೀಡ್ 3,371 ಮಾಲ್ದಂಡಿ ಜೋಳಕ್ಕೆ ಪ್ರತಿ ಕ್ವಿಂಟಲ್‌ಗೆ ₹ 3,421 ದರ ನಿಗದಿಪಡಿಸಲಾಗಿದೆ' ಎಂದು ಮುನಿಯಪ್ಪ ತಿಳಿಸಿದರು. .

ಉಳ್ಳಾಲ ದರ್ಗಾ ಉರುಸ್ ನಾಳೆಯಿಂದ



ಉಳ್ಳಾಲ ದರ್ಗಾ

ಮಂಗಳೂರು: 'ದಕ್ಷಿಣ ಭಾರತದ ಅಜ್ಮೀರ್' ಎಂದೇ ಪ್ರಸಿದ್ಧವಾಗಿರುವ ಉಳ್ಳಾಲ ಸಯೀದ್ ಮುಹಮ್ಮದ್ ಶರೀಫುಲ್ ಮದನಿ ದರ್ಗಾದ 22ನೇ ಪಂಚವಾರ್ಷಿಕ ಉರುಸ್ ಇದೇ 24ರಿಂದ ಮೇ 18ರವರೆಗೆ ಜರುಗಲಿದೆ.

ಇಲ್ಲಿ ಮಂಗಳವಾರ ಸುದ್ದಿ-ಗೋಷ್ಠಿಯಲ್ಲಿ ಮಾಹಿತಿ ನೀಡಿದ ದರ್ಗಾ ಸಮಿತಿ ಅಧ್ಯಕ್ಷ ಹನೀಫ್ ಹಾಜಿ ಅವರು, ಐದು ವರ್ಷಕ್ಕೊಮ್ಮೆ ನಡೆಯುವ ಈ ಉರುಸ್‌ನಲ್ಲಿ ಒಟ್ಟಾರೆ 25 ಲಕ್ಷ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ. ಮೇ 17 ಮತ್ತು 18ರಂದು 24 ಗಂಟೆ ಅನ್ನದಾನ ನಡೆಯಲಿದ್ದು, ಅಂದಾಜು 5 ಲಕ್ಷ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಈಗಿರುವ ಮಸೀದಿಗೆ 75 ವರ್ಷವಾಗಿದೆ. ಇದೇ ಸ್ಥಳದಲ್ಲಿ ಅಂದಾಜು ₹25 ಕೋಟಿ ವೆಚ್ಚದಲ್ಲಿ ಹೊಸದಾಗಿ ಗ್ರ್ಯಾಂಡ್ ಮಸೀದಿ ನಿರ್ಮಿಸಲು ನಿರ್ಧರಿಸಲಾಗಿದ್ದು, ಮೇ 16ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಒಂದೇ ಸಮಯದಲ್ಲಿ 10 ಸಾವಿರ ಜನ ಪ್ರಾರ್ಥನೆ ಸಲ್ಲಿಸುವಷ್ಟು ಸ್ಥಳಾವಕಾಶ ಇರಲಿದೆ. ಮುಂದಿನ 2030ರ ಉರುಸ್ ಸಂದರ್ಭದಲ್ಲಿ ಮಸೀದಿ ನಿರ್ಮಾಣ ಪೂರ್ಣಗೊಳ್ಳಲಿದ್ದು, ಇದು ಕರ್ನಾಟಕದ ಅತಿ ದೊಡ್ಡ, ಭಾರತದ 2ನೇ ಅತಿದೊಡ್ಡ ಮಸೀದಿಯಾಗಲಿದೆ ಎಂದು ದರ್ಗಾ ಸಮಿತಿ ಪ್ರಧಾನ ಕಾರ್ಯದರ್ಶಿ ಶಿಹಾಬುದ್ದೀನ್ ಸಖಾಫಿ ತಿಳಿಸಿದರು.



ಅಪರೂಪದ ಪಕ್ಷಿ ಪತ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ): ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ವೈಟ್ ವಿಂಗ್ಡ್ ಟರ್ನ್ (ಬಿಳಿ ರೆಕ್ಕೆಯ ನದಿರೀವ್) ಪಕ್ಷಿಯು ಯುರೋಪ್ ದೇಶದಿಂದ ವಲಸೆ ಬಂದಿದ್ದು, ತಾಲ್ಲೂಕಿನ ನಾರಾಯಣದೇವರ ಕೆರೆ ಬಳಿ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿ ಕಾಣಿಸಿಕೊಂಡಿದೆ.

ವಿಶೇಷವೆಂದರೆ ರಾಜ್ಯದಲ್ಲಿ ಈ ಪಕ್ಷಿ ಕಾಣಿಸಿಕೊಂಡಿದ್ದು ಎರಡನೇ ಬಾರಿ. ಮೊದಲ ಬಾರಿ ಭದ್ರಾ ಹಿನ್ನೀರು ಪ್ರದೇಶದಲ್ಲಿ ಕಳೆದ ವರ್ಷ ಕಾಣಿಸಿಕೊಂಡಿತ್ತು. ಹವಾಮಾನ ಬದಲಾವಣೆ, ಆಹಾರ ಅರಸಿ ಡಿಸೆಂಬರ್‌ನಲ್ಲಿ ಈ ಪಕ್ಷಿ ವಲಸೆ ಬಂದಿದೆ. ಈಗ ಮರಳುವ ಸಮಯ.

'ರಾಜ್ಯಕ್ಕೆ ವಲಸೆ ಬರುವ ಪಕ್ಷಿಗಳ ಪ್ರಭೇದಗಳ ಸಂಖ್ಯೆ ಹೆಚ್ಚಾಗಲು ಇಲ್ಲಿನ ಜೀವವೈವಿಧ್ಯ ಕಾರಣ' ಎಂದು ಪಕ್ಷಿ ವೀಕ್ಷಕ ವಿಜಯ್‌ಕುಮಾರ್ ಇಟ್ಟಿಗಿ ತಿಳಿಸಿದರು.

ಗಣತಿದಾರರು ಸಂಗ್ರಹಿಸಿದ ಮಾಹಿತಿ ಪರಿಶೀಲಿಸಲು ಮುಖ್ಯ ಶಿಕ್ಷಕರ ನಿಯೋಜನೆ

ಒಳ ಮೀಸಲು: ಸಮೀಕ್ಷೆಗೆ 58,932 ಶಿಕ್ಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಶಿಫಾರಸು ಮಾಡಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ರಾಜ್ಯದಾದ್ಯಂತ ನಡೆಸಲು ಉದ್ದೇಶಿಸಿರುವ ಸಮೀಕ್ಷೆಗೆ 58,932 ಶಿಕ್ಷಕರನ್ನು ಗಣತಿದಾರರನ್ನಾಗಿ ಮತ್ತು 10ರಿಂದ 12 ಗಣತಿದಾರರಿಗೆ ಒಬ್ಬರಂತೆ 5 ಸಾವಿರ ಮುಖ್ಯ ಶಿಕ್ಷಕರನ್ನು ಮೇಲ್ವಿಚಾರಕರನ್ನಾಗಿ ನಿಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಸಮೀಕ್ಷಾ ಕಾರ್ಯಕ್ಕೆ ಶೇ 10ರಷ್ಟು ಶಿಕ್ಷಕರನ್ನು ಹೆಚ್ಚುವರಿಯಾಗಿ ಕಾಯ್ದಿರಿಸಲು ತೀರ್ಮಾನಿಸಲಾಗಿದೆ.

ಪರಿಶಿಷ್ಟ ಜಾತಿಯಲ್ಲಿರುವ ಉಪ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕೆ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಿಸಲು ಆಯೋಗವು ಶಿಫಾರಸು ಮಾಡಿತ್ತು. ವಿವಿಧ ಇಲಾಖೆ ಸಹಯೋಗದಲ್ಲಿ ಸಮೀಕ್ಷೆ ನಡೆಸಲು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ಸಮೀಕ್ಷೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮಿತಿ ಸಭೆಯಲ್ಲಿ, ರಾಜ್ಯದಲ್ಲಿ ಒಟ್ಟು 58,932 ಬೂತ್‌ಮಟ್ಟದ ಅಧಿಕಾರಿಗಳಿದ್ದು, ಅದೇ ಮಾದರಿಯಲ್ಲಿ ಸಮೀಕ್ಷೆಗೂ ಬೂತ್‌ಮಟ್ಟಕ್ಕೆ ಒಬ್ಬ ಶಿಕ್ಷಕರನ್ನು ಗಣತಿದಾರರನ್ನಾಗಿ ಮತ್ತು ಈ ಶಿಕ್ಷಕರು ಸಂಗ್ರಹಿಸಿದ ಮಾಹಿತಿಗಳ ಪರಿಶೀಲನೆಗೆ ಮೇಲ್ವಿಚಾರಕರನ್ನಾಗಿ ಮುಖ್ಯ ಶಿಕ್ಷಕರನ್ನು ನಿಯೋಜಿಸಲು ನಿರ್ಣಯಿಸಲಾಗಿದೆ. ಸಮೀಕ್ಷೆಗೆ ಶಿಕ್ಷಕರನ್ನು ಮಾತ್ರ ನಿಯೋಜಿಸಬೇಕು. ಆಶಾ ಕಾರ್ಯಕರ್ತರು, ಅಂಗನವಾಡಿ ಶಿಕ್ಷಕರನ್ನು ನಿಯೋಜಿಸಬಾರದು. ಶಾಲಾ ಶಿಕ್ಷಣ ಇಲಾಖೆಯು ಗಣತಿದಾರರ ಮತ್ತು ಮೇಲ್ವಿಚಾರಕರನ್ನು ಗುರುತಿಸಿದ ಬಳಿಕ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅವರಿಗೆ ನಿಯೋಜನೆ ಆದೇಶ ಹೊರಡಿಸಲು ತೀರ್ಮಾನಿಸಲಾಗಿದೆ.

ಆ ಬೆನ್ನಲ್ಲೆ, ಸಮೀಕ್ಷೆಗೆ ಜಿಲ್ಲಾವಾರು ಅಗತ್ಯ ಇರುವ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನು ಗುರುತಿಸಲು ಇಲಾಖೆಯ ಬೆಂಗಳೂರು, ಕಲಬುರಗಿ ಮತ್ತು ಧಾರವಾಡ ಶಾಲಾ ಶಿಕ್ಷಣ ಆಯುಕ್ತಾಲಯಗಳಿಗೆ ನಿರ್ದೇಶಿಸಿದೆ. ಬೆಂಗಳೂರು ಮತ್ತು ಮೈಸೂರು ವಿಭಾಗಗಳಿಗೆ ಇಲಾಖೆಯ ಬೆಂಗಳೂರು ಆಯುಕ್ತರು ನೋಡಲ್ ಅಧಿಕಾರಿ ಆಗಿರಲಿದ್ದಾರೆ. ಕಲಬುರಗಿ ಮತ್ತು ಧಾರವಾಡ ವಿಭಾಗದ ಆಯುಕ್ತರು ಆಯಾ ವಿಭಾಗಕ್ಕೆ ನೋಡಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ. ಆ ಬೆನ್ನಲ್ಲೆ, ಸಮೀಕ್ಷೆಗೆ ಜಿಲ್ಲಾವಾರು ಅಗತ್ಯ ಇರುವ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರ ಪಟ್ಟಿಯನ್ನು ತುರ್ತಾಗಿ ಸಿದ್ಧಪಡಿಸಿ ಆಯಾ ಜಿಲ್ಲಾಧಿಕಾರಿಗೆ ಸಲ್ಲಿಸುವಂತೆ ತಮ್ಮ ವಿಭಾಗದ ಎಲ್ಲ ಉಪ ನಿರ್ದೇಶಕರಿಗೆ ಶಿಕ್ಷಣ ಇಲಾಖೆಯ ಆಯುಕ್ತಾಲಯಗಳು ಸೂಚನೆ ನೀಡಿವೆ.

ಬಿಜೆಪಿ ಯಾರ ಪರ: ತಂಗಡಗಿ ಪ್ರಶ್ನೆ



ಕೊಪ್ಪಳ: 'ಕಾಂತರಾಜ್ ಆಯೋಗದ ವರದಿಯನ್ನೇ ನಕಲಿ ಎಂದು ಹೇಳುತ್ತಿರುವ ಬಿಜೆಪಿಯವರು ಹಿಂದುಳಿದ ವರ್ಗಗಳ ಪರವಾಗಿದ್ದಾರೋ ಅಥವಾ ವಿರುದ್ಧವಾಗಿದ್ದಾರೋ ಎನ್ನುವುದನ್ನು ಸ್ಪಷ್ಟಪಡಿಸಬೇಕು' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಮಂಗಳವಾರ ಆಗ್ರಹಿಸಿದರು.

'ಹಿಂದೆ ಜಯಪ್ರಕಾಶ ಹೆಗ್ಡೆ ನೀಡಿದ ವರದಿ ನಕಲಿ ಎಂದು ಬಿಜೆಪಿಗೆ ಏಕೆ ಅನ್ನಿಸಲಿಲ್ಲ. ಈಗ ನಾಚಿಕೆ ಇಲ್ಲದೆ ವರದಿ ನಕಲಿ, ಅವೈಜ್ಞಾನಿಕ ಎಂದು ಟೀಕಿಸುತ್ತಿದ್ದಾರೆ. ಸಚಿವರು ತಮ್ಮ ಅಭಿಪ್ರಾಯಗಳನ್ನು ಸಂಪುಟ ಸಭೆಯಲ್ಲಿ ತಿಳಿಸಿದ್ದಾರೆ. ಈ ಕುರಿತು 'ಇನ್ನಷ್ಟು ಅಧ್ಯಯನ ಅಗತ್ಯವಿದೆ ಎಂದಿದ್ದಾರೆ' ಎಂದು ಇಲ್ಲಿ ಮಾಧ್ಯಮದವರಿಗೆ ತಿಳಿಸಿದರು. 'ಸರ್ಕಾರ ವರದಿ ತಿರಸ್ಕರಿಸುವ ಮಾತೇ ಇಲ್ಲ' ಎಂದು ಹೇಳಿದರು.

'ಎಲ್ಲರಿಗೂ ನ್ಯಾಯ: ಸಿಎಂ ಜವಾಬ್ದಾರಿ'

ಬೆಂಗಳೂರು: 'ಜಾತಿ ಜನಗಣತಿ ವಿಚಾರವಾಗಿ ಎದ್ದಿರುವ ಅನುಮಾನಗಳಿಗೆ ತೆರೆ ಎಳೆಯುವ ಶಕ್ತಿ ರಾಜ್ಯ ಸರ್ಕಾರಕ್ಕಿದೆ' ಎಂದು ಮಾಜಿ ಸಂಸದ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ನಂಬಿಕೆ ಇದೆ. ಎಲ್ಲರಿಗೂ ನ್ಯಾಯ ಒದಗಿಸುವುದು ಅವರ ಜವಾಬ್ದಾರಿಯೂ ಆಗಿದೆ' ಎಂದರು.

'ವರದಿಯಲ್ಲಿ ಮಾಹಿತಿ ಬಿಟ್ಟುಹೋಗಿದ್ದರೆ, ತಪ್ಪುಗಳಾಗಿದ್ದರೆ ಸರಿಪಡಿಸಿಕೊಳ್ಳಲು 3-4 ತಿಂಗಳು ಕಾಲಾವಕಾಶ ನೀಡಬೇಕು. ಎಲ್ಲ ಸಮುದಾಯಗಳಲ್ಲಿನ ಶೋಷಿತರಿಗೆ ನ್ಯಾಯ ಒದಗಿಸಬೇಕು. ಕುರುಬರನ್ನು ಹೆಚ್ಚಾಗಿ ತೋರಿಸಿದ್ದಾರೆ ಎಂಬುದು ಬಹುತೇಕರ ಆರೋಪ. ಅದಕ್ಕೆ ಮುಖ್ಯಮಂತ್ರಿಯವರ ಉತ್ತರ ನೀಡಬೇಕು' ಎಂದರು.



ಡಿ.ಕೆ. ಸುರೇಶ್

'ವರದಿ ಮರು ಪರಿಶೀಲಿಸಬೇಕು'

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಮೀಕ್ಷೆಯ ವರದಿಯ ಜಾರಿಗೆ ಮುನ್ನ ಮರುಪರಿಶೀಲಿಸುವ ಅಗತ್ಯವಿದೆ' ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಅಭಿಪ್ರಾಯಪಟ್ಟಿದ್ದಾರೆ.

'ವಿವಿಧ ಸಮುದಾಯಗಳು ವರದಿಯ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿರುವುದರಿಂದ ಮರು ಸಮೀಕ್ಷೆ ನಡೆಸುವ ಅಗತ್ಯವೂ ಇದೆ' ಎಂದು ಸಂದರ್ಶನವೊಂದರಲ್ಲಿ ಪ್ರತಿಪಾದಿಸಿದ್ದಾರೆ.

'ಸಮೀಕ್ಷೆಯ ದತ್ತಾಂಶಗಳನ್ನು ಮರು ಪರಿಶೀಲನೆ ವಿಚಾರದಲ್ಲಿ ಸರ್ಕಾರ ಎಲ್ಲ ಪಕ್ಷಗಳ ಜೊತೆ ಚರ್ಚಿಸಿ ಒಮ್ಮತಕ್ಕೆ ಬರಬೇಕು' ಎಂದಿದ್ದಾರೆ. '1992ರಲ್ಲಿ ನಾನು ಸಿಎಂ ಆಗಿದ್ದಾಗ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಜಾರಿ ಮಾಡಿದ್ದೆನು. ಲಿಂಗಾಯತರು ಜನಸಂಖ್ಯೆಯು ಪ್ರಸ್ತುತ ವರದಿಗಿಂತ ಹೆಚ್ಚು ಇತ್ತು. ಈಗ ಜನಸಂಖ್ಯೆ ಹೇಗೆ ಕಡಿಮೆಯಾಗುತ್ತದೆ? ಈ ಕಾರಣಕ್ಕೆ ವರದಿಯ ಮರು ಮೌಲ್ಯಮಾಪನದ ಅಗತ್ಯವಿದೆ' ಎಂದರು.



ವೀರಪ್ಪ ಮೊಯಿಲಿ

'ಪಕ್ಷ ಸಂಘಟನೆ: ಯಾರ ಮುಲಾಜೂ ನೋಡಲ್ಲ'



ಗದಗದಲ್ಲಿ ಮಂಗಳವಾರ ನಡೆದ ಬಿಜೆಪಿ ಜನಾಕ್ರೋಶ ಯಾತ್ರೆಯಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಗದಗ: 'ಯಾರದ್ದೋ ಖುಷಿಗಾಗಿ ನಾನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿಲ್ಲ. ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಯಾವುದೇ ತೀರ್ಮಾನವಾದರೂ ಮುಲಾಜಿಲ್ಲದೇ ತೆಗೆದುಕೊಳ್ಳುತ್ತೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಬಿ.ಎಸ್.ಯಡಿಯೂರಪ್ಪ ಅವರು 30 ವರ್ಷಗಳಲ್ಲಿ ಎಷ್ಟು ಮಂದಿಯ ವಿರೋಧ ಕಟ್ಟಿಕೊಂಡಿದ್ದರೋ? ನಾನು ಒಂದು ವರ್ಷದಲ್ಲಿ ಅಷ್ಟು ಮಂದಿಯ ವಿರೋಧ ಕಟ್ಟಿಕೊಂಡಿದ್ದೇನೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಕೇಂದ್ರದ ನಾಯಕರು ನನ್ನನ್ನು ಸುಮ್ಮನೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷನನ್ನಾಗಿ ಮಾಡಿಲ್ಲ. ರಾಜ್ಯದಲ್ಲಿ ಬಿಜೆಪಿ ಸಂಘಟನೆ ಸದೃಢಗೊಳಿಸಬೇಕು. ಅಧಿಕಾರಕ್ಕೆ ಬರಬೇಕು ಎಂಬುದರ ಜತೆಗೆ ನಾವು ಕರ್ನಾಟಕದಲ್ಲಿ ಗೆದ್ದರೆ, ಪಕ್ಕದ ತೆಲಂಗಾಣ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳನ್ನು ಗೆಲ್ಲಬಹುದು ಎಂಬುದು ಅವರ ದೃಷ್ಟಿಕೋನವಾಗಿದೆ. ಹಾಗಾಗಿ, ನನ್ನ ಗುರಿ ಸ್ಪಷ್ಟವಾಗಿದೆ' ಎಂದರು.

'ನಾನು ಪಕ್ಷದ ಅಧ್ಯಕ್ಷನಾಗಿ ಒಂದೂವರೆ ವರ್ಷವಾಗಿರಬಹುದು. ಆದರೆ, 1998ರಿಂದ ತಂದೆಯ ಜತೆ ರಾಜ್ಯದಾದ್ಯಂತ ಓಡಾಡಿದ್ದೇನೆ. ಯಾವ ಜಿಲ್ಲೆಯಲ್ಲಿ ಏನೇನು ನಡೆಯುತ್ತಿದೆ ಎಂಬುದರ ಸ್ಪಷ್ಟ ಚಿತ್ರಣ ನನ್ನಲ್ಲಿದೆ. ನಾನು ಹೆಬ್ಬೆಟ್ಟು ಅಲ್ಲ ಅಥವಾ ಮಾಹಿತಿ ಗೊತ್ತಿಲ್ಲ ಅಂತೇನಿಲ್ಲ' ಎಂದು ಹೇಳಿದರು.

'ಒಳಪಂಗಡ ಜಗಳ ಬಿಟ್ಟು ಲಿಂಗಾಯತರು ಒಂದಾಗಲಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಒಳ ಪಂಗಡಗಳ ಜಗಳ ಬಿಟ್ಟು ಲಿಂಗಾಯತರು ಒಂದಾಗಬೇಕು. ತಮ್ಮ ಮೇಲೆ ನಡೆದಿರುವ ಅನ್ಯಾಯ ಹಿಮ್ಮೆಟ್ಟಿಸಬೇಕು' ಎಂದು ಜಾಗತಿಕ ಲಿಂಗಾಯತ ಮಹಾಸಭೆ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಹೇಳಿದರು.

ಇಲ್ಲಿನ ಎಸ್.ಜಿ.ಬಾಳೇಕುಂದ್ರಿ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ 'ವಚನದರ್ಶನ: ಮಿಥ್ಯ vs ಸತ್ಯ' ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ 1.35 ಕೋಟಿ ಇದ್ದರೂ ತಪ್ಪು ಮಾಹಿತಿ ನೀಡಲಾಗುತ್ತಿದೆ. ರಾಜಕೀಯ ಪಕ್ಷಗಳಿಂದ ಲಿಂಗಾಯತ ಸಮಾಜ ಛಿದ್ರಗೊಂಡಿದೆ' ಎಂದರು.

'ವಚನಗಳು ಭಾರತದ ಪರಂಪರೆಗೆ ವಿರುದ್ಧ ಎಂದು ಬಿಂಬಿಸುವ ಯತ್ನ ನಡೆಯಿತು. ಇಲ್ಲೇ ಹುಟ್ಟಿ ಬೆಳೆದ ಲಿಂಗಾಯತರಿಗೆ ಬೇರೆಯವರು ರಾಷ್ಟ್ರೀಯತೆ ಕಲಿಸುವ ಅಗತ್ಯವಿಲ್ಲ' ಎಂದರು.



ಜಾಮದಾರ

'ದೋಷಗಳನ್ನು ತಿಳಿಸುವ ಕೆಲಸವಾಗಲಿ': ಗ್ರಂಥ ಬಿಡುಗಡೆ ಗೊಳಿಸಿದ ಗದುಗಿನ ತೋಂಟದಾರ್ಯ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ, 'ಬಸವಾದಿ ಶಿವಶರಣರ ಆಶಯಕ್ಕೆ ವಿರುದ್ಧವಾದ ವಿಚಾರವನ್ನು ಮುದ್ರಿಸಿ, ಪ್ರಚಾರ ಮಾಡಲಾಗುತ್ತಿದೆ. ಪುನಃ ಪುರೋಹಿತಶಾಹಿ ವ್ಯವಸ್ಥೆ ಜಾರಿಗೆ ತರಲು ಯತ್ನಿಸಲಾಗಿದೆ. ಬಸವಣ್ಣನವರ ಕ್ರಾಂತಿ ವಿಫಲಗೊಳಿಸಿದ ವಿಚಾರಧಾರೆಯೇ ಇಲ್ಲಿಯೂ ಕಾರ್ಯನಿರ್ವಹಿಸುತ್ತಿದೆ. ಅದಕ್ಕೆ ಈ ಗ್ರಂಥದಲ್ಲಿನ ದೋಷಗಳನ್ನು ಜನರಿಗೆ ತಿಳಿಸುವ ಕೆಲಸ ಮಾಡಬೇಕಿದೆ. ಅದಕ್ಕಾಗಿಯೇ 'ವಚನದರ್ಶನ ಮಿಥ್ಯ vs ಸತ್ಯ' ಗ್ರಂಥ ಲೋಕಾರ್ಪಣೆ ಮಾಡಿದ್ದೇವೆ' ಎಂದರು.

'ಲಿಂಗಾಯತ ಧರ್ಮವೇ ಸತ್ಯ'

ಕಾರ್ಯಕ್ರಮ ಉದ್ಘಾಟಿಸಿದ ಹಂದಿಗುಂದದ ಸಿದ್ಧೇಶ್ವರ ಮಠದ ಶಿವಾನಂದ ಸ್ವಾಮೀಜಿ, 'ವಚನದರ್ಶನ' ಗ್ರಂಥವೇ ಮಿಥ್ಯ. ಬಸವಣ್ಣನವರ ಲಿಂಗಾಯತ ಧರ್ಮವೇ ಸತ್ಯ. ಶರಣ ಪರಂಪರೆಯ ವಾರಸುದಾರರು ವಿಭೂತಿ ಬಿಟ್ಟು ಹಣೆಗೆ ಕುಂಕುಮ ಹಚ್ಚಿಕೊಂಡು ಓಡಾಡುತ್ತಿರುವುದು ನೋವಿನ ಸಂಗತಿ' ಎಂದರು. 'ಗುರು–ವಿರಕ್ತರು ಒಂದಾಗಬೇಕು ಎಂದರೆ ಅದು ಹೇಗೆ ಸಾಧ್ಯ? ಅವರು ಏನು ಹೇಳುತ್ತಾರೆಯೋ ಹೇಳಲಿ. ನಮ್ಮ ವಿಚಾರ ಸ್ಪಷ್ಟಪಡಿಸುವುದು ಮುಖ್ಯ. ನೀವು ವೀರಶೈವರೋ ಅಥವಾ ಲಿಂಗಾಯತರೋ ಎಂದು ಸ್ಪಷ್ಟವಾಗಿ ಹೇಳಿ. ವೀರಶೈವರಾದರೆ ಅಲ್ಲಿಯೇ ಇರಿ. ಲಿಂಗಾಯತರಾದರೆ ಇಲ್ಲಿಗೆ ಬನ್ನಿ. ಎರಡನ್ನು ಏಕಕಾಲಕ್ಕೆ ಹೇಳಬೇಡಿ' ಎಂದು ಸಲಹೆ ಕೊಟ್ಟರು.

ಗಾಳಿ, ಮಳೆ: ಇಬ್ಬರ ಸಾವು

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಬಳ್ಳಾರಿ, ಉತ್ತರ ಕನ್ನಡ, ವಿಜಯಪುರ ಜಿಲ್ಲೆಗಳಲ್ಲಿ ಮಂಗಳವಾರ ಮಳೆಯಾಯಿತು. ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ರಭಸದ ಗಾಳಿ, ಮಳೆಗೆ ಶೆಡ್‌ನ ಪತ್ರಾಸ್ (ತಗಡು) ಹಾರಿ ಬಂದು ಕುತ್ತಿಗೆಗೆ ಬಡಿದು ಸುನೀತಾ ಕಾಂತೇಶ ಲಮಾಣಿ (34) ಮೃತಪಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯ ಅಮೀನಗಡದಲ್ಲಿ ಬಿರುಗಾಳಿ, ಮಳೆಗೆ ಲೋಕೋಪಯೋಗಿ ಇಲಾಖೆ ಕಾಂಪೌಂಡ್ ಕುಸಿದು ಮಹಿಬೂಬಸಾಬ್ ತಾಳಿಕೋಟಿ (35) ಮೃತಪಟ್ಟಿದ್ದಾರೆ. ಹುನಗುಂದ ತಾಲ್ಲೂಕಿನ ಹೊನ್ನರಹಳ್ಳಿಯಲ್ಲಿ ಸಿಡಿಲು ಬಡಿದು ಆಕಳು ಮೃತಪಟ್ಟಿದೆ.

ಬೆಳಗಾವಿ ಜಿಲ್ಲೆ ಸತ್ತಿಗೇರಿ ಸಮೀಪದ ಗುಡುಮಕೇರಿ ಗ್ರಾಮದಲ್ಲಿ ಮಳೆ ಹಾಗೂ ಬಿರುಗಾಳಿಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೂರು ಕೊಠಡಿಗಳ ಚಾವಣಿಯ ತಗಡಿನ ಶೀಟುಗಳು ಹಾರಿ ಹೋಗಿವೆ. ಬಾಗಲಕೋಟೆ ಜಿಲ್ಲೆ ಹುನಗುಂದದಲ್ಲಿ ಮಳೆಯಾಗಿದೆ.

ನಂಜರಾಜ, ಇಂದಿರಾ, ರವೀಂದ್ರನಾಥಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ಮೂರು ವರ್ಷಗಳ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಮಂಗಳವಾರ ಪ್ರಕಟಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರ ನೇತೃತ್ವದ ಕಾರ್ಯಕಾರಿ ಸಮಿತಿಯು 2022, 2023 ಹಾಗೂ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಿದೆ. 'ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ'ಗೆ ಕ್ರಮವಾಗಿ ಮೈಸೂರಿನ ಪ್ರೊ.ಪಿ.ವಿ. ನಂಜರಾಜ ಅರಸ್, ಮಂಗಳೂರಿನ ಇಂದಿರಾ ಹೆಗ್ಗಡೆ ಹಾಗೂ ವಿಜಯನಗರದ ಹೊಸಪೇಟೆಯ ಕೆ. ರವೀಂದ್ರನಾಥ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹75 ಸಾವಿರ ನಗದು ಒಳಗೊಂಡಿದೆ.

'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ'ಗೆ ಗದಗದ ಲಡಾಯಿ ಪ್ರಕಾಶನ, ಮೈಸೂರಿನ ಅಭಿರುಚಿ ಪ್ರಕಾಶನ ಹಾಗೂ ಕಲಬುರಗಿಯ ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ಆಯ್ಕೆಯಾಗಿದೆ. ಈ ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹೊಂದಿದೆ.


'ಡಾ.ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'ಗೆ ಮಂಡ್ಯದ ಪ್ರೊ.ಬಿ. ಜಯಪ್ರಕಾಶಗೌಡ, ಬಳ್ಳಾರಿಯ ಹಗರಿ-ಬೊಮ್ಮನಹಳ್ಳಿಯ ಮೇಟಿಕೊಟ್ರಪ್ಪ, ಮೈಸೂರಿನ ರಂಗನಾಥ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.



ನಂಜರಾಜ ಅರಸ್



ಡಾ. ಇಂದಿರಾ ಹೆಗ್ಗಡೆ



ರವೀಂದ್ರನಾಥ್

'ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ'ಗೆ ಮೈಸೂರಿನ ಹರಿಪ್ರಸಾದ್, ಯಾದಗಿರಿಯ ಎಸ್.ಎಸ್. ಗುಬ್ಬಿ ಮತ್ತು ಬಾಗಲಕೋಟೆಯ ಕರವೀರಪ್ರಭು ಕ್ಯಾಲಕೊಂಡ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹೊಂದಿದೆ.

'ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೇ ತಿಂಗಳಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗುವುದು' ಎಂದು ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದರು.

ಅಪಾಯದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು ರಕ್ಷಿಸಲು ಮುಖ್ಯಮಂತ್ರಿಗೆ ಕೋರಿಕೆ

'ಸರ್ವಾಧಿಕಾರಿ ಧೋರಣೆ' ತಡೆಯಲು ಮನವಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅವರ ಸರ್ವಾಧಿಕಾರಿ ಲಾಲಸೆಯನ್ನು ತಡೆಗಟ್ಟಬೇಕು ಮತ್ತು ಅಪಾಯದಲ್ಲಿರುವ ಪರಿಷತ್ತನ್ನು ರಕ್ಷಿಸಬೇಕು' ಎಂದು ಜಿಲ್ಲೆಯ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ನಾಗಮಂಗಲ ತಾಲ್ಲೂಕಿನ ದೊಡ್ಡಬಾಲ ಗ್ರಾಮದಲ್ಲಿ 39 ವರ್ಷಗಳ ಬಳಿಕ ನಡೆಯುತ್ತಿರುವ ಹುಚ್ಚಪ್ಪಸ್ವಾಮಿಯ ಹಾಗೂ ಹದಿನಾಲ್ಕು ಕೂಟದ ದೇವರುಗಳ ಜಾತ್ರಾ ಮಹೋತ್ಸವ ಉದ್ಘಾಟಿಸಲು ಆಗಮಿಸಿದ್ದ ಮುಖ್ಯಮಂತ್ರಿ ಅವರನ್ನು ಮುಖಂಡರ ನಿಯೋಗ ಭೇಟಿ ಮಾಡಿತು.

'106 ವರ್ಷಗಳ ಇತಿಹಾಸವಿರುವ ಪರಿಷತ್ತಿನ ನಿಯಮ ನಿಬಂಧನೆಗಳಿಗೆ ಆರು ಬಾರಿ ಮಾತ್ರ ತಿದ್ದುಪಡಿಯಾಗಿದೆ. ಆದರೆ, ಮಹೇಶ ಜೋಶಿಯವರು ಅಧ್ಯಕ್ಷರಾದ ನಂತರ 2022ರಲ್ಲಿ ಬೈ–ಲಾಗೆ ಆಮೂಲಾಗ್ರವಾದ ಬದಲಾವಣೆಗಳನ್ನು ತಂದಿದ್ದಾರೆ. 2023ರಲ್ಲಿ 2ನೇ ಬಾರಿಗೆ ತಿದ್ದುಪಡಿ ಮಾಡಿದ್ದಾರೆ. ಕಸಾಪ ಅಧ್ಯಕ್ಷರಿಗೆ ಪರಮಾಧಿಕಾರ ನೀಡುವ ನಿಟ್ಟಿನಲ್ಲಿ 3ನೇ ಬಾರಿಗೆ ತಿದ್ದುಪಡಿಗೆ ಮುಂದಾಗಿದ್ದಾರೆ' ಎಂದು ದೂರಿದ್ದಾರೆ.



ಪರಮಾಧಿಕಾರಕ್ಕಾಗಿ 3ನೇ ಬಾರಿಗೆ ಬೈ–ಲಾ ತಿದ್ದುಪಡಿಗೆ ಮುಂದಾಗಿರುವ ಕಸಾಪ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಮಂಡ್ಯ ಜಿಲ್ಲೆಯ ಪ್ರಗತಿಪರ ಸಂಘಟನೆಯ ಮುಖಂಡರು ಮಂಗಳವಾರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೊಡ್ಡಬಾಲ ಗ್ರಾಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಜರಿದ್ದರು

ಸಂವಿಧಾನ ವಿರೋಧಿ ನಡೆ: 'ಪ್ರಸ್ತಾಪಿತ ಬೈಲಾದಲ್ಲಿ ಪರಿಷತ್ತಿನಿಂದ ನಾಮ ನಿರ್ದೇಶನಗೊಂಡ ಸದಸ್ಯರ ಬದಲಾವಣೆ ಮತ್ತು ಆಜೀವ ಸದಸ್ಯರುಗಳ ಅಮಾನತು ಮಾಡುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಇಚ್ಛೆಗೆ ಒಳಪಟ್ಟಿದ್ದು, 'ಆನಂದ ಸಿದ್ಧಾಂತ' ಅನ್ವಯ ವಿವಿಧ ಘಟಕಗಳನ್ನು ಯಾವುದೇ ಕಾರಣ ನೀಡದೆ ಬದಲಾಯಿಸುವ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ. ಈ ಆನಂದ ಸಿದ್ಧಾಂತವು ಭಾರತ ಸಂವಿಧಾನವು ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಪ್ರತ್ಯಾಯೋಜಿಸಿರುವ ಅಧಿಕಾರ. ನೋಂದಾಯಿತ ಸಂಸ್ಥೆಯೊಂದು ಇದನ್ನು ಬಳಸಲು ಸಾಧ್ಯವಿಲ್ಲ. ಇದು ಸರ್ವಾಧಿಕಾರಿ ಧೋರಣೆ ತೋರಿಸುತ್ತದೆ' ಎಂದು ಆರೋಪಿಸಿದ್ದಾರೆ.

> ಏ. 24ಕ್ಕೆ ಬೆಂಗಳೂರಿನಲ್ಲಿ 'ಕಸಾಪ ಉಳಿಸಿ' ಹೆಸರಿನಲ್ಲಿ ಸಭೆ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪರಿಷತ್ತು ಉಳಿಸಬೇಕು.
> **ಪ್ರೊ.ಜಯಪ್ರಕಾಶಗೌಡ**, ಅಧ್ಯಕ್ಷ, ಕರ್ನಾಟಕ ಸಂಘ, ಮಂಡ್ಯ

> ಕೇಂದ್ರ ಪರಿಷತ್ತು ಪಡೆದಿರುವ ₹2.5 ಕೋಟಿಗೆ ಇಲ್ಲಿಯವರೆಗೆ ಲೆಕ್ಕಪತ್ರ ನೀಡದಿರುವುದು ಹಣ ದುರುಪಯೋಗದ ಅನುಮಾನಕ್ಕೆ ಕಾರಣವಾಗಿದೆ.
> **ಸುನಂದಾ ಜಯರಾಂ**, ರೈತ ನಾಯಕಿ

'ಹಣ ನೀಡದೆ ದ್ವೇಷ ಸಾಧನೆ'

'ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಚೇರಿ ವೆಚ್ಚಗಳು, ಸಭೆ–ಸಮಾರಂಭಗಳ ಊಟೋಪಚಾರ ಖರ್ಚು ಮತ್ತು ಇನ್ನಿತರ ವೆಚ್ಚಗಳಿಗಾಗಿ ಕಾರ್ಯಕಾರಿ ಸಮಿತಿಯಲ್ಲಿ ಜಿಲ್ಲಾ ಘಟಕದ ಪರಿಷತ್ತಿಗೆ ನೀಡಬೇಕಾದ ₹15 ಲಕ್ಷ ಮತ್ತು ಜಿಲ್ಲಾ ಮಟ್ಟದ ಪ್ರಚಾರ ರಥದ ಖರ್ಚು ₹10 ಲಕ್ಷ ಸೇರಿದಂತೆ ಒಟ್ಟು ₹25 ಲಕ್ಷದ ಬಿಲ್‌ಗಳನ್ನು ಸಲ್ಲಿಸಿದ್ದರೂ ಹಣ ಬಿಡುಗಡೆ ಮಾಡದೆ ಮಹೇಶ ಜೋಶಿಯವರು ದ್ವೇಷ ಸಾಧಿಸುತ್ತಿದ್ದಾರೆ' ಎಂದು ಜಿಲ್ಲಾ ಕಸಾಪ ಸದಸ್ಯರು ದೂರಿದ್ದಾರೆ.

'ಸಮ್ಮೇಳನದ ಸಂಚಾಲಕರಾದ ಮೀರಾ ಶಿವಲಿಂಗಯ್ಯನವರಿಗೆ ಸಮ್ಮೇಳನ ಮುಗಿಯುವವರೆಗೆ ಸಹಕಾರ ನೀಡಿಲ್ಲ. ರಾಜ್ಯಾಧ್ಯಕ್ಷರ ಪೂರ್ವಗ್ರಹ ಪೀಡಿತ ದಬ್ಬಾಳಿಕೆಗೆ ಎಲ್ಲೆಯೇ ಇಲ್ಲದಂತಾಗಿದೆ. ಇದು ಜಿಲ್ಲೆಯ ಜನರಿಗೆ ಮಾಡಿದ ಮಹಾ ಅವಮಾನ' ಎಂದು ಮನವಿ ಪತ್ರದಲ್ಲಿ ಆರೋಪಿಸಲಾಗಿದೆ.

ಸಚಿವ ಸ್ಥಾನಮಾನ ಸರಿಯೇ?: 'ಕನ್ನಡ ಪರಿಚಾರಕರಾಗಿ ಕೆಲಸ ಮಾಡಬೇಕಾದ ಮಹೇಶ ಜೋಶಿಯವರು, ಸರ್ಕಾರದವರು ಸಚಿವ ಸ್ಥಾನಮಾನ ಹುದ್ದೆ ಕೊಟ್ಟಿದ್ದಾರೆ ಎಂದು ತಮ್ಮ ಲೆಟರ್ ಹೆಡ್‌ನಲ್ಲಿ ಹಾಕಿಕೊಂಡಿದ್ದಾರೆ. ಇದು ಸರಿಯೇ' ಎಂದು ಮುಖ್ಯಮಂತ್ರಿಯನ್ನು ಪ್ರಶ್ನಿಸಿದರು. 'ಮನವಿಪತ್ರವನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತೇನೆ' ಎಂದು ಸಿಎಂ ತಿಳಿಸಿದರು.

ನಿಯೋಗದಲ್ಲಿ ಮೀರಾ ಶಿವಲಿಂಗಯ್ಯ, ಸುನಂದಾ ಜಯರಾಂ, ಪ್ರೊ.ಜಯಪ್ರಕಾಶಗೌಡ, ಪ್ರೊ. ಜಿ.ಟಿ. ವೀರಪ್ಪ, ಧರಣೇಂದ್ರಯ್ಯ, ವಿ.ಹರ್ಷ, ಕಾರಸವಾಡಿ ಮಹದೇವು, ರಂಗಸ್ವಾಮಿ, ಮಂಜುನಾಥ, ಕೆ.ಬೋರಯ್ಯ, ಸುಧೀರ್‌ಕುಮಾರ್ ಇದ್ದರು.

ಓಂ ಪ್ರಕಾಶ್ ಕೊಲೆ ಪ್ರಕರಣ: ಸಿಸಿಬಿಗೆ ಕಡತ ರವಾನೆ

ಬೆಂಗಳೂರು: ನಿವೃತ್ತ ಡಿಜಿ–ಐಜಿಪಿ ಓಂ ಪ್ರಕಾಶ್ ಕೊಲೆ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿದ್ದ ಎಚ್‌ಎಸ್‌ಆರ್ ಲೇಔಟ್ ಪೊಲೀಸರು, ಸಿಸಿಬಿ ಪೊಲೀಸರಿಗೆ ಕಡತ ಹಸ್ತಾಂತರಿಸಿದ್ದಾರೆ. .

'ಸೋಮವಾರ ಸಂಜೆ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿದ್ದರಿಂದ ಆರೋಪಿಗಳ ಹೇಳಿಕೆ ವಿಡಿಯೊ ರೆಕಾರ್ಡ್‌ಗಳು, ಸ್ಥಳ ಮಹಜರು ಮಾಹಿತಿ, ಓಂ ಪ್ರಕಾಶ್ ಅವರ ಸಂಬಂಧಿಕರ ಹೇಳಿಕೆಯ ಮಾಹಿತಿಯ ಕಡತವನ್ನು ಸಿಸಿಬಿಗೆ ಹಸ್ತಾಂತರ ಮಾಡಲಾಗಿದೆ' ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಕಸ್ಟಡಿಗೆ ಪಡೆಯಲು ಸಿದ್ಧತೆ: 'ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ನ್ಯಾಯಾಂಗ ಬಂಧನದಲ್ಲಿದ್ದು, ಅವರನ್ನು ಬಾಡಿ ವಾರಂಟ್ ಮೇಲೆ ಕಸ್ಟಡಿಗೆಪಡೆಯಲು ಸಿದ್ಧತೆ ನಡೆದಿದೆ' ಎಂದು ಮೂಲಗಳು ಹೇಳಿವೆ.

'2ನೇ ಆರೋಪಿ ಕೃತಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಮುಂದುವರಿದಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಳಿಕ ಕೃತ್ಯದಲ್ಲಿ ಅವರ ಪಾತ್ರ ಗೊತ್ತಾಗಲಿದೆ' ಎಂದು ಹೇಳಿವೆ.

ನಿಧನ ವಾರ್ತೆ

ಡಾ.ಕೆ.ವಸಂತ್



ಮಡಿಕೇರಿ: ಮಾಜಿ ಸಚಿವೆ ಸುಮಾ ವಸಂತ್ ಅವರ ಪತಿ ಹಾಗೂ ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ವಸಂತ್ (86) ಅವರು ಮಂಗಳವಾರ ವಯೋಸಹಜ ಕಾಯಿಲೆಯಿಂದ ಇಲ್ಲಿನ ಜಯನಗರದಲ್ಲಿರುವ ತಮ್ಮ ಮನೆಯಲ್ಲಿ ನಿಧನರಾದರು. ಅಂತ್ಯಕ್ರಿಯೆ ನಗರದ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.

ಉದ್ಯೋಗ ವಾಣಿ

ಲೋಕಸೇವಾ ಪರೀಕ್ಷೆಯಲ್ಲಿ ಕನ್ನಡಿಗರ ಸಾಧನೆ

ಕೇಂದ್ರ ಲೋಕಸೇವಾ ಆಯೋಗವು 2024ರಲ್ಲಿ ನಡೆಸಿದ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ರಾಜ್ಯದ ಹಲವರು ಉತ್ತಮ ಸಾಧನೆ ಮಾಡಿದ್ದಾರೆ. ಕೆಲವರು ಹತ್ತಾರು ಎಡರು ತೊಡರುಗಳನ್ನು ಮೀರಿ ಉನ್ನತ ಅಧಿಕಾರಿಯಾಗುವ ತಮ್ಮ ಕನಸನ್ನು ನನಸಾಗಿಸಿಕೊಂಡಿದ್ದಾರೆ. ರಾಜ್ಯದಿಂದ ಆಯ್ಕೆಯಾಗಿರುವ ಸಾಧಕರ ಮಾಹಿತಿಗಳು ಇಲ್ಲಿವೆ:

ಪದವಿ ಪಡೆದ ಕುಟುಂಬದ ಮೊದಲಿಗ

ಹೆಸರು: ಡಾ.ಸಚಿನ್ ಗುತ್ತೂರು,
ಊರು: ಕೋಡಿಯಾಲ ಹೊಸಪೇಟೆ, ರಾಣೆಬೆನ್ನೂರು ತಾಲ್ಲೂಕು

41 ರ‍್ಯಾಂಕ್



ಹಿನ್ನೆಲೆ: ಇಟ್ಟಿಗೆ ವ್ಯಾಪಾರಿ ಬಸವರಾಜ ಗುತ್ತೂರು ಹಾಗೂ ವಿನೋದಾ ದಂಪತಿಯ ಪುತ್ರ ಡಾ.ಸಚಿನ್, ಪದವಿವರೆಗೆ ಶಿಕ್ಷಣ ಪಡೆದ ಕುಟುಂಬದ ಮೊದಲಿಗ. ಹರಿಹರ ತಾಲ್ಲೂಕಿನ ಮೈಸೂರು ಕಿರ್ಲೋಸ್ಕರ್ ಶಿಕ್ಷಣ ಸಂಸ್ಥೆಯಲ್ಲಿ (ಎಂಕೆಇಟಿ) 10ನೇ ತರಗತಿವರೆಗೆ ವ್ಯಾಸಂಗ ಮಾಡಿದ ಇವರು, ದಾವಣಗೆರೆಯ ವೈಷ್ಣವಿ ಚೇತನ ವಿಜ್ಞಾನ ಕಾಲೇಜಿನಲ್ಲಿ ಪಿಯುಸಿ ಹಾಗೂ ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದಿದ್ದಾರೆ. 2019ರಿಂದ ಯುಪಿಎಸ್‌ಸಿ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಿದ್ದು, 4ನೇ ಪ್ರಯತ್ನದಲ್ಲಿ ಯಶಸ್ಸು ಗಳಿಸಿದ್ದಾರೆ.

ಅಭಿಪ್ರಾಯ: 'ಮೂರು ಪ್ರಯತ್ನದಲ್ಲಿ ಯಶಸ್ಸು ಸಿಗದೇ ಇದ್ದಾಗ ಬೇಸರವಾಗಿತ್ತು. ಮುಖ್ಯ ಪರೀಕ್ಷೆ ಬರೆದರೂ ಸಂದರ್ಶನದವರೆಗೆ ತಲುಪಲು ಸಾಧ್ಯವಾಗಿರಲಿಲ್ಲ. ಮಾನಸಿಕವಾಗಿ ಕುಗ್ಗದೇ ತಪ್ಪುಗಳನ್ನು ಸರಿಪಡಿಸಿಕೊಂಡು ಮರಳಿ ಪ್ರಯತ್ನಿಸಿದೆ. ಯುಪಿಎಸ್‌ಸಿ ಭಯ ಹುಟ್ಟಿಸುವ ಪರೀಕ್ಷೆ ಖಂಡಿತ ಅಲ್ಲ. ಸರಿಯಾದ ಮಾರ್ಗದಲ್ಲಿ ಸಿದ್ಧತೆ ನಡೆಸಬೇಕು. ಏನನ್ನು ಓದಬೇಕು ಎಂಬುದನ್ನು ಅರ್ಥಮಾಡಿಕೊಂಡು ತಯಾರಿ ಮಾಡಬೇಕು'.

ಜವಾಬ್ದಾರಿಗಳ ಜೊತೆಗೆ ಪರೀಕ್ಷೆ ಪಾಸು

ಹೆಸರು: ಜೆ.ಭಾನುಪ್ರಕಾಶ್
ವಿದ್ಯಾರ್ಹತೆ: ಎಂಬಿಬಿಎಸ್, ಎಂ.ಡಿ
ಹಾಲಿ ಹುದ್ದೆ: ಐಪಿಎಸ್
ಊರು: ಬೆಳವಾಡಿ, ಮೈಸೂರು

523 ರ‍್ಯಾಂಕ್



ಹಿನ್ನೆಲೆ: ಕೃಷಿಕ ಜಯರಾಮೇಗೌಡ ಹಾಗೂ ಅಂಗನವಾಡಿ ಶಿಕ್ಷಕಿ ಗಿರಿಜಮ್ಮ ದಂಪತಿ ಪುತ್ರ. 5ನೇ ತರಗತಿವರೆಗೆ ಬೆಳವಾಡಿಯ ಸರ್ಕಾರಿ ಶಾಲೆ, 6ರಿಂದ 12ರವರೆಗೆ ಚಾಮರಾಜನಗರದ ಹೊಂಡರಬಾಳಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಣ. ಮಂಡ್ಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ಎಂಬಿಬಿಎಸ್ ಹಾಗೂ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಎಂ.ಡಿ ಪಿಡಿಯಾಟ್ರಿಕ್ಸ್ ಪದವಿ.

ಅಭಿಪ್ರಾಯ: 2022ರಲ್ಲಿ 448ನೇ ರ‍್ಯಾಂಕ್ ಮೂಲಕ ಕರ್ನಾಟಕ ಕೇಡರ್‌ನಲ್ಲಿ ಐಪಿಎಸ್ ಹುದ್ದೆ ಪಡೆದೆ. ಹೈದರಾಬಾದ್‌ನಲ್ಲಿ ತರಬೇತಿ ಪಡೆಯುತ್ತಿದ್ದು, ಇದೇ ಅ.10ಕ್ಕೆ ಮುಗಿಯಲಿದೆ. ಐಎಎಸ್ ಹುದ್ದೆಗಾಗಿ ಪರೀಕ್ಷೆ ಬರೆಯುತ್ತಿದ್ದೇನೆ. 2023ರ ಪರೀಕ್ಷೆಯಲ್ಲಿ 600ನೇ ರ‍್ಯಾಂಕ್ ಬಂದಿತ್ತು. ಈ ಬಾರಿ 523ನೇ ರ‍್ಯಾಂಕ್ ಬಂದಿದೆ. 2019ರಲ್ಲಿ ಮದುವೆಯಾದೆ, 2020ರಲ್ಲಿ ಮಗ ಅಥರ್ವ ಹುಟ್ಟಿದ. ಜವಾಬ್ದಾರಿಗಳ ಜೊತೆಗೆ ಪರೀಕ್ಷೆ ಪಾಸು ಮಾಡಿದ್ದೆ. ಪತ್ನಿ ಡಾ.ಚೈತ್ರಾ ಸಹಕಾರ ನೀಡಿದ್ದರು. ಐಪಿಎಸ್ ತರಬೇತಿ ಜೊತೆಗೇ ತಯಾರಿ ನಡೆಸಿದ್ದೆ. ಮೂರನೇ ಬಾರಿ ಪಟ್ಟಿಯಲ್ಲಿ ಸ್ಥಾನ ಪಡೆದ ಖುಷಿಯಿದೆ. ಐಎಎಸ್ ಆಗುವ ಕನಸು ಈಡೇರಲಿಲ್ಲ. ಆದರೆ, ಎಲ್ಲ ಪ್ರಯತ್ನ ಮಾಡಿರುವ ತೃಪ್ತಿಯಿದೆ. ಹುಟ್ಟಿದ ನಾಡಿನಲ್ಲಿಯೇ ಸೇವೆ ಸಲ್ಲಿಸುವ ಅವಕಾಶವೂ ಸಿಕ್ಕಿದೆ

ಅಧ್ಯಯನವೇ ಇಲ್ಲಿಗೆ ಕರೆತಂದಿದೆ

ಹೆಸರು: ಟಿ. ವಿಜಯ್ ಕುಮಾರ್
ಊರು: ಚೋರನೂರು, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ

894 ರ‍್ಯಾಂಕ್



ಹಿನ್ನೆಲೆ: ತಂದೆ ರೈತ ಟಿ. ಅಡವಿಯಪ್ಪ ಮತ್ತು ತಾಯಿ ಶಿಕ್ಷಕಿ ಮಣಿಯಮ್ಮ. ಶಾಲಾ ಶಿಕ್ಷಣವನ್ನು ಚೋರನೂರು ಗ್ರಾಮದಲ್ಲಿ ಮತ್ತು ಕೂಡ್ಲಿಗಿಯ ನವೋದಯ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಇಂಡಸ್ಟ್ರಿಯಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ಕೆಎಸ್‌ಪಿಎಸ್ ಪೂರ್ಣಗೊಳಿಸಿ ಡಿವೈಎಸ್ಪಿಯಾಗಿ ಕೊಪ್ಪಳ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಒಂದೂವರೆ ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದರು. 2023ರಲ್ಲಿ ಯುಪಿಎಸ್‌ಸಿ ಪರೀಕ್ಷೆ ಪಾಸಾಗಿ ರೈಲ್ವೆ ಇಲಾಖೆಗೆ ಸೇರಿದರು. 2024ರಲ್ಲಿಯೂ ಅವರು ಉತ್ತೀರ್ಣರಾಗಿದ್ದಾರೆ.

ಅಭಿಪ್ರಾಯ: ಓದದೇ ಮುಂದೆ ಬರುತ್ತೇನೆ ಎನ್ನುವ ಕಾಲ ಇದಲ್ಲ. ಯಾವುದೇ ಕ್ಷೇತ್ರವಾದರೂ ಈಗ ಹೆಚ್ಚಿನ ಅಧ್ಯಯನ ಬೇಕೇ ಬೇಕು. ನಾನು ನನ್ನ ಪರೀಕ್ಷೆಗಳಿಗಾಗಿ ನಿತ್ಯ ಕನಿಷ್ಠ 4ರಿಂದ 10 ಗಂಟೆ ಓದುತ್ತಿದ್ದೆ. ಅಧ್ಯಯನವೇ ನನ್ನನ್ನು ಇಲ್ಲಿಗೆ ಕರೆತಂದಿದೆ. ಯಪಿಎಸ್‌ಸಿಯಲ್ಲಿ ನಾನು 8 ಬಾರಿ ಪ್ರಯತ್ನ ಮಾಡಿದ್ದೇನೆ.

ಐಎಫ್‌ಎಸ್ ಬಿಡಲ್ಲ

976 ರ‍್ಯಾಂಕ್



ಹೆಸರು: ಜಿ.ರಶ್ಮಿ
ಊರು: ಕನಕದಾಸನಗರ, ಮೈಸೂರು
ಹಾಲಿ ಹುದ್ದೆ: ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್)

ಹಿನ್ನೆಲೆ: ಕನಕದಾಸ ನಗರದ ಗಂಗರಾಮ್ ಹಾಗೂ ರತ್ನಮ್ಮ ದಂಪತಿ ಪುತ್ರಿ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಕುವೆಂಪು ನಗರದ ಬಿಜಿಎಸ್ ಬಾಲಜಗತ್ ಶಾಲೆ. ಮರಿಮಲ್ಲಪ್ಪ ಕಾಲೇಜಿನಲ್ಲಿ ಪಿಯು ಹಾಗೂ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ ಸಿವಿಲ್ ಪದವಿ.

ಅಭಿಪ್ರಾಯ: ಪದವಿ ವಿದ್ಯಾರ್ಥಿನಿಯಾಗಿದ್ದಾಗಿನಿಂದಲೂ ನಾಗರಿಕ ಸೇವಾ ಪರೀಕ್ಷೆಗಳಿಗೆ ತಯಾರಿ ನಡೆಸಿದ್ದೇನೆ. 2022ರಲ್ಲಿ ಐಎಫ್‌ಎಸ್ ಪರೀಕ್ಷೆ ಪಾಸು ಮಾಡಿದ್ದು, ಸದ್ಯ ಒಡಿಶಾ ರಾಜ್ಯದ ಖೊರ್ದಾ ಜಿಲ್ಲೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವೆ. ಇದೀಗ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ 976ನೇ ರ‍್ಯಾಂಕ್ ಬಂದಿದೆ. ಐಎಫ್‌ಎಸ್ ಅಲ್ಲೇ ಮುಂದುವರಿಯುವೆ.

ಕೋಚಿಂಗ್ ಪಡೆಯದೆ ಪಾಸ್

ಹೆಸರು: ಎ.ಸಿ.ಪ್ರೀತಿ
ವಿದ್ಯಾರ್ಹತೆ: ಎಂ.ಎಸ್ಸಿ
ಊರು: ಅಂಕನಹಳ್ಳಿ, ಮೈಸೂರು

263 ರ‍್ಯಾಂಕ್



ಹಿನ್ನೆಲೆ: ಸಾಲಿಗ್ರಾಮ ತಾಲ್ಲೂಕಿನ ಮಾಯಿಗೌಡನಹಳ್ಳಿ- ಅಂಕನಹಳ್ಳಿಯ ಕೃಷಿಕರಾದ ಚನ್ನಬಸಪ್ಪ, ನೇತ್ರಾವತಿ ದಂಪತಿ ಪುತ್ರಿ. 10ನೇ ತರಗತಿವರೆಗೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಓದಿದರು. ನಂತರ, ಕೆ.ಆರ್.ನಗರ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಸೇರ್ಪಡೆ. ಮಂಡ್ಯದ ವಿಸಿ ಫಾರಂನಲ್ಲಿ ಕೃಷಿ ಬಿಎಸ್‌ಸಿ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಎಂಎಸ್ಸಿ ಪದವಿ.

ಅಭಿಪ್ರಾಯ: 'ನಮ್ಮದು ಬಡ ಕೃಷಿಕ ಕುಟುಂಬ. ತಂದೆ ಕೃಷಿಕರು ಹಾಗೂ ಬಿಡುವಿನಲ್ಲಿ ಅಡುಗೆಭಟ್ಟರ ಕೆಲಸ ಮಾಡುತ್ತಿದ್ದರು. ಪೋಷಕರ ಬೆಂಬಲ ಹಾಗೂ ಪ್ರೋತ್ಸಾಹವೇ ಇಲ್ಲಿಯವರೆಗೂ ಕರೆತಂದಿದೆ. 3ನೇ ಪ್ರಯತ್ನದಲ್ಲಿ ಉತ್ತೀರ್ಣಳಾಗಿದ್ದೇನೆ. ಪದವಿ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದೆ. ಹಣ ವ್ಯರ್ಥ ಮಾಡಬಾರದೆಂದು ನಿರ್ಧರಿಸಿ, ಎಲ್ಲಿಯೂ ಕೋಚಿಂಗ್ ಪಡೆಯಲಿಲ್ಲ. ಹೈದರಾಬಾದ್‌ನಲ್ಲಿ ಪಿಜಿಯಲ್ಲಿ ಉಳಿದು, ಅಲ್ಲಿನ ಗ್ರಂಥಾಲಯಗಳಲ್ಲಿ ಓದುತ್ತಿದ್ದೆ. ಈಗಾಗಲೇ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಸಲಹೆಯನ್ನೂ ಪಡೆದಿದ್ದೆ.'

ಐದನೇ ಪ್ರಯತ್ನದಲ್ಲಿ ಉತ್ತೀರ್ಣ

ಹೆಸರು: ಪಾಂಡುರಂಗ ಕಂಬಳಿ
ಊರು: ಅಕ್ಕಿಮರಡಿ ಗ್ರಾಮ, ಮುಧೋಳ ತಾಲ್ಲೂಕು, ಬಾಗಲಕೋಟೆ

529 ರ‍್ಯಾಂಕ್



ಹಿನ್ನೆಲೆ: ತಂದೆ ಸದಾಶಿವ ಮತ್ತು ತಾಯಿ ಸುರೇಖಾ ಕಂಬಳಿ ಕೃಷಿಕರು. ಶಾಲಾ ಶಿಕ್ಷಣವನ್ನು ಸೈದಾಪುರದ ಶಿವಲಿಂಗೇಶ್ವರ ಶಾಲೆಯಲ್ಲಿ ಕುಳಗೇರಿಯ ನವೋದಯ ಶಾಲೆಯಲ್ಲಿ ಪೂರ್ಣಗೊಳಿಸಿದರು. ಯಲ್ಲಟ್ಟಿಯ ಕೊಣ್ಣೂರ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣ ಪಡೆದರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಎರಡು ವರ್ಷ ನೌಕರಿ ಮಾಡಿ, ನಂತರ ಉದ್ಯೋಗ ತೊರೆದರು. 2023ರ ನವೆಂಬರ್ ನಲ್ಲಿನ ಯುಪಿಎಸ್‌ಸಿ (ಭಾರತೀಯ ಅರಣ್ಯ ಸೇವೆ) ಪರೀಕ್ಷೆಯಲ್ಲಿ 42ನೇ ರ‍್ಯಾಂಕ್ ಪಡೆದರು.

ಅಭಿಪ್ರಾಯ: 'ನಾಲ್ಕನೇ ಪ್ರಯತ್ನದಲ್ಲಿ ಐಎಫ್‌ಎಸ್ ಸಿಕ್ಕಿತ್ತು. ನೌಕರಿಗೆ ಸೇರ್ಪಡೆಯಾಗಿ ರಜೆ ತೆಗೆದುಕೊಂಡು ಮತ್ತೆ ಓದಲು ಆರಂಭಿಸಿದ್ದೆ. ಐದನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದು ಖುಷಿ ತಂದಿದೆ. ನಿರಂತರ ಅಧ್ಯಯನ ಕೈಗೊಂಡರೆ ಯಶಸ್ಸು ಸಾಧಿಸಬಹುದು.'

ಎಂಟನೇ ಪ್ರಯತ್ನದಲ್ಲಿ ಪಾಸಾಗಿದ್ದೇನೆ

ಹೆಸರು: ಅಜಯಕುಮಾರ್
ವಿದ್ಯಾರ್ಹತೆ: ಎಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಪದವಿ (ಸಾರ್ವಜನಿಕ ಆಡಳಿತ ಮತ್ತು ಸಂಸ್ಕೃತ)
ಊರು: ರಾಮನಗರ

895 ರ‍್ಯಾಂಕ್



ಹಾಲಿ ಹುದ್ದೆ: ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ

ಕೌಟುಂಬಿಕ ಹಿನ್ನೆಲೆ: ತಂದೆ ಆದಿಶೇಷ ಬಿ. ಅವರು ಆದಿಚುಂಚನಗಿರಿಯ ಕಾಲಭೈರವೇಶ್ವರ ವೇದ ಆಗಮ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಅಧೀಕ್ಷಕರಾಗಿ ನಿವೃತ್ತಿ. ತಾಯಿ ನಾಗರತ್ನ ಗೃಹಿಣಿ. ಇಬ್ಬರು ಸಹೋದರಿಯರಿದ್ದು, ಒಬ್ಬರು ರಾಮನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಅಭಿಪ್ರಾಯ: 'ಯುಪಿಎಸ್‌ಸಿ ಪರೀಕ್ಷೆಯನ್ನು ಎಂಟು ಸಲ ಎದುರಿಸಿ, 8ನೇ ಪ್ರಯತ್ನದಲ್ಲಿ ಪಾಸಾಗಿದ್ದೇನೆ. ನನ್ನ ಈ ಸಾಧನೆಗೆ ನನ್ನ ತಂದೆ ಹಾಗೂ ಉಪ ತಹಶೀಲ್ದಾರರಾಗಿ ನಿವೃತ್ತರಾಗಿದ್ದ ತಾತ ಜಿ. ಬೋರಯ್ಯ ಅವರೇ ಸ್ಫೂರ್ತಿ. ಕಾಲೇಜು ಶಿಕ್ಷಣ ಮುಗಿದ ಬಳಿಕ ದೆಹಲಿಯ ವಾಜಿರಾಂ, ದಿಗ್ಮನಿ, ಪವನ್ ಕುಮಾರ್ ಐಎಎಸ್ ಕೋಚಿಂಗ್ ಸೆಂಟರ್ ಹಾಗೂ ಕರ್ನಾಟಕದ ಅಕ್ಕಾ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದೆ. ಜೊತೆಗೆ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಪಿ. ಮಣಿವಣ್ಣನ್ ಅವರ ಮಾರ್ಗದರ್ಶನ ನನಗೆ ತುಂಬಾ ಉಪಯುಕ್ತವಾಯಿತು.'

ಪಾಠ ಮಾಡುತ್ತಲೇ ಪಾಸ್

ಹೆಸರು: ಮೋಹನ್ ಎಸ್.ಪಾಟೀಲ
ಊರು: ಡೋರ ಜಂಬಗಾ (ಕಲಬುರಗಿ ಜಿಲ್ಲೆ, ಕಮಲಾಪುರ ತಾಲ್ಲೂಕು)

984 ರ‍್ಯಾಂಕ್



ಹಿನ್ನೆಲೆ: ಗುತ್ತಿಗೆದಾರ ಸಂಗಣಗೌಡ ಪಾಟೀಲ ಮತ್ತು ಸವಿತಾ ದಂಪತಿಯ ಮಗ ಮೋಹನ್. ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಬೆಂಗಳೂರಿನ ಆರ್.ವಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪೂರ್ಣಗೊಳಿಸಿದರು. ಬೆಂಗಳೂರಿನ ಕ್ರಿಯೇಟಿವ್ ಐಎಎಸ್ ಸೆಂಟರ್‌ನಲ್ಲಿ ಅಭ್ಯರ್ಥಿಗಳಿಗೆ ಬೋಧಿಸುತ್ತಲೇ ಯುಪಿಎಸ್‌ಸಿಗೆ ಸಿದ್ಧತೆ ಮಾಡಿಕೊಂಡು, 5ನೇ ಪ್ರಯತ್ನದಲ್ಲಿ ಯಶಸ್ವಿಯಾದರು.

ಅಭಿಪ್ರಾಯ: ಯುಪಿಎಸ್‌ಸಿ ಪಾಸ್ ಮಾಡುವುದು ನಮ್ಮ ಭಾಗದವರಿಂದ ಆಗುವುದಿಲ್ಲ ಎಂಬ ಮನಸ್ಥಿತಿ ಬಹಳಷ್ಟು ಜನರಲ್ಲಿದೆ. ಶಾಲಾ ಹಂತದಿಂದಲೇ ಓದುವ ಅಭಿರುಚಿಯನ್ನು ಬೆಳೆಸಿಕೊಂಡರೆ ಕಲಬುರಗಿಯವರೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸ್ ಮಾಡಬಲ್ಲರು ಎಂಬುದನ್ನು ನಿರೂಪಿಸಿದ ಖುಷಿ ಇದೆ.

ಮೊದಲ ಪ್ರಯತ್ನದಲ್ಲೇ ಯಶಸ್ಸು!

ಹೆಸರು: ವಿ. ವಿಕಾಸ್
ಊರು: ಸಾಗರ (ಶಿವಮೊಗ್ಗ ಜಿಲ್ಲೆ)

288 ರ‍್ಯಾಂಕ್



ಹಿನ್ನೆಲೆ: ಸಾಗರದ ಕಾಗೋಡು ತಿಮ್ಮಪ್ಪ ನಗರದ ಅಣಲೆಕೊಪ್ಪ ಬಡಾವಣೆ ನಿವಾಸಿ, ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ವಿಜಯೇಂದ್ರ ಸಿ.ಪಾಟೀಲ ಹಾಗೂ ಶಿಕ್ಷಕಿ ಮಹಾಲಕ್ಷ್ಮಿ ಹೆಗಡೆ ದಂಪತಿ ಪುತ್ರ. ಐಐಟಿ ರೂರ್ಕಿಯಲ್ಲಿ (ಇ ಆ್ಯಂಡ್ ಇ) ಎಂ.ಟೆಕ್ ಪದವಿ. 27 ವರ್ಷದ ವಿಕಾಸ್‌ಗೆ ಮೊದಲ ಪ್ರಯತ್ನದಲ್ಲಿಯೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು.

ಅಭಿಪ್ರಾಯ: ಮಗನಿಗೆ ಮೊದಲ ತರಗತಿಯಿಂದ ಪದವಿವರೆಗೆ ಕಲಿಸಿದ ಎಲ್ಲ ಗುರುಗಳ ಆಶೀರ್ವಾದ ಹಾಗೂ ಏನಾದರೂ ಮಹತ್ವವಾದದ್ದನ್ನು ಸಾಧಿಸಬೇಕು ಎಂಬ ಆತನ ಛಲ ಈ ಸಾಧನೆಗೆ ಪ್ರೇರಣೆಯಾಗಿದೆ ಎನ್ನುತ್ತಾರೆ ವಿಕಾಸ್ ತಂದೆ ವಿಜಯೇಂದ್ರ ಸಿ.ಪಾಟೀಲ.

ಐಪಿಎಸ್ ಹುದ್ದೆ ದೊರೆಯುವ ನಿರೀಕ್ಷೆ ಇದೆ

ಹೆಸರು: ರಾಹುಲ್ ಯರಂತೇಲಿ
ಊರು: ಮುದ್ದೇಬಿಹಾಳ, ವಿಜಯಪುರ ಜಿಲ್ಲೆ
ಶಿಕ್ಷಣ: ಬಿಇ ಕಂಪ್ಯೂಟರ್ ಸೈನ್ಸ್

462 ರ‍್ಯಾಂಕ್



ಕೌಟಂಬಿಕ ಹಿನ್ನೆಲೆ: ತಂದೆ, ಶಿಕ್ಷಕ ಚೆನ್ನಪ್ಪ ಯರಂತೇಲಿ ಮತ್ತು ತಾಯಿ ಸುಮಿತ್ರಾ ಗೃಹಿಣಿ. ರಾಹುಲ್ ಅವರು ಇಣಚಗಲ್ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ, ಆಲಮಟ್ಟಿ ಜವಾಹರ ನವೋದಯವಿದ್ಯಾಲಯದಲ್ಲಿ 6-12ನೇ ತರಗತಿ ಓದಿದ್ದಾರೆ. ಬೆಂಗಳೂರಿನ ಎಂಯುಜೆ ಕಾಲೇಜಿನಲ್ಲಿ ಓದಿದ್ದಾರೆ.

ಅಭಿಪ್ರಾಯ: 'ಇದು ನನ್ನ ಆರನೇ ಪ್ರಯತ್ನವಾಗಿತ್ತು. ಮೂರು ಬಾರಿ ಮುಖ್ಯಪರೀಕ್ಷೆ ಬರೆದಿದ್ದೆ. ಆದರೆ, ವಿಫಲನಾಗಿದ್ದೆ. ನಾಲ್ಕನೇ ಬಾರಿ ಮುಖ್ಯಪರೀಕ್ಷೆ ಉತ್ತೀರ್ಣನಾಗಿ ಸಂದರ್ಶನ ಮುಗಿಸಿದ್ದು, 462ನೇ ರ‍್ಯಾಂಕ್ ಬಂದಿದೆ. ಹುದ್ದೆಯ ಬಗ್ಗೆ ಇರುವ ಆಸಕ್ತಿ, ಗೌರವದಿಂದ ಸಾರ್ವಜನಿಕ ಸೇವೆ ಮಾಡಲು ಈ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದೇನೆ. ಐಪಿಎಸ್ ಹುದ್ದೆ ದೊರೆಯುವ ನಿರೀಕ್ಷೆ ಇದೆ.'

ಮತ್ತೊಂದು ಪ್ರಯತ್ನ ಮಾಡುತ್ತೇನೆ

ಹೆಸರು: ಎ.ಮಧು
ವಿದ್ಯಾರ್ಹತೆ: ಬಿ.ಎಸ್ಸಿ (ಕೃಷಿ)
ಊರು: ಇರಗಸಂದ್ರ, ಕೋಲಾರ ತಾಲ್ಲೂಕು
ಹಾಲಿ ಹುದ್ದೆ: ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ

544 ರ‍್ಯಾಂಕ್



ಹಿನ್ನೆಲೆ: ತಂದೆ ಆನಂದ್ ಗೌಡ ಹಾಗೂ ತಾಯಿ ಸುಶೀಲಮ್ಮ ಕೃಷಿಕರು. ತರಕಾರಿ ಬೆಳೆದು ಜೀವನ ಸಾಗಿಸುತ್ತಿದ್ದಾರೆ.

ಅಭಿಪ್ರಾಯ: 'ಪಿಯುಸಿ ಬಳಿಕ ವೈದ್ಯಕೀಯ ಕೋರ್ಸ್ ಮಾಡಬೇಕೆಂದುಕೊಂಡಿದ್ದೆ. ಆದರೆ, ಸೀಟು ಸಿಗಲಿಲ್ಲ. ಆಗಲೇ ಯುಪಿಎಸ್‌ಸಿಯಲ್ಲಿ ಉತ್ತೀರ್ಣನಾಗಿ ಐಎಎಸ್ ಅಧಿಕಾರಿ ಆಗಬೇಕೆಂಬ ಛಲ ಮೂಡಿತು. ಆದರೆ, ಸತತ ನಾಲ್ಕು ಪ್ರಯತ್ನ ಹಾಕಿದರೂ ಉತ್ತೀರ್ಣನಾಗಲು ಸಾಧ್ಯವಾಗಿಲಿಲ್ಲ. ಐದನೇ ಯತ್ನದಲ್ಲಿ ಉತ್ತೀರ್ಣನಾಗಿದ್ದೇನೆ. ರ‍್ಯಾಂಕ್ ಬಂದಿರುವುದು ಸಂತೋಷ ಉಂಟು ಮಾಡಿದ್ದರೂ ಮತ್ತೊಂದು ಪ್ರಯತ್ನ ಮಾಡುತ್ತೇನೆ.'

ಡಿ.ಸಿ ಆಗಬೇಕು, ಮತ್ತೆ ಪರೀಕ್ಷೆ ಬರೆಯುವೆ

ಹೆಸರು: ಹನುಮಂತಪ್ಪ ನಂದಿ
ಊರು: ಕೊಡ್ಲಿವಾಡ, ಯರಗಟ್ಟಿ ತಾಲ್ಲೂಕು, ಬೆಳಗಾವಿ ಜಿಲ್ಲೆ

910 ರ‍್ಯಾಂಕ್



ಹಿನ್ನೆಲೆ: ಕೃಷಿ ಕುಟುಂಬ. 2 ಎಕರೆ ಹೊಲವಿದೆ.ಕಿರಿಯ ಸಹೋದರ ಆನಂದ ಅವರು ಕುರಿ ಕಾಯುತ್ತ ಹನುಮಂತ ಅವರ ಓದಿಗೆ ನೆರವಾಗಿದ್ದಾರೆ. ಶಾಲಾ ಶಿಕ್ಷಣವನ್ನು ಕೊಡ್ಲಿವಾಡದ ಸರ್ಕಾರಿ ಶಾಲೆಯಲ್ಲಿ ಸತ್ತಿಗೇರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಪೂರ್ಣಗೊಳಿಸಿದರು. ಧಾರವಾಡದ ಕೆಸಿಡಿಯಲ್ಲಿ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯು ರ‍್ಯಾಂಕ್ ಸಮೇತ ಪಾಸಾದರು. ಬೆಳಗಾವಿಯ ಜಿಐಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಮುಗಿಸಿದ ಬಳಿಕ, ಯುಪಿಎಸ್‌ಸಿಗೆ ಸಿದ್ಧತೆ ನಡೆಸಿದರು.

ಅಭಿಪ್ರಾಯ: 'ನನಗೆ 500ನೇ ರ‍್ಯಾಂಕ್ ಒಳಗೆ ಬರಬೇಕು ಎಂಬ ಆಸೆ ಇದೆ. ಸದ್ಯ 8ನೇ ಪ್ರಯತ್ನದಲ್ಲಿ 910ನೇ ರ‍್ಯಾಂಕ್ ಪಡೆದಿದ್ದೇನೆ. ರೈಲ್ವೆಯಲ್ಲಿ ಉದ್ಯೋಗ ಸಿಗಬಹುದು. ಆದರೆ, ನನ್ನ ಗುರಿ ಜಿಲ್ಲಾಧಿಕಾರಿ ಆಗುವುದು. ಅದಕ್ಕಾಗಿ ಇನ್ನಷ್ಟು ಶ್ರಮ ಪಡುತ್ತೇನೆ. ಮತ್ತೆ ಪರೀಕ್ಷೆ ಬರೆಯುತ್ತೇನೆ.'

ಡಿ.ಕೆ.ರವಿ ಸಾಧನೆ ನನಗೆ ಸ್ಫೂರ್ತಿ

ಹೆಸರು: ಡಾ.ಆರ್.ಮಾಧವಿ
ವಿದ್ಯಾರ್ಹತೆ: ಎಂಬಿಬಿಎಸ್
ಊರು: ಶ್ರೀನಿವಾಸಪುರ, ಕೋಲಾರ
ಹಾಲಿ ಹುದ್ದೆ: ಆನೇಕಲ್‌ನಲ್ಲಿರುವ ಎನ್‌ಜಿಒನಲ್ಲಿ ವೈದ್ಯಕೀಯ ಅಧಿಕಾರಿ

446 ರ‍್ಯಾಂಕ್



ಹಿನ್ನೆಲೆ: ತಂದೆ ರವಿಕುಮಾರ್ ಮೋತಕಪಳ್ಳಿಯ ಸರ್ಕಾರಿ ಶಾಲೆಯಲ್ಲಿ ಮುಖ್ಯಶಿಕ್ಷಕ ಹಾಗೂ ತಾಯಿ ನಂದಿನಿ ಅವರು ಜೋಡಿಲಕ್ಷ್ಮಿಸಾಗರದಲ್ಲಿ ಶಾಲಾ ಶಿಕ್ಷಕಿ. ಮಾಧವಿ ಅವರ ತಂಗಿ ಆರ್.ಶ್ರೀನಿಧಿ ಕೂಡ ವೈದ್ಯೆ.

ಅಭಿಪ್ರಾಯ: 'ಫಲಿತಾಂಶ ಸಹಜವಾಗಿಯೇ ಖುಷಿ ತಂದಿದೆ. ನಾಲ್ಕನೇ ಪ್ರಯತ್ನದಲ್ಲಿ ನನಗೆ ಯಶಸ್ಸು ಸಿಕ್ಕಿದೆ. ಚಿಕ್ಕ ವಯಸ್ಸಿನಲ್ಲೇ ಯುಪಿಎಸ್‌ಸಿ ಪರೀಕ್ಷೆ ಬರೆಯುವ ಆಸಕ್ತಿ ಮೂಡಿತ್ತು. ಪೋಷಕರು ಹಾಗೂ ಕೋಲಾರ ಜಿಲ್ಲಾಧಿಕಾರಿಯಾಗಿದ್ದ ದಿವಂಗತ ಡಿ.ಕೆ.ರವಿ ನನಗೆ ಸ್ಫೂರ್ತಿ. ಐಎಎಸ್ ಅಧಿಕಾರಿ ಆಗಬೇಕೆಂದುಕೊಂಡಿದ್ದು, ಆ ನಿಟ್ಟಿನಲ್ಲಿ ಮತ್ತೊಮ್ಮೆ ಯುಪಿಎಸ್‌ಸಿ ಪರೀಕ್ಷೆ ಬರೆದು ರ‍್ಯಾಂಕ್ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೇನೆ.'

ಯಶಸ್ಸು ತಂದ 'ಪ್ರಜಾವಾಣಿ' ಓದು

ಹೆಸರು: ಡಾ.ಮಹೇಶ ಮಡಿವಾಳರ
ಊರು: ಹೊನ್ನಳ್ಳಿ ಗ್ರಾಮ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ

482 ರ‍್ಯಾಂಕ್



ಹಿನ್ನೆಲೆ: ತಂದೆ ರೇವಣಸಿದ್ಧ ಮಡಿವಾಳರ ಕೃಷಿಕರು. ತಾಯಿ ಯುಮುನಾಬಾಯಿ ಗೃಹಿಣಿ. ಶಾಲಾ ಶಿಕ್ಷಣವನ್ನು ಹೊನ್ನಳ್ಳಿ ಮತ್ತು ಹೊರ್ತಿಯಲ್ಲಿ ಪೂರ್ಣಗೊಳಿಸಿದರು. ಪಿಯು ಶಿಕ್ಷಣ ವಿಜಯಪುರದ ಎಂ.ಡಿ.ಆರ್.ಎಸ್ ಕಾಲೇಜಿನಲ್ಲಿ, ವೈದ್ಯಕೀಯ ಶಿಕ್ಷಣ ಹಾಸನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪೂರ್ಣಗೊಳಿಸಿದರು. ಸದ್ಯಕ್ಕೆ ಮುದ್ದೇಬಿಹಾಳ ತಾಲ್ಲೂಕು ಮಡಿಕೇಶ್ವರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಡಳಿತ ವೈದ್ಯಾಧಿಕಾರಿ ಆಗಿದ್ದಾರೆ.

ಅಭಿಪ್ರಾಯ: 'ನನಗೆ ಮೊದಲಿನಿಂದಲೂ 'ಪ್ರಜಾವಾಣಿ' ಅಚ್ಚುಮೆಚ್ಚು. ಅದರಲ್ಲಿ ಬರುವ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತಾದ ಮಾಹಿತಿ ತಪ್ಪದೇ ಓದುತ್ತಿದ್ದೆ. ಫಲಿತಾಂಶ ಖುಷಿ ತಂದಿದೆ. ಒಬಿಸಿ ಕೆಟಗರಿಯಲ್ಲಿ ಬರುವ ಕಾರಣ ನನಗೆ ಐಪಿಎಸ್ ಹುದ್ದೆ ಸಿಗುವವಿಶ್ವಾಸ ಇದೆ. ಐಪಿಎಸ್ ಆದರೂ ಅಲ್ಲಿಯೂ ಮತ್ತಷ್ಟು ಅಧ್ಯಯನ ಮಾಡಿ ಐಎಎಸ್ ಮಾಡಿ ಸಾರ್ವಜನಿಕ ಸೇವೆಗೆ ತೊಡಗಿಕೊಳ್ಳಬೇಕು ಎಂಬುದು ನನ್ನ ಗುರಿ.

ಕನ್ನಡ ಐಚ್ಛಿಕ ವಿಷಯದಲ್ಲಿ ಯಶಸ್ಸು

ಹೆಸರು: ಡಾ.ಎಲ್.ದಯಾನಂದ ಸಾಗರ್
ಊರು: ಮಾದೇನಹಳ್ಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

615 ರ‍್ಯಾಂಕ್



ಹಿನ್ನೆಲೆ: 5ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ದಯಾನಂದ ಸಾಗರ್ ಅವರಿಗೆ ಕನ್ನಡ ಭಾಷೆಯ ಮೇಲೆ ಅತೀವ ವ್ಯಾಮೋಹ. ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಎಂಬಿಬಿಎಸ್ ಹಾಗೂ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ಮನೋವೈದ್ಯರಾಗಿ 2 ವರ್ಷ ಸೇವೆ ಸಲ್ಲಿಸಿದ ಇವರು ಶಿವಮೊಗ್ಗದ ಸುಬ್ಬಯ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಭಾಷೆಯನ್ನೇ ಯುಪಿಎಸ್‌ಸಿ ಪರೀಕ್ಷೆಗೆ ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡು ಯಶಸ್ಸು ಪಡೆದಿದ್ದಾರೆ.

ಅಭಿಪ್ರಾಯ: 'ನಿವಾಸಿ ವೈದ್ಯರ ಸಂಘದ ರಾಜ್ಯ ಘಟಕದ ಅಧ್ಯಕ್ಷನಾಗಿದ್ದ ಸಂದರ್ಭ ಉಂಟಾದ ಅನುಭವಗಳು ನಾಗರಿಕ ಸೇವೆಯತ್ತ ಆಸಕ್ತಿ ಮೂಡಿಸಿತು. 2023ರಲ್ಲಿ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿದ್ದೆ. ಕೋಚಿಂಗ್ಗೆ ಹೋಗದೇ ಸ್ವಯಂ ಅಭ್ಯಾಸ ಮಾಡಿದ್ದೇನೆ. ಮುಖ್ಯ ಪರೀಕ್ಷೆಗೆ 2 ತಿಂಗಳು ರಜೆ ಪಡೆದಿದ್ದೆ. ಕನ್ನಡ ಭಾಷೆಯ ಮೇಲಿನ ಪ್ರೀತಿ ಯುಪಿಎಸ್‌ಸಿ ಪರೀಕ್ಷೆಯ ಗುರಿ ಮುಟ್ಟಿಸಿದೆ.'

ನಿತ್ಯ ಶಿಸ್ತುಬದ್ಧ ಅಧ್ಯಯನ

ಹೆಸರು: ಧನ್ಯಾ ಕೆ.ಎಸ್.
ಊರು: ಸಕಲೇಶಪುರ

982 ರ‍್ಯಾಂಕ್



ಹಿನ್ನೆಲೆ: ನಿಟ್ಟೆ ಎಂಜಿನಿಯರಿಂಗ್ ಕಾಲೇಜಿನಿಂದ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಪದವಿ. ತಂದೆ ಟಿ. ಸುಬ್ರಹ್ಮಣ್ಯ ಸಾಂಬಾರು ಮಂಡಳಿಯ ನಿವೃತ್ತ ಸಹಾಯಕ ನಿರ್ದೇಶಕ, ತಾಯಿ ವಿಜಯಕುಮಾರಿ ಕೋರ್ಟ್‌ನಲ್ಲಿ ಶಿರಸ್ತೇದಾರರು.

ಅಭಿಪ್ರಾಯ: ಮೊದಲ ಎರಡು ಪ್ರಯತ್ನದಲ್ಲಿ ಪ್ರಾಥಮಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಲಿಲ್ಲ. ನಿತ್ಯ ಶಿಸ್ತುಬದ್ಧ ಅಧ್ಯಯನ, ಪತ್ರಿಕೆ, ಗ್ರಂಥಾಲಯದ ಪುಸ್ತಕಗಳನ್ನು ಓದುವ ಮೂಲಕ ಮೂರನೇ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿದೆ.

'ಜಾತಿ ಆಧಾರಿತ ತಾರತಮ್ಯ ಇಲ್ಲವಾಗಿಸಿ'

ಅಲಿಗಢ (ಪಿಟಿಐ): 'ಜಾತಿ ಆಧಾರಿತ ತಾರತಮ್ಯವು ಸಮಾಜದ ಒಗ್ಗಟ್ಟನ್ನು ಕುಂದಿಸುವ ವಿಭಜಕ ಶಕ್ತಿಯಾಗಿದೆ. ಆದ್ದರಿಂದ ಸಮಾಜದಲ್ಲಿರುವ ಜಾತಿ ಆಧಾರಿತ ತಾರತಮ್ಯವನ್ನು ಇಲ್ಲವಾಗಿಸುವ ಕಾರ್ಯದಲ್ಲಿ ತೊಡಗಿಕೊಳ್ಳಿ' ಎಂದು ರಾಷ್ಟ್ರೀಯ ಸ್ವಯಂ ಸೇವಾ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ತಮ್ಮ ಪ್ರಚಾರಕರಿಗೆ ಕರೆ ನೀಡಿದರು.

ಮೋಹನ್ ಭಾಗವತ್ ಅವರು ಐದು ದಿನಗಳ ಭೇಟಿಗಾಗಿ ಅಲಿಗಢಕ್ಕೆ ಬಂದಿದ್ದರು. ಸೋಮವಾರವು ಅವರ ಭೇಟಿಯ ಕೊನೆಯ ದಿನವಾಗಿತ್ತು. ಅಂದು ತಮ್ಮ ಕಾರ್ಯಕರ್ತರೊಂದಿಗೆ ಅವರು ಮಾತುಕತೆ ನಡೆಸಿದ್ದರು. ಇದೇ ವೇಳೆ ಅವರು ಹಲವು ವಿಚಾರಗಳ ಬಗ್ಗೆ ಕಾರ್ಯಕರ್ತರೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದರು. 'ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಸಮಾಜ ನಿರ್ಮಾಣಕ್ಕಾಗಿ, ಸಾಮಾಜಿಕವಾಗಿ ಒಗ್ಗಟ್ಟಿನಿಂದ ಇರುವ ಬಗ್ಗೆ ಅಡಿಪಾಯ ಹಾಕಿದ್ದರು' ಎಂದು ಅಭಿಪ್ರಾಯಪಟ್ಟರು.

ಇನ್‌ಸೈಟ್ಸ್ ಐಎಎಸ್‌ಗೆ ಉತ್ತಮ ರ‍್ಯಾಂಕ್

ಪ್ರಜಾವಾಣಿ ವಾರ್ತೆ

'ಇನ್‌ಸೈಟ್ಸ್ ಐಎಎಸ್' ಅಕಾಡೆಮಿಯಲ್ಲಿ ತರಬೇತಿ ಪಡೆದ ದೇಶದ 220 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಕಂಡಿದ್ದಾರೆ.

ಅರ್ಹತೆ ಪಡೆದ ಕರ್ನಾಟಕದ ಅಭ್ಯರ್ಥಿಗಳಲ್ಲಿ 20ಕ್ಕೂ ಹೆಚ್ಚು ಅಭ್ಯರ್ಥಿಗಳು ಇನ್‌ಸೈಟ್ಸ್ ಐಎಎಸ್ ವಿದ್ಯಾರ್ಥಿಗಳು. 100ರ ಒಳಗಿನ ಸ್ಥಾನ ಪಡೆದ ರಂಗಮಂಜು, ಡಾ.ಸಚಿನ್, ಬಸವರಾಜ ಗುತ್ತೂರ್, ಅನುಪ್ರಿಯ ಸಕ್ಯಾ ಅವರು ಇನ್‌ಸೈಟ್ಸ್ ಸಂಸ್ಥಾಪಕ ವಿನಯ್‌ಕುಮಾರ್ ಜಿ.ಬಿ. ಅವರ ಮಾರ್ಗದರ್ಶನ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆ ಹೇಳಿದೆ.

ನಿಗದಿತ ವೇಳಾಪಟ್ಟಿ, ಶಿಸ್ತುಬದ್ಧ ತರಗತಿಗಳು, ಗುಣಮಟ್ಟದ ಮಾರ್ಗದರ್ಶನ, ಉತ್ತರ ಬರೆಯುವ ಕೌಶಲ ವೃದ್ಧಿ ಇನ್‌ಸೈಟ್ಸ್ ವೈಶಿಷ್ಟ್ಯ. 'ಇಂಟಿಗ್ರೇಟೆಡ್ ಕೋಚಿಂಗ್' ಮಾದರಿಯಲ್ಲಿ ಅಭ್ಯರ್ಥಿಗಳನ್ನು ಸಜ್ಜುಗೊಳಿಸಲಾಗುತ್ತಿದೆ. 2028ರ ವೇಳೆಗೆ ಕರ್ನಾಟಕದಿಂದ ಪ್ರತಿ ವರ್ಷ ಕನಿಷ್ಠ 100 ಅಭ್ಯರ್ಥಿಗಳನ್ನು ಐಎಎಸ್, ಐಪಿಎಸ್‌ಗೆ ಕೊಡುಗೆ ನೀಡುವ ಗುರಿ ಹೊಂದಿದೆ. ಹಾಗಾಗಿ, ಅಧಿಕ ಅಭ್ಯರ್ಥಿಗಳು ಯಶಸ್ಸು ಪಡೆಯಲು ಸಾಧ್ಯವಾಗಿದೆ ಎಂದು ವಿನಯ್ ತಿಳಿಸಿದರು.

'ಯೂನಿವರ್ಸಲ್'ನ 10 ಅಭ್ಯರ್ಥಿಗಳು ತೇರ್ಗಡೆ

ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದ 10 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಉಪೇಂದ್ರ ಶೆಟ್ಟಿ ಹೇಳಿದ್ದಾರೆ.

ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಐಎಎಸ್, ಐಪಿಎಸ್, ಐಎಫ್‌ಎಸ್ ಹಾಗೂ ಇತರೆ ವರ್ಗದ 8 ಸಾವಿರಕ್ಕೂ ಹೆಚ್ಚು ಅಧಿಕಾರಿಗಳನ್ನು ಕಳೆದ 24 ವರ್ಷಗಳಲ್ಲಿ ಸಂಸ್ಥೆ ನೀಡಿದೆ. ಈ ಸಲವೂ ಖ್ಯಾತಿ ಮುಂದುವರಿಸಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

'ಅಕ್ಕ'ಗೆ 9 ಅಭ್ಯರ್ಥಿಗಳಿಗೆ ಗರಿ

ಅಕ್ಕ ಐಎಎಸ್ ಅಕಾಡೆಮಿಯ 9 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ. ಅವ ರಲ್ಲಿ 8 ಅಭ್ಯರ್ಥಿಗಳು ಕರ್ನಾಟಕದ ಶಿವಮೊಗ್ಗ, ಮೈಸೂರು, ಬಳ್ಳಾರಿ, ಬೆಳಗಾವಿ, ಕಲಬುರಗಿ, ರಾಮನಗರದವರು, ಒಬ್ಬರು ಹೈದರಾಬಾದ್‌ನದವರು.

ಇಂಡಿಯಾ 4 ಐಎಎಸ್: 31 ಅಭ್ಯರ್ಥಿಗಳ ಸಾಧನೆ

ಯುಪಿಎಸ್‌ಸಿ ಪರೀಕ್ಷೆಯಲ್ಲಿ 24ನೇ ರ‍್ಯಾಂಕ್ ಪಡೆದ ರಂಗಮಂಜು, 41ನೇ ರ‍್ಯಾಂಕ್ ಪಡೆದ ಸಚಿನ್, 99ನೇ ರ‍್ಯಾಂಕ್ ಪಡೆದ ತೇಜಸ್ವಿ ಪ್ರಸಾದ್ ದೇಶಪಾಂಡೆ ಸೇರಿದಂತೆ 31ನೇ ಅಭ್ಯರ್ಥಿಗಳು ಇಂಡಿಯಾ 4 ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದವರು ಎಂದು ಸಂಸ್ಥೆ ಹೇಳಿದೆ.

ಶಕ್ತಿ ದುಬೆಗೆ ಮೊದಲ ರ‍್ಯಾಂಕ್

1,009	725	284	14	11
ವಿವಿಧ ಸೇವೆಗಳಿಗೆ ನೇಮಕಕ್ಕೆ ಯುಪಿಎಸ್‌ಸಿ ಶಿಫಾರಸು ಮಾಡಲಾದ ಅಭ್ಯರ್ಥಿಗಳ ಸಂಖ್ಯೆ	ಶಿಫಾರಸುಗೊಂಡ ಪುರುಷ ಅಭ್ಯರ್ಥಿಗಳು	ಶಿಫಾರಸುಗೊಂಡ ಮಹಿಳಾ ಅಭ್ಯರ್ಥಿಗಳು	ಮೊದಲ 25 ರ‍್ಯಾಂಕ್ ಪಡೆದವರ ಪೈಕಿ ಪುರುಷರ ಸಂಖ್ಯೆ	ಮೊದಲ 25 ರ‍್ಯಾಂಕ್ ಪಡೆದವರ ಪೈಕಿ ಮಹಿಳೆಯರ ಸಂಖ್ಯೆ

ಒಂದನೇ ಪುಟದಿಂದ...

ಮೂರನೇ ಸ್ಥಾನ ಪಡೆದಿರುವ ಪರಾಗ್, ತಮಿಳುನಾಡಿನ ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ವಿಐಟಿ)ಯಿಂದ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ತತ್ವಶಾಸ್ತ್ರವನ್ನು ಇವರು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದರು.

ಶಾಹ ಮಾರ್ಗಿ ಚಿರಾಗ್ ಅವರು ಅಹಮದಾಬಾದ್‌ನ ಗುಜರಾತ್ ಟೆಕ್ನಾಲಜಿಕಲ್ ಯುನಿವರ್ಸಿಟಿಯಿಂದ ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದು, ಸಮಾಜವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದರು.

ದೆಹಲಿಯ ಗುರು ಗೋವಿಂದ ಸಿಂಗ್ ಇಂದ್ರಪ್ರಸ್ಥ ಯುನಿವರ್ಸಿಟಿಯಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದಿರುವ ಆಕಾಶ್ ಗರ್ಗ್ ಕೂಡ ಸಮಾಜವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದರು.

ನಾಗರಿಕ ಸೇವೆಗಳ ಪ್ರಿಲಿಮನರಿ ಪರೀಕ್ಷೆಯು ಕಳೆದ ವರ್ಷ ಜೂನ್ 16ರಂದು ನಡೆದಿತ್ತು. 9,92,599 ಅರ್ಜಿ ಸಲ್ಲಿಸಿದ್ದರು. ಈ ಪೈಕಿ, 5,83,213 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ಮುಖ್ಯ ಪರೀಕ್ಷೆಗೆ 14,627 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಈ ಪೈಕಿ ಸಂದರ್ಶನಕ್ಕೆ 2,845 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ಜನವರಿ 7 ಹಾಗೂ ಏಪ್ರಿಲ್ 17ರಂದು ಸಂದರ್ಶನ ನಡೆದಿತ್ತು.

ವರ್ಗವಾರು ಅಭ್ಯರ್ಥಿಗಳ ವಿವರ

ವರ್ಗ	ಸಂಖ್ಯೆ
ಸಾಮಾನ್ಯ	335
ಇಡಬ್ಲ್ಯುಎಸ್	109
ಒಬಿಸಿ	318
ಎಸ್‌ಸಿ	160
ಎಸ್‌ಟಿ	87
ಒಟ್ಟು	1,009

ತಾತ್ಕಾಲಿಕ ಪಟ್ಟಿಯಲ್ಲಿ 241 ಅಭ್ಯರ್ಥಿಗಳು: 241 ಅಭ್ಯರ್ಥಿಗಳ ಹೆಸರುಗಳನ್ನು ತಾತ್ಕಾಲಿಕ ಪಟ್ಟಿಯಲ್ಲಿ ಇಡಲಾಗಿದ್ದು, ಒಬ್ಬ ಅಭ್ಯರ್ಥಿಯ ಫಲಿತಾಂಶವನ್ನು ತಡೆಹಿಡಿಯಲಾಗಿದೆ. ಕಾಯ್ದಿರಿಸಿದ ಪಟ್ಟಿಯಲ್ಲಿ 230 ಅಭ್ಯರ್ಥಿಗಳು ಇದ್ದಾರೆ ಎಂದು ಯುಪಿಎಸ್‌ಸಿ ತಿಳಿಸಿದೆ.

'ನೆರವು ಕೇಂದ್ರ' ಸ್ಥಾಪನೆ: ಅಭ್ಯರ್ಥಿಗಳ ಅನುಕೂಲಕ್ಕಾಗಿ ದೆಹಲಿಯಲ್ಲಿನ ಆಯೋಗದ ಕಚೇರಿ ಆವರಣದಲ್ಲಿ 'ನೆರವು ಕೇಂದ್ರ' ಸ್ಥಾಪಿಸಲಾಗಿದೆ. ಪರೀಕ್ಷೆ ಅಥವಾ ನೇಮಕಾತಿಗೆ ಸಂಬಂಧಿಸಿ ಮಾಹಿತಿ ಇಲ್ಲವೇ ಸ್ಪಷ್ಟನೆಗಾಗಿ ಅಭ್ಯರ್ಥಿಗಳು ಎಲ್ಲ ದಿನಗಳಂದು ಕಚೇರಿ ಅವಧಿ ವೇಳೆ (ಬೆಳಿಗ್ಗೆ 10ರಿಂದ ಸಂಜೆ 5) ದೂರವಾಣಿ ಸಂಖ್ಯೆ 23385271/23381125/23098543ಕ್ಕೆ ಕರೆ ಮಾಡಬಹುದು ಎಂದು ಯುಪಿಎಸ್‌ಸಿ ಹೇಳಿದೆ.

www.upsc.gov.in ವೆಬ್‌ಸೈಟ್‌ನಲ್ಲಿ ಕೂಡ ಫಲಿತಾಂಶ ಲಭ್ಯವಿದ್ದು, 15 ದಿನಗಳ ಒಳಗಾಗಿ ಅಂಕಗಳನ್ನು ಕೂಡ ಪ್ರಕಟಿಸಲಾಗುವುದು ಎಂದೂ ಹೇಳಿದೆ.

ಯುಪಿಎಸ್‌ಸಿ ಪರೀಕ್ಷೆ ಸಿದ್ಧತೆಗೆ ವ್ಯಯಿಸಿದ್ದ ಗಂಟೆಗಳಿಗಿಂತ ಅಧ್ಯಯನದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದ್ದು ನನಗೆ ಬಹಳ ನೆರವಾಯಿತು.
ಆಕಾಶ್ ಗರ್ಗ್, 5ನೇ ರ‍್ಯಾಂಕ್ ಪಡೆದ ಅಭ್ಯರ್ಥಿ

ಮಹೇಶ್‌ಬಾಬುಗೆ ಇ.ಡಿ. ಸಮನ್ಸ್

ಹೈದರಾಬಾದ್ (ಪಿಟಿಐ): ಕೆಲವು ಸ್ಥಳೀಯ ರಿಯಲ್ ಎಸ್ಟೇಟ್ ಕಂಪನಿಗಳು ಎಸಗಿದ ವಂಚನೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಇದೇ 28ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ತೆಲುಗು ನಟ ಮಹೇಶ್ ಬಾಬು ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿದೆ.

ಸಾಯಿ ಸೂರ್ಯ ಡೆವಲಪರ್ಸ್, ಸುರಾನಾ ಗ್ರೂಪ್ ಸೇರಿದಂತೆ ಇತರರಿಗೆ ಸಂಬಂಧಪಟ್ಟ ಪ್ರಕರಣ ಇದಾಗಿದೆ.

ಈ ಸಂಬಂಧ ಇ.ಡಿ ಅಧಿಕಾರಿಗಳು, ಏಪ್ರಿಲ್ 16ರಂದು ಸಿಕಂದರಾಬಾದ್, ಜುಬಿಲಿ ಹಿಲ್ಸ್ ಮತ್ತು ಬೋವನಪಲ್ಲಿ ಸೇರಿದಂತೆ ಇತರ ಕಡೆಗಳಲ್ಲಿ ಶೋಧ ನಡೆಸಿದ್ದರು.

ವಂಚನೆ ಆರೋಪ ಎದುರಿಸುತ್ತಿರುವ ಕಂಪನಿಗಳ ಪ್ರಚಾರದ ರಾಯಭಾರಿಯಾಗಿ ನಟ ಮಹೇಶ್‌ಬಾಬು ಅವರು ಈ ಕಂಪನಿಯ ರಿಯಲ್ ಎಸ್ಟೇಟ್ ಯೋಜನೆಗಳನ್ನು ಬೆಂಬಲಿಸಿದ್ದರು. ಹೀಗಾಗಿ, ಅವರು ಈ ಹಗರಣದಲ್ಲಿ ಭಾಗಿಯಾಗಿಲ್ಲ ಇರಬಹುದಾದ ಕಾರಣ ಪ್ರಸ್ತುತ ಈ ಪ್ರಕರಣದ ತನಿಖೆಯಲ್ಲಿ ಅವರನ್ನು ಆರೋಪಿ ಎಂದು ಪರಿಗಣಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಸಂವಿಧಾನ ಪೀಠಿಕೆ ಕೂಡ 'ಭಾರತದ ಪ್ರಜೆಗಳಾದ ನಾವು' ಎಂದು ಆರಂಭ: ಉಪರಾಷ್ಟ್ರಪತಿ

ಸಂಸತ್, ಪ್ರಜೆಗಳೇ ಪರಮೋಚ್ಚ: ಧನಕರ್

ಪ್ರಜಾವಾಣಿ ವಾರ್ತೆ/ಪಿಟಿಐ



ನಿರ್ದಿಷ್ಟ ಗುಂಪು/ವ್ಯಕ್ತಿಗೆ ಸರಿಯಾದ ಸಂದರ್ಭದಲ್ಲಿ ಸರಿಯಾದ ಮಾತನ್ನು ತಿಳಿಸಲು ನೀವು ಹಿಂಜರಿದರೆ ಅದು ನಿಮ್ಮನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ
ಜಗದೀಪ ಧನಕರ್, ಉಪರಾಷ್ಟ್ರಪತಿ

ನವದೆಹಲಿ: 'ನಮ್ಮ ಸಂವಿಧಾನದ ಪೀಠಿಕೆಯು 'ಭಾರತದ ಪ್ರಜೆಗಳಾದ ನಾವು..' ಎಂದೇ ಆರಂಭವಾಗುತ್ತದೆ. ಹೀಗಾಗಿ ಈ ದೇಶದ ಪ್ರಜೆ ಹಾಗೂ ಪ್ರಜೆಗಳನ್ನು ಪ್ರತಿನಿಧಿಸುವ ಸಂಸತ್ 'ಪರಮೋಚ್ಚ' ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಮಂಗಳವಾರ ಪ್ರತಿಪಾದಿಸಿದ್ದಾರೆ.


'ಸಂವಿಧಾನವು ಈ ದೇಶದ ಪ್ರಜೆಗಳಿಗಾಗಿ ಹಾಗೂ ಅವರಿಂದ ಚುನಾಯಿತರಾದವರಿಗಾಗಿ ರಚಿತವಾಗಿದೆ. ಇವರೇ ಸಂವಿಧಾನದ ರಕ್ಷಣೆಯ ಹೊಣೆ ಹೊತ್ತಿರುವ ಮುಂದಾಳುಗಳು' ಎಂದು ಹೇಳಿದ್ದಾರೆ. ಈ ಮೂಲಕ, ಸುಪ್ರೀಂ ಕೋರ್ಟ್ ವಿರುದ್ಧ ನೀಡಿದ ಹೇಳಿಕೆಗಳಿಗಾಗಿ ತಮ್ಮ ವಿರುದ್ಧ ವ್ಯಾಪಕ ಟೀಕೆಗಳಾಗುತ್ತಿರುವ ನಡುವೆ ಅವರು ತಿರುಗೇಟು ನೀಡಿದ್ದಾರೆ. ದೆಹಲಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಕರ್ತವ್ಯಮ್' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಂವಿಧಾನಿಕ ಹುದ್ದೆಗಳ ಬಿಡಿ ಚಾರಿಕವಷ್ಟೆ ಎಂಬ ಮಾತನ್ನು ಕೆಲವರು ಹೇಳುತ್ತಿದ್ದಾರೆ. ಈ ಮಾತುಗಳನ್ನು ಊಹಿಸುವುದೂ ಕಷ್ಟ. ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯಾಗಲಿ ಅಥವಾ ಸಾಮಾನ್ಯ ಪ್ರಜೆಯಾಗಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಪಾತ್ರವೂ ಮಹತ್ವದ್ದು. ಸಂವಿಧಾನದಲ್ಲಿ ಪ್ರತಿಪಾದಿಸಿರುವ ಈ ಅಂಶವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವುದು ಸಲ್ಲ' ಎಂದು ಧನಕರ್ ಹೇಳಿದ್ದಾರೆ.

ಭಾಷಣದ ಪ್ರಮುಖ ಅಂಶಗಳು:

- ಪ್ರಜೆಗಳು ಜಾಗೃತರಾಗಿರುವುದರಿಂದ ಹಾಗೂ ತಮ್ಮದೇ ಆದ ಕೊಡುಗೆ ನೀಡಿದಾಗ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತಷ್ಟು ಬಲಗೊಳ್ಳುತ್ತದೆ
- ಪ್ರಜೆಗಳು ಪರಮೋಚ್ಚ ಅಧಿಕಾರ ಹೊಂದಿದ್ದು, ಪ್ರಜಾಪ್ರಭುತ್ವ ಪ್ರಜೆಗಳಿಗಿಂತ ಯಾರೂ ದೊಡ್ಡವರಲ್ಲ
- 'ಭಾರತದ ಪ್ರಜೆಗಳಾದ ನಾವು..' ಎಂಬ ಪೀಠಿಕೆಯಲ್ಲಿ ಮಾತು ಈ ದೇಶದ ಪ್ರಜೆಗಳ ಆಶೋತ್ತರಗಳು, ಆಕಾಂಕ್ಷೆಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಮೂಲಕ ಜನರ 'ಇಚ್ಛಾಶಕ್ತಿಯ ವ್ಯಕ್ತವಾಗುವುದನ್ನು ಪ್ರತಿಫಲಿಸುತ್ತದೆ
- ಚುನಾಯಿತ ಪ್ರತಿನಿಧಿಗಳು ಜನರಿಗೆ ಉತ್ತರದಾಯಿಯಾಗಿರುತ್ತಾರೆ. 1977ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ ಪ್ರಧಾನಿಯನ್ನೇ ಆ ಕ್ರಮಕ್ಕೆ ಹೊಣೆ ಮಾಡಲಾಗಿತ್ತು
- ಯಾವುದೇ ಒಂದು ಪ್ರಜಾಸತ್ತೆ/ಸಂಸ್ಥೆಯು ಸಂಸತ್ತಿಗಿಂತಲೂ ದೊಡ್ಡದು ಎಂಬಂತಹ ಮಾತು ಸಂವಿಧಾನದಲ್ಲಿ ಇಲ್ಲ. ಹೀಗಾಗಿ ಸಂಸತ್ತೇ ಪರಮೋಚ್ಚ

ಸಂವಿಧಾನವೇ ಶ್ರೇಷ್ಠ: ಸಿಬಲ್



'ಸಂಸತ್ ಆಗಲಿ ಅಥವಾ ಕಾರ್ಯಾಂಗವಾಗಲಿ ದೊಡ್ಡದಲ್ಲ. ಸಂವಿಧಾನವೇ ಎಲ್ಲಕ್ಕಿಂತ ಶ್ರೇಷ್ಠ' ಎಂದು ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಮಂಗಳವಾರ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ನೀಡಿದ್ದ ಆದೇಶವೊಂದರ ಕುರಿತ ಹೇಳಿಕೆಗಳಿಗಾಗಿ ತಮ್ಮನ್ನು ಪ್ರಶ್ನಿಸಿದ್ದ ಕಪಿಲ್ ಸಿಬಲ್ ಅವರ ನಡೆಯನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಖಂಡಿಸಿದ್ದರು. ಹೀಗಾಗಿ, ಈ ಮಾತಿನ ಮೂಲಕ ಸಿಬಲ್ ಅವರು ಧನಕರ್‌ಗೆ ತಿರುಗೇಟು ನೀಡಿದ್ದಾರೆ.

'ಕಾನೂನುಗಳನ್ನು ರಚಿಸುವ ಪರಮ ಅಧಿಕಾರವನ್ನು ಸಂಸತ್ ಹೊಂದಿದೆ. ಸಂಸತ್ ರಚಿಸುವ ಕಾನೂನುಗಳ ವ್ಯಾಖ್ಯಾನ ಹಾಗೂ ಅವುಗಳ ಯಥಾವತ್ ಜಾರಿ ಮಾಡುವ ಹೊಣೆಗಾರಿಕೆ ಸುಪ್ರೀಂ ಕೋರ್ಟ್ ಮೇಲಿದೆ. ಸಂವಿಧಾನದ 142ನೇ ವಿಧಿ ಈ ಕುರಿತು ವಿವರಿಸುತ್ತದೆ' ಎಂದು ಸಿಬಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಸಂವಿಧಾನದಲ್ಲಿನ ಅವಕಾಶಗಳನ್ನು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸುತ್ತದೆ. ಕಾನೂನುಗಳನ್ನು ಅರ್ಥ ಮಾಡಿಕೊಳ್ಳಲು ಇದರಿಂದ ಸಾಧ್ಯವಾಗಿದೆ' ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ರಾಜ್ಯಪಾಲರು ಅಂಕಿತ ಹಾಕದೇ ಇರುವ ಮಸೂದೆಗಳ ಕುರಿತು ಮೂರು ತಿಂಗಳ ಒಳಗಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ರಾಷ್ಟ್ರಪತಿಗೆ ಕಾಲಮಿತಿ ನಿಗದಿ ಮಾಡಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ಆದೇಶಿಸಿತ್ತು.

ಸಂಕ್ಷಿಪ್ತ ಸುದ್ದಿ

ಸಿಇಟಿ: ಮೇ 5ರಿಂದ ದಾಖಲೆಗಳ ಪರಿಶೀಲನೆ

ಬೆಂಗಳೂರು: ಕ್ರೀಡೆ, ಎನ್‌ಸಿಸಿ, ರಕ್ಷಣೆ ಸೇರಿ ಇತರ ವಿಶೇಷ ವರ್ಗ ಹಾಗೂ ಸಿಇಟಿ ಅರ್ಜಿಯಲ್ಲಿ ವಿವಿಧ ಕೋಟಾಗಳನ್ನು ನಮೂದಿಸಿರುವ ಅಭ್ಯರ್ಥಿಗಳ ದಾಖಲೆ ಪರಿಶೀಲನಾ ಕಾರ್ಯ ಮೇ 5ರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ.

ಕೆಇಎ ವೆಬ್‌ಸೈಟ್‌ನಲ್ಲಿ ತಮಗೆ ಬೇಕಾದ ದಿನಾಂಕ ಮತ್ತು ಸಮಯವನ್ನು ಮುಂಗಡವಾಗಿ ಕಾಯ್ದಿರಿಸಿಕೊಳ್ಳಲು ಒಂದೆರಡು ದಿನಗಳಲ್ಲಿ ಲಿಂಕ್ ಬಿಡುಗಡೆ ಮಾಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಈ ಹಿಂದೆ ಸಿಇಟಿ ರ‍್ಯಾಂಕ್ ಬಂದ ನಂತರ ದಾಖಲೆಗಳ ಪರಿಶೀಲನೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಅದಕ್ಕೂ ಮೊದಲೇ ದಾಖಲೆ ಪರಿಶೀಲನೆ ಮಾಡಿಕೊಂಡು, ಫಲಿತಾಂಶ ನಂತರ ಆಪ್ಷನ್ ಎಂಟ್ರಿಗೆ ಅವಕಾಶ ನೀಡಲಾಗುತ್ತಿದೆ.

ವಿಶೇಷ ವರ್ಗ ಮತ್ತು ವಿವಿಧ ಕೋಟಾ ಅಡಿ ಸುಮಾರು 10 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅವರೆಲ್ಲರಿಗೂ ಹತ್ತು ದಿನ ಅವಕಾಶ ನೀಡಲಾಗಿದೆ. ಕ್ಲೇಮ್‌ಗೆ ಅನುಸಾರವಾಗಿ ಮೂಲ ದಾಖಲೆಗಳ ಸಮೇತ ಪರಿಶೀಲನೆಗೆ ಹಾಜರಾಗಬೇಕು. ಪರಿಶೀಲನೆ ನಂತರ ಅರ್ಜಿಯಲ್ಲಿನ ತಪ್ಪುಗಳನ್ನು ತಿದ್ದುಪಡಿ ಮಾಡಿಕೊಂಡವರೂ ಪುನಃ ತಮ್ಮ ಅರ್ಜಿಯನ್ನು ಪರಿಶೀಲನೆಗೆ ಒಳಪಡಿಸಬೇಕು. ಇಲ್ಲದಿದ್ದರೆ, ತಮ್ಮ ತಿದ್ದುಪಡಿ ಊರ್ಜಿತವಾಗುವುದಿಲ್ಲ. ದಿನಕ್ಕೆ ಸಾವಿರ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ನಡೆಸಲಾಗುತ್ತದೆ ಎಂದರು.

ವಸತಿ ಶಾಲೆ: ಸೀಟು ಹಂಚಿಕೆ ಫಲಿತಾಂಶ ಪ್ರಕಟ

ಬೆಂಗಳೂರು: ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಬಿ.ಆರ್. ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಸಂಗೊಳ್ಳಿ ರಾಯಣ್ಣ, ನಾರಾಯಣಗುರು ಸೇರಿದಂತೆ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಹರಾದವರ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾದವರು ಏ.29 ರೊಳಗೆ ಶಾಲೆಗಳಿಗೆ ಹೋಗಿ ವರದಿ ಮಾಡಿಕೊಳ್ಳಬೇಕು. ಶಾಲಾ ಹಂತದಲ್ಲೇ ಮೂಲ ದಾಖಲೆಗಳ ಪರಿಶೀಲನೆ ಕೂಡ ನಡೆಯಲಿದೆ.

ಏಕಲವ್ಯ ಶಾಲೆಗೆ 2ನೇ ಸುತ್ತಿನ ಸೀಟು ಹಂಚಿಕೆ: ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಿದ್ದು, ಏ. 28ರೊಳಗೆ ಶಾಲೆಗಳಲ್ಲಿ ಪ್ರವೇಶ ಪಡೆಯಬಹುದು.



ಬಿಸಿಲ ಝಳ ಪ್ರಯಾಗರಾಜ್‌ನ ತ್ರಿವೇಣಿ ಸಂಗಮಕ್ಕೆ ಮಂಗಳವಾರ ಭೇಟಿ ನೀಡಿದ ಭಕ್ತರು, ಸುಡು ಬಿಸಿಲಿನಿಂದ ರಕ್ಷಣೆಗಾಗಿ ತಮ್ಮಲ್ಲಿದ್ದ ವಸ್ತ್ರಗಳನ್ನೇ ತಲೆಯ ಮೇಲೆ ಹೊದ್ದರು — ಪಿಟಿಐ ಚಿತ್ರ

'ಶರಬತ್ ಜಿಹಾದ್': ವಿಡಿಯೊ ತೆಗೆದುಹಾಕುವೆ– ರಾಮದೇವ

ನವದೆಹಲಿ(ಪಿಟಿಐ): ಹಮ್‌ದರ್ದ್ ಕಂಪನಿಯ ಉತ್ಪನ್ನ ರೂಹ್ ಅಫ್ಜಾ ಕುರಿತಂತೆ ತಾವು ಹೇಳಿದ್ದು ಎನ್ನಲಾದ 'ಶರಬತ್ ಜಿಹಾದ್' ಹೇಳಿಕೆಗಳು ಇರುವ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಿಂದ ತೆಗೆದು ಹಾಕಲಾಗುವುದು ಎಂದು ಯೋಗ ಗುರು ರಾಮದೇವ ಅವರು ದೆಹಲಿ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿದ್ದಾರೆ.



'ಈ ಹೇಳಿಕೆಗಳು ನ್ಯಾಯಾಲಯದ ಆತ್ಮಸಾಕ್ಷಿಯನ್ನು ಕಲಕಿವೆ ಹಾಗೂ ಇವುಗಳನ್ನು ಸಮರ್ಥನೆ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಹೇಳಿದ ಬೆನ್ನಲ್ಲೇ ರಾಮದೇವ ಈ ಭರವಸೆ ನೀಡಿದ್ದಾರೆ.

ರಾಮದೇವ ಒಡೆತನದ ಪತಂಜಲಿ ಫುಡ್ಸ್ ಲಿಮಿಟೆಡ್ ವಿರುದ್ಧ ಹಮ್‌ದರ್ದ್ ನ್ಯಾಷನಲ್ ಫೌಂಡೇಷನ್ ಇಂಡಿಯಾ ದಾಖಲಿಸಿರುವ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ಅಮಿತ್ ಬನ್ಸಲ್ ನಡೆಸಿದರು.

'ಈ ವಿಚಾರವಾಗಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ನಿಮ್ಮ ಕಕ್ಷಿದಾರರಿಗೆ ಹೇಳಿ. ಇಲ್ಲದಿದ್ದರೆ ಕಠಿಣ ಆದೇಶ ಹೊರಡಿಸಬೇಕಾಗುತ್ತದೆ' ಎಂದು ನ್ಯಾಯಮೂರ್ತಿ ಬನ್ಸಲ್ ಅವರು ರಾಮದೇವ ಪರ ವಕೀಲರನ್ನು ಉದ್ದೇಶಿಸಿ ಹೇಳಿದರು.

'ಪತಂಜಲಿ ಉತ್ಪನ್ನವಾದ ಗುಲಾಬ್ ಶರಬತ್ ಕುರಿತ ಪ್ರಚಾರದ ವೇಳೆ ಮಾತನಾಡಿದ್ದ ರಾಮದೇವ ಅವರು, ಹಮ್‌ದರ್ದ್‌ನ ರೂಹ್ ಅಫ್ಜಾ ಮಾರಾಟದಿಂದ ಬರುವ ಹಣವನ್ನು ಮದರಸಾ ಮತ್ತು ಮಸೀದಿಗಳನ್ನು ನಿರ್ಮಿಸಲು ಬಳಸಲಾಗುತ್ತದೆ ಎಂಬುದಾಗಿ ಹೇಳಿದ್ದರು' ಎಂಬ ವಿಚಾರವನ್ನು ಹಮ್‌ದರ್ದ್ ಸಂಸ್ಥೆಯ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದರು.

'ನಾನು ಯಾವುದೇ ಬ್ರ್ಯಾಂಡ್ ಅಥವಾ ಸಮುದಾಯದ ಹೆಸರು ತೆಗೆದುಕೊಂಡಿಲ್ಲ' ಎಂದು ಹೇಳುವ ಮೂಲಕ ರಾಮದೇವ ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದರು.

ಮಂಗಳವಾರ ನಡೆದ ವಿಚಾರಣೆ ವೇಳೆ, ಹಮ್‌ದರ್ದ್ ಫೌಂಡೇಷನ್ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ, 'ಇದು ಅವಹೇಳನಕ್ಕಿಂತಲೂ ಮಿಗಿಲಾದ ಪ್ರಕರಣ. ಕೋಮು ಸಂಘರ್ಷಕ್ಕೆ ಕುಮ್ಮಕ್ಕು ಕೊಡುವ ಪ್ರಕರಣವೂ ಇದಾಗಿದೆ' ಎಂದು ಪೀಠಕ್ಕೆ ತಿಳಿಸಿದರು.

'ಅವರು ಇದನ್ನು ಶರಬತ್ ಜಿಹಾದ್ ಎಂದು ಹೇಳುತ್ತಿದ್ದು, ಇದು ದ್ವೇಷ ಭಾಷಣ ಎನಿಸುತ್ತದೆ. ಅವರು ತಮ್ಮ ವ್ಯಾಪಾರ ಮಾಡಲಿ. ಆದರೆ, ನಮಗೆ ತೊಂದರೆ ಕೊಡುವುದು ಏಕೆ? ಎಂದೂ ರೋಹಟಗಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಮದೇವ ಪರ ವಕೀಲ ರಾಜೀವ್ ನಾಯರ್, 'ರಾಮದೇವ ಅವರ ಹೇಳಿಕೆಗಳಿಗೆ ಸಂಬಂಧಿಸಿದ ವಿಡಿಯೊ ಹಾಗೂ ಮುದ್ರಣ ರೂಪದಲ್ಲಿರುವ ಜಾಹೀರಾತುಗಳನ್ನು ಕೂಡಲೇ ಹಿಂದಕ್ಕೆ ಪಡೆಯಲಾಗುವುದು' ಎಂದು ಪೀಠಕ್ಕೆ ತಿಳಿಸಿದರು.

ವಕೀಲ ನಾಯರ್ ಅವರ ಹೇಳಿಕೆ ದಾಖಲಿಸಿಕೊಂಡ ಪೀಠ, 'ಪ್ರತಿಸ್ಪರ್ಧಿಗಳಿಗೆ ಸಂಬಂಧಿಸಿ ಮುಂದಿನ ದಿನಗಳಲ್ಲಿ ಇಂತಹ ಹೇಳಿಕೆಗಳು ಹಾಗೂ ಜಾಹೀರಾತುಗಳನ್ನು ನೀಡುವುದಿಲ್ಲ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವುದಿಲ್ಲ' ಎಂಬ ಬಗ್ಗೆ ಐದು ದಿನಗಳ ಒಳಗಾಗಿ ರಾಮದೇವ ಅವರು ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸೂಚಿಸಿ, ವಿಚಾರಣೆಯನ್ನು ಮೇ 1ಕ್ಕೆ ಮುಂದೂಡಿತು.

'ನ್ಯಾಷನಲ್ ಹೆರಾಲ್ಡ್ ಲೂಟಿ' ಬ್ಯಾಗ್ ಧರಿಸಿದ ಸಂಸದೆ

ನವದೆಹಲಿ (ಪಿಟಿಐ): 'ಒಂದು ದೇಶ, ಒಂದು ಚುನಾವಣೆ' ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿ ಸಭೆಯು ಮಂಗಳವಾರ ಸಂಸತ್ ಭವನದಲ್ಲಿ ನಡೆಯಿತು.

ಈ ಸಭೆಗೆ ಬಿಜೆಪಿ ಸಂಸದೆ ಬಾನ್ಸುರಿ ಸ್ವರಾಜ್ ಅವರು 'ನ್ಯಾಷನಲ್ ಹೆರಾಲ್ಡ್‌ನ ಲೂಟಿ' ಎಂದು ಕೆಂಪು ಅಕ್ಷರಗಳಲ್ಲಿ ಬರೆಯಲಾಗಿದ್ದ ಕಪ್ಪು ಬಣ್ಣದ ಬ್ಯಾಗ್ ಅನ್ನು ಬಗಲಿಗೆ ಹಾಕಿಕೊಂಡು ಬಂದಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ದೋಷಾರೋಪಪಟ್ಟಿ ಸಲ್ಲಿಸಿದೆ. ಆದರೆ, ಈ ಆರೋಪ ತಳ್ಳಿಹಾಕಿರುವ ಕಾಂಗ್ರೆಸ್, 'ಇದು ನಮ್ಮ ನಾಯಕರ ವಿರುದ್ಧ ಬಿಜೆಪಿ ಮಾಡುತ್ತಿರುವ ಸೇಡಿನ ರಾಜಕಾರಣ' ಎಂದು ಪ್ರತ್ಯಾರೋಪ ಮಾಡಿದೆ.



ಬಿಜೆಪಿ ಸಂಸದೆ ಬಾನ್ಸುರಿ ಸ್ವರಾಜ್

ವಿಮಾನ ಪತನ: ಪೈಲಟ್ ಸಾವು

ಅಮ್ರೇಲಿ (ಪಿಟಿಐ): ಖಾಸಗಿ ವಿಮಾನಯಾನ ಸಂಸ್ಥೆಯ ತರಬೇತಿ ವಿಮಾನವೊಂದು ಅಮ್ರೇಲಿಯಲ್ಲಿ ಮಂಗಳವಾರ ಪತನಗೊಂಡಿದ್ದು, ಪೈಲಟ್ ಮೃತಪಟ್ಟಿದ್ದಾರೆ.

'ಗುಜರಾತ್‌ನ ಅಮ್ರೇಲಿ ವಿಮಾನನಿಲ್ದಾಣದಿಂದ ಹೊರಟಿದ್ದ ವಿಮಾನದಲ್ಲಿ ಪೈಲಟ್ ಒಬ್ಬರೇ ಇದ್ದರು. ಈ ವಿಮಾನವು ಮಧ್ಯಾಹ್ನ 12.30ಕ್ಕೆ ಶಾಸ್ತ್ರೀನಗರದ ವಸತಿ ಪ್ರದೇಶದ ಬಳಿ ಪತನಗೊಂಡು ಬೆಂಕಿಗಾಹುತಿಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಮನುಷ್ಯನನ್ನು ಕಡೆಗಣಿಸಿ ಮಾಡಿದ ಯಾವುದೇ ಸತ್ಕರ್ಮ ನಿರರ್ಥಕ, ಅಪ್ರಯೋಜಕ.

-ಕೆ.ಎಸ್.ನಿಸಾರ್ ಅಹಮದ್

ಉರ್ದು ಭಾರತೀಯ ಭಾಷೆ 'ಸುಪ್ರೀಂ' ನಿಲುವು ಸ್ವಾಗತಾರ್ಹ

ಉರ್ದು ಭಾರತೀಯ ಭಾಷೆ; ಮರಾಠಿ, ಹಿಂದಿ, ಸಂಸ್ಕೃತ ಅಥವಾ ಭಾರತದ ಇತರ ಯಾವುದೇ ಭಾಷೆಯಂತೆ ಉರ್ದು ಕೂಡ ಭಾರತೀಯವಾದುದಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸುಪ್ರೀಂ ಕೋರ್ಟ್‌ನ ಈ ಹೇಳಿಕೆಯು ಸ್ವಾಗತಾರ್ಹವಾದುದು. ಈ ಭಾಷೆಗೆ ಸಾಂವಿಧಾನಿಕ ಸ್ಥಾನಮಾನವಿದೆ, ಚಾರಿತ್ರಿಕ ಮಹತ್ವವಿದೆ ಮತ್ತು ದೇಶದ ಹಲವು ಭಾಗಗಳಲ್ಲಿ ದಿನನಿತ್ಯದ ವ್ಯವಹಾರಕ್ಕೆ ಬಳಕೆಯಲ್ಲಿದೆ. ನಮ್ಮ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರ್ಪಡೆಯಾಗಿರುವ 21 ಭಾಷೆಗಳಲ್ಲಿ ಉರ್ದು ಕೂಡ ಒಂದು. ಇತರ ಎಲ್ಲ ಭಾಷೆಗಳ ಹಾಗೆಯೇ ಉರ್ದು ಕೂಡ ನಮ್ಮ ಭಾಷಿಕ ಪರಂಪರೆಯ ಭಾಗವಾಗಿದೆ. ದೇಶದ ಉತ್ತರ, ವಾಯವ್ಯ ಮತ್ತು ಇತರ ಭಾಗಗಳಲ್ಲಿ ಲಕ್ಷಾಂತರ ಜನರು ಈ ಭಾಷೆಯನ್ನು ಮಾತನಾಡುತ್ತಾರೆ. ಹೆಚ್ಚಿನ ಸಂಖ್ಯೆಯ ಮುಸ್ಲಿಮರು ಉರ್ದು ಮಾತನಾಡುತ್ತಾರಾದರೂ ಇತರ ಧರ್ಮದವರೂ ಈ ಭಾಷೆ ಮಾತನಾಡುತ್ತಾರೆ. ಕರ್ನಾಟಕದಲ್ಲಿ ಶೇ 10ಕ್ಕಿಂತ ಹೆಚ್ಚು ಜನರು ಈ ಭಾಷೆ ಮಾತನಾಡುತ್ತಾರೆ. ಈ ಭಾಷೆಗೆ ಉತ್ಕೃಷ್ಟವಾದ ಸಾಹಿತ್ಯ ಪರಂಪರೆ ಇದೆ. ಉರ್ದು ಶಾಯಿರಿ ದೇಶದ ಹಲವು ಭಾಗಗಳಲ್ಲಿ ಜನಜೀವನದ ಅವಿಭಾಜ್ಯ ಅಂಗವಾಗಿದೆ. ಉತ್ತರಪ್ರದೇಶ, ಆಂಧ್ರಪ್ರದೇಶ, ಜಮ್ಮು–ಕಾಶ್ಮೀರ, ಜಾರ್ಖಂಡ್, ಪಶ್ಚಿಮ ಬಂಗಾಳ, ಬಿಹಾರ, ತೆಲಂಗಾಣ ಮತ್ತು ದೆಹಲಿಯಲ್ಲಿ ಉರ್ದುವನ್ನು ಅಧಿಕೃತ ಭಾಷೆ ಎಂದೇ ಗುರುತಿಸಲಾಗಿದೆ ಎಂಬುದರತ್ತಲೂ ನ್ಯಾಯಾಲಯವು ಬೆಳಕು ಚೆಲ್ಲಿದೆ.



ವ್ಯಾಪಕ ಬಳಕೆ ಮತ್ತು ಪರಂಪರೆ ಇದ್ದರೂ ಉರ್ದು ಭಾಷೆಯನ್ನು ಇತ್ತೀಚಿನ ದಿನಗಳಲ್ಲಿ ಪೂರ್ವಗ್ರಹದಿಂದ ನೋಡಲಾಗುತ್ತಿದೆ. ಭಾಷೆಯನ್ನು ಕೂಡ ಅಸ್ಮಿತೆಯ ರಾಜಕಾರಣಕ್ಕೆ ಬಳಸಿಕೊಳ್ಳಲಾಗುತ್ತಿದೆ

ವ್ಯಾಪಕ ಬಳಕೆ ಮತ್ತು ಪರಂಪರೆ ಇದ್ದರೂ ಉರ್ದು ಭಾಷೆಯನ್ನು ಇತ್ತೀಚಿನ ದಿನಗಳಲ್ಲಿ ಪೂರ್ವಗ್ರಹದಿಂದ ನೋಡಲಾಗುತ್ತಿದೆ. ಮುಸ್ಲಿಮರ ಭಾಷೆ, 'ಶತ್ರುವಿನ ಭಾಷೆ' ಎಂದೂ ಉರ್ದುವನ್ನು ಪರಿಗಣಿಸಲಾಗುತ್ತಿದೆ. ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಪ್ರತಿಯೊಂದನ್ನೂ ದೂರವಿರಿಸುವ ಮನಃಸ್ಥಿತಿಯ ಫಲವಾಗಿ ಭಾಷೆಯನ್ನು ಹೀಗೆ ನೋಡಲಾಗುತ್ತಿದೆ. ಜನರನ್ನು ವಿಭಜಿಸುವ ಪ್ರತಿಯೊಂದು ವಿಚಾರದ ಹಾಗೆಯೇ ಇದು ಕೂಡ ಅಜ್ಞಾನ ಮತ್ತು ಪೂರ್ವಗ್ರಹದ ಪರಿಣಾಮ ಎಂದು ಹೇಳಬಹುದು. ನಮ್ಮ ದೇಶದಲ್ಲಿ ಭಾಷೆಯು ಅತ್ಯಂತ ಭಾವನಾತ್ಮಕ ವಿಚಾರಗಳಲ್ಲಿ ಒಂದು. ಹಾಗಾಗಿ, ಭಾಷೆಯನ್ನು ಕೂಡ ಅಸ್ಮಿತೆಯ ರಾಜಕಾರಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ನ್ಯಾಯಾಲಯದ ಮುಂದೆ ಬಂದಿರುವ ಪ್ರಕರಣದ ಮೂಲವನ್ನು ನೋಡಿದರೆ ಈ ಪೂರ್ವಗ್ರಹ ಎಷ್ಟು ಗಾಢವಾಗಿ ಬೇರುಬಿಟ್ಟಿದೆ ಎಂಬುದು ಅರಿವಾಗುತ್ತದೆ. ಮಹಾರಾಷ್ಟ್ರದ ಅಕೋಲ ಜಿಲ್ಲೆಯ ಪಾತುರ್ ನಗರ ಸ್ಥಳೀಯಾಡಳಿತ ಸಂಸ್ಥೆಯ ದ್ವಿಭಾಷಾ ಸೂಚನಾ ಫಲಕವೊಂದರ ಕುರಿತಂತೆ ವಿವಾದ ಸೃಷ್ಟಿಯಾಗಿತ್ತು. ಫಲಕದಲ್ಲಿ ಮರಾಠಿ ಮತ್ತು ಉರ್ದು ಭಾಷೆಯನ್ನು ಬಳಸಲಾಗಿದೆ. ಸ್ಥಳೀಯಾಡಳಿತ ಸಂಸ್ಥೆಯ ಮಾಜಿ ಸದಸ್ಯರು ಉರ್ದು ಬಳಕೆಯನ್ನು ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಬಳಿಕ ಅದು ಸುಪ್ರೀಂ ಕೋರ್ಟ್‌ವರೆಗೆ ಬಂದಿದೆ. ಭಾಷೆಯ ಸ್ಥಾನಮಾನದ ಕುರಿತು ಸುಪ್ರೀಂ ಕೋರ್ಟ್ ಸರಿಯಾದ ನಿಲುವನ್ನೇ ತಳೆದಿದೆ.

ನ್ಯಾಯಾಲಯವು ಕೊಟ್ಟ ಸಂದೇಶವು ಬಹಳ ಸ್ಪಷ್ಟವಾಗಿಯೂ ದೃಢವಾಗಿಯೂ ಇದೆ. 'ಭಾಷೆ ಎಂಬುದು ಧರ್ಮವಲ್ಲ... ಭಾಷೆಯು ಸಂಸ್ಕೃತಿ... ಹತ್ತಾರು ಭಾಷೆಗಳು ಮತ್ತು ಇತರ ವೈವಿಧ್ಯಗಳನ್ನು ಗೌರವಿಸಲು, ಸಂಭ್ರಮಿಸಲು ನಾವು ಕಲಿಯಬೇಕಿದೆ' ಎಂದು ನ್ಯಾಯಾಲಯ ಹೇಳಿದೆ. ಉರ್ದು ಭಾಷೆಯು 'ಗಂಗಾ– ಜಮುನಿ ತೆಹಜೀಬ್'ನ ಅತ್ಯುತ್ಕೃಷ್ಟ ಮಾದರಿಯಾಗಿದೆ ಎಂದು ಕೋರ್ಟ್ ಹೇಳಿದೆ. ಉರ್ದುವನ್ನು ಮುಸ್ಲಿಮರ ಭಾಷೆ ಎಂದು ನೋಡುವುದು ವಾಸ್ತವವನ್ನು ಮರೆಮಾಚುವ ಕರುಣಾಜನಕ ಸ್ಥಿತಿಯಾಗಿದೆ; ವೈವಿಧ್ಯದಲ್ಲಿ ಏಕತೆ ಎಂಬುದಕ್ಕೆ ಮಾಡುವ ಅವಮಾನವಾಗಿದೆ ಎಂದು ನ್ಯಾಯಾಲಯ ಹೇಳಿದೆ. ಹಿಂದಿ ಮತ್ತು ಉರ್ದು ಎರಡೂ ಭಾಷೆಗಳು ಒಂದೇ ಭಾಷಿಕ ಮೂಲದಿಂದ ಅಭಿವೃದ್ಧಿ ಹೊಂದಿವೆ. ನಮ್ಮ ದೇಶದಲ್ಲಿ ಉರ್ದು ಭಾಷೆಯನ್ನು ಶತಮಾನಗಳಿಂದ ಮಾತನಾಡಲಾಗುತ್ತಿದೆ. ಈ ಭಾಷೆಯನ್ನು ತಿರಸ್ಕರಿಸುವುದು ಮತ್ತು ನಿಂದಿಸುವುದು ದೇಶದಲ್ಲಿ ವ್ಯಾಪಕವಾಗಿ ಕಾಣಿಸುತ್ತಿರುವ ವಿಭಜನೆಯ ಮನಃಸ್ಥಿತಿಯ ಭಾಗವಾಗಿದೆ. ಉರ್ದು ಸೇರಿದಂತೆ ಭಾರತದ ಭಾಷೆಗಳು, ಧರ್ಮಗಳು, ಜನಾಂಗಗಳು, ಇತರ ವೈವಿಧ್ಯಗಳು ನಮ್ಮ ಸಂಸ್ಕೃತಿಯನ್ನು ರೂಪಿಸಿವೆ. ಈ ಮಹತ್ವದ ವಿಚಾರವನ್ನು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ.

ದಿನದ ಟ್ವೀಟ್

ಶಬ್ದಮಾಲಿನ್ಯ ತಗ್ಗುವುದೇ?



ಭಾರತೀಯ ಸಂಗೀತ ಸಾಧನಗಳ ಶಬ್ದಗಳನ್ನಷ್ಟೇ ವಾಹನಗಳ ಹಾರ್ನ್ ಆಗಿ ಬಳಸುವ ಸಂಬಂಧ ಕಾನೂನು ತರಲು ಯೋಚಿಸುತ್ತಿರುವುದಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಇದು ಸ್ವಲ್ಪಮಟ್ಟಿಗಷ್ಟೇ ನಿರಾಳ ಭಾವವನ್ನು ತಂದುಕೊಡಬಹುದು. ಆದರೆ ಅತ್ಯಂತ ಮುಖ್ಯವಾದ ವಿಷಯ ಬಗೆಹರಿಯದೇ ಉಳಿಯುತ್ತದೆ. ಅನಗತ್ಯವಾಗಿ ಹಾರ್ನ್ ಮಾಡುವುದನ್ನು ನಿಷೇಧಿಸುವ ಕಾನೂನನ್ನು ನಾವು ತರುತ್ತೇವೆಯೇ? ವಾಹನಗಳ ಹಾರ್ನ್ ಸದ್ದು ಶಬ್ದಮಾಲಿನ್ಯದ ಬಹುಮುಖ್ಯ ಮೂಲವಾಗಿದೆ...

ಡಾ. ಸುಧೀರ್ ಕುಮಾರ್, ನರರೋಗಶಾಸ್ತ್ರಜ್ಞ

ಕಿಡಿನುಡಿ



ಬಿಜೆಪಿಯು ಹಿಂದೂಗಳ ರಕ್ಷಣೆಗೆ ಓಡಿಬರುತ್ತದೆ. ಅದಕ್ಕೆ ಅವರ ಬಗ್ಗೆಯೇ ಕಾಳಜಿ ಮತ್ತು ಅವರದೇ ಯೋಚನೆ. ಕಾಂಗ್ರೆಸ್ ಪಕ್ಷ ದಮನಿತರು, ಅಲ್ಪಸಂಖ್ಯಾತರ ರಕ್ಷಣೆಗೆ ಧಾವಿಸುತ್ತದೆ. ಆದರೆ ಕನ್ನಡಿಗರ ರಕ್ಷಣೆಯ ಪ್ರಶ್ನೆ ಬಂದಾಗ ಇವೆರಡೂ ಪಕ್ಷಗಳು ಧ್ವನಿ ಎತ್ತುವುದಿಲ್ಲ. ಕಾರಣ, ಇಲ್ಲಿ ಎತ್ತುವ ಧ್ವನಿ ಬೇರೆ ರಾಜ್ಯಗಳಲ್ಲಿ ಅವರ ಮತಗಳಿಗೆ ಹಾನಿ ಮಾಡಬಹುದು ಎಂಬುದು. ಹಾಗಾದರೆ ಇವರ ಪ್ರಕಾರ ನಾವು ಯಾರು?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 23-4-2000

● 'ಅಮೇಠಿ ಮಾದರಿ ಬಳ್ಳಾರಿ ಅಭಿವೃದ್ಧಿ'

ಬಳ್ಳಾರಿ, ಏ. 22– 'ಅಮೇಠಿ ಕ್ಷೇತ್ರವನ್ನು ಹೇಗೆ ಅಭಿವೃದ್ಧಿಪಡಿಸುವೆನೋ ಅದೇ ರೀತಿಯಲ್ಲಿ ಬಳ್ಳಾರಿ ಕ್ಷೇತ್ರವನ್ನು ಸಹ ನಿರ್ಲಕ್ಷಿಸದೆ ಮಾದರಿ ಕ್ಷೇತ್ರವಾಗಿ ರೂಪಿಸಲು ಶ್ರಮಿಸುತ್ತೇನೆ.'

ಈ ಆಶ್ವಾಸನೆಯನ್ನು ಇಂದಿಲ್ಲಿ ನೀಡಿದವರು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು. ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ 1999ನೇ ಸಾರ್ವತ್ರಿಕ ಚುನಾವಣೆಯಲ್ಲಿ ಅಭೂತಪೂರ್ವ ಜಯಭೇರಿ ಬಾರಿಸಿದ್ದ ಅವರು, ಇಂದು ಬಳ್ಳಾರಿಗೆ ಆಗಮಿಸಿ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ಜನರಲ್ಲಿದ್ದ ಅಸಮಾಧಾನಕ್ಕೆ ತೆರೆ ಎಳೆದರು. 'ಈ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದರೂ ನಾನು ಇಲ್ಲಿನ ಜನರ ಸಂಬಂಧ ಕಡಿದುಕೊಳ್ಳುವುದಿಲ್ಲ' ಎಂದರು.

● ಭಾರತೀಯ ಪತ್ರಿಕೆಗಳೂ ಹಿಂದಿಲ್ಲ ನಾರಾಯಣನ್ ಕಿಡಿನುಡಿ

ಏರ್ ಇಂಡಿಯಾದ ವಿಶೇಷ ವಿಮಾನ, ಏ. 22 (ಪಿಟಿಐ)– ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಫ್ರೆಂಚ್ ಮಾಧ್ಯಮಗಳು ತಮ್ಮನ್ನು 'ಅಸ್ಪೃಶ್ಯ' ಎಂದು ಬಣ್ಣಿಸಿದ ವಿವಾದ ಈಗ ಗತಕಾಲ ಸೇರಿದೆ ಎಂದು ಪ್ರತಿಕ್ರಿಯಿಸಿದ್ದು, ವಿವಾದಕ್ಕೆ ಭಾರತೀಯ ಮಾಧ್ಯಮಗಳೂ ಕಾರಣ ಎಂದು ಆರೋಪಿಸಿದ್ದಾರೆ.

ಫ್ರಾನ್ಸ್‌ನಿಂದ ವಾಪಸಾಗುತ್ತಿದ್ದ ರಾಷ್ಟ್ರಪತಿಯವರು ಸುದ್ದಿಗಾರರ ಜತೆ ಮಾತನಾಡಿ, 'ಈ ರೀತಿಯ ಕೀಳುಮಟ್ಟದ ಪ್ರಚಾರವನ್ನು ಭಾರತೀಯ ಮಾಧ್ಯಮಗಳು ಮೂರು ವರ್ಷಗಳಿಂದ ನಡೆಸುತ್ತಿವೆ. ಫ್ರೆಂಚ್ ಮಾಧ್ಯಮಗಳ ವರದಿಗಳು ಇದನ್ನು ಪ್ರತಿಬಿಂಬಿಸಿವೆ' ಎಂದರು.

50 ವರ್ಷಗಳ ಹಿಂದೆ

ಬುಧವಾರ, 23-4-1975

● ಹೊಸ ಚುನಾವಣಾ ಪದ್ಧತಿಗೆ ಒತ್ತಾಯ

ನವದೆಹಲಿ, ಏ. 22– ಜನತೆಯ ಆಶೋತ್ತರಗಳನ್ನು ಹೆಚ್ಚು ವಾಸ್ತವಿಕವಾಗಿ ಪ್ರತಿಬಿಂಬಿಸುವ ಹೊಸ ಚುನಾವಣಾ ಪದ್ಧತಿಗಾಗಿ ಸಂಸತ್ತಿನ ಎಲ್ಲ ವಿರೋಧ ಪಕ್ಷಗಳೂ ಇಂದು ಒಮ್ಮತದಿಂದ ಒತ್ತಾಯಪಡಿಸಿದವು.

ಸ್ವಾತಂತ್ರ್ಯ ಬಂದಾಗಿನಿಂದ ಅನುಸರಿಸುತ್ತಿರುವ 'ಬಹುಮತದ ಪದ್ಧತಿ' ಬದಲಾಗಿ ಈ ಹೊಸ ಪದ್ಧತಿ ಅಳವಡಿಸಿಕೊಳ್ಳುವುದು ಅಗತ್ಯವೆಂದು ಈ ಪಕ್ಷಗಳು ಅಭಿಪ್ರಾಯಪಟ್ಟಿವೆ. ಈ ಪ್ರಶ್ನೆಯನ್ನು ಆಳವಾಗಿ ಅಧ್ಯಯನ ಮಾಡಲು ಹಾಗೂ ಪ್ರಮಾಣಾನುಸಾರ ಪ್ರಾತಿನಿಧ್ಯ ಪಟ್ಟಿ ಪದ್ಧತಿಯಂಥ ನಾನಾ ಪರ್ಯಾಯ ವ್ಯವಸ್ಥೆ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿಯೊಂದನ್ನು ನೇಮಕ ಮಾಡಬೇಕೆಂದು ಕಮ್ಯುನಿಸ್ಟೇತರ ಎಂಟು ವಿರೋಧ ಪಕ್ಷಗಳು ಸಂಯುಕ್ತ ಮನವಿಯಲ್ಲಿ ಒತ್ತಾಯಪಡಿಸಿವೆ.


● ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ ಕೇಂದ್ರದ ಪರಿಶೀಲನೆಯಲ್ಲಿ

ನವದೆಹಲಿ, ಏ. 22– ಬಾಲ್ಯವಿವಾಹವನ್ನು ದಂಡಾರ್ಹ ಅಪರಾಧವನ್ನಾಗಿ ಮಾಡುವ ಪ್ರಶ್ನೆ ಕೇಂದ್ರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಕಾನೂನು ಸಚಿವ ಎಚ್.ಆರ್. ಗೋಖಲೆ ಇಂದು ಲೋಕಸಭೆಗೆ ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಬಾಲ್ಯವಿವಾಹ ಪದ್ಧತಿ ಇನ್ನೂ ಜಾರಿಯಲ್ಲಿರುವ ಬಗ್ಗೆ ಸದಸ್ಯರು ವ್ಯಕ್ತಪಡಿಸಿದ ಕಳವಳಕ್ಕೆ ಅವರು ಉತ್ತರ ನೀಡುತ್ತಿದ್ದರು. ಹೆಣ್ಣುಮಕ್ಕಳ ವಿವಾಹ ವಯೋಮಿತಿಯನ್ನು ಹೆಚ್ಚಿಸಬೇಕಾದ್ದು ತೀರಾ ಅಗತ್ಯ ಎಂದ ವಿ.ಪಿ. ಸೇಠಿಯವರು, ಇದನ್ನು ಸರ್ಕಾರ ಲಘುವಾಗಿ ಭಾವಿಸಿದೆ ಎಂದು ಆರೋಪಿಸಿದರು.

ಅಂತರಧರ್ಮೀಯ ಸೌಹಾರ್ದಕ್ಕೆ ಅನನ್ಯ ಕೊಡುಗೆ ನೀಡಿದ ಪೋಪ್ ಫ್ರಾನ್ಸಿಸ್

ನಾ ಕಂಡ 'ನಮ್ಮ ಕಾಲದ ಗಾಂಧಿ'



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಜಗತ್ತಿನ ಇತಿಹಾಸದಲ್ಲಿ ಸುಖ, ಸಮೃದ್ಧಿ, ಅಭಿವೃದ್ಧಿಯ ಜೊತೆಯಲ್ಲಿಯೇ ಹಿಂಸೆ, ದೌರ್ಜನ್ಯ, ಅನ್ಯಾಯವೂ ಅವಿರತವಾಗಿ ನಡೆದುಬಂದಿವೆ. ಅದರಂತೆಯೇ ಪ್ರತಿ ಯುಗದಲ್ಲಿಯೂ ಸತ್ಯ, ಅಹಿಂಸೆ, ನ್ಯಾಯಕ್ಕಾಗಿ ಹೋರಾಡುವ ಹಾಗೂ ಈ ಅನಂತ ಸೃಷ್ಟಿಯ ಉತ್ಕ್ರಾಂತಿಯ ಕ್ರಮದಲ್ಲಿ ಮನುಷ್ಯಜನ್ಮದ ಅರ್ಥ, ಉದ್ದೇಶಗಳನ್ನು ಸಾರಿ ಹೇಳುವ ಮಹಾನ್ ನಾಯಕರೂ ಹುಟ್ಟುತ್ತಲೇ ಇರುತ್ತಾರೆ. ಇವರು ಧರ್ಮಗುರುಗಳೇ ಆಗಿರಬೇಕೆಂದೇನೂ ಇಲ್ಲ. ಮಹಾತ್ಮ ಗಾಂಧಿ ಯಾವುದೇ ಹಿಂದೂ ಧಾರ್ಮಿಕ ಸಂಸ್ಥೆಯ ಪ್ರಮುಖರಾಗಿರಲಿಲ್ಲ. ಆದರೂ ಅವರು ತಮ್ಮ ಕಾಲದ– ಅಲ್ಲದೆ ಈಗಿನ ಮತ್ತು ಭವಿಷ್ಯದ– ನೈತಿಕ ನಾಯಕರಾದರು.

ನಮ್ಮ ಸಮಕಾಲೀನ ಜಗತ್ತಿನಲ್ಲಿ ಮನುಷ್ಯತ್ವದ ಸಂರಕ್ಷಣೆಗಾಗಿ ಹೋರಾಟ ನಡೆಸಿದವರು ಯಾರು? ಈ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟವೇನೂ ಅಲ್ಲ. ಅವರು ಮೊನ್ನೆ ನಮ್ಮನ್ನು ಅಗಲಿದ ಧರ್ಮಗುರು ಪೋಪ್ ಫ್ರಾನ್ಸಿಸ್. ನಮ್ಮ ಯುಗದ ಗಾಂಧಿ. ಬಡತನ, ಹಿಂಸೆ, ಯುದ್ಧ ಮತ್ತು ಅನ್ಯಾಯಗಳ ವಿರುದ್ಧ ಹಾಗೂ ಏಕತೆ, ಸಹೋದರತ್ವಕ್ಕಾಗಿ ಅವರಷ್ಟು ಧೈರ್ಯದಿಂದ, ಬದ್ಧತೆಯಿಂದ ಇತ್ತೀಚಿನ ಕಾಲಘಟ್ಟದಲ್ಲಿ ಯಾವ ಧರ್ಮಗುರುವಾಗಲಿ ಅಥವಾ ರಾಜಕೀಯ, ಸಾಮಾಜಿಕ ನಾಯಕನೇ ಆಗಲಿ ದನಿಯೆತ್ತಿರಲಿಲ್ಲ. ಮುಖದ ಮೇಲೆ ಮುಗ್ಧ ಮಗುವಿನಂತಹ ನಗು. ಆದರೆ ಅವರ ಅಂತರಾಳದಲ್ಲಿ ಜಗದ ಇಂದಿನ ದುರವಸ್ಥೆಯ ಬಗ್ಗೆ ಅತೀವ ನೋವು, ಪ್ರಕ್ಷುಬ್ಧತೆ ತುಂಬಿತ್ತು.

'ಬಡಜನರ ಪೋಪ್' ಎಂದೇ ಅವರು ಖ್ಯಾತಿ ಪಡೆದಿದ್ದರು. ಅರ್ಜೆಂಟೀನಾದಲ್ಲಿ ಜನಿಸಿದ ಅವರು ರಾಜಧಾನಿ ಬ್ಯೂನಸ್ ಐರಿಸ್‌ನ ಕೊಳೆಗೇರಿಗಳಲ್ಲಿ ಕೆಲಸ ಮಾಡುವಾಗಲೇ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ವಿಷಮ ಪರಿಸ್ಥಿತಿಯ ಕರಾಳ ವಾಸ್ತವವನ್ನು ಅರಿತುಕೊಂಡರು. 2013ರ ಮಾರ್ಚ್‌ನಲ್ಲಿ ಜಾಗತಿಕ ಕ್ಯಾಥೊಲಿಕ್ ಚರ್ಚ್‌ನ ಪೋಪ್ ಆದ ಕೂಡಲೇ ಅವರು ಗರ್ಜಿಸಿದರು: 'ಜಗತ್ತಿನಲ್ಲಿ ಇಂದು ಇರುವ ದಾರುಣವಾದ ಬಡತನವು ಅಕ್ಷಮ್ಯವಾದ ಒಂದು ಸಮಸ್ಯೆ. ಅಗಾಧವಾದ ಸಂಪತ್ತು ಮತ್ತು ಸಂಪನ್ಮೂಲಗಳು ಇರುವಾಗಲೂ ಹಸಿದ, ಶಿಕ್ಷಣ ಪಡೆಯದ ಇಷ್ಟೊಂದು ಮಕ್ಕಳು ಏಕಿದ್ದಾರೆ?'

ಆಫ್ರಿಕಾ ಮತ್ತು ಏಷ್ಯಾದ ಯುದ್ಧಪೀಡಿತ ಹಾಗೂ ಬಡತನದಿಂದ ಬಳಲುತ್ತಿರುವ ಪ್ರದೇಶಗಳಿಂದ ಯುರೋಪಿಗೆ ವಲಸೆ ಬರುವ ದುಃಖಿತ ನಿರಾಶ್ರಿತರಿಗೆ ಗೌರವಾನ್ವಿತ ಜೀವನಾವಕಾಶ ಸಿಗಬೇಕೆಂದು ಅವರು ಪ್ರತಿಪಾದಿಸಿದರು. ಇದಕ್ಕಾಗಿ ಯುರೋಪಿನ ಅನೇಕ ಕ್ರೈಸ್ತ ನಾಯಕರು ಅವರನ್ನು ವಿರೋಧಿಸಿದರೂ ಪೋಪ್ ಫ್ರಾನ್ಸಿಸ್ 'ನಿರಾಶ್ರಿತರು ಕೂಡ ದೇವರ ಮಕ್ಕಳೇ ಅಲ್ಲವೆ?' ಎಂದು ಪ್ರಶ್ನಿಸಿದರು.

ಅವರ ಈ ಪ್ರಗತಿಪರ ನಿಲುವಿಗೆ ಕಾರಣವಿತ್ತು. ಅವರ ಮೂಲನಾಮ ಜಾರ್ಜ್ ಮಾರಿಯೊ ಬರ್ಗೋಗ್ಲಿಯೊ. ವ್ಯಾಟಿಕನ್ನಿನ ಪ್ರಮುಖರಾದ ನಂತರ ಅವರು ತಮಗಾಗಿ ಆರಿಸಿಕೊಂಡ ಹೆಸರು ಪೋಪ್ ಫ್ರಾನ್ಸಿಸ್. ಏಕೆಂದರೆ ಅವರಿಗೆ ಪ್ರೇರಣೆ ನೀಡಿದ ಆಧ್ಯಾತ್ಮಿಕ ನಾಯಕ, ಇಟಲಿಯ ಅಸ್ಸೀಸಿಯಲ್ಲಿನ 13ನೇ ಶತಮಾನದ ಮಹಾನ್ ತಪಸ್ವಿ, ಸಂತ ಫ್ರಾನ್ಸಿಸ್. ಮನುಷ್ಯರನ್ನಷ್ಟೇ ಅಲ್ಲ ಸಕಲ ಪ್ರಾಣಿಪಕ್ಷಿ, ಜೀವಜಂತುಗಳನ್ನೂ ಪ್ರೀತಿಸಿದ ಮಹಾತ್ಮ ಆತ. ಗಾಂಧೀಜಿಗೂ ಸಂತ ಫ್ರಾನ್ಸಿಸ್ ಅವರ ಬಗ್ಗೆ ಅಪಾರ ಆದರವಿತ್ತು.

ಧರ್ಮವು ಭಕ್ತರನ್ನು ಬರೀ ಕರ್ಮಕಾಂಡದಲ್ಲಿ ಬಂಧಿಸಿ ಇಡಬಾರದು, ಅದು ಜಗತ್ತನ್ನು, ಜೀವನವನ್ನು ಸುಧಾರಿಸುವ ದಿಸೆಯಲ್ಲಿ ಜಾಗೃತಿ ಹುಟ್ಟಿಸಬೇಕು ಎಂದು ನಂಬಿದವರು ಪೋಪ್ ಫ್ರಾನ್ಸಿಸ್. ಹವಾಮಾನ ವೈಪರೀತ್ಯದ ಸಂಕಟದಿಂದ ಪ್ರಕೃತಿ ಮಾತೆಯನ್ನು ರಕ್ಷಿಸಲು ಅವರು ಅತ್ಯಂತ ಮಹತ್ವದ ಕಾರ್ಯವನ್ನು ಹಮ್ಮಿಕೊಂಡರು. 2015ರಲ್ಲಿ ಪ್ಯಾರಿಸ್ ಹವಾಮಾನ ಶೃಂಗಸಭೆಗೆ ಮುನ್ನ ಅವರು 'ಆನ್ ಕೇರ್ ಫಾರ್ ಅವರ್ ಕಾಮನ್ ಹೋಮ್' ಎಂಬ ಶೀರ್ಷಿಕೆಯ ಘೋಷಣಾಪತ್ರವನ್ನು ಬಿಡುಗಡೆ ಮಾಡಿ 'ಭೂಮಿಯ ಕೂಗು ಮತ್ತು ಬಡವರ ಕೂಗನ್ನು' ಆಲಿಸುವಂತೆ ವಿಶ್ವ ನಾಯಕರ ಸಾಮೂಹಿಕ ಅಂತಃಸಾಕ್ಷಿಗೆ ಮನವಿ ಮಾಡಿದರು.


ಜಗತ್ತಿನಲ್ಲಿ ಎಲ್ಲಿಯೇ ಯುದ್ಧ ನಡೆಯುತ್ತಿರಲಿ ಅದನ್ನು ತಡೆಯಲು ಪೋಪ್ ಸತತವಾಗಿ ಹೆಣಗಿದರು. ಜೀವನದ ಕೊನೆಯ ತಿಂಗಳುಗಳಲ್ಲಿ ಕೂಡ ಆಸ್ಪತ್ರೆಯ ಹಾಸಿಗೆಯಿಂದ ಅವರು ಸಂದೇಶ ಕಳಿಸಿ, ಉಕ್ರೇನ್ ಯುದ್ಧ ಮೂರು ವರ್ಷಗಳಾದರೂ ನಿಲ್ಲದೇ ಇರುವುದು ಮಾನವೀಯತೆಗೆ ಕಳಂಕ ಎಂದು ತಮ್ಮ ನೋವನ್ನು ಬಿತ್ತರಿಸಿದರು. ಗಾಜಾದ ಮೇಲೆ ಇಸ್ರೇಲ್‌ನ ಮಿಲಿಟರಿ ದಾಳಿಗಳಿಂದ ನಡೆದದ್ದು ನರಮೇಧವೇ ಎಂದು ನಿರ್ಧರಿಸಲು ಅವರು ತನಿಖೆಗೆ ಕರೆ ನೀಡಿದರು. ಅಮಾಯಕ ಪ್ಯಾಲೆಸ್ಟೀನಿಯನ್ನರ ಉದ್ದೇಶಪೂರ್ವಕ ಸಾಮೂಹಿಕ ಹತ್ಯೆಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತಾನ್ಯಹು ತಪ್ಪಿತಸ್ಥರು ಎಂದು ಸೂಚಿಸಿದರು. ಗಾಜಾ ಯುದ್ಧವನ್ನು ಕೊನೆಗೊಳಿಸುವಲ್ಲಿ ವಿಶ್ವ ನಾಯಕರ 'ನಾಚಿಕೆಗೇಡಿನ ಅಸಾಮರ್ಥ್ಯ'ವನ್ನು ಅವರು ಟೀಕಿಸಿದರು. ವಿವಿಧ ಧರ್ಮಗಳ ಅನುಯಾಯಿಗಳ ನಡುವೆ ಶಾಂತಿ, ಸೌಹಾರ್ದ, ಸಹಕಾರ, ಬಂಧುಭಾವ ಬೆಳೆಸಲು ಮತ್ತು ಅದಕ್ಕಾಗಿ ಸತತವಾಗಿ ಅಂತರಧರ್ಮೀಯ ಸಂವಾದ ನಡೆಸಲು ಪೋಪ್ ಅವರು ಮಾಡಿದಷ್ಟು ಭಗೀರಥ ಪ್ರಯತ್ನವನ್ನು ಇತರ ಯಾವುದೇ ಧಾರ್ಮಿಕ ನಾಯಕರೂ ಮಾಡಲಿಲ್ಲ.

2019ರಲ್ಲಿ ಪೋಪ್ ನೇತೃತ್ವದಲ್ಲಿ ಅಬುಧಾಬಿಯಲ್ಲಿ ನಡೆದ 'ಮಾನವ ಸಹೋದರತ್ವ' ಶೃಂಗಸಭೆಯಲ್ಲಿ ನಾನು ಭಾಗವಹಿಸಿದ್ದೆ. ಇತಿಹಾಸದಲ್ಲಿ ಮೊದಲ ಬಾರಿಗೆ ಜಾಗತಿಕ ಕ್ಯಾಥೊಲಿಕ್ ಚರ್ಚ್‌ನ ಮುಖ್ಯಸ್ಥರೊಬ್ಬರು ಅರೇಬಿಯನ್ ನೆಲಕ್ಕೆ ಕಾಲಿಟ್ಟಿದ್ದರು. ಅಲ್ಲದೆ, ಇತಿಹಾಸದಲ್ಲಿ ಮೊದಲ ಬಾರಿಗೆ, ಪೋಪ್ ಫ್ರಾನ್ಸಿಸ್ ಮತ್ತು ವಿಶ್ವದ ಪ್ರಮುಖ ಇಸ್ಲಾಮಿಕ್ ಕೇಂದ್ರವಾದ ಈಜಿಪ್ಟ್‌ನ ಅಲ್ ಅಜರ್‌ನ ಇಮಾಮ್ ಅಹ್ಮದ್ ಅಲ್ ತಯ್ಯೆಬ್ ಅವರು ಜಂಟಿ ಘೋಷಣೆಯೊಂದಕ್ಕೆ ಸಹಿ ಹಾಕಿದರು. 'ಧರ್ಮಗಳು ಎಂದಿಗೂ ಯುದ್ಧ, ದ್ವೇಷಪೂರಿತ ವರ್ತನೆ, ಅಸಹಿಷ್ಣುತೆ, ಹಗೆತನ ಮತ್ತು ಉಗ್ರವಾದವನ್ನು ಪೋಷಿಸಬಾರದು. ಹಿಂಸೆ ಅಥವಾ ರಕ್ತಪಾತವನ್ನು ಪ್ರಚೋದಿಸಬಾರದು' ಎಂದು ಹೇಳುವುದರ ಜೊತೆಗೆ 'ಮನುಷ್ಯರ ಹೃದಯದಲ್ಲಿ ಶಾಂತಿಯ ಬೀಜ ಬಿತ್ತೋಣ' ಎಂದು ಕರೆ ಕೊಟ್ಟರು.

ದುಃಖಕರ ಸಂಗತಿಯೆಂದರೆ, ಆ ಐತಿಹಾಸಿಕ ಕ್ರೈಸ್ತ–ಮುಸ್ಲಿಂ ಸಂವಾದದ ನಂತರ, ಅಷ್ಟೇ ಅಗತ್ಯವಿರುವ ಕ್ರೈಸ್ತ– ಹಿಂದೂ ಸಂವಾದ ಶುರುವಾಗಲಿಲ್ಲ. ಪೋಪ್ ಫ್ರಾನ್ಸಿಸ್ ಅಂತಹದ್ದೊಂದು ಸಂವಾದವನ್ನು ತೀವ್ರವಾಗಿ ಬಯಸಿದ್ದರು. 2016ರಲ್ಲಿ ನಾನು ಅವರನ್ನು ಅಸ್ಸೀಸಿಯಲ್ಲಿ ಭೇಟಿಯಾಗಿದ್ದೆ. ವಿಶ್ವಶಾಂತಿಗಾಗಿ ನಡೆದ ಅಂತರಧರ್ಮೀಯ ಸಭೆಯಲ್ಲಿ ಭಾಗವಹಿಸಲು ನಾನು ಅಲ್ಲಿಗೆ ತೆರಳಿದ್ದೆ. ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿ ಅವರ ಕುರಿತಾದ ನನ್ನ ಪುಸ್ತಕಗಳನ್ನು ಅವರಿಗೆ ಗೌರವಪೂರ್ವಕವಾಗಿ ಅರ್ಪಿಸಿ 'ಇವರಿಬ್ಬರೂ ಹಿಂದೂ ಧರ್ಮದ ಅತ್ಯುತ್ತಮ ಪ್ರತಿನಿಧಿಗಳು' ಎಂದು ಹೇಳಿದೆ. ಅವರು ಬಹುಶಃ ಮೊದಲ ಬಾರಿಗೆ ವಿವೇಕಾನಂದರ ಬಗ್ಗೆ ಕೇಳಿರಬಹುದು. ಆದರೆ ಸ್ವಾಮೀಜಿಯ ಬೋಧನೆಗಳಲ್ಲಿ ತೀವ್ರ ಆಸಕ್ತಿಯನ್ನು ತೋರಿಸಿದರು. ನಂತರ ನಾನು ಅವರನ್ನು ಪ್ರಾರ್ಥಿಸಿದೆ: 'ಪವಿತ್ರರೇ, ನಾನೊಬ್ಬ ಧರ್ಮನಿಷ್ಠ ಹಿಂದೂ. ಆದರೆ ಬುದ್ಧ ಮತ್ತು ಗಾಂಧಿಯವರ ಪವಿತ್ರ ಭೂಮಿಯಾದ ಭಾರತಕ್ಕೆ ನೀವು ಭೇಟಿ ನೀಡಬೇಕೆಂದು ನನ್ನ ವಿನಂತಿ'. ನನ್ನ ಮಾತನ್ನು ಗಮನವಿಟ್ಟು ಕೇಳಿದ ನಂತರ ಅವರು ಉತ್ತರಿಸಿದರು: 'ಭಾರತಕ್ಕೆ ಬರಲು ನಾನು ತುಂಬಾ ಇಚ್ಛೆಪಟ್ಟಿದ್ದೇನೆ. ಭಾರತ ಮತ್ತು ಅದರ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ನನಗೆ ಅಪಾರ ಗೌರವವಿದೆ'.

ನಾನು ಹಿಂದಿರುಗಿದ ನಂತರ, ಪೋಪ್ ಅವರನ್ನು ಭಾರತಕ್ಕೆ ಆಹ್ವಾನಿಸುವಂತೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದೆ. ಭಾರತದ ಕ್ರೈಸ್ತ ಸಮುದಾಯದ ನಾಯಕರು ಕೂಡ ಇದೇ ರೀತಿಯ ಮನವಿಯನ್ನು ಮಾಡಿದರು. 2021ರ ಅಕ್ಟೋಬರ್‌ನಲ್ಲಿ ರೋಮ್‌ನಲ್ಲಿ ನಡೆದ ಜಿ20 ಶೃಂಗಸಭೆಯ ಸಂದರ್ಭದಲ್ಲಿ ಮೋದಿ ಅವರು ಸ್ವತಃ ಪೋಪ್ ಅವರನ್ನು ಭೇಟಿ ಮಾಡಿ ಅವರನ್ನು ಪ್ರೀತಿಯಿಂದ ಅಪ್ಪಿಕೊಂಡರು. ಆದರೆ ಪೋಪ್ ಫ್ರಾನ್ಸಿಸ್ ನಮ್ಮ ನೆರೆಹೊರೆಯ, ಮುಸ್ಲಿಂ ಬಹುಸಂಖ್ಯಾತ ಬಾಂಗ್ಲಾದೇಶ, ಬೌದ್ಧ ಬಹುಸಂಖ್ಯಾತ ಶ್ರೀಲಂಕಾ ಮತ್ತು ಮ್ಯಾನ್ಮಾರ್‌ಗೆ ಭೇಟಿ ನೀಡಿದ್ದರೂ ಭಾರತ ಅವರನ್ನು ಬರಮಾಡಿಕೊಳ್ಳಲಿಲ್ಲ.

'ದೇವರ ಮೇಲೆ ಅಪಾರವಾದ ಭಕ್ತಿ, ಸಕಲ ಮನುಷ್ಯರ ಮೇಲೆ ಅಸೀಮವಾದ ಪ್ರೀತಿ. ಇದುವೇ ನಿಜವಾದ ಧಾರ್ಮಿಕ ನಾಯಕನ ಲಕ್ಷಣ' ಎಂದು ಸ್ವಾಮಿ ವಿವೇಕಾನಂದರ ಪ್ರಮುಖ ಶಿಷ್ಯರಾದ ಸ್ವಾಮಿ ರಂಗನಾಥಾನಂದ ಹೇಳಿದ್ದಾರೆ. ನಾನು ಭಾರತ ಮತ್ತು ಪ್ರಪಂಚದಾದ್ಯಂತ ಅನೇಕ ಧಾರ್ಮಿಕ ನಾಯಕರನ್ನು ಭೇಟಿ ಮಾಡಿದ್ದೇನೆ. ಈ ಆದರ್ಶವನ್ನು ಪೋಪ್ ಫ್ರಾನ್ಸಿಸ್ ಅವರಿಗಿಂತ ಉತ್ತಮವಾಗಿ ಯಾರೂ ಸಾಕಾರಗೊಳಿಸಿಲ್ಲ. ಪೋಪ್ ಅವರಿಗೆ ನನ್ನ ಮನದಾಳದ ಶ್ರದ್ಧಾಂಜಲಿ.



ಚುರುಮುರಿ



ಅದ್ಲಿ ಬದ್ಲಿ ಆಗ್ಬೇಕಪೋ!

● ಸಿದ್ದಯ್ಯ ಹಿರೇಮಠ

'ನಾವ್ ಸಣ್ಣೋರಿದ್ದಾಗ ಹಾಲು, ಸಕ್ಕರಿ, ಅಕ್ಕಿ, ಬ್ಯಾಳಿ, ಬೆಲ್ಲ, ಕಾಯ್ಪಲ್ಲೆ ರೇಟ್ ಜಾಸ್ತಿ ಆದಾಗ ಜನ ರೋಡಿಗಿಳಿದು, ಏರ್ಸಿದ್ ರೇಟ್ ಕಡಿಮೆ ಮಾಡ್ರಿ ಅಂತಿದ್ರು. ಆದ್ರೆ ಈಗ ಕಾಲ ಬದ್ಲಾಗೇದ ಬಿಡಪಾ' ಕಡೇಮನಿ ಕೊಟ್ರ ಲೊಚಗುಡುತ್ತಲೇ ಬಂದ.

'ರೇಟ್ ಜಾಸ್ತಿ ಆಗದು ಇವತ್ ನೋಡಿದ್ಯಾ ಎಂಗ?' ಯಂಕ್ಟ ಸಮಜಾಯಿಷಿಗೆ ಮುಂದಾದ.

'ಇಲ್ಲಲೇ, ನಾವು ಸ್ಟುಡೆಂಟ್ ಆಗಿದ್ದಾಗ ಈ ರೇಟುಗೂಳು ಜಾಸ್ತಿ ಆದ್ವಪಂದ್ರ ರೋಡಿಗಿಳೀತಿದ್ವಿ. ನಮಗ ಹೆದರಿ, ಸ್ಟ್ರೈಕು ಪೈಕು ಮಾಡಬ್ಯಾಡ್ರೆಪಾ ಅಂತ ಲೀಡ್ರುಗೂಳು ಕೇಳಕ್ಯಂತಿದ್ರು. ಇವತ್ ನೋಡು, ಲೀಡ್ರುಗೂಳೇ ರೋಡಿಗಿಳದಾರ. ಪೆಟ್ರೋಲು, ಡೀಸೆಲ್ಲು, ಗ್ಯಾಸ್ ರೇಟ್ ಜಾಸ್ತಿ ಆತಂತ ಕಾಂಗ್ರೆಸಿನೋರು, ಹಾಲು, ಬೆಣ್ಣಿ, ಎಣ್ಣಿ, ಕಾಯ್ಪಲ್ಲೆ, ಬಸ್ ಚಾರ್ಜು ರೇಟು ಜಾಸ್ತಿ ಆತಂತ ಈ ಬಿಜೆಪಿಯೋರು ರೋಡಿಗಿಳ್ಯಾಕತ್ತಾರ. ಅದೇ ನನಿಗೆ ವಂಡರ್ ಅನಿಸೇತಿ ನೋಡು' ವಿವರಣೆ ನೀಡಿದ ಕೊಟ್ರ.

'ಜನಗೂಳೂ ತಮ್ ಪಾಡಿಗೆ ತಾವಿದ್ರಪಂದ್ರ ಈ ಪಾರ್ಟಿಯೋರು, ಲೀಡರ್‌ಗೂಳು ಸ್ಟ್ರೈಕ್ ಮಾಡಬಾರದಂತಿದ್ಯಾ ಹೆಂಗಲೇ ಖೋಡಿ?' ಮೂಲೀಮನಿ ಮಾದೇವ ಜೋರಾಗೇ ಕೇಳಿದ.

'ಅಲ್ಲಲೇ ಜನಗೂಳೂ ತಮ್ ಪಾಡಿಗೆ ತಾವದಾರಂದ್ರ ಅವರಿಗೆ ತೊಂದ್ರಿ ಆಗಿಲ್ಲ ಅಂತ ಅರ್ಥ ಅಲ್ಲಪಾ. ಅಲ್ಲಿ ದಿಲ್ಲಾಗ, ಇಲ್ಲಿ ಬೆಂಗ್ಳೂರಾಗ ಅಧಿಕಾರದಾಗ ಇರೋರು ತಾವೇ ರೇಟ್ ಜಾಸ್ತಿ ಮಾಡಿ ತಾವ್‌ತಾವೇ ರೋಡಿಗಿಳದು ಸ್ಟ್ರೈಕ್ ಮಾಡೀದ್ರ ಹೆಂಗಂತೀನಿ?' ಕೊಟ್ರ ತನ್ ವಾದ ಬಿಟ್ಟುಕೊಡಲಿಲ್ಲ.

'ಬಿಡಿಸೇಳಲೇ ಖೋಡಿ' ಎಂದ ಮಾದೇವ.

'ನೋಡ್ರೆಪಾ... ಈ ಸ್ಟ್ರೈಕ್‌ಗಳಲ್ಲಿ ನಮ್ಮಂಥ ಜನಸಾಮಾನ್ಯರೇ ಇಲ್ಲ. ಎಲ್ಲಾ ಔರೌರ್ ಪಾರ್ಟಿಯೋರೇ ತುಂಬಕ್ಯಂಡಾರ. ಅದರ್ ಬದ್ಲಿಗೆ ಇವರು ಮಾಡ ಸ್ಟ್ರೈಕು ಅವರು, ಅವರು ಮಾಡ ಸ್ಟ್ರೈಕು ಇವರು ಮಾಡೀದ್ರಪಂದ್ರ ಎಲ್ಲಾ ಸರಿ ಹೋಗತ್ತಲ್ಲೇನಪಾ?' ಕೊಟ್ರನ ಸಲಹೆಗೆ ಎಲ್ಲರೂ ಬಾಯಿ ಮೇಲೆ ಬೆರಳಿಟ್ಕಂಡ್ರು.

'ಹೌದಲ್ಲಾ... ಬಿಜೆಪಿಯೋರ ಬೇಡಿಕೆ ಕಾಂಗ್ರೆಸಿಂದಾಗ್ಬೇಕು, ಕಾಂಗ್ರೆಸಿನೋರ ಬೇಡಿಕೆ ಬಿಜೆಪಿದಾಗ್ಬೇಕು, ಆಗ ಎಲ್ಲಾ ಸರಿ ಹೋಗ್ತೈದು...' ಯಂಕ್ಟ ಯೋಚಿಸತೊಡಗಿದ.

ಸಂಗತ

ಪುಣ್ಯಸ್ಥಳದಲ್ಲೇಕೆ ಪಾಪದ ಕೆಲಸ?

ಪ್ರವಾಸಿ ತಾಣದಲ್ಲಿ ಸ್ವಚ್ಛತೆ ಕಾಪಾಡುವ ಹೊಣೆ ಅಲ್ಲಿನ ಸಿಬ್ಬಂದಿಯದ್ದು ಮಾತ್ರ ಅಲ್ಲ, ಎಲ್ಲ ಪ್ರವಾಸಿಗರದು ಸಹ ಆಗಿರುತ್ತದೆ

● ಪ.ರಾಮಕೃಷ್ಣ ಶಾಸ್ತ್ರಿ

ಬೇಸಿಗೆ ಬಂತೆಂದರೆ ಎಲ್ಲ ಪುಣ್ಯಕ್ಷೇತ್ರಗಳು, ವಿಹಾರ ಧಾಮಗಳಲ್ಲಿ ಜನಸಾಗರ ಸೇರುತ್ತದೆ. ಹೆಚ್ಚಾಗಿ ವಿದ್ಯಾವಂತರು, ಜವಾಬ್ದಾರಿಯುತ ನಾಗರಿಕರೇ ಪ್ರವಾಸಿಗರಾಗಿ ಬರುತ್ತಾರೆ. ಆದರೆ ತಾವು ಭೇಟಿ ನೀಡಿರುವ ಸ್ಥಳ ಸಹಜ ಸೌಂದರ್ಯ ಉಳಿಸಿಕೊಂಡು, ನಾಳೆ ಬರುವ ಪ್ರವಾಸಿಗರ ಪಾಲಿಗೂ ಅನುಪಮ ಅನುಭವ ನೀಡಬೇಕೆಂಬ ಆಶಯ ಅವರಲ್ಲಿ ಜಾಗೃತವಾಗಿರುವಂತೆ ಕಾಣಿಸದು.

ಐದು ವರ್ಷಗಳ ಹಿಂದೆ, ಒಂದು ಪುಣ್ಯಕ್ಷೇತ್ರದಲ್ಲಿರುವ ಪಾಪನಾಶಿನಿ ಪುಣ್ಯನದಿಯಲ್ಲಿ ಸ್ವಯಂಸೇವಕರು ಸ್ವಚ್ಛತಾ ಕಾರ್ಯ ನಡೆಸಿದರು. ನದಿಯ ನೀರಿನಲ್ಲಿ ಮುಳುಗಿ ಆಳದಿಂದ ಅವರು ಮೇಲೆತ್ತಿ ತಂದ ಬಟ್ಟೆಗಳ ರಾಶಿ ಹತ್ತು ಟ್ರಕ್ಕುಗಳಲ್ಲಿ ತುಂಬುವಷ್ಟು ಇತ್ತು. ಪುಣ್ಯಜಲದಲ್ಲಿ ಸ್ನಾನ ಮಾಡುವಾಗ ಹಳೆಯ ಬಟ್ಟೆಗಳನ್ನು ಅದರಲ್ಲಿ ವಿಸರ್ಜಿಸಿದರೆ ಪಾಪ ತೊಲಗುತ್ತದೆ ಎಂಬ ನಂಬಿಕೆಯ ಅನುಸಾರ, ಅಲ್ಲಿಗೆ ಬಂದ ಭಕ್ತರೆಲ್ಲರೂ ಬಿಟ್ಟುಹೋಗಿದ್ದ ತಮ್ಮ ಬಟ್ಟೆಯ ಬಳುವಳಿ ಅದು. ಜೊತೆಗೆ ಭಸ್ಮ ತುಂಬಿದ್ದ ಪ್ಲಾಸ್ಟಿಕ್ ಡಬ್ಬಿಗಳು, ಚಪ್ಪಲಿಯಂತಹ ಹಲವಾರು ಪರಿಕರಗಳು ನದಿಯೊಳಗೆ ಸಿಕ್ಕವು.

ಇನ್ನು ಪ್ರವಾಸಿಗರು ಕಸ ಎಸೆಯುವ ಮೂಲಕ ಪರಿಸರಕ್ಕೆ ಎಸಗುವ ಹಾನಿಯಂತೂ ಚಿಕ್ಕದಲ್ಲ. ರಾತ್ರಿ ರಸ್ತೆ ಬದಿಯಲ್ಲಿ ಮದ್ಯಸೇವನೆ ಮಾಡಿ, ಒಂದಷ್ಟು ಮದ್ಯ ಉಳಿದ ಬಾಟಲಿಗಳನ್ನು, ಕುರುಕಲು ತಿಂಡಿಗಳನ್ನು ಅಲ್ಲಲ್ಲಿಯೇ ಬಿಟ್ಟು ಮುಂದೆ ಸಾಗುತ್ತಾರೆ. ಆ ಮದ್ಯವನ್ನು ಕೋತಿಗಳು ಕುಡಿಯುತ್ತವೆ. ಮೇಯುತ್ತಾ ಬಂದ ಜಾನುವಾರುಗಳು ತಿಂಡಿ ತುಂಬಿದ ಪ್ಲಾಸ್ಟಿಕ್ ಚೀಲಗಳನ್ನು ಹಾಗೆಯೇ ನುಂಗಿಬಿಡುತ್ತವೆ. ಪಶುವೈದ್ಯರೊಬ್ಬರು ಇತ್ತೀಚೆಗೆ ಒಂದು ಹಸುವಿನ ಹೊಟ್ಟೆಗೆ ಶಸ್ತ್ರಚಿಕಿತ್ಸೆ ಮಾಡಿ, ಒಳಗೆ ತಿಂಡಿಸಹಿತ ಕಂಡುಬಂದ ನೂರಾರು ಪ್ಲಾಸ್ಟಿಕ್ ಚೀಲಗಳನ್ನು ಹೊರಗೆ ತೆಗೆದಿದ್ದರು.

ಇನ್ನು ಸ್ಯಾನಿಟರಿ ಪ್ಯಾಡು, ಹಣ್ಣಿನ ಸಿಪ್ಪೆ, ಬಳಸಿದ ಡೈಪರ್‌ನಂತಹವನ್ನು ಚೀಲದಲ್ಲಿ ತುಂಬಿ ರಸ್ತೆ ಪಕ್ಕ ಎಸೆದು ಹೋಗುತ್ತಾರೆ. ಇಂತಹ ಚೀಲಗಳನ್ನು ಬೀದಿನಾಯಿಗಳು ಹರಿದು ಅದರೊಳಗಿನ ಕಸವನ್ನು ಇಡೀ ಊರಿಗೆ ಹರಡಿಬಿಡುತ್ತವೆ. ಆ ಪರಿಸರದಲ್ಲಿ ಬದುಕುವವರಿಗೆ ಇದರಿಂದ ಅಸಹನೀಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅನೇಕ ಊರುಗಳ ರಸ್ತೆಯ ಪಕ್ಕ, 'ಇದು ಕಲ್ಲುರ್ಟಿ ದೈವದ ಆವಾಸಸ್ಥಾನ. ಇಲ್ಲಿ ಕಸ ಎಸೆದರೆ ತಾಯಿ ಮುನಿಯುತ್ತಾಳೆ' ಎಂಬಂತಹ ಫಲಕಗಳನ್ನು ಸ್ಥಾಪಿಸುವ ಮೂಲಕ ಪ್ರವಾಸಿಗರಲ್ಲಿ ಭಯ ಹುಟ್ಟಿಸುವ ಯತ್ನವೂ ನಡೆಯುತ್ತದೆ.

ವಿಹಾರಧಾಮಗಳಲ್ಲಿನ ನಿಯಮಗಳನ್ನು ಅನುಸರಿಸದಿರುವುದು ಕೆಲವೊಮ್ಮೆ ಪ್ರವಾಸಿಗರಿಗೇ ಅಪಾಯ ತರಬಹುದು. ಕೊಡಗಿನ ರೆಸಾರ್ಟ್ ಒಂದರಲ್ಲಿ ಇತ್ತೀಚೆಗೆ ರಾತ್ರಿ ಏಳು ಗಂಟೆಯ ಬಳಿಕ ಈಜುಕೊಳದಲ್ಲಿ ಇಳಿಯಬಾರದು ಎಂದು ಸಿಬ್ಬಂದಿ ನಿರ್ಬಂಧ ಹೇರಿದರು. ಆಗ ಪ್ರವಾಸಿಗರು ಮಾರಾಮಾರಿಗೆ ಇಳಿದಿದ್ದರು. ನಿಯಮವನ್ನು ಮೀರಿ ಈಜುಕೊಳಕ್ಕೆ ಇಳಿದು ಮೂವರು ಯುವತಿಯರು ಪ್ರಾಣ ತೆತ್ತ ಪ್ರಸಂಗ ಕರಾವಳಿಯಲ್ಲಿ ಸಂಭವಿಸಿ ಹೆಚ್ಚು ದಿನಗಳು ಕಳೆದಿರಲಿಲ್ಲ. ಅನಾಹುತಕ್ಕೆ ಆಹ್ವಾನ ನೀಡುವ ಸ್ವಚ್ಛಂದ ಪ್ರವೃತ್ತಿ ಪ್ರವಾಸಿಗರಲ್ಲಿ ಇದ್ದರೆ ಅದು ಖಂಡಿತ ಔಚಿತ್ಯಪೂರ್ಣ ಅಲ್ಲ.

ಜಲಪಾತಗಳಲ್ಲಿ, ಬೀಚುಗಳಲ್ಲಿ ಯಾವಾಗ ಅಪಾಯ ಸಂಭವಿಸುತ್ತದೋ ಹೇಳಲಾಗದು. ಆದರೆ ಮೃತ್ಯುವಿನೊಂದಿಗೆ ಸರಸವಾಡಲು ಮುಂದಾಗುವ ದುಸ್ಸಾಹಸಪ್ರಿಯ ಪ್ರವಾಸಿಗರಿಗೆ, ಮುತ್ತು ಬಿದ್ದರೆ ಹೆಕ್ಕಬಹುದು ಕುತ್ತು ಬಂದರೆ ಜೀವ ಮರಳಿ ಬರದು ಎನ್ನುವ ಸತ್ಯದ ಅರಿವಿಲ್ಲದೇ ಹೋಗುತ್ತದೆ. ಮೃಗಾಲಯಗಳಲ್ಲಿ 'ವನ್ಯಜೀವಿಗಳ ಬಳಿಗೆ ಹೋಗಬಾರದು', 'ತಿಂಡಿ ಕೊಡಬಾರದು' ಎನ್ನುವಂತಹ ಫಲಕಗಳನ್ನು ತೂಗಾಡಿಸುವುದು ಸಂದರ್ಶಕರ ಸಲುವಾಗಿಯೇ ಅಲ್ಲವೆ?! ಆದರೆ ಹುಡುಗನೊಬ್ಬ ಹುಲಿಗೆ ಕೈ ತೋರಿಸಲು ಹೋಗಿ, ಅವನ ಅರ್ಧ ಕೈಯನ್ನು ಹುಲಿ ಕಚ್ಚಿ ತುಂಡರಿಸಿದ್ದು ಇಂತಹ ದುಸ್ಸಾಹಸದ ಪ್ರತಿಫಲವೇ ಹೌದು.



ಪುಣ್ಯಕ್ಷೇತ್ರಗಳ ಯಾತ್ರೆ ಮಾಡುವವರು ಸಹ ಪರಿಸರವನ್ನು ಗಲೀಜು ಮಾಡಿ ಹೋಗುವುದು ವಿಷಾದದ ಸಂಗತಿ. ತಮ್ಮ ಮನೆಯಲ್ಲಿ ಯಾರೂ ಅಷ್ಟೊಂದು ಅವ್ಯವಸ್ಥೆ ಮಾಡುವುದಿಲ್ಲ. ತಾವು ಭೇಟಿ ನೀಡಿದ ಕ್ಷೇತ್ರವೂ ತಮ್ಮ ಮನೆಯಂತೆಯೇ ಶುಚಿಯಾಗಿ ಇರಬೇಕೆಂದು ಬಯಸುವ ಪ್ರಬುದ್ಧ ಮನಃಸ್ಥಿತಿಯ ಕೊರತೆ ಎದ್ದು ಕಾಣುತ್ತದೆ.

ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಒಂದು ಹೋಟೆಲ್ಲಿಗೆ ಹೋಗಿದ್ದರು. ತಿಂಡಿ ತಿಂದ ಬಳಿಕ ಕೈ ತೊಳೆಯಲು ಬೇಸಿನ್ ಕಡೆಗೆ ಹೊರಟಾಗ ಜತೆಗಿದ್ದ ಗೆಳೆಯರು ಪ್ಲೇಟಿನಲ್ಲೇ ಕೈ ತೊಳೆಯಲು ಸೂಚಿಸಿದರು. ಅದಕ್ಕೆ ಕಲಾಂ, 'ನಾವು ಸ್ವೀಕರಿಸಿದ ಪವಿತ್ರವಾದ ಆಹಾರವನ್ನು ನೀಡಿದ ತಟ್ಟೆ ಬೇರೆಯವರಿಗೂ ಆಹಾರ ನೀಡಬೇಕೆಂಬ ಸದ್ಭಾವನೆ ನಮ್ಮಲ್ಲಿ ಇದೆಯಾದರೆ, ನಮ್ಮ ಬಾಯಿ ತೊಳೆದು ಅದೇ ತಟ್ಟೆಗೆ ಉಗುಳಬಾರದು. ನಾವು ಭಾರತದ ಹೆಮ್ಮೆಯ ನಾಗರಿಕರು' ಎಂದು ಹೇಳಿದರಂತೆ.

ಯಾವುದೇ ಪ್ರವಾಸಿ ತಾಣದಲ್ಲಿ ಅಚ್ಚುಕಟ್ಟಿನ ವಾತಾವರಣ ಸೃಷ್ಟಿ ಹಾಗೂ ಅಲ್ಲಿರುವ ಯಥಾಸ್ಥಿತಿಯ ಸಂರಕ್ಷಣೆ ಅಲ್ಲಿನ ಸಿಬ್ಬಂದಿಯದ್ದು ಮಾತ್ರ ಅಲ್ಲ, ಭೇಟಿ ನೀಡುವ ಜಾಗೃತ ಮನೋಭಾವದ ಎಲ್ಲ ಪ್ರವಾಸಿಗರದು ಸಹ. ಪ್ರವಾಸ ಕಾಲದಲ್ಲಿ ಇದನ್ನು ನೆನಪಿಡಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ.

ವಾಚಕರ ವಾಣಿ

ಸಂದೇಶವನ್ನು ಗಂಭೀರವಾಗಿ ಪರಿಗಣಿಸಲಿಲ್ಲವೇಕೆ?

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಅವರ ಹತ್ಯೆಯ ಆರೋಪಿಯಾಗಿರುವ ಅವರ ಪತ್ನಿ ಪಲ್ಲವಿ, ಹಿರಿಯ ಪೊಲೀಸ್ ಅಧಿಕಾರಿಗಳ ಪತ್ನಿಯರನ್ನು ಒಳಗೊಂಡ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಕೆಲವು ದಿನಗಳ ಹಿಂದೆ ತಮ್ಮ ಕೌಟುಂಬಿಕ ಕಲಹದ ಬಗ್ಗೆ ಸಂದೇಶಗಳನ್ನು ಹಾಕಿದ್ದರು ಎಂದು ಮಾಧ್ಯಮ ವರದಿಗಳು ತಿಳಿಸಿವೆ. ಪತಿಯಿಂದ ತಾವು ಜೀವಭಯ ಎದುರಿಸುತ್ತಿದ್ದು, ಆಸ್ತಿ, ಹಣದ ವಿಚಾರಕ್ಕೆ ತಮ್ಮ ಮತ್ತು ಮಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಹೀಗಾಗಿ ತಾವಿಬ್ಬರೂ ಅಪಾಯಕಾರಿ ಹಾಗೂ ಅಸುರಕ್ಷಿತ ಸ್ಥಿತಿಯಲ್ಲಿದ್ದು, ತಮಗೆ ತುರ್ತು ನೆರವಿನ ಅಗತ್ಯವಿದೆ ಎಂದು ಅಳಲು ತೋಡಿಕೊಂಡಿದ್ದರು ಎನ್ನಲಾಗಿದೆ. ರಾಜ್ಯದಲ್ಲಿನ ಕೆಳ ಹಂತದ ಪೊಲೀಸ್ ಅಧಿಕಾರಿಗಳು ಹಾಗೂ ಸ್ಥಳೀಯ ಪೊಲೀಸರು ತಮ್ಮ ಪತಿಯ ಪರವಾಗಿ ಕೆಲಸ ಮಾಡುತ್ತಿರುವುದರಿಂದ, ತಾವು ದೂರು ನೀಡಲು ಹೋದರೆ ಸ್ವೀಕರಿಸುವುದಿಲ್ಲ ಎಂದು ಸಹ ಅವರು ಹೇಳಿದ್ದರು ಎನ್ನುವುದು ಗಮನಾರ್ಹ. ಅವರ ಈ ಅಳಲನ್ನು ಆ ಗ್ರೂಪಿನಲ್ಲಿದ್ದ ಯಾವ ಮಹಿಳೆಯೂ ತಮ್ಮ ಪತಿಯ ಗಮನಕ್ಕೆ ತರಲಿಲ್ಲವೇ? ಹಾಗೆ ತಂದು, ಅದನ್ನು ಆಧರಿಸಿ ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರೆ ಓಂ ಪ್ರಕಾಶ್ ಅವರ ಪ್ರಾಣ ಉಳಿಯುತ್ತಿತ್ತೇನೊ.

'ಐ ಕಿಲ್ಡ್ ದಿ ಮಾನ್‌ಸ್ಟರ್' ಎಂದು ಹತ್ಯೆಯ ಬಳಿಕ ಪಲ್ಲವಿ ಅವರು, ತಮಗೆ ಆತ್ಮೀಯರಾಗಿದ್ದ ಮತ್ತೊಬ್ಬ ಪೊಲೀಸ್ ಅಧಿಕಾರಿಯ ಪತ್ನಿಗೆ ವಿಡಿಯೊ ಕರೆ ಮಾಡಿ ತಿಳಿಸಿದ್ದರು ಎನ್ನಲಾಗಿದೆ. ಅವರ ಆ ಸ್ನೇಹಿತೆಯಾದರೂ ಈ ಮೊದಲು ಪಲ್ಲವಿ ಅವರು ಮಾಡಿದ್ದ ಆರೋಪವನ್ನು ಗಂಭೀರವಾಗಿ ಪರಿಗಣಿಸಿದ್ದರೆ ದುರಂತ ತಡೆಯಬಹುದಾದ ಎಲ್ಲ ಸಾಧ್ಯತೆಯೂ ಇತ್ತು. ಆದರೂ ಅವರು ಹಾಗೆ ಮಾಡಲಿಲ್ಲವೇಕೆ ಎಂಬುದು ಯಕ್ಷಪ್ರಶ್ನೆ.

ಪಿ.ಜೆ.ರಾಘವೇಂದ್ರ, ಮೈಸೂರು

ಅಪಾಯ ಆಹ್ವಾನಿಸುತ್ತಿದೆ ಕಟೌಟ್ ಹಾವಳಿ

ಇತ್ತೀಚೆಗೆ ಸುರಿದ ಮಳೆ, ಗಾಳಿಯಿಂದ ಬೆಂಗಳೂರಿನ ನಾಗರಬಾವಿ ವೃತ್ತದಲ್ಲಿ ಅಳವಡಿಸಿದ್ದ ಬೃಹತ್ ಗಾತ್ರದ ಮರದ ಕಟೌಟ್‌ಗಳು ನೆಲಕ್ಕೆ ಉರುಳಿ, ರಸ್ತೆ ಸಂಚಾರಕ್ಕೆ ತೊಂದರೆ ಉಂಟಾಯಿತು. ಬಹುಶಃ ರಾತ್ರಿ ವೇಳೆ ಈ ಅನಾಹುತ ಸಂಭವಿಸಿದ್ದರಿಂದ ಅಪಾಯ ಆಗಿರುವುದು ಕಡಿಮೆ. ಮರದ ಬೃಹತ್ ಕಟೌಟ್‌ಗಳನ್ನು ಅಳವಡಿಸುವ ಪರಿಪಾಟ ಈಚೆಗೆ ಹೆಚ್ಚಾಗಿದೆ. ತಮ್ಮ ನೆಚ್ಚಿನ ನಾಯಕನಟರ ದೊಡ್ಡ ಕಟೌಟ್‌ಗಳನ್ನು ಅಭಿಮಾನಿಗಳು ಸಿನಿಮಾ ಮಂದಿರದ ಅವರಣದಲ್ಲಿ ಅಳವಡಿಸುವ ಪರಿಪಾಟ ಇದೆ. ಆದರೆ ಈಗ ಅದು ಮಹತ್ವ ಕಳೆದುಕೊಂಡು ಶಾಸಕರು, ಸಚಿವರು, ಸಂಘ– ಸಂಸ್ಥೆಗಳ ಅಧ್ಯಕ್ಷರು, ಒಟ್ಟಿನಲ್ಲಿ ದುಡ್ಡಿರುವವರು ಯಾರಾದರೂ ಎಲ್ಲಾದರೂ ತಮ್ಮ ಅಭಿಮಾನಿಗಳ ಮೂಲಕ ಕಟೌಟ್‌ಗಳನ್ನು ಹಾಕಿಸಿಕೊಳ್ಳುವ ಅಭ್ಯಾಸ ಮಾಡಿಕೊಂಡಿದ್ದಾರೆ. ಬರೀ ಬ್ಯಾನರ್‌ಗಳಿದ್ದರೆ ಅಪಾಯದ ಪ್ರಮಾಣ ಕಡಿಮೆ ಇರುತ್ತದೆ. ಆದರೆ ಅವು ಕೂಡ ವಾಹನಗಳಲ್ಲಿ ಓಡಾಡುವ ಜನರ ತಲೆಯ ಮೇಲೆ, ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದು ಅನಾಹುತಗಳಾಗಿರುವುದನ್ನು ನೋಡಿದ್ದೇವೆ.

ಅನಧಿಕೃತ ಬ್ಯಾನರ್ ಮತ್ತು ಕಟೌಟ್‌ಗಳಿಗೆ ಕಡಿವಾಣ ಹಾಕುವುದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಆಯುಕ್ತರು ಹೇಳುತ್ತಿದ್ದರೂ ಮುಖಂಡರು ಅದನ್ನು ಗಣನೆಗೇ ತೆಗೆದುಕೊಳ್ಳದಿರುವುದು ಖೇದಕರ. ಅಪಘಾತ ಸಂಭವಿಸಿದ ಮೇಲೆ ನೊಂದುಕೊಳ್ಳುವುದಕ್ಕಿಂತ ಮೊದಲೇ ಎಚ್ಚರಿಕೆ ವಹಿಸುವುದು ಒಳ್ಳೆಯದು.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಇಂಥವರೂ ಇದ್ದಾರೆ...

ಹಿರಿಯೂರಿನಿಂದ ಮೈಸೂರಿಗೆ ಇತ್ತೀಚೆಗೆ ಬಸ್ಸಿನಲ್ಲಿ ಬರುವಾಗ ಚಿಕ್ಕನಾಯಕನಹಳ್ಳಿ ನಿಲ್ದಾಣದಲ್ಲಿ ಚಾಲಕ ಉಪಾಹಾರಕ್ಕಾಗಿ ಬಸ್ ನಿಲ್ಲಿಸಿದರು. ನಾನು ತಿಂಡಿ ತಿಂದು ಶೌಚಾಲಯದ ಕಡೆ ಹೊರಟೆ. ಆಗ ಸುಮಾರು ಐವತ್ತು ವರ್ಷ ವಯಸ್ಸಿನ ಮಹಿಳೆಯೊಬ್ಬಳು ಕೈಯಲ್ಲಿ ₹20 ಮತ್ತು ₹200ರ ನೋಟುಗಳನ್ನು ಹಿಡಿದು ಪರಿಚಿತಳಂತೆ ಮಾತನಾಡಿಸಿ, ಚಿಲ್ಲರೆ ಕೊಡುವಂತೆ ಕೋರಿದಳು. ನಾನು ವಾಲೆಟ್ ತೆರೆದು 10ರ ಎರಡು ನೋಟುಗಳನ್ನು ಕೊಟ್ಟೆ. ಮತ್ತೆ ಆಕೆ '200 ರೂಪಾಯಿ ಕೊಡುತ್ತೇನೆ, 100 ರೂಪಾಯಿಯ ಎರಡು ನೋಟು ಕೊಡಿ' ಎಂದಳು. ನಾನು ಧಾವಂತದಲ್ಲಿ ತೆಗೆದುಕೊಟ್ಟ ಕೂಡಲೇ ಅದಕ್ಕೆ ಪ್ರತಿಯಾಗಿ ತನ್ನ ನೋಟುಗಳನ್ನು ಕೊಡದೆ ವರಸೆ ಬದಲಿಸಿದ ಆಕೆ, 'ಕೂಗಿಕೊಳ್ಳುತ್ತೇನೆ, ಅಳುತ್ತೇನೆ' ಎನ್ನುತ್ತಾ ಅಸಭ್ಯವಾಗಿ ವರ್ತಿಸತೊಡಗಿದಳು. ಮರ್ಯಾದೆಗೆ ಅಂಜಿ ಶೌಚಾಲಯದ ಒಳ ಹೋಗುವಾಗ ಅಲ್ಲಿದ್ದ ಪೌರಸೇವಕ 'ಆಕೆಗೆ ಯಾಕೆ ದುಡ್ಡು ಕೊಟ್ರಿ? ಎಲ್ಲರಿಗೂ ಹೀಗೇ ಮಾಡ್ತಾಳೆ' ಎಂದ. ನನ್ನಂತೆಯೇ ಮೋಸ ಹೋಗಿದ್ದ ಇನ್ನೊಬ್ಬ ವ್ಯಕ್ತಿ 'ಆಕೆಯನ್ನ ಬಿಡಬ್ಯಾಡಿ ಸಾರ್. ದಿನಾ ಹೀಗೇ ನಿಲ್ದಾಣದಲ್ಲಿ ಒಬ್ಬರನ್ನಾದರೂ ಯಾಮಾರಿಸುತ್ತಾಳೆ. ಕೆನ್ನೆಗೆ ಎರಡು ಬಾರಿಸಿ' ಎಂದ. ನಾನು ಧೈರ್ಯ ತಂದುಕೊಂಡು, ನಿಲ್ದಾಣದಿಂದ ಆಚೆ ಹೋಗುತ್ತಿದ್ದ ಆಕೆಯನ್ನು ಹಿಂಬಾಲಿಸಿ, ಭುಜವನ್ನು ಬಿಗಿಯಾಗಿ ಹಿಡಿದು ಗದರಿದೆ. 'ನನ್ನ ದುಡ್ಡು ವಾಪಸ್ ಕೊಡದಿದ್ದರೆ ಪೊಲೀಸರಿಗೆ ಹಿಡಿದುಕೊಡುತ್ತೇನೆ' ಎಂದು ಗಲಾಟೆ ಮಾಡಿ ವಸೂಲಿ ಮಾಡಿದೆ. ನಿಲ್ದಾಣಗಳಲ್ಲಿ ಇರುವ ಇಂತಹ ವಂಚಕಿಯರ ಬಗ್ಗೆ ಸಾರಿಗೆ ಇಲಾಖೆಯವರು, ಪೊಲೀಸರು ಕ್ರಮ ಕೈಗೊಳ್ಳಬೇಕು.

ಎಸ್.ವಿಶ್ವನಾಥ ಐನಹಳ್ಳಿ, ಮೈಸೂರು

ಟ್ರಾಯ್ ಸದುದ್ದೇಶ ಈಡೇರಿತೇ?

ಮೊಬೈಲ್ ನೆಟ್‌ವರ್ಕ್ ಸೇವೆ ಒದಗಿಸುವ ಕಂಪನಿಗಳಿಗೆ ಮೂಗುದಾರ ತೊಡಿಸುವಂತೆ, ಡೇಟಾ ಇರದ 'ಬೇಸಿಕ್' ಯೋಜನೆಗಳನ್ನು ರೂಪಿಸಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಸೂಚಿಸಿತ್ತು. ಇದರ ಹಿಂದೆ, ಜನಸಾಮಾನ್ಯರಿಗೆ, ಬಡವರಿಗೆ, ಅಂತರ್ಜಾಲವನ್ನು ಉಪಯೋಗಿಸದವರಿಗೆ ಸೋವಿ ದರದಲ್ಲಿ ಫೋನ್ ಕರೆ ಸೌಲಭ್ಯ ಲಭ್ಯವಾಗಲಿ ಎಂಬ ಕಳಕಳಿ ಇತ್ತು. ಅದಕ್ಕೆ ಮೊದಲು ಡೇಟಾ ಬೇಕಾಗಲಿ, ಬೇಡದಿರಲಿ ದುಬಾರಿ ಬೆಲೆಯ ಯೋಜನೆಗಳನ್ನು ಖರೀದಿಸಲೇಬೇಕಾದ ಅನಿವಾರ್ಯ ಇತ್ತು. ಇದೀಗ ಈ ಕಂಪನಿಗಳು ರಂಗೋಲಿ ಕೆಳಗೆ ನುಸುಳುವ ಬುದ್ಧಿ ತೋರಿಸಿವೆ. ಹೆಚ್ಚುಕಮ್ಮಿ ಅವೇ ದುಬಾರಿ ಯೋಜನೆಗಳನ್ನು ಡೇಟಾ ಇಲ್ಲದೇ ಒದಗಿಸಿವೆ. ಕೆಲವೇ ಗಂಟೆಗಳ, ದಿನಗಳ ಲೆಕ್ಕದಲ್ಲಿ ಡೇಟಾ ಕೊಳ್ಳುವ ಅನಿವಾರ್ಯ ಸೃಷ್ಟಿಸಿ, ಗ್ರಾಹಕರಿಂದ ಇನ್ನೂ ಹೆಚ್ಚಿನ ಹಣ ಪೀಕುತ್ತಿವೆ. 'ಮಂಗ ಬೆಣ್ಣೆ ತೂಗಿದ' ಈ ನಯವಂಚನೆಯ ಕಡೆಗೆ ಟ್ರಾಯ್ ಗಮನಹರಿಸಿ, ಪ್ರತಿ ಬೇಸಿಕ್ ಪ್ಲ್ಯಾನ್‌ನೊಂದಿಗೆ, ಒಂದಿಷ್ಟಾದರೂ ಡೇಟಾ ಒದಗಿಸುವಂತೆ ನಿರ್ದೇಶಿಸಬೇಕಾದ ಅಗತ್ಯವಿದೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.


ಚಿನಿವಾರ ಪೇಟೆಯಲ್ಲಿ ಮಂಗಳವಾರ 24 ಕ್ಯಾರೆಟ್‌ನ 10 ಗ್ರಾಂ ಬಂಗಾರದ ದರ ₹1,01,600 ಮುಟ್ಟಿದೆ. ಅಕ್ಷಯ ತೃತೀಯ ಮತ್ತು ಮದುವೆ ಋತು ತಕ್ಷಣದ ಏರಿಕೆಗೆ ಕಾರಣವಾದರೂ ಕೆಲವು ತಿಂಗಳಿಂದ ದರ ಏರುತ್ತಲೇ ಇರುವುದಕ್ಕೆ ಜಾಗತಿಕ ಬೆಳವಣಿಗೆಗಳು ಸೇರಿದಂತೆ ಹಲವು ಕಾರಣಗಳಿವೆ. ಮುಖ್ಯವಾಗಿ ಅಮೆರಿಕದ ಅಧ್ಯಕ್ಷ ಟ್ರಂಪ್ ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಇದರ ಹಿಂದೆ ಇವೆ. ಅಮೆರಿಕ–ಚೀನಾ ನಡುವಿನ ಸುಂಕ ಸಮರ, ಷೇರುಪೇಟೆಯಲ್ಲಿ ಉಂಟಾದ ಅನಿಶ್ಚಿತತೆ, ಕೇಂದ್ರೀಯ ಬ್ಯಾಂಕ್‌ಗಳ ಖರೀದಿ ಭರಾಟೆ ಚಿನ್ನದ ದರದ ನಾಗಾಲೋಟಕ್ಕೆ ಪ್ರಮುಖ ಕಾರಣಗಳು

ಬಂಗಾರ ಭಾರ



ಆರ್‌ಬಿಐ ಖರೀದಿಸಿದ ಚಿನ್ನ

(2024ರ ಡಿಸೆಂಬರ್ 31ರವರೆಗೆ)



876 ಟನ್ ಆರ್‌ಬಿಐ ಬಳಿ ಇರುವ ಚಿನ್ನದ ಮೀಸಲು

11% ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳ ಒಟ್ಟು ಮೀಸಲಿನಲ್ಲಿರುವ ಆರ್‌ಬಿಐ ಚಿನ್ನದ ಪಾಲು

ದರ ಜಾಸ್ತಿಯಾದರೂ ಬೇಡಿಕೆ ಹೆಚ್ಚಳ

ಜಾಗತಿಕ ಮಟ್ಟದಲ್ಲಿ ಚಿನ್ನದ ಬೆಲೆ ದಾಖಲೆ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದ್ದರೂ ಹಳದಿ ಲೋಹಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಸೇರಿದಂತೆ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕುಗಳು ದಾಖಲೆ ಪ್ರಮಾಣದಲ್ಲಿ ಚಿನ್ನವನ್ನು ಖರೀದಿಸುತ್ತಿವೆ.

- 2024ರಲ್ಲಿ ಜಾಗತಿಕ ಮಟ್ಟದಲ್ಲಿ ಚಿನ್ನದ ಬೇಡಿಕೆ 4,975 ಟನ್‌ಗಳಷ್ಟಿತ್ತು. 2023ರಲ್ಲಿ ಈ ಪ್ರಮಾಣ 4,946 ಟನ್‌ಗಳಷ್ಟಿತ್ತು. ಚಿನ್ನದ ಬೇಡಿಕೆಯಲ್ಲಿ ಇದು ಈವರೆಗಿನ ದಾಖಲೆ
- ಭಾರತೀಯ ರಿಸರ್ವ್ ಬ್ಯಾಂಕ್ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ಕೇಂದ್ರೀಯ ಬ್ಯಾಂಕುಗಳು ಕಳೆದ ವರ್ಷ 1,045 ಟನ್ ಚಿನ್ನ ಖರೀದಿಸಿವೆ. 2023ರಲ್ಲಿ 1,051 ಟನ್ ಖರೀದಿ ಮಾಡಿದ್ದವು. ಬ್ಯಾಂಕುಗಳು ಸತತ ಮೂರು ವರ್ಷಗಳಿಂದ 1000 ಟನ್‌ಗೂ ಹೆಚ್ಚು ಬಂಗಾರವನ್ನು ಖರೀದಿಸುತ್ತಿವೆ
- ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ತಂತ್ರಜ್ಞಾನ ಕ್ಷೇತ್ರದಲ್ಲೂ ಚಿನ್ನದ ಬೇಡಿಕೆ ಶೇ 7ರಷ್ಟು ಜಾಸ್ತಿಯಾಗಿದೆ. 2024ರಲ್ಲಿ 326 ಟನ್‌ಗಳಿದ್ದರೆ, 2023ರಲ್ಲಿ 305 ಟನ್‌ಗಳಷ್ಟಿತ್ತು

ಪ್ರಜಾವಾಣಿ ವಾರ್ತೆ

ಚಿನ್ನದ ದರ ಗಗನಮುಟ್ಟಿದೆ. ಹಳದಿ ಲೋಹದ ಬಗ್ಗೆ ಅಪಾರ ಮೋಹ ಹೊಂದಿರುವ ಭಾರತದಲ್ಲಿ ಬಂಗಾರದ ದರ ಒಂದು ಲಕ್ಷ ರೂಪಾಯಿಯ ಗಡಿ ದಾಟಿರುವುದು ಸಂಚಲನಕ್ಕೆ ಕಾರಣವಾಗಿದೆ. 2020ರಲ್ಲಿ 10 ಗ್ರಾಂ ಚಿನ್ನಕ್ಕೆ ₹50,151 ಇತ್ತು. ಕೇವಲ ಐದೇ ವರ್ಷಗಳಲ್ಲಿ ಅದು ದ್ವಿಗುಣಗೊಂಡಿದೆ. ಅದರಲ್ಲೂ 2024ರಲ್ಲಿ ಮತ್ತು ಪ್ರಸಕ್ತ ವರ್ಷದ ನಾಲ್ಕು ತಿಂಗಳಲ್ಲಿ ಚಿನ್ನದ ದರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದಕ್ಕೆ ಜಾಗತಿಕ ಮಟ್ಟದಲ್ಲಿ ನಡೆದ ಬೆಳವಣಿಗೆಗಳು ಪ್ರಮುಖ ಕಾರಣ.

ಟ್ರಂಪ್–ಪೊವೆಲ್ ಬಿಕ್ಕಟ್ಟು: ಅಮೆರಿಕದಲ್ಲಿ ಔನ್ಸ್ ಚಿನ್ನದ ದರ (28.34 ಗ್ರಾಂ) ಮಂಗಳವಾರ 3,500 ಡಾಲರ್‌ಗೆ ಏರಿದೆ. ಇದೇ ಮೊದಲ ಬಾರಿಗೆ ಅಲ್ಲಿ ಈ ದರ ದಾಖಲಾಗಿದೆ. ಇನ್ನೊಂದೆಡೆ, ಡಾಲರ್ ಸೂಚ್ಯಂಕವು 98ಕ್ಕೆ ಕುಸಿದಿದೆ. ಇದು ಮೂರು ವರ್ಷದ ಅತ್ಯಂತ ಕನಿಷ್ಠ ಮೌಲ್ಯವಾಗಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಡ್ಡಿದರ ಇಳಿಸಲು ಫೆಡರಲ್ ರಿಸರ್ವ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಟ್ರಂಪ್ ಅವರ ಒತ್ತಾಯಕ್ಕೆ ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೊವೆಲ್ ಮಣಿದಿಲ್ಲ. ಒಂದು ವೇಳೆ ಬ್ಯಾಂಕ್ ಬಡ್ಡಿ ದರ ಇಳಿಸದಿದ್ದರೆ, ಫೆಡರಲ್ ರಿಸರ್ವ್ ಅಧ್ಯಕ್ಷರನ್ನೇ ಬದಲಾವಣೆ ಮಾಡಬೇಕಾದೀತು ಎಂದು ಟ್ರಂಪ್ ಎಚ್ಚರಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಮತ್ತು ಫೆಡರಲ್ ರಿಸರ್ವ್ ಅಧ್ಯಕ್ಷರ ನಡುವೆ ಹೊಂದಾಣಿಕೆ ಇಲ್ಲದಿರುವುದು ಹೂಡಿಕೆದಾರರಲ್ಲಿ ಒಂದು ಬಗೆಯ ಗೊಂದಲ, ಅನಿಶ್ಚಿತತೆ ಉಂಟುಮಾಡಿದೆ.

ಸುಂಕ ಸಮರ: ಇನ್ನೊಂದೆಡೆ, ಅಮೆರಿಕ ಮತ್ತು ಚೀನಾ ನಡುವೆ ಸುಂಕ ಸಮರ ಮುಂದುವರಿದಿದೆ. ಟ್ರಂಪ್ ಅವರ ಸುಂಕ ನೀತಿಗೆ ಸಡ್ಡು ಹೊಡೆದು ಚೀನಾ ಕೂಡ ಅಮೆರಿಕದ ಸರಕುಗಳ ಮೇಲೆ ಭಾರಿ ಪ್ರಮಾಣದಲ್ಲಿ ಸುಂಕ ವಿಧಿಸಿದೆ. ಜತೆಗೆ, ಅಮೆರಿಕದಲ್ಲಿ ಬಂಡವಾಳ ಹೂಡಿಕೆಯ ವಿರುದ್ಧ ಚೀನಾ ಕಠಿಣ ನಿಲುವು ತಳೆದಿದೆ. ವ್ಯಾಪಾರ ರಂಗದಲ್ಲಿನ ಈ ಅನಿಶ್ಚಿತತೆಯ ನಡುವೆ ಚಿನ್ನದ ಮೇಲೆ ಹಣ ತೊಡಗಿಸುವುದು ಸುರಕ್ಷಿತ ಹೂಡಿಕೆ ಎಂದು ಬಹುತೇಕರು ಭಾವಿಸಿದ್ದಾರೆ.

ಮೀಸಲು ಹೆಚ್ಚಳ: ದಶಕಕ್ಕೂ ಹೆಚ್ಚು ಕಾಲದಿಂದ ಜಾಗತಿಕ ಮಟ್ಟದಲ್ಲಿಯೂ ಅನೇಕ ರಾಷ್ಟ್ರಗಳು ಮೀಸಲು ಉದ್ದೇಶಕ್ಕಾಗಿ ಚಿನ್ನ ಕೊಳ್ಳಲು ಪೈಪೋಟಿ ನಡೆಸುತ್ತಿವೆ. ಅಮೆರಿಕ, ಜರ್ಮನಿ, ಚೀನಾ, ಭಾರತ, ರಷ್ಯಾ, ಟರ್ಕಿ ದೇಶಗಳು ಇದರಲ್ಲಿ ಮುಂಚೂಣಿಯಲ್ಲಿವೆ.

ಆರ್ಥಿಕ ಕುಸಿತ: ಜಗತ್ತಿನಲ್ಲಿ ಆರ್ಥಿಕ ಬೆಳವಣಿಗೆ ಕುಸಿದಾಗಲೆಲ್ಲ ಚಿನ್ನದ ದರ ಏರಿಕೆ ಕಂಡಿದೆ. 2008ರ ಜಾಗತಿಕ ಆರ್ಥಿಕ ಮುಗ್ಗಟ್ಟಿನ ವೇಳೆ ಷೇರುಗಳ ಬೆಲೆ ಕುಸಿದು, ಚಿನ್ನದ ದರವು ಶೇ 39ರಷ್ಟು ಹೆಚ್ಚಾಗಿತ್ತು. ಇದೇ ರೀತಿ ಕೋವಿಡ್ ಸಂದರ್ಭದಲ್ಲಿ ಷೇರುಗಳ ಬೆಲೆ ಶೇ 35ರಷ್ಟು ಕುಸಿದಿದ್ದರೆ, ಹಳದಿ ಲೋಹದ ದರ ಶೇ 32ರಷ್ಟು ಹೆಚ್ಚಾಗಿತ್ತು. ಈಗ ಸುಂಕ ಸಮರದಿಂದಾಗಿ ಷೇರು ಪೇಟೆಯಲ್ಲಿ ಒಟ್ಟಾರೆ ಶೇ 20ರಷ್ಟು ಕುಸಿತ ಆಗಿದೆ ಎನ್ನಲಾಗುತ್ತಿದ್ದು, ಬಂಗಾರದ ದರವು ಈಗಾಗಲೇ ಶೇ 25ರಷ್ಟು ಹೆಚ್ಚಾಗಿದೆ.


ಆಧಾರ: ಪಿಟಿಐ, ರಾಯಿಟರ್ಸ್, ವರ್ಲ್ಡ್ ಗೋಲ್ಡ್ ಕೌನ್ಸಿಲ್, ಫೋರ್ಬ್ಸ್

10 ವರ್ಷಗಳಲ್ಲಿ ಚಿನ್ನದ ದರ

(24 ಕ್ಯಾರೆಟ್ ಚಿನ್ನ ಪ್ರತಿ 10 ಗ್ರಾಂಗೆ)

ವರ್ಷ	ದರ
2015	₹24,931
2016	₹27,445
2017	₹29,156
2018	₹31,391
2019	₹39,108
2020	₹50,151
2021	₹48,099
2022	₹55,017
2023	₹63,203
2024	₹78,245
2025 (ಏ.22)	₹1,01,600

ಐದು ತಿಂಗಳಲ್ಲಿ ₹23 ಸಾವಿರದಷ್ಟು ಹೆಚ್ಚಳ



ಭಾರತದಲ್ಲಿ ಹೂಡಿಕೆ ಶೇ 29ರಷ್ಟು ಹೆಚ್ಚಳ

ಭಾರತ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳ ಜನರು ಚಿನ್ನದ ಮೇಲೆ ಮಾಡುತ್ತಿರುವ ಹೂಡಿಕೆಯ ಪ್ರಮಾಣ ಹೆಚ್ಚಾಗಿದೆ. ಜಾಗತಿಕ ಮಟ್ಟದಲ್ಲಿ ಚಿನ್ನದ ಮೇಲಿನ ಹೂಡಿಕೆ ಕಳೆದ ವರ್ಷ ನಾಲ್ಕು ವರ್ಷದ ಗರಿಷ್ಠ ಮಟ್ಟಕ್ಕೆ ಏರಿದೆ. ವಾರ್ಷಿಕ ಚಿನ್ನದ ಹೂಡಿಕೆ ಪ್ರಮಾಣ 2024ರಲ್ಲಿ 1,180 ಟನ್‌ಗಳಿಗೆ ತಲುಪಿದೆ. ಇದರ ಮೌಲ್ಯ ₹7.67 ಲಕ್ಷ ಕೋಟಿ (9,000 ಕೋಟಿ ಡಾಲರ್). 2023ರಲ್ಲಿ ಚಿನ್ನದ ಹೂಡಿಕೆ 945.5 ಟನ್‌ಗಳಷ್ಟಿತ್ತು. ಒಂದೇ ವರ್ಷದಲ್ಲಿ ಶೇ 25 ರಷ್ಟು ಬೆಳವಣಿಗೆಯಾಗಿದೆ.

ಜಾಗತಿಕವಾಗಿ ಚಿನ್ನದ ಗಟ್ಟಿ ಮತ್ತು ನಾಣ್ಯದ ರೂಪದ ಹೂಡಿಕೆ 2023ರಲ್ಲಿ 1,190 ಟನ್‌ಗಳಿದ್ದರೆ, ಕಳೆದ ವರ್ಷ 1,186 ಟನ್‌ಗಳಷ್ಟಿತ್ತು. ಚಿನ್ನ ಇಟಿಎಫ್‌ಗಳ ಹೂಡಿಕೆ ಎರಡು ವರ್ಷಗಳಿಂದ ಕಡಿಮೆಯಾಗಿದೆ. 2023ರಲ್ಲಿ –244 ಟನ್‌ಗಳಷ್ಟಿದ್ದರೆ, 2024ರಲ್ಲಿ –7 ಟನ್‌ಗಳಾಗಿವೆ.

ಭಾರತದಲ್ಲಿ ಚಿನ್ನದ ಮೇಲಿನ ಹೂಡಿಕೆ ಪ್ರಮಾಣ ಕಳೆದ ವರ್ಷ ಶೇ 29ರಷ್ಟು ಹೆಚ್ಚಿದ್ದರೆ, ಚೀನಾದಲ್ಲಿ ಶೇ 20ರಷ್ಟು ಜಾಸ್ತಿಯಾಗಿದೆ. 2024ರಲ್ಲಿ ಭಾರತೀಯರು ಚಿನ್ನದ ಗಟ್ಟಿ ಮತ್ತು ನಾಣ್ಯದ ರೂಪದಲ್ಲಿ 239 ಟನ್‌ಗಳಷ್ಟು ಹೂಡಿಕೆ ಮಾಡಿದ್ದರೆ, 2023ರಲ್ಲಿ ಇದು 185 ಟನ್‌ಗಳಷ್ಟಿತ್ತು. ಚೀನೀಯರ ಈ ಹೂಡಿಕೆ ಪ್ರಮಾಣ ಕ್ರಮವಾಗಿ 346 ಟನ್ ಮತ್ತು 287 ಟನ್‌ಗಳಷ್ಟಿತ್ತು.



ದರ ಹೆಚ್ಚಳಕ್ಕೆ ಕಾರಣಗಳು

- ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ
- ಕೇಂದ್ರೀಯ ಬ್ಯಾಂಕ್‌ಗಳ ನಿಯಮಗಳು
- ಹಣದುಬ್ಬರ ಮತ್ತು ಹಣದುಬ್ಬರವಿಳಿತ
- ಕರೆನ್ಸಿ ಮೌಲ್ಯದಲ್ಲಿ ಏರಿಳಿತ
- ರಷ್ಯಾ–ಉಕ್ರೇನ್ ಯುದ್ಧ ಸೇರಿದಂತೆ ಭೌಗೋಳಿಕ ಹಾಗೂ ರಾಜಕೀಯ ಸಂಘರ್ಷಗಳು
- ಬ್ಯಾಂಕ್ ಬಡ್ಡಿ ದರದಲ್ಲಿ ಬದಲಾವಣೆ



ಒಡವೆಗೆ ಕುಸಿದ ಬೇಡಿಕೆ

ಚಿನ್ನದ ದರ ಹೆಚ್ಚಳದಿಂದ ಭಾರತ ಸೇರಿದಂತೆ ಜಾಗತಿಕವಾಗಿ ಆಭರಣಗಳಿಗೆ ಬೇಡಿಕೆ ಕಡಿಮೆಯಾಗಿದೆ. 2023ರಲ್ಲಿ 2,111 ಟನ್‌ಗಳಷ್ಟು ಒಡವೆಗೆ ಬೇಡಿಕೆ ಇದ್ದರೆ, 2024ರಲ್ಲಿ ಅದು 1,877 ಟನ್‌ಗೆ ಇಳಿಕೆಯಾಗಿದೆ. ಶೇಕಡವಾರು ಲೆಕ್ಕಾಚಾರದಲ್ಲಿ ಶೇ 11ರಷ್ಟು ಕಡಿಮೆಯಾಗಿದೆ. ಭಾರತದಲ್ಲಿ ಆಭರಣದ ಬೇಡಿಕೆ ಶೇ 2ರಷ್ಟು ಕಡಿಮೆಯಾಗಿದೆ. ಚೀನಾದಲ್ಲಿ ಶೇ 24ರಷ್ಟು ಕುಸಿತ ಕಂಡಿದೆ.


ಭಾರತದಲ್ಲಿ ಚಿನ್ನಾಭರಣಕ್ಕೆ ಬೇಡಿಕೆ

ವರ್ಷ	ಬೇಡಿಕೆ
2023	576 ಟನ್
2024	563 ಟನ್

2% ▼ ಕಡಿಮೆಯಾದ ಬೇಡಿಕೆ ಪ್ರಮಾಣ

2.16 ಲಕ್ಷ ಟನ್ ಈವರೆಗೆ ಭೂಮಿಯಿಂದ ಹೊರತೆಗೆಯಲಾದ ಚಿನ್ನ





ರಾಷ್ಟ್ರೀಯ

ಪೋಕ್ಸೊ: ಈಶಾ ಹೋಂ ಸ್ಕೂಲ್‌ನ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಚೆನ್ನೈ: ಈಶಾ ಫೌಂಡೇಷನ್ ನಡೆಸುತ್ತಿರುವ ಸ್ಕೂಲ್‌ನ ನಾಲ್ವರು ಸಿಬ್ಬಂದಿ ಮತ್ತು ಈಶಾ ಹೋಂ ಸ್ಕೂಲ್‌ನ (ಐಎಚ್‌ಎಸ್) ಮಾಜಿ ವಿದ್ಯಾರ್ಥಿಯ ವಿರುದ್ಧ ಕೊಯಮತ್ತೂರು ಜಿಲ್ಲಾ ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಮತ್ತೊಬ್ಬ ಮಾಜಿ ವಿದ್ಯಾರ್ಥಿಯ ತಂದೆ–ತಾಯಿ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ‘ನನ್ನ ಮಗನ ಮೇಲೆ 2017ರಿಂದ 2019ರ ಅವಧಿಯಲ್ಲಿ ಲೈಂಗಿಕ ದೌರ್ಜನ್ಯ ನಡೆದಿದೆ’ ಎಂದು ಪೊಲೀಸರಿಗೆ ದೂರು ನೀಡಲಾಗಿದೆ.

‘ಈಶಾ ಹೋಂ ಸ್ಕೂಲ್‌ನಲ್ಲಿ ಸಹಪಾಠಿಯೊಬ್ಬ ನನ್ನ ಮಗನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮಗ ಇದನ್ನು ಹಾಸ್ಟೆಲ್ ವಾರ್ಡನ್‌ಗಳ ಗಮನಕ್ಕೆ ತಂದರೂ ಏನೂ ಕ್ರಮ ಕೈಗೊಂಡಿಲ್ಲ. ‘ಇದನ್ನು ಯಾರಿಗೂ ತಿಳಿಸಬಾರದು’ ಎಂದು ಹೇಳಿದ್ದರು’ ಎಂದು ದೂರಲಾಗಿದೆ.

ಆರೋಪಿತ ವಿದ್ಯಾರ್ಥಿ ಹಾಗೂ ಹಾಸ್ಟೆಲ್ ವಾರ್ಡನ್ ನಿಶಾಂತ್ ಕುಮಾರ್, ಪ್ರೀತಿ ಕುಮಾರ್, ಪ್ರಕಾಶ್ ಸೋಮಯಾಜಿ ಮತ್ತು ಈಶಾ ಯೋಗ ಕೇಂದ್ರದ ಸ್ವಾಮಿ ವಿಭು ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಎಫ್‌ಐಆರ್ ಅನ್ನು ಕೊಯಮತ್ತೂರಿನ ಪೇರೂರಿನಲ್ಲಿರುವ ಮಹಿಳಾ ಠಾಣೆಯಲ್ಲಿ ಜನವರಿ 31, 2025ರಂದು ದಾಖಲಿಸಿದ್ದು, ಪೊಲೀಸರು ಇದರ ಪ್ರತಿಯನ್ನು ಸಂತ್ರಸ್ತ ವಿದ್ಯಾರ್ಥಿಯ ತಂದೆ–ತಾಯಿಗೆ ಮಾರ್ಚ್ 28ರಂದು ನೀಡಿದ್ದಾರೆ.

‘ಕೋರ್ಟ್ ನಿರ್ದೇಶನ ನೀಡಿದ ನಂತರವೇ ನಮಗೆ ಎಫ್‌ಐಆರ್ ಪ್ರತಿ ಕೊಡಲಾಯಿತು’ ಎಂದು ಸಂತ್ರಸ್ತ ವಿದ್ಯಾರ್ಥಿಯ ತಾಯಿ ತಿಳಿಸಿದರು.

‘ಸಹಪಾಠಿಯ ದೌರ್ಜನ್ಯ ಹೆಚ್ಚಾದಾಗ ಮಾರ್ಚ್ 2019ರಲ್ಲಿ ಇ-ಮೇಲ್ ಮೂಲಕ ಮಗ ನಮ್ಮ ಗಮನಕ್ಕೆ ತಂದಿದ್ದ. ಪೋಷಕರು ಮಕ್ಕಳ ಜೊತೆಗೆ ಫೋನ್‌ನಲ್ಲಷ್ಟೇ ಮಾತನಾಡಬಹುದು ಎಂದು ನಿರ್ಬಂಧವಿತ್ತು. ಹೀಗಾಗಿ, ಈ ಕುರಿತು ಈಶಾ ಯೋಗ ಕೇಂದ್ರದ ಸ್ಥಾಪಕ ಜಗ್ಗಿ ವಾಸುದೇವ್ ಅವರ ಜೊತೆ ಚರ್ಚಿಸಲು ಸಮಯ ಕೋರಿ ಕೇಂದ್ರಕ್ಕೆ ಇ–ಮೇಲ್ ಕಳುಹಿಸಿದ್ದೆವು. ಆದರೆ, ನಮಗೆ ಅವಕಾಶ ನೀಡಲಾಗಲಿಲ್ಲ’ ಎಂದು ವಿವರಿಸಿದರು.

ಸಂತ್ರಸ್ತ ಬಾಲಕಿ ಆಗಿದ್ದರೆ ಕ್ರಮಕೈಗೊಳ್ಳಬಹುದಿತ್ತು. ಆರೋಪಿ ಬಾಲಕ ಸಿರಿವಂತ ಕುಟುಂಬಕ್ಕೆ ಸೇರಿದ್ದು, ಏನೂ ಮಾಡಲಾಗದು ಎಂದೂ ಶಾಲಾ ಆಡಳಿತ ತಿಳಿಸಿತ್ತು. ಖಿನ್ನತೆಗೆ ಒಳಗಾಗಿದ್ದ ಮಗ ಕೋವಿಡ್ ವೇಳೆ ಆತ್ಮಹತ್ಯೆ ಮನಸ್ಥಿತಿ ಬೆಳಸಿಕೊಂಡಿದ್ದ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ಕುರಿತು ಹೇಳಿಕೆ ನೀಡಿರುವ ಈಶಾ ಫೌಂಡೇಶನ್, ಆರೋಪಗಳು ಸುಳ್ಳಾಗಿದ್ದು, ಮಾನಹಾನಿ ಉದ್ದೇಶ ಹೊಂದಿವೆ. ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ತಿಳಿಸಿದೆ.

ಬಾಲಕನ ತಾಯಿ ಈಶಾ ಹೋಂ ಸ್ಕೂಲ್‌ನಲ್ಲಿ ಜೂನ್ 22ರಿಂದ ಕೆಲಸ ಮಾಡುತ್ತಿದ್ದರು. ಪೋಷಕರು, ವಿದ್ಯಾರ್ಥಿಗಳ ದೂರಿನಿಂದಾಗಿ ಅವರನ್ನು ಮಾರ್ಚ್ 2024ರಲ್ಲಿ ಕೆಲಸದಿಂದ ತೆಗೆಯಲಾಗಿತ್ತು. ಆ ಹಿನ್ನೆಲೆಯಲ್ಲಿ ಸುಳ್ಳು ಆರೋಪ ಹೊರಿಸುತ್ತಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಮಹಾರಾಷ್ಟ್ರ: ಹಿಂದಿ ಕಡ್ಡಾಯವಲ್ಲ

ಪ್ರಜಾವಾಣಿ ವಾರ್ತೆ



ಮುಂಬೈ: 1ರಿಂದ 5ನೇ ತರಗತಿಯ ವರೆಗೆ ಮೂರನೇ ಭಾಷೆಯಾಗಿ ಹಿಂದಿ ಕಲಿಕೆಯನ್ನು ಕಡ್ಡಾಯಗೊಳಿಸಿದ್ದ ಮಹಾರಾಷ್ಟ್ರದ ದೇವೇಂದ್ರ ಫಡಣವೀಸ್ ನೇತೃತ್ವದ ಮಹಾಯುತಿ ಸರ್ಕಾರವು ಹಿಂದೆ ಸರಿಯಲು ನಿರ್ಧರಿಸಿದೆ.

ಮರಾಠಿ, ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಹಿಂದಿ ಕಲಿಕೆಯನ್ನು ಐಚ್ಛಿಕವಾಗಿಸಿದೆ.

‘ನೂತನ ಶಿಕ್ಷಣ ನೀತಿ–2020’ರ (ಎನ್‌ಇಪಿ) ಅಡಿಯಲ್ಲಿ ತ್ರಿಭಾಷಾ ಕಲಿಕೆ ವಿಚಾರವು ಮಹಾರಾಷ್ಟ್ರದಲ್ಲಿ ವಿವಾದ ಸೃಷ್ಟಿಸಿದೆ. ಎನ್‌ಇಪಿ ಜಾರಿ ಮಾಡಿದ ‘ಮಹಾಯುತಿ’ ಸರ್ಕಾರದ ವಿರುದ್ಧ ‘ಮಹಾ ವಿಕಾಸ ಆಘಾಡಿ’ ಸಹ ಕಿಡಿಕಾರಿತ್ತು. ಇದರ ಬೆನ್ನಲ್ಲೇ, ಈ ನಿರ್ಧಾರ ತೆಗೆದುಕೊಂಡಿದೆ.

‘ಹಿಂದಿ ಕಲಿಕೆ ಕಡ್ಡಾಯವಲ್ಲ. ಎನ್‌ಇಪಿ ಪ್ರಕಾರ, ತ್ರಿಭಾಷಾ ಸೂತ್ರದಡಿ ಹಿಂದಿ ಕಲಿಕೆಯು ಐಚ್ಛಿಕವಾಗಿರಲಿದೆ’ ಎಂದು ರಾಜ್ಯ ಶಾಲಾ ಶಿಕ್ಷಣ ಸಚಿವ ದಾದಾಜಿ ಭುಸೆ ತಿಳಿಸಿದ್ದಾರೆ.

‘ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ, ಮೂರನೇ ಭಾಷೆಯಾಗಿ ಯಾವುದನ್ನಾದರೂ ಅವರೇ ಆಯ್ಕೆ ಮಾಡಿಕೊಳ್ಳಬಹುದು’ ಎಂದು ರಾಜ್ಯ ಕೈಗಾರಿಕಾ ಸಚಿವ ಉದಯ್ ಸಾಮಂತ್ ತಿಳಿಸಿದರು.

‘ಶಾಲೆಗಳಲ್ಲಿ ಹಿಂದಿ ಕಲಿಕೆಯನ್ನು ಕಡ್ಡಾಯಗೊಳಿಸಲು ಅವಕಾಶ ನೀಡುವುದಿಲ್ಲ’ ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಅಧ್ಯಕ್ಷ ರಾಜ್ ಠಾಕ್ರೆ ಹಾಗೂ ಶಿವಸೇನೆ (ಉದ್ಧವ್ ಬಣ)ದ ಅಧ್ಯಕ್ಷ ಉದ್ಧವ್ ಠಾಕ್ರೆ ತಿಳಿಸಿದ್ದರು.

ಗುಂಡಣ್ಣ



ಮಣ್ಣಿನಿಂದ ಮಣ್ಣಿನೆಡೆಗೆ ಪಯಣ



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

179

ಯಾವುದು ದೇವನನ್ನು ಒಲಿಸುವ ಪರಿ ಎಂದು ಬಸವಣ್ಣನವರು ಚಿಂತನೆ ಮಾಡಿದರು. ದೇವರನ್ನು ಒಲಿಸಿಕೊಳ್ಳಲು ಹಿಮಾಲಯಕ್ಕೆ ಹೋಗಬೇಕೇನು, ಉಪವಾಸಗಳನ್ನು ಮಾಡಬೇಕೇನು, ಮನೆ ವಾಸ್ತು ಪ್ರಕಾರ ಕಟ್ಟಬೇಕೇನು? ಏನೂ ಇಲ್ಲ. ಮನೆಯಲ್ಲಿ ಶಾಂತಿ, ಮನಸ್ಸಿನಲ್ಲಿ ಶಾಂತಿ, ಕೂಡಲಸಂಗಮನ ಕೃಪೆ ಆಗಬೇಕು ಎಂದರೆ ನೀನು ಮಾಡೋದು ಏನೂ ಇಲ್ಲ; ಒಂದಿಷ್ಟು ಬಿಡು ಸಾಕು ಎಂದು ಬಸವಣ್ಣ ಹೇಳ್ತಾರೆ. ಇದು ಹೊಸ ಪರಿಕಲ್ಪನೆ. ಇನ್ನೊಬ್ಬರ ವಸ್ತುಗಳನ್ನು ನೋಡಿ ಆಸೆ ಮಾಡುತ್ತೀಯಲ್ಲ, ಅದನ್ನು ಬಿಡು. ಸುಳ್ಳು ಹೇಳುತ್ತೀಯಲ್ಲ ಅದು ಬಿಡು. ಕಳವು ಮಾಡುತ್ತೀಯಲ್ಲ, ಅದು ಬಿಡು. ನಿನ್ನಷ್ಟಕ್ಕೆ ನೀನೇ ಹೊಗಳಿಕೊಳ್ಳುತ್ತೀಯಲ್ಲ, ಅದನ್ನು ಬಿಡು. ಇನ್ನೊಬ್ಬರಿಗೆ ಮನಸ್ಸಿಗೆ ನೋವಾಗುವ ಹಾಗೆ ಮಾತನಾಡುತ್ತೀಯಲ್ಲ, ಅದನ್ನು ಬಿಡು. ಇದು ಕೂಡಲಸಂಗಮನ ಒಲಿಸುವ ಪರಿ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂದು ಬಸವಣ್ಣನವರು ಹೇಳುತ್ತಾರೆ. ಇಷ್ಟು ಬಿಟ್ಟರೆ ಸಾಕು ನೀನೇ ದೇವರಾಗುತ್ತಿ ಎನ್ನುತ್ತಾರೆ ಅವರು. ಮನಷ್ಯನ ಜೀವನ ಬಹಳ ಅದ್ಭುತವಾಗಿದ್ದು, ಸಣ್ಣಸಣ್ಣ ವಿಷಯಗಳಿಗೆ, ಸ್ವಾರ್ಥಕ್ಕಾಗಿ ಇದನ್ನು ಹಾಳು ಮಾಡಿಕೊಳ್ಳಬಾರದು.

ಮನುಷ್ಯ ಮೂಲತಃ ಅನ್ವೇಷಕ. ಬಡವನೂ ಅನ್ವೇಷಣೆ ಮಾಡುತ್ತಿದ್ದಾನೆ. ಶ್ರೀಮಂತನೂ ಅನ್ವೇಷಣೆ ಮಾಡುತ್ತಿದ್ದಾನೆ. ಬಡವ ಏನೂ ಇಲ್ಲದ್ದಕ್ಕೆ ಅನ್ವೇಷಣೆ ಮಾಡಿದರೆ, ಶ್ರೀಮಂತ ಎಲ್ಲವೂ ಇದ್ದರೂ ಅನ್ವೇಷಣೆ ಮಾಡುತ್ತಿದ್ದಾನೆ. ಹಾಗಾದರೆ ಮನುಷ್ಯ ಅನ್ವೇಷಣೆ ಮಾಡುತ್ತಿರುವುದು ಯಾತಕ್ಕೆ? ನಮ್ಮ ದಾರ್ಶನಿಕರು ಇದನ್ನು ಗುರುತಿಸಿದರು. ಸಂತಸ, ಸಮಾಧಾನ, ಸಂತೃಪ್ತಿ ಇವುಗಳ ಹುಡುಕಾಟದಲ್ಲಿದ್ದಾನೆ ಮನುಷ್ಯ. ಇವು ಪುಸ್ತಕದ ಶಬ್ದಗಳಾದವೇ ವಿನಾ ಮನುಷ್ಯನ ಮಸ್ತಕಕ್ಕೆ ಬರಲೇ ಇಲ್ಲ. ಹಾಗಾದರೆ ತಪ್ಪಿದ್ದೆಲ್ಲಿ? ನಮ್ಮ ತಿಳಿವಳಿಕೆಯಲ್ಲಿ, ನಮ್ಮ ಆಲೋಚನೆಯಲ್ಲಿ ತಪ್ಪಿದೆ. ಮನುಷ್ಯ ಎರಡು ಸಂಗತಿಗಳನ್ನು ಅರ್ಥ ಮಾಡಿಕೊಳ್ಳಬೇಕು. ವಾಸ್ತವಿಕ ಸತ್ಯ ಮತ್ತು ಸತ್ಯದಂತೆ ತೋರುವ ಸಂಗತಿಯನ್ನು ಅರಿತುಕೊಳ್ಳಬೇಕು. ಮನುಷ್ಯನಿಗೆ ಯಾವುದು ಸತ್ಯ ಎನ್ನುವುದು ಗೊತ್ತಿರಬೇಕು. ತೋರುತ್ತಿರುವುದು ಮಿಥ್ಯೆ ಅನ್ನುವುದೂ ಗೊತ್ತಿರಬೇಕು. ಆದರೆ ಮಿಥ್ಯೆಯೇ ಸತ್ಯ ಎಂದು ಬದುಕುವುದು ಸಲ್ಲ. ಬರುವಾಗಲೂ ಶೂನ್ಯ. ಹೋಗುವಾಗಲೂ ಶೂನ್ಯ. ಜೀವನ ಎಂದರೆ ಶೂನ್ಯ ಸಂಪಾದನೆ ಅಷ್ಟೆ.

ಏಕಕೋಶದ ಅಮೀಬಾದಿಂದ ಹಿಡಿದು ಡೈನೋಸಾರ್‌ವರೆಗೆ, ಮಂಗನಿಂದ ಮಾನವನವರೆಗೆ ಸಕಲ ಚರಾಚರ ಜಗತ್ತೇನಿದೆ ಎಲ್ಲವೂ ಮಣ್ಣಿನ ವಿಸ್ತಾರ. ಮಣ್ಣಿನ ವಿಸ್ತಾರವೇ ಜಗತ್ತು. ಜಗತ್ತಿನ ಸಂಕ್ಷಿಪ್ತ ರೂಪವೇ ಮಣ್ಣು. ಮಣ್ಣು, ನೀರು, ಅಗ್ನಿ, ಗಾಳಿ, ಬಯಲು ಇಷ್ಟರಿಂದಲೇ ಜಗತ್ತು ನಿರ್ಮಾಣವಾಗಿದೆ. ನಮ್ಮ ದೇಹ ನಿರ್ಮಾಣ ಆಗಿದ್ದೂ ಇವೇ ಐದರಿಂದ. ನಮ್ಮ ಕೈ ಕಾಲು, ಕಣ್ಣು ಎಲ್ಲವೂ ಮಣ್ಣು. ಜೀವನ ಎಂದರೆ ಮಣ್ಣಿನಿಂದ ಮಣ್ಣಿನೆಡೆಗಿನ ಪಯಣಕ್ಕೆ ಜೀವ ಎಂದು ಕರೆಯುತ್ತಾರೆ. ಮಣ್ಣಿನಿಂದ ಬಂದೆ, ಮಣ್ಣಿಗೇ ಬಂದೆ, ಮಣ್ಣಿನಲ್ಲಿಯೇ ಬೆಳೆದೆ. ಮಣ್ಣಿಗಾಗಿಯೇ ಹೊಡೆದಾಡಿದೆ. ಕೊನೆಗೊಂದು ದಿನ ಮಣ್ಣಿನಲ್ಲಿಯೇ ಮಣ್ಣಾದೆ. ಜೀವನ ಎಂದರೆ ಸಾವಿನೆಡೆಗಿನ ಪಯಣ. ಭೂತಭೂತವ ಕೂಡಿ ಅದ್ಭುತವಾಗಿದೆ ಎಂದರು ಅಲ್ಲಮ ಪ್ರಭುಗಳು. ಇದು ಬರಿ ಕಲ್ಲಲ್ಲ, ಇದು ಮಣ್ಣಲ್ಲ, ಕಲೆಯ ಬಲೆಯು. ಆನಂದಮಯ ಈ ಜಗಹೃದಯ ಎಂದರು ಕವಿಗಳು. ಈ ಜಗತ್ತಿನಲ್ಲಿ ಭಗವಂತ ಆನಂದ ತುಂಬಿಟ್ಟಿದ್ದಾನೆ. ಆದರೆ, ಮನುಷ್ಯನಿಗೆ ಬದುಕಲು ಬರುವುದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಬುಧವಾರ ಏಪ್ರಿಲ್ 23, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದಶಮಿ ಗಂ. 16-44 ನಕ್ಷತ್ರ: ಧನಿಷ್ಠ ಗಂ. 12-08 ಯೋಗ: ಶುಕ್ಲ (ಶುಕ್ರ) ಗಂ. 18-51 ಕರಣ: ವಣಜಿ ಗಂ. 5-34, ವಿಷ್ಟಿ ಗಂ. 16-44, ಮೇಷ ಮಾಸದ 10 ನೇ ದಿನ.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-16 ಸೂರ್ಯಾಸ್ತ : 06-41

ಮುಸ್ಲಿಂ ದಿನಾಂಕ : 24 ಶವ್ವಾಲ್

ಅದೃಷ್ಟ ಸಂಖ್ಯೆ : 1, 6

ಮೇಷ: ನೀತಿ ನಿಯಮಗಳಿಗೆ ಬದ್ಧರಾದರೆ, ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಬರದು. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬಾರದು ಎಂಬುವುದು ಅರಿವಾಗಲಿದೆ. ದುರ್ಗಾದೇವಿಯಿಂದ ಶುಭ ಪ್ರಾಪ್ತಿ.

ವೃಷಭ: ದಾರಿಹೋಕನಿಗಾಗಿ ಅಥವಾ ಬಾಲ್ಯಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಒದಗಿ ಬರುವುದು. ಸಜ್ಜನರ ಸಹವಾಸ ಮಾಡುವುದರಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗುತ್ತದೆ.

ಮಿಥುನ: ಹಿಂದಿನಿಂದ ಬಾಕಿ ಇದ್ದ ಕಚೇರಿ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಸುಯೋಗ. ತೀರ್ಥಕ್ಷೇತ್ರ ದರ್ಶನ ಮಾಡುವ ಬಗ್ಗೆ ತೀರ್ಮಾನಿಸಿ.

ಕರ್ಕಾಟಕ: ಗೆಳೆಯನ ಮನೆಯ ಸಮಾರಂಭಗಳಲ್ಲಿ ಭಾಗವಹಿಸುವ ಯೋಗವಿದೆ. ಹೆಚ್ಚಿನ ಜವಾಬ್ದಾರಿಯ ಕೆಲಸವನ್ನು ನಿಭಾಯಿಸುವುದರಿಂದ ತಲೆ ನೋವು. ಗೃಹ ಉಪಯೋಗಿ ವಸ್ತುಗಳನ್ನು ಖರೀದಿ ಮಾಡುವಿರಿ.

ಸಿಂಹ: ಮಕ್ಕಳ ಎಲ್ಲಾ ಮಾತುಗಳಿಗೆ ಸಮ್ಮತಿ ಸೂಚಿಸುವುದು ಸೂಕ್ತವಲ್ಲ. ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿ ನಡೆಯುವುದು ತಪ್ಪು ಎಂಬ ತಿಳುವಳಿಕೆ ಬರುವುದು. ವರುಣ ದೇವನು ನಿಮ್ಮ ಇಚ್ಛೆಯನ್ನು ಪೂರೈಸುವನು.

ಕನ್ಯಾ: ಯಾತ್ರಿಕರಿಗೆ ದೇವತಾನುಗ್ರಹದಿಂದಾಗಿ ಸಮಯೋಚಿತ ಸಹಾಯಹಸ್ತ ದೊರೆಯಲಿದೆ. ಬಟ್ಟೆ ವ್ಯಾಪಾರಸ್ಥರಿಗೆ ಒಳ್ಳೆಯ ದಿನವಾಗಿ ತೋರುವುದಿಲ್ಲ. ನಿಧಾನವಾಗಿ ಆರ್ಥಿಕ ಸುಧಾರಣೆಯನ್ನು ಕಾಣುವಿರಿ.

ತುಲಾ: ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆಯು ವೃದ್ಧಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣವಿರುತ್ತದೆ. ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ.

ವೃಶ್ಚಿಕ: ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರೆಯುವುದು. ಸಾಮಾಜಿಕ ಜೀವನ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಕಾಣುವಿರಿ. ಮಧ್ಯಮವರ್ಗದವರು ಹೆಚ್ಚಿನ ಕೌಟುಂಬಿಕ ಸಂತಸವನ್ನು ಅನುಭವಿಸುವಿರಿ.

ಧನು: ವೃತ್ತಿ ಬದುಕಿನಲ್ಲಿ ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ವಿರೋಧ ಬರಲಿದೆ. ಆದ್ದರಿಂದ ವಿಶ್ವಾಸದಲ್ಲಿ ಯಾವುದೇ ರೀತಿಯ ಸಲಹೆ ಸೂಚನೆಯನ್ನು ನೀಡಬೇಡಿ. ಆಹಾರ ಪದಾರ್ಥದಲ್ಲಿ ಇಷ್ಟಪಟ್ಟಿದ್ದು ಕೈ ಸೇರುವುದು.

ಮಕರ: ಈ ದಿನದ ನಿಮ್ಮ ಕಾರ್ಯಗಳು ಸಮಯಕ್ಕೆ ಸರಿಯಾಗಿ ನಡೆಯುವುದು ಅಸಾಧ್ಯ, ಆದ್ದರಿಂದ ಕೆಲಸ-ಕಾರ್ಯಗಳನ್ನು ಮುಂಚಿತವಾಗಿ ಆರಂಭಿಸಿ. ಗೃಹ ಚಟುವಟಿಕೆಯಲ್ಲಿ ಸಹೋದರರಿಂದ ಸಹಾಯವನ್ನು ಪಡೆಯುವಿರಿ.

ಕುಂಭ: ವಿದ್ಯಾರ್ಥಿಗಳು ವಿಶೇಷ ಅಧ್ಯಯನ ಕ್ಷೇತ್ರಗಳಲ್ಲಿ ಮುಂದುವರೆಯಲು ಸರಳವಾಗಿ ಬಹಳಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ. ಸ್ವ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡುವಿರಿ. ನೀಲಿ ಬಣ್ಣ ಶುಭವನ್ನು ತರುವುದು.

ಮೀನ: ಧಾರ್ಮಿಕತೆಗೆ ಸಮಯವನ್ನು ಮೀಸಲಿಡಿ. ಮನೆಯ ರಕ್ಷಣಾ ವ್ಯವಸ್ಥೆಯಲ್ಲಿ ನಿಮ್ಮಿಂದ ಯಾವುದೇ ರೀತಿಯ ತಪ್ಪುಗಳು ಸಂಭವಿಸದಂತೆ ಜಾಗ್ರತೆ ವಹಿಸಿ. ಸಿಹಿತಿನಿಸುಗಳ ತಯಾರಕರಿಗೆ ಬೇಡಿಕೆ ಹೆಚ್ಚಾಗುವುದು.

ಪದಬಂಧ 6020


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶುರುವಾಗಿರುವ ಒಕ್ಕಲುತನ! (3)
4.ದೇಹವನ್ನು ನೋಡಿದ್ದಕ್ಕೇ ಈ ಅನುಮಾನ! (3)
6.ನಿಗದಿತ ಬೆಲೆಗಿಂತ ಹೆಚ್ಚು ಹಣವನ್ನು ಬಯಸುವವ (5)
7.ತಿರುಗಿದಾಗ ಈ ಸೊಕ್ಕು! (2)
9.ತಡ ಬಡ ಮಾಡಿದರೂ ಇದು ನಿಧಾನ (2)
10.ಸರಕ್ಕನೆ ಧರಿಸಿರುವ ಮಾಲೆ (2)
11.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ ! (2)
16.ಒಳ್ಳೆತನದ ಸೋಗಿನಲ್ಲಿ ವಂಚನೆ ಮಾಡುವವನು (5)
17.ನಡುವೆಯೇ ಪ್ರಾರಂಭವಾದ ಕಂಪನ (3)
18.ಬೇಡಿಕೆ ಈ ರೀತಿ ಬಂದಿದೆ (3)

ಮೇಲಿಂದ ಕೆಳಕ್ಕೆ

1.ಭಾರತೀಯ ವೈದ್ಯಶಾಸ್ತ್ರ (4)
2.ಈತ ಬಲು ಶಕ್ತಿಶಾಲಿ (3)
3.ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸ್ಪರ್ಧೆ (3)
4.ವೆಂಕಟರಮಣನನ್ನು ನೆನೆವುದು ಹೀಗೆ ದುಃಖ ಬಂದಾಗಲೇ (3)
5.ಕಗ್ಗೊಲೆಯ ಘಟನೆ (4)
8.ಮರವನ್ನೇರಿರುವ ಕೇಕಿ (3)
9.ತರಗುಪೇಟೆ ಹತ್ತಿರ ಬಿದ್ದಿರುವ ಒಣಗಿದ ಎಲೆ (3)
10.ನೆಮ್ಮದಿ ಈ ರೀತಿ ಬಂದಿದೆ (4)
12.ಯತಿಗೆ ಸಿಗುತ್ತಿರುವ ಸೋಡಿ (4)
13.ಮಂದಿಯ ಬಳಿಯಿರುವ ತಂದೆ (3)
14.ಆತುರ ಹೀಗೆ ಬಂದಿದೆ (3)
15.ಈತ ಅಧಮ ಕವಿ (3)



6019ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಾಲಕ 4.ಸರ್ವಜ್ಞ
5.ವರಾತ 6.ವೀಕ್ಷಣೆ
7.ತಕಲಿ 9.ಹತ್ತಿ 10.ಆಟ
12.ಸಲುಗೆ 14.ಮನುಜ
15.ಶಪಾಕ 16.ವಿಸ್ಮೃತಿ
17.ರಸಕವಳ

ಮೇಲಿಂದ ಕೆಳಕ್ಕೆ:
1.ಅನಿರುದ್ಧ 2.ಪಾಶವೀವೃತ್ತಿ
3.ಕವಣೆ 4.ಸತತ
8.ಕವಾಟ 9.ಹಗಲು
10.ಆಮ್ಲಜನಕ 11.ಅಂತರಾಳ
13.ಗೆಳತಿ 14.ಮಕರ

ಸುಡೊಕು 6405

		7		6			1	2
	8		5		2	3		
6				4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6404 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಷೇರುಪೇಟೆ ವಹಿವಾಟು

187



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,125
ಇಂದಿನ ಅಂತ್ಯ	24,167
▲	41
ದಿನದ ಗರಿಷ್ಠ	24,242

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹435

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಪ್ರಿ.ಬಿ)	₹336-568
ದ್ವಿತಳಿ (ಬಿ.ಬಿ)	₹367-676

ಎನ್.ಆರ್.ಪುರ ರಬ್ಬರ್



ಆರ್ಎಸ್ಎಸ್-4	₹193
ಆರ್ಎಸ್ಎಸ್-5	₹188
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ವಿನಿಮಯ ದರ

$	ಡಾಲರ್	85.19
£	ಪೌಂಡ್	113.93
€	ಯೂರೊ	97.90
¥	ಯೆನ್ (100ಕ್ಕೆ)	61

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,600
ಮಧ್ಯಮ	₹800-1,200
ಸಣ್ಣ	₹400-800

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-44000
ಹಳತು	30000-50000
ಸಾಗರ	
ಬಿಳಿಗೋಟು	8020-26599
ಚಾಲಿ	37799-38899
ಕೋಕ	8989-15699
ಕೆಂಪುಗೋಟು	21099-28099
ರಾಶಿ	42509-55889
ಸಿಪ್ಪೆಗೋಟು	17499-19232
ಶಿವಮೊಗ್ಗ	
ಬೆಟ್ಟೆ	55174-60069
ಗೊರಬಲು	18700-36699
ರಾಶಿ	52010-60589
ಸರಕು	58013-97396
ಸಿದ್ದಾಪುರ	
ಬಿಳಿಗೋಟು	26809-32809
ಚಾಲಿ	33569-41309
ಕೋಕ	14769-24169
ಹಳೆಚಾಲಿ	38219-40239
ಕೆಂಪುಗೋಟು	19699-22409
ರಾಶಿ	43609-51899
ತಟ್ಟಿಬೆಟ್ಟೆ	29099-34099
ಶಿರಸಿ	
ಬೆಟ್ಟೆ	28619-44561
ಬಿಳಿಗೋಟು	20001-32999
ಚಾಲಿ	36108-43400
ಕೆಂಪುಗೋಟು	9099-24531
ರಾಶಿ	42099-48999
ಯಲ್ಲಾಪುರ	
ಅಪಿ	62421-62421
ಬಿಳಿಗೋಟು	14899-32900
ಚಾಲಿ	33002-43861
ಕೋಕ	4899-18899
ಕೆಂಪುಗೋಟು	14899-25699
ರಾಶಿ	39421-58821
ತಟ್ಟಿಬೆಟ್ಟೆ	28906-39000

ಮುಂಬೈ ಧಾರಣೆ

ಶೇಂಗಾ

22-04-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಪಾಮ್ ವಾರದ ಡೆಲಿವರಿ	1268 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹98,200 (96,450)

ಬೆಳ್ಳಿ ಕೆ.ಜಿ ₹98,500 (96,250)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1385 (1390)
ಪಾಮೋಲಿನ್	₹1270 (1280)

ಈ ಬಾರಿ ಶೇ 4ರಷ್ಟು ಹೆಚ್ಚಳ: ಕ್ರಿಸಿಲ್ ಅಂದಾಜು

ಸಿಮೆಂಟ್ ಬೆಲೆ ಏರಿಕೆ?

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿಮೆಂಟ್ ದರವು ಶೇ 2ರಿಂದ ಶೇ 4ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಕ್ರಿಸಿಲ್ ಅಂದಾಜಿಸಿದೆ.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಮೂಲಸೌಕರ್ಯ ವಲಯದ ಅನುದಾನವನ್ನು ಶೇ 10ರಷ್ಟು ಹೆಚ್ಚಿಸಿದೆ. ಅಲ್ಲದೆ, ಈ ಬಾರಿ ಮುಂಗಾರು ಉತ್ತಮವಾಗಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಹೇಳಿದೆ. ಉತ್ತಮ ಮಳೆ ಸುರಿದರೆ ಕೃಷಿ ಚಟುವಟಿಕೆಗಳಿಗೆ ಬಲ ಸಿಗಲಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಮನೆಗಳ ನಿರ್ಮಾಣ ಸಂಖ್ಯೆ ಹೆಚ್ಚಲಿದ್ದು, ಸಿಮೆಂಟ್‌ಗೆ ಬೇಡಿಕೆಯನ್ನು ಹೆಚ್ಚಿಸಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಸಿಮೆಂಟ್‌ಗೆ ಶೇ 6.5ರಷ್ಟು ಬೇಡಿಕೆಯಿದ್ದು, ಶೇ 7.5ಕ್ಕೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಲೋಕಸಭಾ ಚುನಾವಣೆಯಿಂದಾಗಿ ಸರ್ಕಾರದ ಯೋಜನೆಗಳ ಜಾರಿಯಲ್ಲಿ ವಿಳಂಬವಾಗಿತ್ತು. ಇದರಿಂದ ಸಿಮೆಂಟ್‌ಗೆ ಶೇ 5.5ರಷ್ಟು ಬೇಡಿಕೆ ಕುಸಿದಿತ್ತು. ಅಲ್ಲದೆ, ಅಧಿಕವಾಗಿ ಸುರಿದ ಮಳೆಯು ನಿರ್ಮಾಣ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿತ್ತು ಎಂದು ವಿವರಿಸಿದೆ.

ಮತ್ತೊಂದೆಡೆ ಸಿಮೆಂಟ್ ಕಂಪನಿಗಳ ನಡುವಿನ ಸ್ಪರ್ಧಾತ್ಮಕತೆಯಿಂದ ದರ ಇಳಿಕೆಯಾಗಿತ್ತು ಎಂದು ಹೇಳಿದೆ.

‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರವು ಮೂಲಸೌಕರ್ಯ ಮತ್ತು ವಸತಿ ಯೋಜನೆಗಳಿಗೆ ಹೆಚ್ಚಿನ ಅನುದಾನ ನಿಗದಿಪಡಿಸಿದೆ. ಇದರಿಂದ ಸಿಮೆಂಟ್ ದರ ಏರಿಕೆಯಾಗುವ ಸಾಧ್ಯತೆಯಿದೆ’ ಎಂದು ಕ್ರಿಸಿಲ್‌ನ ಇಂಟೆಲಿಜೆನ್ಸ್ ವಿಭಾಗದ ಸಹಾಯಕ ನಿರ್ದೇಶಕ ಸಚ್ಚಿದಾನಂದ್ ಚೌಬೆ ಹೇಳಿದ್ದಾರೆ.

ಮೂಲಸೌಕರ್ಯ ವಲಯವು ದೇಶದ ಮೂರನೇ ಒಂದು ಭಾಗದಷ್ಟು ಸಿಮೆಂಟ್ ಬೇಡಿಕೆಯನ್ನು ಹೊಂದಿದೆ. ಇದರಲ್ಲಿ ರಸ್ತೆಗಳ ನಿರ್ಮಾಣದ ಪಾಲು ಹೆಚ್ಚಿದೆ. ನಂತರ ರೈಲ್ವೆ, ನೀರಾವರಿ ಮತ್ತು ನಗರ ಮೂಲಸೌಕರ್ಯ ವಿಭಾಗವು ಸೇರಿದೆ ಎಂದು ಹೇಳಿದ್ದಾರೆ.

ರೆಪೊ ದರ ಕಡಿತ ವರದಾನ



ಕಳೆದ ಆರ್ಥಿಕ ವರ್ಷದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆ ಹಿನ್ನಡೆ ಕಂಡಿತ್ತು. ಇದು ನಗರ ಪ್ರದೇಶದಲ್ಲಿ ವಸತಿ ಯೋಜನೆಯ ಬೇಡಿಕೆಯನ್ನು ತಗ್ಗಿಸಿತ್ತು. ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸಿದೆ. ಇದರಿಂದ ಗೃಹ ಸಾಲ ಅಗ್ಗವಾಗಲಿದ್ದು, ಮನೆ ನಿರ್ಮಾಣ ಚಟುವಟಿಕೆಗಳು ಗರಿಗೆದರಲಿವೆ ಎಂದು ಕ್ರಿಸಿಲ್ ಹೇಳಿದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪರಿಣಾಮಕಾರಿ ಜಾರಿಗೆ ಸರ್ಕಾರ ಮುಂದಾಗಿದೆ. ಇದು ವಸತಿ ಸೌಕರ್ಯಕ್ಕೆ ಬಲ ನೀಡಲಿದ್ದು, ಸಿಮೆಂಟ್‌ಗೆ ಬೇಡಿಕೆ ಹೆಚ್ಚಿಸಲಿದೆ ಎಂದು ವಿವರಿಸಿದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಮತ್ತು ನರೇಗಾ ಅಡಿ ಕೈಗೊಳ್ಳುವ ಕಾಮಗಾರಿಗಳಿಂದ ಸಿಮೆಂಟ್‌ಗೆ ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಜಿಡಿಪಿ ಶೇ 6.2ರಷ್ಟು ಪ್ರಗತಿ: ಐಎಂಎಫ್

ನ್ಯೂಯಾರ್ಕ್ (ಪಿಟಿಐ): 2025–26ನೇ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯನ್ನು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಪರಿಷ್ಕರಿಸಿದ್ದು, ಶೇ 6.2ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಈ ಮೊದಲು ಶೇ 6.5ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಅಂದಾಜಿಸಿತ್ತು. ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಳವು ಆರ್ಥಿಕತೆ ಬೆಳವಣಿಗೆಗೆ ವೇಗ ನೀಡಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವಿಶ್ವ ಆರ್ಥಿಕ ಮುನ್ನೋಟದ ವರದಿ ಹೇಳಿದೆ. 2025ರಲ್ಲಿ ಜಾಗತಿಕ ಆರ್ಥಿಕತೆ ಬೆಳವಣಿಗೆಯು ಶೇ 2.8 ರಷ್ಟು ಹಾಗೂ 2026ರಲ್ಲಿ ಶೇ 3ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

ಸುದ್ದಿ 2 ನಿಮಿಷ

40 ಗಿಗಾವಾಟ್ ವಿದ್ಯುತ್ ಖರೀದಿ ರಾಜ್ಯಗಳ ಜೊತೆ ಚರ್ಚೆ– ಜೋಶಿ

ಗುರುಗ್ರಾಮ (ಪಿಟಿಐ): ‘ಕೇಂದ್ರ ಸರ್ಕಾರವು 40 ಗಿಗಾವಾಟ್ ನವೀಕರಿಸಬಹುದಾದ ಇಂಧನ ಖರೀದಿ ಒಪ್ಪಂದಕ್ಕೆ ಸಂಬಂಧಿಸಿದಂತೆ ರಾಜ್ಯಗಳ ಜೊತೆಗೆ ಮಾತುಕತೆ ನಡೆಸುತ್ತಿದ್ದು, ಶೀಘ್ರವೇ ಸಹಿ ಹಾಕಲಿದೆ’ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯವನ್ನು ವಾರ್ಷಿಕವಾಗಿ 50 ಗಿಗಾವಾಟ್‌ನಷ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ. 2030ರ ವೇಳೆಗೆ ಈ ಇಂಧನ ಉತ್ಪಾದನಾ ಸಾಮರ್ಥ್ಯವನ್ನು 500 ಗಿಗಾವಾಟ್‌ಗೆ ಹೆಚ್ಚಿಸಲಾಗುವುದು. ಇದರಲ್ಲಿ ಸೌರ ವಿದ್ಯುತ್ ಪಾಲು 292 ಗಿಗಾವಾಟ್ ಆಗಿದೆ ಎಂದು ವಿವರಿಸಿದರು.



ಸೂರ್ಯ ಘರ್ ಯೋಜನೆಯಡಿ 12 ಲಕ್ಷ ಕುಟುಂಬಗಳ ಮನೆಯ ತಾರಸಿ ಮೇಲೆ ಸೌರ ಫಲಕ ಅಳವಡಿಸಲಾಗಿದೆ ಎಂದರು.

ಕಳೆದ ವರ್ಷದ ಮೇ ತಿಂಗಳಿನಲ್ಲಿ ದೇಶದ ವಿದ್ಯುತ್ ಬೇಡಿಕೆಯು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 250 ಗಿಗಾವಾಟ್ ಆಗಿತ್ತು. ಪ್ರಸಕ್ತ ವರ್ಷದ ಬೇಸಿಗೆಯಲ್ಲಿ 270 ಗಿಗಾವಾಟ್‌ಗೆ ತಲುಪುವ ನಿರೀಕ್ಷೆಯಿದೆ ಎಂದು ವಿದ್ಯುತ್ ಸಚಿವಾಲಯ ಅಂದಾಜಿಸಿದೆ.

₹15 ಲಕ್ಷ ಕೋಟಿ ದಾಟಿದ ಎಚ್‌ಡಿಎಫ್‌ಸಿ ಎಂ–ಕ್ಯಾಪ್

ನವದೆಹಲಿ (ಪಿಟಿಐ): ದೇಶದ ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ಮಂಗಳವಾರ ₹15 ಲಕ್ಷ ಕೋಟಿ ದಾಟಿದೆ.

ಬಿಎಸ್ಇ ಮತ್ತು ಎನ್ಎಸ್ಇಯಲ್ಲಿ ಬ್ಯಾಂಕ್‌ನ ಪ್ರತಿ ಷೇರಿನ ಮೌಲ್ಯ ಕ್ರಮವಾಗಿ ಶೇ 1.78ರಷ್ಟು ಮತ್ತು ಶೇ 1.70ರಷ್ಟು ಹೆಚ್ಚಳವಾಗಿದೆ. ಪ್ರತಿ ಷೇರಿನ ಬೆಲೆಯು ಕ್ರಮವಾಗಿ ₹1,961 ಮತ್ತು ₹1,960 ಆಗಿದೆ.

ಏಪ್ರಿಲ್ 9ರಿಂದ ಬ್ಯಾಂಕ್‌ನ ಷೇರಿನ ಮೌಲ್ಯವು ಶೇ 11ರಷ್ಟು ಏರಿಕೆಯಾಗಿದ್ದು, ಮಾರುಕಟ್ಟೆ ಮೌಲ್ಯಕ್ಕೆ ₹1.50 ಲಕ್ಷ ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ–ಕ್ಯಾಪ್ ₹15.01 ಲಕ್ಷ ಕೋಟಿಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ ₹17.46 ಲಕ್ಷ ಕೋಟಿಯಾಗಿದ್ದರೆ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಎಂ–ಕ್ಯಾಪ್ ₹12 ಲಕ್ಷ ಕೋಟಿ ಆಗಿದೆ.

ಉಭಯ ರಾಷ್ಟ್ರಗಳ ಬಾಂಧವ್ಯ ವೃದ್ಧಿಗೆ ಬಲ: ಆರು ಒಪ್ಪಂದಕ್ಕೆ ಸಹಿ ನಿರೀಕ್ಷೆ

ಸೌದಿ ಅರೇಬಿಯಾಗೆ ಮೋದಿ ಭೇಟಿ

ಜೆಡ್ಡಾ (ಪಿಟಿಐ): ಸೌದಿ ಅರೇಬಿಯಾಗೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ ಬಂದರು ನಗರಿ ಜೆಡ್ಡಾಗೆ ಮಂಗಳವಾರ ಭೇಟಿ ನೀಡಿದರು. ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಇಲ್ಲಿಗೆ ಬಂದಿದ್ದಾರೆ.

ಅಬ್ದುಲ್ ಅಜೀಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಧಾನಿ ಆಗಮಿಸುತ್ತಿದ್ದಂತೆಯೇ ಮೆಕ್ಕಾ ಪ್ರಾಂತ್ಯದ ಉಪ ಗವರ್ನರ್ ಸೌದ್ ಬಿನ್ ಮಿಶಾಲ್ ಬಿನ್ ಅಬ್ದುಲ್ ಅಜೀಜ್ ಹಾಗೂ ವಾಣಿಜ್ಯ ಸಚಿವ ಡಾ.ಮಜೀದ್ ಅಲ್ ಕಸ್ಸಾಬಿ ಅವರು ಸರ್ಕಾರಿ ಗೌರವದೊಂದಿಗೆ ಮೋದಿ ಅವರನ್ನು ಸ್ವಾಗತಿಸಿದರು.

ಭೇಟಿಗೆ ಸಂಬಂಧಿಸಿದಂತೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ, ‘ಜೆಡ್ಡಾಗೆ ಬಂದು ಇಳಿದಿದ್ದೇನೆ. ಭಾರತ ಮತ್ತು ಸೌದಿ ನಡುವಿನ ಬಾಂಧವ್ಯವನ್ನು ಈ ಭೇಟಿ ಮತ್ತಷ್ಟು ವೃದ್ಧಿಸಲಿದೆ. ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಕಾತುರನಾಗಿದ್ದೇನೆ’ ಎಂದಿದ್ದಾರೆ. ಜತೆಗೆ ಸೌದಿ ರಾಜಕುಮಾರನನ್ನು 'ನನ್ನ ಸಹೋದರ' ಎಂದೂ ಬಣ್ಣಿಸಿದ್ದಾರೆ.



ಜೆಡ್ಡಾಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದ ಭಾರತೀಯ ಸಮುದಾಯದ ಮಹಿಳೆಯರು ಪಿಟಿಐ ಚಿತ್ರ

6 ಒಪ್ಪಂದಗಳಿಗೆ ಸಹಿ: ಬಾಹ್ಯಾಕಾಶ, ಇಂಧನ, ಆರೋಗ್ಯ, ಸಂಸ್ಕೃತಿ, ವಿಜ್ಞಾನ, ವೈಜ್ಞಾನಿಕ ಸಂಶೋಧನೆ ಕ್ಷೇತ್ರಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ಮೋದಿ ಮತ್ತು ಸೌದಿ ದೊರೆ ಸಹಿ ಹಾಕಲಿದ್ದಾರೆ. ವ್ಯಾಪಾರ, ಹೂಡಿಕೆ, ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಒಪ್ಪಂದಗಳ ಮಾತುಕತೆ ಪ್ರಗತಿಯಲ್ಲಿದ್ದು, ಒಟ್ಟು 12 ಒಪ್ಪಂದಗಳನ್ನು ಮಾಡಿಕೊಳ್ಳುವ ನಿರೀಕ್ಷೆ ಇದೆ. ಇದಲ್ಲದೇ, ಹಜ್ ಯಾತ್ರೆ, ಭಾರತೀಯ ಯಾತ್ರಾರ್ಥಿಗಳಿಗೆ ಒದಗಿಸುವ ಕೋಟಾದ ಬಗ್ಗೆಯೂ ಸೌದಿ ದೊರೆಯ ಜತೆಗೆ ಮೋದಿ ಮಾತನಾಡಲಿದ್ದಾರೆ.

ಹಾಡಿನ ಮೂಲಕ ಸ್ವಾಗತ

ಜೆಡ್ಡಾಗೆ ಆಗಮಿಸಿದ ಪ್ರಧಾನಿ ಮೋದಿಗೆ ರಿಟ್ಜ್ ಕಾರ್ಲ್‌ಟನ್ ಹೋಟೆಲ್‌ನಲ್ಲಿ ಭಾರತೀಯ ಸಮುದಾಯದಿಂದ ಅದ್ದೂರಿ ಸ್ವಾಗತ ದೊರೆಯಿತು. ಗಾಯಕ ಹಶೀಮ್ ಅಬ್ಬಾಸ್ ಅವರು ಹಿಂದಿಯ ‘ರಾಜಿ’ ಸಿನಿಮಾದ ಪ್ರಖ್ಯಾತ ‘ಯೇ ವತನ್ ಮೇರೆ ಅಬಾದ್ ರಹೇ ತೂ’ ಹಾಡನ್ನು ಹಾಡುವ ಮೂಲಕ ಪ್ರಧಾನಿಗೆ ಸ್ವಾಗತ ಕೋರಿದರು. ಚಪ್ಪಾಳೆ ಮೂಲಕ ಹರ್ಷ ವ್ಯಕ್ತಪಡಿಸಿದ ಪ್ರಧಾನಿ, ಬಳಿಕ ಭಾರತೀಯ ಸಮುದಾಯದವರೊಂದಿಗೆ ಸಂವಾದ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಡೆಪ್ಯುಟಿ ಗವರ್ನರ್ ಅಧಿಕಾರಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಟಿ. ರಬಿ ಶಂಕರ್ ಅವರ ಅಧಿಕಾರಾವಧಿಯನ್ನು ಕೇಂದ್ರ ಸರ್ಕಾರವು ಒಂದು ವರ್ಷದವರೆಗೆ ವಿಸ್ತರಿಸಿದೆ ಎಂದು ಮೂಲಗಳು ತಿಳಿಸಿವೆ.

2026ರ ಮೇ ತಿಂಗಳವರೆಗೆ ಅಧಿಕಾರಾವಧಿ ವಿಸ್ತರಿಸಲಾಗಿದೆ. ಇದು ಎರಡನೇ ಬಾರಿಗೆ ಅಧಿಕಾರಾವಧಿಯನ್ನು ವಿಸ್ತರಿಸಿದಂತಾಗಿದೆ ಎಂದು ಹೇಳಿವೆ.

2021ರ ಮೇ ತಿಂಗಳಿನಲ್ಲಿ ಅವರನ್ನು ಸಂಪುಟದ ನೇಮಕಾತಿಗಳ ಸಮಿತಿಯು ಮೂರು ವರ್ಷಗಳಿಗೆ ಡೆಪ್ಯುಟಿ ಗವರ್ನರ್ ಆಗಿ ನೇಮಿಸಲು ಒಪ್ಪಿಗೆ ನೀಡಿತ್ತು.

ನಮ್ಮೊಂದಿಗೆ ಕೆಲಸ ಮಾಡಿ: ಜೆ.ಡಿ.ವ್ಯಾನ್ಸ್

ಜೈಪುರ (ಪಿಟಿಐ): ‘ಅಮೆರಿಕ ಮತ್ತು ಭಾರತವು ಒಟ್ಟಿಗೆ ಯಶಸ್ವಿಯಾಗಿ ಕೆಲಸ ಮಾಡಿದರೆ, 21ನೇ ಶತಮಾನವು ಶ್ರೀಮಂತವಾಗಿ ಶಾಂತಿಯುತವಾಗಿ ಇರಲಿದೆ. ಒಂದು ವೇಳೆ ಒಟ್ಟಿಗೆ ಕೆಲಸ ಮಾಡಲು ಸೋತರೆ, 21ನೇ ಶತಮಾನದಲ್ಲಿ ಮಾನವತೆಗೆ ಕರಾಳ ಛಾಯೆ ಬಂದೊದಗಬಹುದು’ ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅಭಿಪ್ರಾಯಪಟ್ಟರು.

ಜೆ.ಡಿ. ವ್ಯಾನ್ಸ್ ಹಾಗೂ ಅವರ ಕುಟುಂಬವು ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿದ್ದಾರೆ. ಮಂಗಳವಾರ ಬೆಳಿಗ್ಗೆ ವ್ಯಾನ್ಸ್ ಹಾಗೂ ಅವರ ಕುಟುಂಬದವರು ರಾಜಸ್ಥಾನದ ಅಮೇರ್ ಕೋಟೆಗೆ ಭೇಟಿ ನೀಡಿದ್ದರು. ಬಳಿಕ ಇಲ್ಲಿನ ‘ರಾಜಸ್ಥಾನ ಅಂತರರಾಷ್ಟ್ರೀಯ ಕೇಂದ್ರ’ದಲ್ಲಿ ಭಾರತ–ಅಮೆರಿಕ ಸಂಬಂಧದ ಕುರಿತು ಮಾತನಾಡಿದರು.

‘ನಿಮ್ಮ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಹೆಚ್ಚಿನ ಅವಕಾಶ ನೀಡಿ. ಸುಂಕಯೇತರ ತೊಡಕುಗಳನ್ನು ನಿವಾರಿಸಿ. ಅಮೆರಿಕದ ರಕ್ಷಣಾ ಯಂತ್ರಗಳನ್ನು ಮತ್ತು ಇಂಧನ ಉತ್ಪನ್ನಗಳನ್ನು ಖರೀದಿಸಿ. 21ನೇ ಶತಮಾನದ ಭವಿಷ್ಯವು ನಮ್ಮ ಎರಡು ದೇಶಗಳ ಬಲಗಳ ಮೇಲೆ ನಿಂತಿವೆ’ ಎಂದರು.

ತಮಿಳುನಾಡು: ಉಪರಾಷ್ಟ್ರಪತಿಗೆ ಆಹ್ವಾನ– ಖಂಡನೆ

ಕುಲಪತಿಗಳ ಸಭೆ ಕರೆದ ರಾಜ್ಯಪಾಲ

ಚೆನ್ನೈ (ಪಿಟಿಐ): ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯನ್ನು ವಾರಾಂತ್ಯದಲ್ಲಿ ಕರೆದಿರುವ ರಾಜ್ಯಪಾಲ ಆರ್.ಎನ್. ರವಿ ಅವರು, ಉದ್ಘಾಟನೆಗೆ ಉಪರಾಷ್ಟ್ರಪತಿಯವರನ್ನು ಆಹ್ವಾನಿಸಿದ್ದಾರೆ.



ಆರ್.ಎನ್. ರವಿ

ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಅಧಿಕಾರವನ್ನು ರಾಜ್ಯಪಾಲರಿಂದ ವಾಪಸ್ ಪಡೆಯುವ ಮಸೂದೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ ಹಾಗೂ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಕುಲಪತಿಗಳು, ರಿಜಿಸ್ಟ್ರಾರ್‌ಗಳೊಂದಿಗೆ ಸಭೆ ನಡೆಸಿದ ವಾರದ ನಂತರ ರಾಜ್ಯಪಾಲರು ಈ ಸಮಾವೇಶ ಆಯೋಜಿಸಿದ್ದಾರೆ.

ಈ ಸಭೆಯು ರಾಜ್ಯಪಾಲರು ಮತ್ತು ತಮಿಳುನಾಡು ಸರ್ಕಾರದ ನಡುವೆ ಮತ್ತೊಂದು ಸುತ್ತಿನ ಜಟಾಪಟಿಗೆ ವೇದಿಕೆಯಾಗಲಿದೆ ಎನ್ನಲಾಗಿದೆ.

ನೀಲಗಿರಿ ಜಿಲ್ಲೆಯಲ್ಲಿ ಏ. 25 ಮತ್ತು 26ರಂದು ನಡೆಯಲಿರುವ ಸಭೆಯನ್ನು ಬಹಿಷ್ಕರಿಸುವಂತೆ ಎಡಪಕ್ಷಗಳು ಕುಲಪತಿಗಳಿಗೆ ಕರೆ ನೀಡಿವೆ.

ಕುಲಪತಿಗಳ ಸಭೆಯನ್ನು ಉದ್ಘಾಟಿಸಿ ಉಪರಾಷ್ಟ್ರಪತಿ ಮಾತನಾಡಲಿದ್ದಾರೆ. ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಂತರ ಏ. 27ರಂದು ರಾಜಧಾನಿಗೆ ಮರಳುವ ಮುನ್ನ ಕೊಯಮತ್ತೂರಿಗೆ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಊಟಿಯ ರಾಜಭವನದಲ್ಲಿ ಸತತ ನಾಲ್ಕನೇ ವರ್ಷ ಕುಲಪತಿಗಳ ಸಭೆ ಆಯೋಜಿಸಲಾಗಿದೆ. ವಿವಿಧ ವಿಷಯಗಳ ಅಧಿವೇಶನ ನಡೆಯಲಿದೆ. ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಅಜಯ್ ಕುಮಾರ್ ಸೂದ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಯಮಗಳ ಉಲ್ಲಂಘನೆ: ‘ರಾಜ್ಯಪಾಲರ ನಡೆ ಸುಪ್ರೀಂ ಕೋರ್ಟ್ ತೀರ್ಪಿನ ತಿರಸ್ಕಾರವಷ್ಟೇ ಅಲ್ಲ, ಸಾಂವಿಧಾನಿಕ ನಿಯಮಗಳ ಉಲ್ಲಂಘನೆ’ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿ. ಷಣ್ಮುಗಂ ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಕಿಡಿಕಾರಿದ್ದಾರೆ. ಸಭೆಗೆ ಹಾಜರಾಗದಂತೆ ಕುಲಪತಿಗಳಿಗೆ ನಿರ್ದೇಶನ ನೀಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೋಟಾ: ನೀಟ್ ಆಕಾಂಕ್ಷಿ ಆತ್ಮಹತ್ಯೆ

ಕೋಟಾ (ರಾಜಸ್ಥಾನ), (ಪಿಟಿಐ): ಬಿಹಾರದ ಛಾಪ್ರಾ ಮೂಲದ 18 ವರ್ಷದ ನೀಟ್ ಆಕಾಂಕ್ಷಿಯೊಬ್ಬ ಇಲ್ಲಿನ ಹಾಸ್ಟೆಲ್‌ವೊಂದರಲ್ಲಿ ಮಂಗಳವಾರ ಮುಂಜಾನೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

‘ನನ್ನ ಸಾವಿಗೆ ನೀಟ್ ಹಾಗೂ ಕುಟುಂಬವನ್ನು ದೂಷಿಸದಿರಿ’ ಎಂದು ಆತ ಬರೆದಿರುವ ಪತ್ರ ಪೊಲೀಸರಿಗೆ ಸಿಕ್ಕಿದೆ.

ತನ್ನ ಹೆಸರು, ಭಾವಚಿತ್ರ, ಕುಟುಂಬದ ವಿವರವನ್ನು ಮಾಧ್ಯಮಗಳೊಂದಿಗೆ ಹಂಚಿಕೊಳ್ಳಬೇಡಿ ಎಂದೂ ವಿದ್ಯಾರ್ಥಿ ಕೋರಿಕೊಂಡಿದ್ದಾನೆ ಎಂದು ಕುನ್ಹಾಡಿ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಅರವಿಂದ್ ಭಾರದ್ವಾಜ್ ತಿಳಿಸಿದ್ದಾರೆ.

ಶಿಲಾದಿತ್ಯ ವಿರುದ್ಧ ಸಿಡಿದೆದ್ದ ಕನ್ನಡಿಗರು

ಒಂದನೇ ಪುಟದಿಂದ...

ಕನ್ನಡಿಗನಿಗೆ ಹಲ್ಲೆ ನಡೆಸಿ ಕನ್ನಡಿಗರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಶಿಲಾದಿತ್ಯ ಬೋಸ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ನಗರದಲ್ಲಿ ಸೋಮವಾರ ಪ್ರತಿಭಟನೆಗಳು ನಡೆದವು. ಅಲ್ಲದೇ ಬೈಯಪ್ಪನಹಳ್ಳಿ ಠಾಣೆಯ ಪೊಲೀಸರನ್ನು ಭೇಟಿ ಮಾಡಿದ ಕನ್ನಡ ಸಂಘಟನೆಗಳ ಮುಖಂಡರು, ಆರೋಪಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ ಸಲ್ಲಿಸಿದರು.



ವಿಕಾಸ್ ಕುಮಾರ್



ಶಿಲಾದಿತ್ಯ ಬೋಸ್

ಇದಾದ ಬೆನ್ನಲ್ಲೇ ಆರೋಪಿ ವಿರುದ್ಧ ಬೈಯಪ್ಪನಹಳ್ಳಿ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 109 (ಕೊಲೆ ಯತ್ನ), 115(2) (ಗಾಯಗೊಳಿಸುವುದು), 304 (ಕಸಿದುಕೊಳ್ಳುವುದು) ಹಾಗೂ 351, 352 ಅಡಿ ಪ್ರಕರಣ ದಾಖಲಾಗಿದೆ. ಆದರೆ, ಎಫ್‌ಐಆರ್‌ನಲ್ಲಿ ಆರೋಪಿಯ ಹೆಸರು ಉಲ್ಲೇಖಿಸಿಲ್ಲ.

ವಿಕಾಸ್ ನೀಡಿರುವ ದೂರಿನಲ್ಲಿ ಏನಿದೆ?: ‘ಸೋಮವಾರ ಬೆಳಿಗ್ಗೆ 6.20ರ ಸುಮಾರಿಗೆ ಸ್ನೇಹಿತನಿಗೆ ಬೈಕ್ ವಾಪಸ್ ನೀಡಲು ತೆರಳುತ್ತಿದ್ದೆ. ಅದೇ ಸಮಯದಲ್ಲಿ ವ್ಯಕ್ತಿಯೊಬ್ಬರು ಕಾರಿನಲ್ಲಿ (ನೋಂದಣಿ ಸಂಖ್ಯೆ ಎಚ್‌ಆರ್ 51 ಬಿಎ 8568) ಬರುತ್ತಿದ್ದರು. ಅವರ ಕಾರು, ನನ್ನ ಬೈಕ್‌ಗೆ ತಾಗಿತು. ನಂತರ, ಆ ವ್ಯಕ್ತಿ ಅಡ್ಡ ಹಾಕಿದರು. ಕಾರಿಗೆ ಏಕೆ ತಾಗಿಸಿದ್ದೀಯಾ ಎಂದು ಪ್ರಶ್ನಿಸಿ ಕೆಳಕ್ಕೆ ತಳ್ಳಿ ಬೀಳಿಸಿದರು. ನಾನು ಏರ್‌ಫೋರ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಜೊತೆಗೆ ಆಟವಾಡಬೇಡ ಎಂದು ನಿಂದಿಸಿದರು. ಜತೆಗೆ ಹಲ್ಲೆ ನಡೆಸಿದರು. ಸ್ನೇಹಿತನಿಗೆ ಕರೆ ಮಾಡಲು ಮುಂದಾದ ವೇಳೆ ಮೊಬೈಲ್ ಕಸಿದುಕೊಂಡು ಒಡೆದು ಹಾಕಿದರು. ಬೈಕ್ ಕೀ ಕಸಿದುಕೊಂಡು ಎಸೆದು ಕತ್ತು ಹಿಸುಕಿ ಕೊಲೆಗೆ ಯತ್ನಿಸಿದರು’ ಎಂದು ವಿಕಾಸ್ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಘಟನೆ ನಡೆದ ಸ್ಥಳದಲ್ಲಿ ಪೊಲೀಸರು ಮಂಗಳವಾರ ಮಹಜರು ಪ್ರಕ್ರಿಯೆ ನಡೆಸಿದರು.

ವಾಯುಪಡೆ ಅಧಿಕಾರಿಗಳಿಂದ ತನಿಖೆ

ಬೈಯಪ್ಪನಹಳ್ಳಿ ಠಾಣೆಗೆ ಭೇಟಿ ನೀಡಿದ ವಾಯುಪಡೆಯ ಅಧಿಕಾರಿಗಳು, ಘಟನೆಯ ಸಂಬಂಧ ಪೊಲೀಸರಿಂದ ಮಾಹಿತಿ ಪಡೆದುಕೊಂಡರು.

‘ವಾಯುಪಡೆಯ ನಿಯಮವನ್ನು ಉಲ್ಲಂಘಿಸಿ ಶಿಲಾದಿತ್ಯ ಬೋಸ್ ಅವರು ವಿಡಿಯೊ ಮಾಡಿದ್ದಾರೆ. ಜತೆಗೆ ಹಲ್ಲೆ ನಡೆಸುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಎರಡೂ ವಿಡಿಯೊವನ್ನು ವಾಯುಪಡೆಯ ಅಧಿಕಾರಿಗಳು ಸಂಗ್ರಹಿಸಿಕೊಂಡು ಆಂತರಿಕ ತನಿಖೆಗೆ ಮುಂದಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ವಿಕಾಸ್ ದೂರು ನೀಡುವುದಕ್ಕೂ ಮೊದಲೇ ಶಿಲಾದಿತ್ಯ ಬೋಸ್ ಅವರ ಪತ್ನಿ ಮಧುಮಿತಾ ದತ್ತ ಅವರು ವಿಕಾಸ್ ವಿರುದ್ಧ ದೂರು ನೀಡಿದ್ದರು. ದೂರು ಆಧರಿಸಿ ವಿಕಾಸ್ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

ಘಟನೆ ನಡೆದ ಬಳಿಕ ಶಿಲಾದಿತ್ಯ ಬೋಸ್ ವಿಡಿಯೊ ಮಾಡಿ, ‘ಕರ್ನಾಟಕ ಏಕೆ ಹೀಗಾಯಿತು... ನನಗೆ ನಂಬಲು ಆಗುತ್ತಿಲ್ಲ. ದೇವರು ನಮಗೆ ಸಹಾಯ ಮಾಡುತ್ತಾನೆ. ಹಲ್ಲೆ ನಡೆಸಿರುವ ವ್ಯಕ್ತಿಯನ್ನು ಬಂಧಿಸಬೇಕು. ಘಟನೆ ಸಂಬಂಧ ಪೊಲೀಸರು ಸರಿಯಾಗಿ ಸ್ಪಂದಿಸಲಿಲ್ಲ’ ಎಂದು ಹೇಳಿಕೊಂಡಿದ್ದರು. ಮುಖದ ಮೇಲೆ ಬ್ಯಾಂಡೇಜ್ ಹಾಕಿಕೊಂಡು ವಿಡಿಯೊ ಮಾಡಿದ್ದರು. ಅದಾದ ಮೇಲೆ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ, ವಿಂಗ್ ಕಮಾಂಡರ್ ಅವರೇ ವಿಕಾಸ್ ಅವರನ್ನು ಥಳಿಸುತ್ತಿರುವುದು ಬಯಲಾಗಿತ್ತು.

ಘಟನೆ ಕುರಿತು ಸುಳ್ಳು ಕಥೆ ಕಟ್ಟಿದ್ದ ಶಿಲಾದಿತ್ಯ ಬೋಸ್ ಅವರನ್ನು ಬಂಧಿಸಬೇಕು ಎಂದು ಕನ್ನಡ ಸಂಘಟನೆಯ ಮುಖಂಡರು ಆಗ್ರಹಿಸಿದ್ದಾರೆ. ಸದ್ಯ ವಿಕಾಸ್ ಅವರನ್ನು ಪೊಲೀಸರು ಬಿಡುಗಡೆ ಮಾಡಿದ್ದು, ಶಿಲಾದಿತ್ಯ ಬೋಸ್ ಅವರಿಗೆ ಹುಡುಕಾಟ ನಡೆಸುತ್ತಿದ್ದಾರೆ.

ಟ್ರಂಪ್ ಶಿಕ್ಷಣ ನೀತಿ ವಿರೋಧಿಸಿ ಜಂಟಿ ಹೇಳಿಕೆ ಬಿಡುಗಡೆ

ನ್ಯೂಯಾರ್ಕ್ (ರಾಯಿಟರ್ಸ್/ ಎಪಿ): ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತವು ಅನುಸರಿಸುತ್ತಿರುವ ನೀತಿಯನ್ನು 100ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ವಿರೋಧಿಸಿದ್ದು, ಈ ಸಂಬಂಧ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.

ಸರ್ಕಾರವು ನಮ್ಮ ಸ್ವಾತಂತ್ರ್ಯಕ್ಕೆ ಬೆದರಿಕೆವೊಡ್ಡುತ್ತಿದೆ ಎಂದು ಹಾರ್ವರ್ಡ್ ವಿಶ್ವವಿದ್ಯಾಲಯವು ಹೇಳಿಕೆ ನೀಡಿದ ಬೆನ್ನಲ್ಲೇ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಮತ್ತು ರಾಜಕೀಯ ಮುಖಂಡರ ಹಸ್ತಕ್ಷೇಪವನ್ನು ಖಂಡಿಸಿ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಮೊದಲ ಬಾರಿಗೆ ಒಟ್ಟಿಗೆ ಧ್ವನಿ ಎತ್ತಿದ್ದಾರೆ.

‘ಸುಧಾರಣೆಯನ್ನು ನಾವು ಸ್ವಾಗತಿಸುತ್ತೇವೆ. ಕಾನೂನು ಪ್ರಕಾರ ಮೇಲ್ವಿಚಾರಣೆ ಮಾಡಲು ನಮ್ಮ ವಿರೋಧವಿಲ್ಲ. ಆದರೆ, ಅನಗತ್ಯವಾಗಿ ಹಸ್ತಕ್ಷೇಪ ಮಾಡುವುದನ್ನು ನಾವು ವಿರೋಧಿಸುತ್ತೇವೆ. ಈ ರೀತಿಯ ಹಸ್ತಕ್ಷೇಪವು ಉನ್ನತ ಶಿಕ್ಷಣದ ಮೇಲೆ ಪರಿಣಾಮ ಬೀರಲಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಜಂಟಿ ಹೇಳಿಕೆ ಕುರಿತು ಶ್ವೇತ ಭವನ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸರ್ಕಾರದ ವಿರುದ್ಧ ಮೊಕದ್ದಮೆ: (ಬಾಸ್ಟನ್ ವರದಿ): ವಿಶ್ವವಿದ್ಯಾಲಯಕ್ಕೆ ನೀಡುವ ಅನುದಾನದಲ್ಲಿ 2.2 ಬಿಲಿಯನ್ ಡಾಲರ್‌ಗೂ (18,739 ಕೋಟಿ) ಅಧಿಕ ಅನುದಾನವನ್ನು ಸ್ಥಗಿತಗೊಳಿಸಿದ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರದ ವಿರುದ್ಧ ಮೊಕದ್ದಮೆ ದಾಖಲಿಸುವುದಾಗಿ ಹಾರ್ವರ್ಡ್ ವಿಶ್ವವಿದ್ಯಾಲಯ ಸೋಮವಾರ ಘೋಷಿಸಿದೆ. ವಿಶ್ವವಿದ್ಯಾಲಯದಲ್ಲಿ ಆಡಳಿತಾತ್ಮಕ, ನಾಯಕತ್ವ ಸುಧಾರಣೆಗೆ ಹಾಗೂ ಪ್ರವೇಶಾತಿ ನೀತಿನಿಯಮಗಳ ಬದಲಾವಣೆಗೆ ಟ್ರಂಪ್ ಸರ್ಕಾರ ಏಪ್ರಿಲ್ 11ರಂದು ಕರೆ ನೀಡಿತ್ತು. ಕೆಲ ವಿದ್ಯಾರ್ಥಿ ಕ್ಲಬ್‌ಗಳನ್ನು ಗುರುತಿಸುವುದನ್ನು ನಿಲ್ಲಿಸುವಂತೆ ಹೇಳಿತ್ತು.

ಇಂದಿನಿಂದ ಮೂರು ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ

ಶನಿವಾರ ಪೋಪ್ ಫ್ರಾನ್ಸಿಸ್ ಅಂತ್ಯಸಂಸ್ಕಾರ

ವ್ಯಾಟಿಕನ್ ಸಿಟಿ (ರಾಯಿಟರ್ಸ್/ಎಪಿ): ಪೋಪ್ ಫ್ರಾನ್ಸಿಸ್ ಅವರ ಅಂತಿಮ ಸಂಸ್ಕಾರವನ್ನು ಶನಿವಾರ (ಏಪ್ರಿಲ್ 26) ಬೆಳಿಗ್ಗೆ 10 ಗಂಟೆಗೆ ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ನೆರವೇರಿಸಲು ಕಾರ್ಡಿನಲ್‌ಗಳು ನಿರ್ಧರಿಸಿದ್ದಾರೆ. ಪೋಪ್ ಅವರ ಮೃತದೇಹವನ್ನು ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ಇರಿಸಿ, ಬುಧವಾರದಿಂದ ಸಾರ್ವಜನಿಕರ ದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಪೋಪ್ ನಿಧನದ ನಂತರ ನಿರ್ವಹಿಸುವ ಕಾರ್ಯಗಳ ಸಿದ್ಧತೆಗಾಗಿ ಕಾರ್ಡಿನಲ್‌ಗಳು ಮಂಗಳವಾರ ಸಭೆ ಸೇರಿದ್ದರು. ಪೋಪ್ ಫ್ರಾನ್ಸಿಸ್ ಅವರು ಜೀವಿಸಿದ್ದ ಸಂತಾ ಮಾರ್ತಾ ಹೋಟೆಲ್‌ನಲ್ಲಿ, ಪೋಪ್ ಅವರ ಮೃತದೇಹವನ್ನು ಇರಿಸಲಾಗಿದೆ. ಮೃತದೇಹದ ಫೋಟೊಗಳನ್ನು ವ್ಯಾಟಿಕನ್ ಸಿಟಿಯ ಅಧಿಕಾರಿಗಳು ಮಂಗಳವಾರ ಬಿಡುಗಡೆ ಮಾಡಿದ್ದಾರೆ.

ಕಮಲೆಂಗೊ ಅಧಿಕಾರ: ಕಾರ್ಡಿನಲ್‌ಗಳ ಸಮಿತಿಯಲ್ಲಿ ಹಣಕಾಸು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವವರನ್ನು ‘ಕಮಲೆಂಗೊ’ ಎನ್ನಲಾಗುತ್ತದೆ. ಐರ್ಲೆಂಡ್‌ನ ಪೋಪ್ ಫ್ರಾನ್ಸಿಸ್ ಅವರು ಕಾರ್ಡಿನಲ್ ಕೆವಿನ್ ಜೋಸೆಫ್ ಫ್ಯಾರೆಲ್ ಅವರನ್ನು ಹಣಕಾಸು ಕಾರ್ಯದರ್ಶಿಯಾಗಿ ನೇಮಿಸಿದ್ದರು. ಸಂಪ್ರದಾಯದಂತೆ ಪೋಪ್ ಮೃತಪಟ್ಟಾಗ ವ್ಯಾಟಿಕನ್ ಸಿಟಿಯ ನಿರ್ವಹಣೆಯನ್ನು ಕಮಲೆಂಗೊ ನಿರ್ವಹಿಸುತ್ತಾರೆ.



ಕಾರ್ಡಿನಲ್ ಕೆವಿನ್ ಜೋಸೆಫ್ ಫ್ಯಾರೆಲ್ ಸೇರಿದಂತೆ ವ್ಯಾಟಿಕನ್ ಸಿಟಿಯ ಪ್ರಮುಖರು ಪೋಪ್ ಫ್ರಾನ್ಸಿಸ್ ಅವರ ಮೃತದೇಹದ ಮೇಲೆ ಪವಿತ್ರ ಜಲವನ್ನು ಸಿಂಪಡಿಸುವ ಮೂಲಕ ವಿವಿಧ ಧಾರ್ಮಿಕ ಕಾರ್ಯಗಳನ್ನು ಸೋಮವಾರ ನೆರವೇರಿಸಿದರು ಎಪಿ / ಪಿಟಿಐ ಚಿತ್ರ

ಮೃತ ಪೋಪ್ ಅವರ ಅಂತ್ಯಸಂಸ್ಕಾರದ ವಿಧಿ ವಿಧಾನಗಳ ಎಲ್ಲವನ್ನೂ ಕಮಲೆಂಗೊ ಅವರೇ ನಿರ್ವಹಿಸುತ್ತಾರೆ. 2019ರಲ್ಲಿಯೇ ಪೋಪ್ ಫ್ರಾನ್ಸಿಸ್ ಅವರು ಕಾರ್ಡಿನಲ್ ಕೆವಿನ್ ಫ್ಯಾರೆಲ್ ಅವರಿಗೆ ಕಮಲೆಂಗೊ ಜವಾಬ್ದಾರಿಯನ್ನು ನೀಡಿದ್ದರು.

> **ವಲಸಿಗರನ್ನು ಸ್ವಾಗತಿಸಿ, ನ್ಯಾಯಯುತವಾಗಿ ನಡೆದುಕೊಳ್ಳಿ ಎಂದು ಜಗತ್ತಿನ ಶಕ್ತಿಕೇಂದ್ರದಂತಿರುವ ದೇಶಗಳಿಗೆ ಪೋಪ್ ಹೇಳಿದ್ದರು**
>
> **ಬೊಲಾ ಟಿನುಬು,** ನೈಜೀರಿಯಾ ಅಧ್ಯಕ್ಷ

ಮೇಲ್ವಿಚಾರಣೆಯಿಂದ ಹಿಡಿದು ನೂತನ ಪೋಪ್ ಆಯ್ಕೆ ಪ್ರಕ್ರಿಯೆವರೆಗೆ

ನಾಯಕರ ಆಗಮನ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಂಪತಿ, ಅರ್ಜೆಂಟೀನಾದ ಅಧ್ಯಕ್ಷ ಜೇವಿಯರ್ ಮಿಲೆ, ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನ್ಯಾಸಿಯೊ ಲುಲಾ ದ ಸಿಲ್ವಾ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಐರೋಪ್ಯ ಒಕ್ಕೂಟದ ಹಲವು ದೇಶಗಳ ಪ್ರಮುಖರು ಪೋಪ್ ಫ್ರಾನ್ಸಿಸ್ ಅವರಿಗೆ ನಮನ ಸಲ್ಲಿಸಲಿದ್ದಾರೆ ಎನ್ನಲಾಗಿದೆ.

ವಿಧಿವಿಧಾನ ಸರಳಗೊಳಿಸಿದ್ದ ಪೋಪ್

- ಪೋಪ್ ಆಗಿ ಆಯ್ಕೆಯಾದಾಗಿನಿಂದಲೂ ಫ್ರಾನ್ಸಿಸ್ ಅವರು ಸರಳ ಜೀವನ ನಡೆಸಿದ್ದರು. ತಮ್ಮ ಅಂತ್ಯಸಂಸ್ಕಾರದ ವಿಧಿ ವಿಧಾನಗಳು ಸರಳವಾಗಬೇಕು ಎಂದು ಅವರು ಬಯಸಿದ್ದರು. ಇದಕ್ಕಾಗಿ 2024ರ ಏಪ್ರಿಲ್‌ನಲ್ಲಿ ಹೊಸ ನಿಯಮಗಳನ್ನು ರೂಪಿಸಿ ಹಳೆಯ ಸಂಪ್ರದಾಯವನ್ನು ಅಂತ್ಯಗೊಳಿಸಿದ್ದರು. ಪೋಪ್ ಹೇಳಿದ್ದ ಅಂಶಗಳು ಹೀಗಿವೆ;
- ಸಂಪ್ರದಾಯದಂತೆ ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ನನ್ನನ್ನು ಹೂಳಬಾರದು. ವ್ಯಾಟಿಕನ್ ಸಿಟಿಯಿಂದ ದೂರ ರೋಮ್‌ನಲ್ಲಿರುವ ಸಂತಾ ಮರಿಯಾ ಮ್ಯಾಜಿಯೊರೆ ಚರ್ಚ್‌ನಲ್ಲಿ ಹೂಳಬೇಕು
- ಸಾರ್ವಜನಿಕರ ದರ್ಶನಕ್ಕಾಗಿ ಎತ್ತರದ ವೇದಿಕೆ ಸಿದ್ಧಪಡಿಸಿ ನನ್ನ ಮೃತದೇಹವನ್ನು ಅಲ್ಲಿ ಇರಿಸಬಾರದು. ಶವಪೆಟ್ಟಿಗೆಯಲ್ಲಿಯೇ ಮೃತದೇಹವನ್ನು ಇಟ್ಟು ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕು
- ಒಂದರ ಒಳಗೊಂದರಂತೆ ಮೂರು ಶವಪೆಟ್ಟಿಗೆಯಲ್ಲಿ ಮೃತ ಪೋಪ್ ಅವರ ಶವವಿಡುವ ಸಂಪ್ರದಾಯವಿದೆ. ಆದರೆ, ನನ್ನ ಮೃತದೇಹವನ್ನು ಕಟ್ಟಿಗೆಯಿಂದ ಮಾಡಿದ ಒಂದು ಪೆಟ್ಟಿಗೆಯಲ್ಲಿ ಇರಿಸಿದರೆ ಸಾಕು



ಜೂನ್ 5ಕ್ಕೆ ಥಗ್ ಲೈಫ್


ನಟ ಕಮಲ್ ಹಾಸನ್ ನಟನೆಯ 234ನೇ ಸಿನಿಮಾ 'ಥಗ್ ಲೈಫ್' ಜೂನ್ 5ರಂದು ತೆರೆಕಾಣಲಿದ್ದು, ಇತ್ತೀಚೆಗೆ ಚಿತ್ರದ ಮೊದಲ ಹಾಡು ಚೆನ್ನೈನಲ್ಲಿ ಬಿಡುಗಡೆಗೊಂಡಿತು. 'ನಾಯಗನ್' ಬಳಿಕ 35 ವರ್ಷಗಳ ನಂತರ ಮಣಿರತ್ನಂ ಹಾಗೂ ಕಮಲ್ ಹಾಸನ್ ಕಾಂಬಿನೇಷನ್‌ನಲ್ಲಿ ಈ ಸಿನಿಮಾ ತೆರೆಗೆ ಬರುತ್ತಿದೆ.

'ಹೊಸಬರ ತಂಡಗಳು ಒಂದಾಗಬೇಕು'

'ರಾಮಾ ರಾಮಾ ರೇ', 'ಒಂದಲ್ಲಾ ಎರಡಲ್ಲಾ' ಖ್ಯಾತಿಯ ಸತ್ಯಪ್ರಕಾಶ್ ನಿರ್ದೇಶಿಸಿ, ನಟಿಸಿರುವ 'ಎಕ್ಸ್ ಆ್ಯಂಡ್ ವೈ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಚಿತ್ರ ಕುರಿತು ಅವರು ಮಾಹಿತಿ ಹಂಚಿಕೊಂಡಿದ್ದಾರೆ.



ಸತ್ಯಪ್ರಕಾಶ್



'ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಮುಗಿದು ಡಿಟಿಎಸ್ ಕೆಲಸ ನಡೆಯುತ್ತಿದೆ. ಮುಂದಿನ ತಿಂಗಳು ಸಿನಿಮಾ ಬಿಡುಗಡೆ ಯೋಜನೆಯಿದೆ. ಫ್ಯಾಂಟಸಿ, ಸೋಷಿಯಲ್ ಡ್ರಾಮಾ ಹೊಂದಿರುವ ಕಥೆಯೇ ಈ ಚಿತ್ರದ ವಿಶೇಷತೆ. ಇಲ್ಲಿವರೆಗೆ ಪುನರ್ಜನ್ಮ, ಸತ್ತ ಮೇಲೆ ದೆವ್ವವಾಗುವ ಕಥೆಗಳನ್ನು ನೋಡಿದ್ದೇವೆ. ಆದರೆ ಹುಟ್ಟೇ ಇಲ್ಲದ ಆತ್ಮ ಕುರಿತಾಗಿ ಫ್ಯಾಂಟಸಿ ಕಥೆಯನ್ನು ನೋಡಿಲ್ಲ. ಅಂಥ ಕಥೆ ಈ ಚಿತ್ರದಲ್ಲಿದೆ' ಎಂದರು ಸತ್ಯಪ್ರಕಾಶ್.

'ಮ್ಯಾನ್ ಆಫ್ ದ ಮ್ಯಾಚ್' ಚಿತ್ರದ ನಟ ಅಥರ್ವ ಪ್ರಕಾಶ್, 'ದೂರದರ್ಶನ' ಸಿನಿಮಾ ನಾಯಕಿ ಅಯನಾ ಹಾಗೂ ಬೃಂದಾ ಆಚಾರ್ಯ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ದೊಡ್ಡಣ್ಣ, ವೀಣಾ ಸುಂದರ್, ಸುಂದರ್ ಮೊದಲಾದವರು ತಾರಾಗಣದಲ್ಲಿದ್ದಾರೆ.

'ಸಿನಿಮಾ ಮೇಲಿನ ಪ್ರೀತಿಯಿಂದ ಸಿನಿಮಾ ನಿರ್ಮಾಣಕ್ಕೆ ಎಲ್ಲರೂ ಒಂದಲ್ಲ ಒಂದು ರೀತಿ ಸಹಕಾರ ನೀಡುತ್ತಾರೆ. ತಮ್ಮ ಪೇಮೆಂಟ್‌ಗಳಲ್ಲಿ ರಾಜಿಯಾಗುತ್ತಾರೆ. ಆದರೆ ಬಿಡುಗಡೆ ಅಂತ ಬಂದಾಗ ಇಲ್ಲಿ ಎಲ್ಲವೂ ವ್ಯವಹಾರವಾಗುತ್ತದೆ. ಯಾರೂ ಕೂಡ ರಾಜಿ ಮಾಡಿಕೊಳ್ಳುವುದಿಲ್ಲ. ಆಗ ಬಹಳ ಕಷ್ಟ ಎನ್ನಿಸುತ್ತದೆ. ಆ ಹಂತದಲ್ಲಿ ನಿರ್ಮಾಪಕ ಸುಸ್ತಾಗಿ, ಸಿನಿಮಾ ಬಿಡುಗಡೆ ಮಾಡಿದರೆ ಸಾಕು ಎಂಬ ಸ್ಥಿತಿ ತಲುಪುತ್ತಾನೆ' ಎನ್ನುತ್ತಾರೆ ಅವರು.

ಬೆಂಗಳೂರು ಮತ್ತು ಮಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸತ್ಯ ಪಿಕ್ಚರ್ಸ್ ಬ್ಯಾನರ್ ನಿರ್ಮಾಣದ ಈ ಚಿತ್ರಕ್ಕೆ ಲವಿತ್ ಛಾಯಾಚಿತ್ರಗ್ರಹಣ, ಕೌಶಿಕ್ ಹರ್ಷ ಸಂಗೀತ, ಬಿ.ಎಸ್.ಕೆಂಪರಾಜು ಸಂಕಲನವಿದೆ. ಚಿತ್ರದಲ್ಲಿ ಆರು ಹಾಡುಗಳಿದ್ದು ರಾಜೇಶ್ ಕೃಷ್ಣನ್, ಹೇಮಂತ್ ಮೊದಲಾದವರು ಹಾಡಿದ್ದಾರೆ.

'ಅನುಭವಿ ನಿರ್ಮಾಪಕ ಮತ್ತು ಅನುಭವಿ ನಿರ್ದೇಶಕ ಒಟ್ಟಾಗುವುದು ಕಷ್ಟ. ಸಾಕಷ್ಟು ಸಲ ಅನುಭವಿ ನಿರ್ಮಾಪಕರಿಗೆ ಒಳ್ಳೆ ಮೇಕರ್ ಸಿಗುವುದಿಲ್ಲ ಅಥವಾ ಅನುಭವಿ ನಿರ್ದೇಶಕನಿಗೆ ಉತ್ತಮ ನಿರ್ಮಾಪಕ ಸಿಗುವುದಿಲ್ಲ. ಈ ರೀತಿ ತಪ್ಪಾದ ಸಹಭಾಗಿತ್ವದಿಂದ ಸಿನಿಮಾಗಳು ಸೋಲಬಹುದು. ಒಳ್ಳೆಯ ತಂಡಗಳ ನಡುವಿನ ಸಹಭಾಗಿತ್ವ ಹೆಚ್ಚಾಗಬೇಕು. ಉತ್ತಮ ಸಿನಿಮಾ ಮಾಡುವ ಹೊಸಬರೆಲ್ಲ ಒಂದಾಗಬೇಕು. ಕನ್ನಡದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ' ಎಂದು ಸತ್ಯ ಅಭಿಪ್ರಾಯಪಡುತ್ತಾರೆ.

ಸತ್ಯಪ್ರಕಾಶ್ ನಿರ್ಮಾಣದ ಜೊತೆಗೆ ಸಿನಿಮಾ ವಿತರಣೆಯಲ್ಲಿಯೂ ಸಕ್ರಿಯರಾಗಿದ್ದಾರೆ. ತಮ್ಮದೇ ಸಂಸ್ಥೆ ಮೂಲಕ ಅನೇಕ ಹೊಸಬರ ಸಿನಿಮಾಗಳ ಬಿಡುಗಡೆಗೆ ನೆರವಾಗುತ್ತಿದ್ದಾರೆ. 'ಹಾಕಿದ ಹಣ ಮರಳಿ ಪಡೆಯುವುದೊಂದೇ ಯಶಸ್ಸಿನ ಮಾನದಂಡವಲ್ಲ. ಒಂದು ತಂಡಕ್ಕೆ ಮೊದಲ ಸಿನಿಮಾಗೆ ಪ್ರಶಂಸೆ ಸಿಗಬೇಕು. ಅವರಲ್ಲಿ ಒಳ್ಳೆಯ ಸಿನಿಮಾ ಮಾಡಿದ್ದೇವೆ ಎಂಬ ಆತ್ಮವಿಶ್ವಾಸ ಬರಬೇಕು. ಅದೇ ದೊಡ್ಡ ರಿಟರ್ನ್. ಆ ತಂಡ ತಕ್ಷಣ ಇನ್ನೊಂದು ಸಿನಿಮಾ ಮಾಡಬೇಕು. ಆಗ ಒಂದಷ್ಟು ಉತ್ತಮ ಸಿನಿಮಾಗಳು ಬಂದು ಉದ್ಯಮದ ಚಿತ್ರಣ ಬದಲಾಗುತ್ತದೆ. ಸಾಕಷ್ಟು ಒಳ್ಳೆಯ ಹೊಸ ತಂಡಗಳು ಚಿತ್ರೋದ್ಯಮಕ್ಕೆ ಬರುತ್ತಿರುವುದು ಆಶಾದಾಯಕ ಬೆಳವಣಿಗೆ' ಎಂಬುದು ಅವರ ಅಭಿಮತ.

ಸ್ವಿಟ್ಜರ್ಲೆಂಡ್‌ನಲ್ಲಿ ಕೆಡಿ

2025ರ ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'ಕೆಡಿ' ಶೂಟಿಂಗ್ ಅಂತಿಮ ಹಂತದಲ್ಲಿದೆ. ಚಿತ್ರದ ಹಾಡೊಂದರ ಚಿತ್ರೀಕರಣದ ಸ್ಥಳ ಹುಡುಕಾಟಕ್ಕಾಗಿ ಚಿತ್ರತಂಡ ಸ್ವಿಟ್ಜರ್ಲೆಂಡ್‌ಗೆ ತೆರಳಿದೆ.

ಇತ್ತೀಚೆಗೆ ಬಿಡುಗಡೆಯಾಗಿದ್ದ 'ಸೆಟ್ ಆಗಲ್ಲ..' ಹಾಡಿನ ಚಿತ್ರೀಕರಣ ಸ್ವಿಟ್ಜರ್ಲೆಂಡ್‌ನಲ್ಲಿ ಶೀಘ್ರದಲ್ಲೇ ನಡೆಯಲಿದೆ. ಈ ಹಾಡಿಗೆ ಪ್ರೇಮ್ ಅವರೇ ಸಾಹಿತ್ಯ ಬರೆದಿದ್ದು, ಮಿಖಾ ಸಿಂಗ್ ದನಿಯಾಗಿದ್ದಾರೆ. ಈ ಹಾಡಿಗೆ ನೃತ್ಯ ನಿರ್ದೇಶನ ಮಾಡುವ ಅವಕಾಶವನ್ನು ಚಿತ್ರತಂಡವು ಪ್ರೇಕ್ಷಕರಿಗೇ ನೀಡಿತ್ತು. ಹಾಡಿಗೆ ಹುಕ್‌ಸ್ಟೆಪ್ ಹಾಕಿ ಅದನ್ನು ಚಿತ್ರತಂಡಕ್ಕೆ ಇನ್‌ಸ್ಟಾಗ್ರಾಂ ಮೂಲಕ ಕಳುಹಿಸಿದರೆ ಅತ್ಯುತ್ತಮವಾದುದನ್ನು ಆಯ್ಕೆ ಮಾಡಿಕೊಂಡು ಬಳಸುವುದಾಗಿ ಪ್ರೇಮ್ ತಿಳಿಸಿದ್ದರು. ಸಾವಿರಾರು ಜನರು ಈ ಹಾಡಿಗೆ ರೀಲ್ಸ್ ಮಾಡಿ ಕಳುಹಿಸಿದ್ದು, ಹಲವು ಸ್ಟೆಪ್ಸ್‌ಗೆ ಧ್ರುವ ಸರ್ಜಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಿನಿಮಾದ ಟೀಸರ್ ಬಿಡುಗಡೆಗೆ ಸಿದ್ಧತೆ ಆರಂಭಿಸಿರುವ ಚಿತ್ರತಂಡ ಇತ್ತೀಚೆಗೆ ಮುಂಬೈನಲ್ಲಿ ನಟ ಸಂಜಯ್ ದತ್ ಅವರ ಪಾತ್ರದ ಡಬ್ಬಿಂಗ್ ಪೂರ್ಣಗೊಳಿಸಿದೆ. ಶೀಘ್ರದಲ್ಲೇ ಟೀಸರ್ ಬಿಡುಗಡೆಯಾಗುವ ಸಾಧ್ಯತೆ ಇದೆ.



ಸಂಜಯ್ ದತ್, ಪ್ರೇಮ್

ಕನ್ನಡದಲ್ಲೂ 'ದಸ್ಕತ್'





ಅನೀಶ್

ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರಶಸ್ತಿ ಬಾಚಿಕೊಂಡಿದ್ದ ಅನೀಶ್ ಪೂಜಾರಿ ವೇಣೂರು ನಿರ್ದೇಶನದ ತುಳು ಸಿನಿಮಾ 'ದಸ್ಕತ್' ಇದೀಗ ಕನ್ನಡದಲ್ಲೂ ತೆರೆಗೆ ಬರಲು ಸಜ್ಜಾಗಿದೆ.

ರಾಘವೇಂದ್ರ ಕುಡ್ವ ನಿರ್ಮಾಣ ಮಾಡಿದ್ದ ಈ ಸಿನಿಮಾ ಕನ್ನಡದಲ್ಲಿ ಡಬ್ ಆಗಿ ಮೇ 9ರಂದು ತೆರೆಕಾಣಲಿದೆ. 'ಕಿರುಚಿತ್ರ ಹಾಗೂ ವೆಬ್‌ಸರಣಿಗಳಲ್ಲಿ ಕೆಲಸ ಮಾಡಿ ಅನುಭವ ಹೊಂದಿದ್ದ ನಾನು ಸಿನಿಮಾ ಮಾಡುವ ಆಸೆ ಹೊಂದಿದ್ದೆ. ಹೀಗೆ ಶುರುವಾಗಿದ್ದು ದಸ್ಕತ್. ದಸ್ಕತ್ ಎಂದರೆ ಸಹಿ. ಒಂದು ಹಳ್ಳಿಯಲ್ಲಿ ಜನ ಸಹಿಗಾಗಿ ಎಷ್ಟು ಕಷ್ಟ ಪಡುತ್ತಾರೆ ಎಂಬುವುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಒಂದು ಸಹಿಯಿಂದ ಏನೆಲ್ಲಾ ಅವಾಂತರ ಸೃಷ್ಟಿಯಾಗುತ್ತದೆ, ಶ್ರೀಮಂತರು, ಬಡವರು ಹಾಗೂ ಅಧಿಕಾರಿಗಳ ನಡುವಿನ ತಳಮಳದ ಜೊತೆಗೆ ಬದುಕು ಹೇಗೆಲ್ಲಾ ಸಾಗುತ್ತದೆ ಎಂಬುದನ್ನು ಬಹಳ ಸೂಕ್ಷ್ಮವಾಗಿ ಹೇಳುವ ಪ್ರಯತ್ನವನ್ನು ಈ ಸಿನಿಮಾದಲ್ಲಿ ಮಾಡಿದ್ದೇವೆ. ತುಳುವಿನಲ್ಲಿ 'ದಸ್ಕತ್' ಬಿಡುಗಡೆಗೊಂಡು 70 ದಿನಗಳನ್ನು ಪೂರೈಸಿದೆ. ಕೆನಡಾ, ದುಬೈ ಸೇರಿದಂತೆ ವಿದೇಶಗಳಲ್ಲೂ 'ದಸ್ಕತ್' ಬಿಡುಗಡೆಯಾಗಿದೆ' ಎಂದು ಮಾಹಿತಿ ನೀಡಿದರು ಅನೀಶ್.

ಕನ್ನಡದಲ್ಲಿ ಈ ಚಿತ್ರವನ್ನು ಡಬ್ ಮಾಡಿ ನಿರ್ಮಾಪಕ ಜಗದೀಶ್ ಎನ್. ಅರೇಬನ್ನಿಮಂಗಲ ಪ್ರೇಕ್ಷಕರ ಎದುರಿಗೆ ಇಡುತ್ತಿದ್ದಾರೆ. ಚಿತ್ರದಲ್ಲಿ ನಾಯಕನಾಗಿ ದೀಕ್ಷಿತ್ ನಟಿಸಿದ್ದು, ಭವ್ಯ ಪೂಜಾರಿ ನಾಯಕಿಯಾಗಿದ್ದಾರೆ. ಸಮರ್ಥನ್ ಎಸ್.ರಾವ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಮೋಹನ್ ಶೇಣಿ, ದೀಪಕ್ ರೈ ಪಾಣಾಜೆ ಸೇರಿದಂತೆ ಹಲವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಬೆಂಗಳೂರಿನಿಂದಲೇ ಸಿನಿಮಾ ಅಪ್‌ಲೋಡ್ ಸೌಲಭ್ಯ



ಸಿನಿಮಾಗಳನ್ನು ಡಿಜಿಟಲ್ ಪರದೆಗಳಲ್ಲಿ ಪ್ರದರ್ಶನಗೊಳ್ಳಲು ಅನುವು ಮಾಡಿಕೊಡುವ ಡಿಜಿಟಲ್ ಸಿನಿಮಾ ಮಾಸ್ಟರಿಂಗ್ ಸೌಲಭ್ಯ ಇದೀಗ ಬೆಂಗಳೂರಿನಲ್ಲಿಯೂ ಲಭ್ಯವಿದೆ. ಕ್ಯೂಬ್ ಸಿನಿಮಾ ಟೆಕ್ನಾಲಜೀಸ್‌ನ ಈ ವ್ಯವಸ್ಥೆಗೆ ನಟ ಶಿವರಾಜ್‌ಕುಮಾರ್ ಇತ್ತೀಚೆಗಷ್ಟೇ ಚಾಲನೆ ನೀಡಿದರು.

ಸಿಂಗಲ್ ಸ್ಕ್ರೀನ್, ಮಲ್ಟಿಪ್ಲೆಕ್ಸ್‌ಗಳ ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳುವ ಮೊದಲು ಅದನ್ನು ನಿರ್ದಿಷ್ಟ ವ್ಯವಸ್ಥೆಗೆ ಅಪ್‌ಲೋಡ್ ಮಾಡಬೇಕು. ಆ ಬಳಿಕ ಅದರ ಡೌನ್‌ಲಿಂಕ್ ಚಿತ್ರಮಂದಿರಗಳಿಗೆ ಲಭ್ಯವಾಗಿ, ಚಿತ್ರ ಪ್ರದರ್ಶನಗೊಳ್ಳುತ್ತದೆ. ಈ ವ್ಯವಸ್ಥೆ ಇಲ್ಲಿತನಕ ಚೆನ್ನೈನಲ್ಲಿ ಮಾತ್ರವಿತ್ತು. ಹೀಗಾಗಿ ನಮ್ಮ ರಾಜ್ಯದಲ್ಲಿ ಕನ್ನಡ, ತುಳು ಯಾವುದೇ ಭಾಷೆಯ ಸಿನಿಮಾ ತೆರೆಕಂಡರೂ ಅದನ್ನು ಚೆನ್ನೈಗೆ ಹೋಗಿಯೇ ಅಪ್‌ಲೋಡ್ ಮಾಡಬೇಕಿತ್ತು. ಯುಎಫ್‌ಒ ಮತ್ತು ಕ್ಯೂಬ್ ಸಂಸ್ಥೆಗಳು ಈ ಸೇವೆ ಒದಗಿಸುತ್ತಿದ್ದು, ಪ್ರತಿ ಸಿನಿಮಾ ತಂಡವೂ ಈ ಕೆಲಸಕ್ಕಾಗಿ ಚೆನ್ನೈನಲ್ಲಿ ಎರಡು ದಿನ ವ್ಯಯಿಸಬೇಕಿತ್ತು. ಅಪ್‌ಲೋಡ್ ವೇಳೆ ಸಣ್ಣ ಲೋಪವಾದರೂ, ಅದನ್ನು ಸರಿಪಡಿಸಿಕೊಂಡು ಹೋಗಲು ಮತ್ತೆ ಬೆಂಗಳೂರಿಗೆ ಬರಬೇಕಿತ್ತು.

'ಈ ಬೇಡಿಕೆ 15 ವರ್ಷಗಳಿಂದಲೇ ಇತ್ತು. ಸದ್ಯ ಕರ್ನಾಟಕದಲ್ಲಿ 600 ಸ್ಕ್ರೀನ್‌ಗಳಲ್ಲಿ ಕ್ಯೂಬ್ ಮೂಲಕ ಸಿನಿಮಾ ತೆರೆ ಕಾಣುತ್ತಿದೆ' ಎಂದಿದ್ದಾರೆ ಕ್ಯೂಬ್ ಸಿನಿಮಾದ ಸತೀಶ್ ತುಳಸಿ.

ಉನ್ನತ ಹುದ್ದೆಗಳಿಗೆ ನೇಮಕಾತಿ: ಕಾಂಗ್ರೆಸ್, ಬಿಜೆಪಿ ಪರಸ್ಪರ ಕೆಸರೆರಚಾಟ

ನ್ಯಾಯಾಂಗದಲ್ಲಿ 'ಹಸ್ತಕ್ಷೇಪ': ವಾಗ್ವಾದ

ನವದೆಹಲಿ (ಪಿಟಿಐ): ನ್ಯಾಯಾಂಗದ ಉನ್ನತ ಹುದ್ದೆಗಳ ನೇಮಕಾತಿ ಕುರಿತು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ, ರಾಜ್ಯಸಭೆ ಸದಸ್ಯ ಬಹರುಲ್ ಇಸ್ಲಾಂ ನೇಮಕ ಉಲ್ಲೇಖಿಸಿ ಟೀಕಿಸಿದ್ದಾರೆ.

ಈ ಆರೋಪಕ್ಕೆ ಕಾಂಗ್ರೆಸ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. 'ನ್ಯಾಯಾಂಗ ಪ್ರಕ್ರಿಯೆ, ಕೋರ್ಟ್, ನ್ಯಾಯಮೂರ್ತಿಗಳನ್ನು ಆರ್‌ಎಸ್‌ಎಸ್, ಜನಸಂಘ, ಬಿಜೆಪಿ ನಾಚಿಕೆಗೇಡಿನ ರಾಜಕಾರಣಕ್ಕೆ ಬಳಸಿಕೊಂಡಿರುವ ಇತಿಹಾಸವೇ ಇದೆ' ಎಂದು ಹೇಳಿದೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ದುಬೆ, 'ಕಾಂಗ್ರೆಸ್ ಪಕ್ಷದ ಸಂವಿಧಾನ ಉಳಿಸಿ ಕುರಿತು ಆಸಕ್ತಿದಾಯಕ ಕಥೆ ಇದೆ. ಬಹರುಲ್ ಇಸ್ಲಾಂ ಸಾಹೀಬ್ ಅವರು ಅಸ್ಸಾಂನಲ್ಲಿ 1951ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದರು. ತುಷ್ಟೀಕರಣದ ಹೆಸರಿನಲ್ಲಿ ಕಾಂಗ್ರೆಸ್ ಅವರನ್ನು 1962ರಲ್ಲಿ ರಾಜ್ಯಸಭೆ ಸದಸ್ಯರಾಗಿಸಿತು. ಮತ್ತೆ 1968ರಲ್ಲಿ ರಾಜ್ಯಸಭೆ ಸದಸ್ಯರಾದರು. ಆದರೆ, ರಾಜ್ಯಸಭೆ ಸದಸ್ಯತ್ವಕ್ಕೆ ಅವರಿಂದ ರಾಜೀನಾಮೆಯನ್ನು ಕೊಡಿಸದೇ 1972ರಲ್ಲಿ ಹೈಕೋರ್ಟ್ ಜಡ್ಜ್ ಆಗಿ ನೇಮಿಸಲಾಗಿತ್ತು' ಎಂದಿದ್ದಾರೆ.

'ಮುಂದೆ ಅವರು 1979ರಲ್ಲಿ ಅಸ್ಸಾಂ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾದರು. 1980ರಲ್ಲಿ ನಿವೃತ್ತರಾದರು. 1980ರಲ್ಲಿ ನಿವೃತ್ತರಾದ ನ್ಯಾಯಮೂರ್ತಿಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಲಾಗುತ್ತದೆ. ಅವರು ಮುಂದೆ ಇಂದಿರಾಗಾಂಧಿ ವಿರುದ್ಧದ ಭ್ರಷ್ಟಾಚಾರ ಪ್ರಕರಣವನ್ನು ಬದ್ಧತೆಯಿಂದ ಇತ್ಯರ್ಥ ಪಡಿಸುತ್ತಾರೆ. ಇದರಿಂದ ತೃಪ್ತರಾದ ಕಾಂಗ್ರೆಸ್ ಮತ್ತೆ 1983ರಲ್ಲಿ ಅವರನ್ನು ರಾಜ್ಯಸಭೆ ಸದಸ್ಯರಾಗಿ ನೇಮಿಸುತ್ತದೆ' ಎಂದು ದುಬೆ ಉಲ್ಲೇಖಿಸುತ್ತಾರೆ.

ಈ ಹಿಂದೆ ಮಾಡಿದ್ದ ಪೋಸ್ಟ್‌ನಲ್ಲಿ ದುಬೆ ಅವರು, '1967–68ರಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಕೈಲಾಶ್ ನಾಥ್ ವಾಂಚೂ ಅವರು ಕಾನೂನು ಶಿಕ್ಷಣ ಪಡೆದಿರಲಿಲ್ಲ ಎಂಬುದು ನಿಮಗೆ ಗೊತ್ತೆ' ಎಂದು ಪ್ರಶ್ನಿಸಿದ್ದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, ದುಬೆ ಅವರಿಗೆ ಬಹುಶಃ ಗುಮನ್ ಮಲ್ ಲೋಧಾ ಅವರ ಹೆಸರು ಗೊತ್ತಿರಲಿಕ್ಕಿಲ್ಲ. ಗೊತ್ತಿದ್ದರೂ ಅವರು ಏನೂ ಹೇಳುವುದಿಲ್ಲ ಎಂದು ಟೀಕಿಸಿದ್ದಾರೆ.

'ಲೋಧಾ ಅವರು 1969ರಿಂದ 1971ರವರೆಗೆ ಜನಸಂಘ ರಾಜಸ್ಥಾನ ಘಟಕದ ಅಧ್ಯಕ್ಷರಾಗಿದ್ದರು. 1972 ರಿಂದ 1977ರವರೆಗೆ ರಾಜಸ್ಥಾನ ಶಾಸನಸಭೆಯ ಸದಸ್ಯರಾಗಿದ್ದರು. ಮುಂದೆ ಜನತಾಪಾರ್ಟಿ ಸರ್ಕಾರದಲ್ಲಿ, ಜನಸಂಘದ ಕೃಪೆಯಿಂದಾಗಿ 1978ರಲ್ಲಿ ರಾಜಸ್ಥಾನ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದರು. ಇದು, ಇಲ್ಲಿಗೆ ಮುಗಿಯುವುದಿಲ್ಲ. ಲೋಧಾ ಅವರು ಮುಂದೆ 1988ರಲ್ಲಿ ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆದರು' ಎಂದು ಖೇರಾ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಸಿಜೆಐ ಅವರಿಂದ ರಾಜೀನಾಮೆ ಕೊಡಿಸಿ, ರಾಷ್ಟ್ರಪತಿ ಚುನಾವಣೆಗೆ ಕಣಕ್ಕಿಳಿಸಲಾಗುತ್ತದೆ. 'ನ್ಯಾಯಮೂರ್ತಿಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಕ್ಕೆ ಇದು, ಅತಿದೊಡ್ಡ ನಾಚಿಗೇಡಿನ ಉದಾಹರಣೆ' ಎಂದು ಖೇರಾ ಹೇಳಿದ್ದಾರೆ.

'ಕೆ.ಸುಬ್ಬರಾವ್ ಜೂನ್ 30,1966ರಲ್ಲಿ ಭಾರತದ 9ನೇ ಮುಖ್ಯ ನ್ಯಾಯಮೂರ್ತಿಯಾದರು. ಕೆಲ ತಿಂಗಳ ಬಳಿಕ ಜನಸಂಘದ ಒತ್ತಾಯದ ಮೇರೆಗೆ ಏಪ್ರಿಲ್ 11, 1967ರಲ್ಲಿ ರಾಜೀನಾಮೆ ನೀಡಿದರು. ಆದರೆ, 1967ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಝಾಕೀರ್ ಹುಸೇನ್ ಅವರಿಂದ ಪರಾಭವಗೊಂಡರು' ಎಂದು ಖೇರಾ ಸ್ಮರಿಸಿದ್ದಾರೆ.

ಸಂಸದ ದುಬೆ ಹೇಳಿಕೆ ವಿಡಿಯೊ ತೆಗೆಸಲು ಕೋರಿಕೆ

ಅರ್ಜಿ ವಿಚಾರಣೆಗೆ 'ಸುಪ್ರೀಂ' ಸಮ್ಮತಿ



ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಮುಖ್ಯ ನ್ಯಾಯಮೂರ್ತಿ ಅವರನ್ನು ಟೀಕಿಸಿರುವ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರ ಹೇಳಿಕೆಗಳ ವಿಡಿಯೊಗಳನ್ನು ಜಾಲತಾಣಗಳಿಂದ ತೆಗೆಸಲು ನಿರ್ದೇಶಿಸಬೇಕು ಎಂದು ಕೋರಿರುವ ವಿವಿಧ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿತು.

ಈ ಎಲ್ಲ ಅರ್ಜಿಗಳನ್ನು ತುರ್ತು ವಿಚಾರಣೆಗೆ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಆಗಸ್ಟೀನ್ ಜಾರ್ಜ್ ಮಾಸೀಹ್ ಅವರಿದ್ದ ಪೀಠಕ್ಕೆ ಒಪ್ಪಿಸಲಾಗಿದೆ.

'ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ನಾಗರಿಕ ಯುದ್ಧಕ್ಕೆ ಮುಖ್ಯ ನ್ಯಾಯಮೂರ್ತಿ ಅವರೇ ಕಾರಣ' ಎಂದು ದುಬೆ ಹೇಳಿದ್ದಾರೆ. ಇವರ ಹೇಳಿಕೆ ಬಳಿಕ ಜಾಲತಾಣಗಳಲ್ಲಿ ಸುಪ್ರೀಂ ಕೋರ್ಟ್ ನಿಂದಿಸುವ ನುಡಿಗಳು ಹೆಚ್ಚಾಗಿ ಹಂಚಿಕೆ ಆಗುತ್ತಿವೆ. ಇದು, ಗಂಭೀರವಾದ ವಿಷಯ' ಎಂದು ಅರ್ಜಿದಾರರ ಪರ ವಕೀಲರು ಪ್ರತಿಪಾದಿಸಿದರು.

'ನಿಮ್ಮ ತಕರಾರು ಏನಿದೆ? ನಿಂದನೆ ಅರ್ಜಿಯನ್ನು ಸಲ್ಲಿಸಲು ಬಯಸುವಿರಾ' ಎಂದು ನ್ಯಾಯಮೂರ್ತಿ ಗವಾಯಿ ವಕೀಲರನ್ನು ಪ್ರಶ್ನಿಸಿದರು.

'ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ. ಸಂಸದ ದುಬೆ ವಿರುದ್ಧ ಸರ್ಕಾರ ಯಾವುದೇ ಕ್ರಮ ವಹಿಸುತ್ತಿಲ್ಲ. ದುಬೆ ವಿರುದ್ಧ ನಿಂದನೆ ಮೊಕದ್ದಮೆ ದಾಖಲಿಸಲು ಸಮ್ಮತಿ ಕೋರಿ ಸಹೋದ್ಯೋಗಿ ವಕೀಲರೊಬ್ಬರು ಅಟಾರ್ನಿ ಜನರಲ್ ಅವರಿಗೂ ಪತ್ರ ಬರೆದಿದ್ದಾರೆ. ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ವಕೀಲರು ತಿಳಿಸಿದರು.

'ಪ್ರಸ್ತುತ, ದುಬೆ ಹೇಳಿಕೆ ಒಳಗೊಂಡ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಿಂದಲಾದರೂ ತೆಗೆಸಲು ಸೂಚನೆ ನೀಡಬೇಕು' ಎಂದು ವಕೀಲರು ಕೋರಿದರು. ಅರ್ಜಿಗಳು ಮುಂದಿನ ವಾರ ವಿಚಾರಣೆಗೆ ಬರಲಿವೆ.

ಉಗ್ರರ ಅಟ್ಟಹಾಸ

ಒಂದನೇ ಪುಟದಿಂದ...

ದಾಳಿ ನಡೆಸಿದವರನ್ನು ಗುರಿಯಾಗಿಸಿಕೊಂಡು ಭಾರಿ ಕಾರ್ಯಾಚರಣೆ ಆರಂಭವಾಗಿದೆ. ಭದ್ರತಾ ಸಿಬ್ಬಂದಿ ತಪಾಸಣೆ ಆರಂಭಿಸಿದ್ದಾರೆ.

ದಾಳಿಯ ಸುದ್ದಿ ಗೊತ್ತಾಗುತ್ತಿದ್ದಂತೆ ಪಹಲ್ಗಾಮ್ ಪಟ್ಟಣದಲ್ಲಿ ಮೌನ ಆವರಿಸಿತು. ಪ್ರವಾಸಿಗರು ಗುಂಪುಗಳಲ್ಲಿ ಅಲ್ಲಿಂದ ಬೇರೆಡೆ ತೆರಳಲಾರಂಭಿಸಿದರು. ಕಾಶ್ಮೀರಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯು ಹೆಚ್ಚಳ ಕಾಣುತ್ತಿರುವ ಹೊತ್ತಿನಲ್ಲಿ ಈ ದಾಳಿ ಆಗಿದೆ. ಜಮ್ಮು ಮತ್ತು ಕಾಶ್ಮೀರದ ಆಡಳಿತವು ಅನಂತನಾಗ್ ಮತ್ತು ಶ್ರೀನಗರದಲ್ಲಿ ತುರ್ತು ನಿಯಂತ್ರಣ ಕೇಂದ್ರ ಆರಂಭಿಸಿದೆ.

2000ನೆಯ ಇಸವಿಯಲ್ಲಿ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಭಾರತಕ್ಕೆ ಭೇಟಿ ನೀಡಿದ್ದಾಗ, ದಕ್ಷಿಣ ಕಾಶ್ಮೀರದ ಛತ್ತಿಸಿಂಹಪೊರಾದಲ್ಲಿ ಭಯೋತ್ಪಾದಕರು ದಾಳಿ ನಡೆಸಿ 35 ಮಂದಿ ಸಿಖ್ಖರನ್ನು ಕೊಂದಿದ್ದರು.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಬಗ್ಗೆ ಸಂಶಯ

ರಾಹುಲ್ ಆರೋಪ ತಳ್ಳಿಹಾಕಿದ ಆಯೋಗ



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ವೇಳೆ ಮತದಾರರ ಸಂಖ್ಯೆ ಅಧಿಕಗೊಂಡಿತ್ತು' ಎಂಬುದಾಗಿ ಅಮೆರಿಕದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾಡಿದ ಆರೋಪಗಳನ್ನು ಚುನಾವಣಾ ಆಯೋಗವು ತಳ್ಳಿಹಾಕಿದೆ.

'ಸುಳ್ಳು ಮಾಹಿತಿಗಳನ್ನು ಹಂಚಿಕೊಳ್ಳುವುದು ಕಾನೂನನ್ನು ಅಗೌರವದಿಂದ ಕಂಡಂತಾಗುತ್ತದೆ. ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಸಿಬ್ಬಂದಿ ಹಾಗೂ ರಾಜಕೀಯ ಪಕ್ಷಗಳು ತಮ್ಮ ಪರವಾಗಿ ನೇಮಿಸಿಕೊಳ್ಳುವ ಏಜೆಂಟರ ಯತ್ನಕ್ಕೆ ಗಾಸಿ ಮಾಡಿದಂತಾಗುತ್ತದೆ' ಎಂದು ಆಯೋಗದ ಮೂಲಗಳು ಮಂಗಳವಾರ ಹೇಳಿವೆ.

> **ತಮ್ಮ ಪರವಾಗಿ ಮತದಾರರು ತೀರ್ಪು ನೀಡಲಿಲ್ಲ ಎನ್ನುವ ಕಾರಣಕ್ಕೆ ಚುನಾವಣಾ ಆಯೋಗವನ್ನು ದೂರುವುದು, ಆಯೋಗವು ರಾಜಿಯಾಗಿದೆ ಎನ್ನುವುದು ಅಸಂಬದ್ಧ**
> **ಚುನಾವಣಾ ಆಯೋಗದ ಮೂಲಗಳು**

'ಕಾನೂನಿನ ಪ್ರಕಾರವೇ ಮತದಾರರ ಪಟ್ಟಿಯನ್ನು ರೂಪಿಸಲಾಗುತ್ತದೆ. ಚುನಾವಣೆಗೂ ಮುನ್ನ ಅಥವಾ ಪ್ರತಿ ವರ್ಷವೂ ಪಕ್ಷಗಳಿಗೆ ಪರಿಷ್ಕೃತ ಪಟ್ಟಿಯನ್ನು ನೀಡಲಾಗುತ್ತದೆ. 9.72 ಕೋಟಿ ಮತದಾರರು ಇರುವ ಪಟ್ಟಿಯನ್ನು ಮಹಾರಾಷ್ಟ್ರ ಚುನಾವಣೆಗೂ ಮೊದಲು ಬಿಡುಗಡೆ ಮಾಡಲಾಗುತ್ತು. ಕೇವಲ 89 ಆಕ್ಷೇಪಣೆಗಳಷ್ಟೇ ಬಂದಿದ್ದವು' ಎಂದು ಮಾಹಿತಿ ನೀಡಿವೆ.



ಆಯೋಗದ ವಾದವೇನು?

- 6.40 ಕೋಟಿ ಮತದಾರರು ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ಮಾಡಿದ್ದಾರೆ. ಒಂದು ಗಂಟೆಯಲ್ಲಿ ಸರಾಸರಿ 58 ಲಕ್ಷ ಮತದಾರರು ಮತದಾನ ಮಾಡಿದ್ದಾರೆ
- ಈ ಸರಾಸರಿಯನ್ನು ಲೆಕ್ಕಹಾಕಿದರೆ, ಮತದಾನ ಅಂತ್ಯಗೊಳ್ಳುವ ಕೊನೆಯ ಎರಡು ಗಂಟೆಗಳಲ್ಲಿ ಸುಮಾರು 1.16 ಕೋಟಿ ಜನರು ಮತದಾನ ಮಾಡಬಹುದಿತ್ತು. ಆದ್ದರಿಂದ 65 ಲಕ್ಷ ಮತದಾರರು ಕೊನೆಯ ಎರಡು ಗಂಟೆಗಳಲ್ಲಿ ಮತದಾನ ಮಾಡುವುದು ಅಚ್ಚರಿಯ ವಿಷಯವೇನಲ್ಲ
- ವಿವಿಧ ಪಕ್ಷಗಳು ಅಥವಾ ಅಭ್ಯರ್ಥಿಗಳು ತಾವೇ ನೇಮಿಸಿಕೊಳ್ಳುವ ಏಜೆಂಟರ ಸಮುಖದಲ್ಲಿಯೇ ಮತದಾನ ನಡೆದಿದೆ. ಮತದಾನ ನಡೆದ ವೇಳೆ ಕಾಂಗ್ರೆಸ್ ಅಥವಾ ಅದರ ಅಭ್ಯರ್ಥಿಗಳು ನೇಮಿಸಿದ ಏಜೆಂಟರು ಯಾವುದೇ ಆಕ್ಷೇಪವನ್ನು ಸಲ್ಲಿಸಲಿಲ್ಲ

ಪೋಲ್‌ವಾಲ್ಟ್‌ನಲ್ಲಿ ದೇವ್ ರಾಷ್ಟ್ರೀಯ ದಾಖಲೆ

ಫೆಡರೇಷನ್ ಕಪ್: ಏಷ್ಯನ್ ಕೂಟಕ್ಕೆ ಅರ್ಹತೆ ಪಡೆದ ಜ್ಯೋತಿ ಯರ್ರಾಜಿ

ಕೊಚ್ಚಿ (ಪಿಟಿಐ): ಮಧ್ಯಪ್ರದೇಶದ ದೇವ್ ಕುಮಾರ್ ಮೀನಾ ಅವರು ಪೋಲ್‌ವಾಲ್ಟ್‌ನಲ್ಲಿ ಈ ವರ್ಷ ಉತ್ತಮ ಪ್ರದರ್ಶನ ಮುಂದುವರಿಸಿದರು. ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿದರು. ಆದರೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಲು ಈ ಸಾಧನೆ ಸಾಲಲಿಲ್ಲ.

19 ವರ್ಷ ವಯಸ್ಸಿನ ಮೀನಾ 5.35 ಮೀಟರ್ ಜಿಗಿದು ಸುಲಭವಾಗಿ ಮೊದಲಿಗರಾದರು. ಈ ವರ್ಷದ ಫೆಬ್ರುವರಿಯಲ್ಲಿ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಅವರು ಈ ಹಿಂದಿನ ರಾಷ್ಟ್ರೀಯ ದಾಖಲೆ (5.32 ಮೀ.) ಸ್ಥಾಪಿಸಿದ್ದರು.

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ 5.51 ಮೀ.ಗಳ ಅರ್ಹತಾ ಮಟ್ಟ ನಿಗದಿಪಡಿಸಲಾಗಿತ್ತು. ಈ ಚಾಂಪಿಯನ್‌ಷಿಪ್ ದಕ್ಷಿಣ ಕೊರಿಯಾದ ಗುಮಿಯಲ್ಲಿ ಮೇ 27 ರಿಂದ 31ರವರೆಗೆ ನಡೆಯಲಿದೆ.

ಪೋಲ್‌ವಾಲ್ಟ್‌ನಲ್ಲಿ ಅಂತರರಾಷ್ಟ್ರೀಯ ಅಥ್ಲೀಟುಗಳ ಮತ್ತು ಭಾರತದ ಅಥ್ಲೀಟುಗಳ ಪ್ರದರ್ಶನ ಮಟ್ಟದ ನಡುವೆ ದೊಡ್ಡ ಅಂತರವಿದೆ. ಫಿಲಿಪೀನ್ಸ್‌ನ ಅರ್ನೆಸ್ಟ್ ಜಾನ್ ಒಬೀನಾ 2023ರಲ್ಲಿ 6 ಮೀ. ಜಿಗಿದು ಏಷ್ಯನ್ ದಾಖಲೆ ಬರೆದಿದ್ದಾರೆ. ವಿಶ್ವ ದಾಖಲೆ ಹೊಂದಿರುವ ಸ್ವೀಡನ್‌ನ ಸೂಪರ್‌ಸ್ಟಾರ್ ಅರ್ಮಾಂಡ್ ಡುಪ್ಲಾಂಡಿಸ್ 6.27 ಮೀ. ಎತ್ತರಕ್ಕೆ ಜಿಗಿದಿದ್ದಾರೆ.

ಬೆಳ್ಳಿ ಗೆದ್ದ ತಮಿಳುನಾಡಿನ ಎಂ.ಗೌತಮ್ (5.15 ಮೀ.) ಮತ್ತು ಕಂಚಿನ ಪದಕ ಗೆದ್ದ ಜಿ. ರೀಗನ್ (5.10 ಮೀ.) ಅವರಿಂದ ದೇವ್ ಅವರಿಗೆ ಹೆಚ್ಚಿನ ಪೈಪೋಟಿ ಎದುರಾಗಲಿಲ್ಲ. ಮಾಜಿ ರಾಷ್ಟ್ರೀಯ ದಾಖಲೆ ವೀರ, ತಮಿಳುನಾಡಿನ ಎಸ್.ಶಿವ 5.05 ಮೀ. ಎತ್ತರಕ್ಕೆ ಜಿಗಿದು ನಾಲ್ಕನೇ ಸ್ಥಾನ ಪಡೆದರು.



ದೇವ್ ಮೀನಾ

ತೀವ್ರ ಪೈಪೋಟಿ: ಮಹಿಳೆಯರ 400 ಮೀ. ಸ್ಪರ್ಧೆಯಲ್ಲಿ ತೀವ್ರ ಪೈಪೋಟಿ ಕಂಡುಬಂತು. ಉತ್ತರ ಪ್ರದೇಶದ ರೂಪಲ್ ಚೌಧರಿ ಪೂರ್ಣ ಸಾಮರ್ಥ್ಯ ಬಳಸಿ 52.55 ಸೆ.ಗಳೊಡನೆ ಮೊದಲಿಗರಾದರು. ಏಷ್ಯನ್ ಗೇಮ್ಸ್ ಪದಕ ವಿಜೇತೆ, ತಮಿಳುನಾಡಿನ ವಿದ್ಯಾ ರಾಮರಾಜ್ (52.81 ಸೆ.) ಮೊದಲ 300 ಮೀ.ವರೆಗೆ ಮುನ್ನಡೆಯಲ್ಲಿದ್ದರೂ ಕೊನೆಯ ಹಂತದಲ್ಲಿ ಹಿಂದೆ ಬಿದ್ದರು.

'ಮೊದಲ 300 ಮೀ. ಓಟದಲ್ಲಿ ಅತಿವೇಗದಲ್ಲಿದ್ದುದು ನನಗೆ ದುಬಾರಿಯಾಯಿತು' ಎಂದು ವಿದ್ಯಾ ಪ್ರತಿಕ್ರಿಯಿಸಿದರು.

ಏಷ್ಯನ್ ಅರ್ಹತಾ ಮಟ್ಟ 53.80 ಮೀ. ಇದ್ದು ಆರು ಮಂದಿ ಓಟಗಾರ್ತಿಯರು ಈ ಅವಧಿಯೊಳಗೆ ಓಟ ಕ್ರಮಿಸಿದ್ದು ವಿಶೇಷ. ಕೇರಳದ ಸ್ನೇಹಾ ಕೆ. (53 ಸೆ.) ಮೂರನೇ ಸ್ಥಾನ ಗಳಿಸಿದರು.

ಏಷ್ಯನ್ ಗೇಮ್ಸ್ ಪದಕ ವಿಜೇತೆ ಜ್ಯೋತಿ ಯರ್ರಾಜಿ-ಮಹಿಳೆಯರ 100 ಮೀ. ಹರ್ಡಲ್ಸ್ ಓಟವನ್ನು 13.23 ಸೆ.ಗಳಲ್ಲಿ ಕ್ರಮಿಸಿ ನಿರೀಕ್ಷೆಯಂತೆ ಚಿನ್ನ ಗೆದ್ದರು ಮತ್ತು ಆ ಹಾದಿಯಲ್ಲಿ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದರು. ಏಷ್ಯನ್ ಕೂಟಕ್ಕೆ 13.26 ಸೆ.ಗಳ ಅರ್ಹತಾ ಮಟ್ಟ ನಿಗದಿಪಡಿಸಲಾಗಿತ್ತು.

'ಮೂರು ವಾರಗಳ ಹಿಂದೆ ಮೊಣಕಾಲಿನ ಸ್ನಾಯುರಜ್ಜು ನೋವು ಅನುಭವಿಸಿದ್ದೆ. ಹೀಗಾಗಿ 13 ಸೆ.ಗಳ ಒಳಗೆ ಓಡುವ ಕನಸು ಈಡೇರಲಿಲ್ಲ. ಆದರೆ ಏಷ್ಯನ್ ಕೂಟಕ್ಕೆ ಅರ್ಹತೆ ಪಡೆಯಲು ಇದೊಂದೇ ನನಗೆ ಕೊನೆಯ ಅವಕಾಶವಾಗಿತ್ತು' ಎಂದು ಜ್ಯೋತಿ ಪ್ರತಿಕ್ರಿಯಿಸಿದರು. ರಾಷ್ಟ್ರೀಯ ದಾಖಲೆ (12.78 ಸೆ., 2023ರಲ್ಲಿ) ಸಹ ಜ್ಯೋತಿ ಅವರ ಹೆಸರಿನಲ್ಲೇ ಇದೆ.

ಪುರುಷರ 110 ಮೀ ಹರ್ಡಲ್ಸ್‌ನಲ್ಲಿ ಮಹಾರಾಷ್ಟ್ರದ ತೇಜಸ್ ಶಿರ್ಸೆ (13.65 ಸೆ.) ಅವರು ಚಿನ್ನ ಗೆದ್ದರು. ರಾಷ್ಟ್ರೀಯ (13.42 ಸೆ.) ಅವರ ಹೆಸರಿನಲ್ಲೇ ಇದೆ.

ಲಾಂಗ್‌ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಜೆಸ್ವಿನ್ ಆಲ್ಡ್ರಿನ್ ಅವರಿಗೆ ಏಷ್ಯನ್ ಕೂಟ ಕೈತಪ್ಪುವ ಸಾಧ್ಯತೆ ಬಲವಾಗಿದೆ. ತಮಿಳುನಾಡಿನ ಪಿ. ಡೇವಿಡ್ 7.94 ಮೀ. ದೂರ ಜಿಗಿದು, ಜೆಸ್ವಿನ್ (ರಿಲಯನ್ಸ್) ಅವರನ್ನು (7.83) ಎರಡನೇ ಸ್ಥಾನಕ್ಕೆ ತಳ್ಳಿದರು.

ಏಷ್ಯನ್ ಕೂಟದ ಅರ್ಹತಾ ಮಟ್ಟ 8.07 ಮೀ. ಆಗಿದೆ. ಹೈಜಂಪ್‌ನಲ್ಲಿ ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾಗ್ರೆ (2.26 ಮೀ.) ಚಿನ್ನ ಗೆದ್ದು ಏಷ್ಯನ್ ಚಾಂಪಿಯನ್‌ಷಿಪ್ಸ್‌ಗೆ ಅರ್ಹತೆ ಪಡೆದರು.

ಈ ಸ್ಪರ್ಧೆಯಲ್ಲಿ ಅರ್ಹತಾ ಮಟ್ಟವನ್ನು 2.23 ಮೀ.ಗೆ ನಿಗದಿಪಡಿಸಲಾಗಿತ್ತು.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಎಂಸಿಎಚ್‌ಎಸ್, ವಿಮಾನಪುರ

ಬೆಂಗಳೂರು: ಎಂಸಿಎಚ್‌ಎಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡಗಳು, ಬಿ.ಎಸ್.ನಾರಾಯಣ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸಬ್ ಜೂನಿಯರ್ (13 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಫೈನಲ್ ತಲುಪಿದವು.

ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್, ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಮಂಡ್ಯ ಜಿಲ್ಲಾ ತಂಡವನ್ನು ಎದುರಿಸಲಿದೆ. ಎರಡೂ ಫೈನಲ್‌ಗಳು ಬುಧವಾರ ನಡೆಯಲಿವೆ.

ಕಂಠೀರವ ಕ್ರೀಡಾಂಗಣದ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಬಾಲಕರ ವಿಭಾಗದ ಅಂತಿಮ ಲೀಗ್ ಪಂದ್ಯದಲ್ಲಿ ಎಂಸಿಎಚ್‌ಎಸ್ ತಂಡವು ವಿರಾಮದ ನಂತರ ಪೈಪೋಟಿ ಎದುರಿಸಿದರೂ 60–56 ಪಾಯಿಂಟ್‌ಗಳಿಂದ ಸದರ್ನ್ ಬ್ಲೂಸ್ ತಂಡವನ್ನು ಸೋಲಿಸಿತು. ಬ್ಲೂಸ್ ಪರ ತ್ರಿನಾಭ್ 26 ಪಾಯಿಂಟ್ಸ್ ಹಾಕಿ ಗಮನಸೆಳೆದರು. ವಿಜೇತರ ಪರ ಅನವ್ ಸಿಂಗ್ (17) ಮತ್ತು ಹರ್ಷಿತ್ (14) ಗಮನ ಸೆಳೆದರು. ಎಂಸಿಎಚ್‌ಎಸ್ ನಂತರ ಇನ್ನೊಂದು ಪಂದ್ಯದಲ್ಲಿ 30–13 ರಿಂದ ಬೀಗಲ್ಸ್ ಮೇಲೆ ಜಯಗಳಿಸಿತ್ತು.

ವಿಮಾನಪುರ ತಂಡ 54–37 ರಿಂದ ಮೈಸೂರು ಎ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ 60–32 ರಿಂದ ಜೆಎಸ್‌ಸಿ ತಂಡವನ್ನು ಸೋಲಿಸಿತು.

ಸದರ್ನ್ ಬ್ಲೂಸ್ ತಂಡವು ಮೂರನೇ ಸ್ಥಾನ ನಿರ್ಧರಿಸುವ ಪಂದ್ಯದಲ್ಲಿ ಮೈಸೂರು ಜಿಲ್ಲೆ 'ಎ' ತಂಡವನ್ನು ಎದುರಿಸಲಿದೆ.

ಬಾಲಕಿಯರ ವಿಭಾಗದ ಲೀಗ್ ಪಂದ್ಯಗಳಲ್ಲಿ ಬೀಗಲ್ಸ್ 47–29 ರಿಂದ ಯಂಗ್ ಒರಿಯನ್ಸ್ ವಿರುದ್ಧ, 42–10 ರಿಂದ ವಿವೇಕ್ಸ್ ಎಸ್‌ಸಿ ವಿರುದ್ಧ ಜಯಗಳಿಸಿತು. ಮಂಡ್ಯ ತಂಡವು 31–27 ರಿಂದ ಎಂಸಿಎಚ್‌ಎಸ್ ತಂಡವನ್ನು, 38–32 ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಹಿಂದೂಸ್ಥಾನ್ ಫ್ರೆಂಡ್ಸ್ ಕ್ಲಬ್ ಜಯ

ಬೆಂಗಳೂರು: ಹಿಂದೂಸ್ಥಾನ್ ಫ್ರೆಂಡ್ಸ್ ಕ್ಲಬ್ ತಂಡ ಕೆಎಸ್‌ಎಚ್‌ಎ- ಬಿಎಚ್‌ಎ ಸೂಪರ್ ಡಿವಿಷನ್ ಹಾಕಿ ಪಂದ್ಯದಲ್ಲಿ ಮಂಗಳವಾರ 7–4 ಗೋಲುಗಳಿಂದ ಡೆಲ್ಲಿ ಪಬ್ಲಿಕ್ ಸ್ಕೂಲ್ ತಂಡವನ್ನು ಮಣಿಸಿತು. ಶಾಂತಿನಗರದ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹಿಂದೂಸ್ಥಾನ್ ಫ್ರೆಂಡ್ಸ್ ಪರ ಆಕಾಶ್ ಆರ್. (6ನೇ ನಿ.), ಹರಿಹರನ್ (8ನೇ ನಿ, 31ನೇ ನಿ.), ಜಾನ್ಸನ್ (10ನೇ ನಿ., 41ನೇ ನಿ.) ಮತ್ತು ಅರವಿಂದ ರಾಜನ್ (15, 55ನೇ ನಿ.) ಗೋಲು ಗಳಿಸಿದರು.

ಎಂಟರ ಘಟ್ಟಕ್ಕೆ ಚೇಂದಂಡ



'ಮುದ್ದಂಡ ಕಪ್' ಟೂರ್ನಿಯ ಪ್ರಿಕ್ವಾರ್ಟರ್ ಫೈನಲ್ಸ್ ಪಂದ್ಯದಲ್ಲಿ ಚೆಪ್ಪುಡಿರ ಮತ್ತು ಅಂಜಪರವಂಡ ತಂಡದ ಆಟಗಾರರು ಚೆಂಡಿಗಾಗಿ ಸೆಣಸಾಟ ನಡೆಸಿದರು

ಮಡಿಕೇರಿ: ಚೇಂದಂಡ, ಚೆಪ್ಪುಡಿರ, ಮಂಡೇಪಂಡ ಹಾಗೂ ಕುಪ್ಪಂಡ ತಂಡಗಳು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮೈದಾನದಲ್ಲಿ ನಡೆಯುತ್ತಿರುವ 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಮಂಗಳವಾರ ಪ್ರಿಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಜಯ ಸಾಧಿಸಿ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟವು.

ಸುಬ್ಬಿ ಸುಬ್ಬಯ್ಯ 4 ಹಾಗೂ ನಿಖಿನ್ ತಿಮ್ಮಯ್ಯ, ಬಿಪಿನ್ ಬೋಪಣ್ಣ ತಲಾ 1 ಗೋಲಿನ ನೆರವಿನಿಂದ ಚೇಂದಂಡ 6-0 ಯಿಂದ ಮೇಚಿಯಂಡ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಆರ್‌ಡಬ್ಲ್ಯು ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಆರ್‌ಡಬ್ಲ್ಯು ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಮಂಗಳವಾರ 1–0 ಗೋಲಿನಿಂದ ಬ್ಲಿಟ್ಜ್ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರ್‌ಡಬ್ಲ್ಯು ಎಫ್‌ಸಿ ಪರ ಜಯ ವಂದನ್ ಸಿಗಾಮಣಿ (11ನೇ ನಿ.)ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ಸ್ನೈಪರ್ಸ್ ಎಫ್‌ಸಿ (ಕೆಎಸ್‌ಎಫ್‌ಎ) ತಂಡ ಎದುರಾಳಿ ರೂಟ್ಸ್ ಎಫ್‌ಎಸ್ ವಿರುದ್ಧ ಯಾವುದೇ ಗೋಲಿಲ್ಲದೇ ಡ್ರಾ ಮಾಡಿಕೊಂಡಿತು.

ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಹಂಪಿನಗರ ಎಫ್‌ಸಿ ತಂಡ 6–0 ಗೋಲುಗಳಿಂದ ಬೆಂಗಳೂರು ಬ್ಲೂಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಇನ್ನೊಂದು ಪಂದ್ಯದಲ್ಲಿ ಜಿಆರ್‌ಕೆ ಸ್ಟಾರ್ಸ್ ತಂಡ 1–1 ಗೋಲಿನಿಂದ ಬಸವೇಶ್ವರ ಎಫ್‌ಸಿ ಜೊತೆ ಡ್ರಾ ಮಾಡಿಕೊಂಡಿತು.

ಇಂಡಿಯನ್ ಪ್ರೀಮಿಯರ್ ಲೀಗ್ 2025



ಮುಕೇಶ್ ಕುಮಾರ್‌ಗೆ 4 ವಿಕೆಟ್; ರಾಹುಲ್, ಅಭಿಷೇಕ್ ಪೊರೆಲ್ ಅರ್ಧಶತಕ

ಡೆಲ್ಲಿ ಕ್ಯಾಪಿಟಲ್ಸ್‌ಗೆ ಭರ್ಜರಿ ಜಯ

ಲಖನೌ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರ ಆಕರ್ಷಕ ಅರ್ಧಶತಕ ಮತ್ತು ವೇಗಿ ಮುಕೇಶ್ ಕುಮಾರ್ ಅವರ ಪರಿಣಾಮಕಾರಿ ದಾಳಿಯಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಆತಿಥೇಯ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗೆಲುವು ಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಏಡನ್ ಮರ್ಕರಂ (52; 33ಎ, 4X2, 6X3) ಮತ್ತು ಮಿಚೆಲ್ ಮಾರ್ಷ್ (45; 36ಎ, 4X3, 6X1) ಉತ್ತಮ ಆರಂಭ ನೀಡಿದರು. ಅವರ ಆಟದಿಂದಾಗಿ ತಂಡವು 10 ಓವರ್‌ಗಳಲ್ಲಿ 87 ರನ್ ಗಳಿಸಿತು. ಆದರೆ ನಂತರದ ಹಂತದಲ್ಲಿ ತಂಡದ ಉಳಿದ ಬ್ಯಾಟರ್‌ಗಳು ಅಬ್ಬರಿಸದಂತೆ ಮುಕೇಶ್ (33ಕ್ಕೆ4) ನೋಡಿಕೊಂಡರು. ಅದರ ಪರಿಣಾಮವಾಗಿ ಲಖನೌ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಅದಕ್ಕುತ್ತರವಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 161 ರನ್ ಗಳಿಸಿತು. ಇದರೊಂದಿಗೆ 8 ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

ಡೆಲ್ಲಿ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಪೊರೆಲ್ (51; 36ಎ, 4X5, 6X1) ಮತ್ತು ರಾಹುಲ್ (ಅಜೇಯ 57; 42ಎ, 4X3, 6X3) ಅವರ ಅರ್ಧಶತಕಗಳ ನೆರವಿನಿಂದ ಗೆಲುವು ಸುಲಭವಾಯಿತು. ನಾಯಕ ಅಕ್ಷರ್ ಪಟೇಲ್ ಕೂಡ ಅಜೇಯ 34 ರನ್‌ಗಳ ಕಾಣಿಕೆ ನೀಡಿದರು. ಅದರಲ್ಲಿ 4 ಸಿಕ್ಸರ್ ಸಿಡಿಸಿದರು. ಇನಿಂಗ್ಸ್ ಆರಂಭಿಸಿದ ಕರುಣ್ ನಾಯರ್ 9 ಎಸೆತಗಳಲ್ಲಿ 15 ರನ್ ಹೊಡೆದರು.



ಅರ್ಧ ಶತಕ ಸಿಡಿಸಿದ ಕನ್ನಡಿಗ ಕೆ. ಎಲ್. ರಾಹುಲ್ ಚಿತ್ರ: ಎಎಫ್‌ಪಿ

ಮುಕೇಶ್ ಮ್ಯಾಜಿಕ್: ದುಷ್ಮಂತ ಚಮೀರಾ ಹಾಕಿದ ಹತ್ತನೇ ಓವರ್‌ನ ಕೊನೆಯ ಎಸೆತದಲ್ಲಿ ಮರ್ಕರಂ ಔಟಾದರು. ಅದರೊಂದಿಗೆ ಮೊದಲ ವಿಕೆಟ್ ಜೊತೆಯಾಟ ಮುರಿಯಿತು. ನಂತರದ ಓವರ್‌ನಲ್ಲಿ ಮುಕೇಶ್ ಕುಮಾರ್ ಅವರ ಎಸೆತದಲ್ಲಿ ಮಾರ್ಷ್ ಕ್ಲೀನ್‌ಬೌಲ್ಡ್ ಆದರು.

‘ಸ್ಫೋಟಕ ಶೈಲಿ’ಯ ಬ್ಯಾಟರ್ ನಿಕೋಲಸ್ ಪೂರನ್ 5 ಎಸೆತಗಳಲ್ಲಿ 9 ರನ್ ಗಳಿಸಿದರು. ಅದರಲ್ಲಿ ಎರಡು ಬೌಂಡರಿ ದಾಖಲಿಸಿದ್ದ ಅವರು ಮತ್ತೊಂದು ಬೀಸಾಟದ ಇನಿಂಗ್ಸ್‌ಗೆ ಸಿದ್ಧರಾಗಿದ್ದರು. ಆದರೆ ಅವರ ಆಟಕ್ಕೆ ಮಿಚೆಲ್ ಸ್ಟಾರ್ಕ್ ತಡೆಯೊಡ್ಡಿದರು. ಸ್ಟಾರ್ಕ್ ಹಾಕಿದ ಸ್ವಿಂಗ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ಪೂರನ್ ಬ್ಯಾಟಿನ ಒಳ ಅಂಚಿಗೆ ಬಡಿದ ಚೆಂಡು ಸ್ಟಂಪ್‌ಗೆ ಅಪ್ಪಳಿಸಿತು. ಪೂರನ್ ಹತಾಶೆಯಿಂದ ಡಗ್‌ಔಟ್‌ಗೆ ಮರಳಿದರು.

ಮುಕೇಶ್ ತಮ್ಮ ಇನ್ನೊಂದು ಓವರ್‌ನಲ್ಲಿ ಅಬ್ದುಲ್ ಸಮದ್ (2 ರನ್) ಅವರು ನೇರವಾಗಿ ಹೊಡೆಯಲು ಯತ್ನಿಸಿದ ಚೆಂಡನ್ನು ಕ್ಯಾಚ್ ಮಾಡುವಲ್ಲಿ ಯಶಸ್ವಿಯಾದರು. ತಂಡದ ಮೊತ್ತ ಹೆಚ್ಚಿಸಲು ಪ್ರಯತ್ನಿಸಿದ ಆಯುಷ್ ಬಡೋನಿ (36; 21ಎ, 4X6) ಮತ್ತು ರಿಷಭ್ ಪಂತ್ ಅವರನ್ನು ಒಂದೇ ಓವರ್‌ನಲ್ಲಿ ಕ್ಲೀನ್‌ಬೌಲ್ಡ್ ಮಾಡುವಲ್ಲಿ ಮುಕೇಶ್ ಯಶಸ್ವಿಯಾದರು.

ಆದರೆ ಡೇವಿಡ್ ಮಿಲ್ಲರ್ ಅವರು ತಮ್ಮ ಎಂದಿನ ಅಬ್ಬರದ ಆಟಕ್ಕೆ ಕಡಿವಾಣ ಹಾಕಿದರು. ತಾಳ್ಮೆಯಿಂದ ಆಡಿದರು. 15 ಎಸೆತಗಳಲ್ಲಿ 14 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್‌ಜೈಂಟ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 159 (ಏಡನ್ ಮರ್ಕರಂ 52, ಮಿಚೆಲ್ ಮಾರ್ಷ್ 45, ಡೇವಿಡ್ ಮಿಲ್ಲರ್ ಔಟಾಗದೇ 14, ಆಯುಷ್ ಬಡೋನಿ 36, ಮುಕೇಶ್ ಕುಮಾರ್ 33ಕ್ಕೆ4) **ಡೆಲ್ಲಿ ಕ್ಯಾಪಿಟಲ್ಸ್:** 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 161 (ಅಭಿಷೇಕ್ ಪೊರೆಲ್ 51, ಕೆ.ಎಲ್. ರಾಹುಲ್ ಔಟಾಗದೇ 57, ಅಕ್ಷರ್ ಪಟೇಲ್ ಔಟಾಗದೇ 34, ಏಡನ್ ಮರ್ಕರಂ 30ಕ್ಕೆ2) ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡದ 8 ವಿಕೆಟ್‌ಗಳ ಜಯ. **ಪಂದ್ಯ ಶ್ರೇಷ್ಠ:** ಮುಕೇಶ್ ಕುಮಾರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	8	6	2	12	1.104
ಡೆಲ್ಲಿ ಕ್ಯಾಪಿಟಲ್ಸ್	8	6	2	12	0.657
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	5	3	10	0.472
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	9	5	4	10	-0.054
ಮುಂಬೈ ಇಂಡಿಯನ್ಸ್	8	4	4	8	0.483
ಕೋಲ್ಕತ್ತ ನೈಟ್ ರೈಡರ್ಸ್	8	3	5	6	0.212
ರಾಜಸ್ಥಾನ ರಾಯಲ್ಸ್	8	2	6	4	-0.633
ಸನ್‌ರೈಸರ್ಸ್ ಹೈದರಾಬಾದ್	7	2	5	4	-1.217
ಚೆನ್ನೈ ಸೂಪರ್ ಕಿಂಗ್ಸ್	8	2	6	4	-1.392

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 417 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 16 ವಿಕೆಟ್

ಜಯದ ಲಯಕ್ಕೆ ಮರಳುವತ್ತ ಸನ್ ಚಿತ್ತ

ಮುಂಬೈ ಎದುರು ಗೆಲ್ಲುವ ಛಲದಲ್ಲಿ ಹೈದರಾಬಾದ್

ಹೈದರಾಬಾದ್ (ಪಿಟಿಐ): ತವರಿನಂಗಳದಲ್ಲಿ ಗೆಲುವಿನ ಲಯ ಕಂಡುಕೊಳ್ಳುವತ್ತ ಸನ್‌ರೈಸರ್ಸ್ ಹೈದರಾಬಾದ್ ತಂಡವು ಕಣ್ಣಿಟ್ಟಿದೆ. ಬುಧವಾರ ನಡೆಯಲಿರುವ ಪಂದ್ಯದಲ್ಲಿ ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

ಆರು ದಿನಗಳ ಹಿಂದಷ್ಟೇ ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ತಂಡವು ಸನ್‌ರೈಸರ್ಸ್ ಎದುರು ಜಯಿಸಿತ್ತು. ಈಗ ಕಮಿನ್ಸ್ ಬಳಗವು ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ. ಸ್ಫೋಟಕ ಶೈಲಿಯ ಬ್ಯಾಟರ್‌ಗಳು ತುಂಬಿರುವ ಹೈದರಾಬಾದ್ ತಂಡವನ್ನು ಕಟ್ಟಿಹಾಕುವ ತಂತ್ರವನ್ನು ಈ ಟೂರ್ನಿಯಲ್ಲಿ ಕೆಲವು ಎದುರಾಳಿ ಬೌಲರ್‌ಗಳು ಕಂಡುಕೊಂಡಿದ್ದಾರೆ. ಆದ್ದರಿಂದ ಸನ್‌ರೈಸರ್ಸ್ ತಂಡವು ಟೂರ್ನಿಯುದ್ದಕ್ಕೂ ಏಳು, ಬೀಳುಗಳನ್ನು ಕಾಣುತ್ತಿದೆ. ಸನ್‌ರೈಸರ್ಸ್ ತಂಡವು ಮೊದಲ ಸುತ್ತಿನಲ್ಲಿ ಐದು ಸೋತು, ಎರಡರಲ್ಲಿ ಜಯಿಸಿದೆ. ಇನ್ನುಳಿದಿರುವ ಟೂರ್ನಿಯ ಅರ್ಧಭಾಗದಲ್ಲಿ ಹೆಚ್ಚು ಗೆಲುವು ಸಾಧಿಸಿ ಪ್ಲೇಆಫ್‌ಗೆ ಸಾಗಬೇಕಾದ ಒತ್ತಡದಲ್ಲಿದೆ.



ಮುಂಬೈ ವಿರುದ್ಧದ ಪಂದ್ಯದಲ್ಲಿ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ತಮ್ಮ ಆಫ್‌ಬ್ರೇಕ್ ಬೌಲಿಂಗ್ ಮೂಲಕ ಹೈದರಾಬಾದ್ ಬ್ಯಾಟರ್‌ಗಳನ್ನು ಕಟ್ಟಿಹಾಕಿದ್ದರು. ಅದರಲ್ಲೂ ಅಭಿಷೇಕ್ ಶರ್ಮಾ ಮತ್ತು ಟ್ರಾವಿಸ್ ಹೆಡ್ ಅವರು ಉತ್ತಮ ಆರಂಭ ನೀಡಿದ್ದರು. ಆದರೂ ತಂಡವು ದೊಡ್ಡ ಮೊತ್ತ ಗಳಿಸಲು ವಿಲ್ ಹಾಗೂ ಇನ್ನುಳಿದ ಬೌಲರ್‌ಗಳು ಬಿಡಲಿಲ್ಲ. 163 ರನ್‌ಗಳ ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೂ ಸುಲಭ ಗೆಲುವು ಒಲಿಯಲಿಲ್ಲ. ಕಮಿನ್ಸ್ 3 ವಿಕೆಟ್ ಗಳಿಸಿ ತಮ್ಮ ತಂಡದ ಸೋಲು ತಪ್ಪಿಸುವ ಪ್ರಯತ್ನ ಮಾಡಿದ್ದರು. ಆದರೆ ತಿಲಕ್ ವರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರ ಅಮೋಘ ಬ್ಯಾಟಿಂಗ್ ಮುಂದೆ ಕಮಿನ್ಸ್ ಸಫಲರಾಗಲಿಲ್ಲ.

ಮುಂಬೈ ತಂಡವು ಕಳೆದ ಮೂರು ಪಂದ್ಯಗಳಲ್ಲಿ ಸತತ ಜಯಸಾಧಿಸಿದೆ. ಇದರಿಂದಾಗಿ ಭರ್ತಿ ಆತ್ಮವಿಶ್ವಾಸದಲ್ಲಿದೆ. ಅಲ್ಲದೇ ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ‘ಹಿಟ್‌ಮ್ಯಾನ್’ ರೋಹಿತ್ ಶರ್ಮಾ ಅಜೇಯ 76 ರನ್ ಹೊಡೆದು ಲಯಕ್ಕೆ ಮರಳಿದ್ದಾರೆ.

ಆ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ಕೂಡ ಅಜೇಯ ಅರ್ಧಶತಕ ಗಳಿಸಿದ್ದರು. ರೋಹಿತ್ ಲಯಕ್ಕೆ ಮರಳಿರುವುದು ತಂಡದ ಶಕ್ತಿಯನ್ನು ವೃದ್ಧಿಸಿದೆ. ಅದೇ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ ಕೂಡ 2 ವಿಕೆಟ್ ಪಡೆದಿದ್ದರು. ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದ್ದು, ಉಭಯ ತಂಡಗಳ ಹೋರಾಟ ರೋಚಕವಾಗುವ ಎಲ್ಲ ಸಾಧ್ಯತೆಗಳೂ ಇವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್.

ಟಿಸಿಎಸ್ ವಿಶ್ವ ಟೆನ್ ಕೆ ₹3.40 ಕೋಟಿ ನಿಧಿ ಸಂಗ್ರಹ

ಬೆಂಗಳೂರು: ನಗರದಲ್ಲಿ ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದ ಅಂಗವಾಗಿ ಸ್ವಯಂ ಸೇವಾ ಸಂಘಟನೆಗಳಿಗೆ ನೀಡಲು ₹ 3.40 ಕೋಟಿ ದೇಣಿಗೆ ಸಂಗ್ರಹಿಸಲಾಗಿದೆ.

‘ಪ್ರತಿ ವರ್ಷವೂ ಓಟದ ರೋಮಾಂಚನ ಮತ್ತು ಆರೋಗ್ಯಯುತ ಜೀವನದ ಸಂದೇಶ ನೀಡುವಲ್ಲಿ ಟೆನ್ ಕೆ ಯಶಸ್ವಿಯಾಗಿದೆ. ಅದರ ಜೊತೆಗೆ ಸಾಮಾಜಿಕ ಬದ್ಧತೆಯನ್ನೂ ಪ್ರದರ್ಶಿಸುತ್ತಿದೆ. ಈ ಬಾರಿ 35 ಸಾವಿರ ಓಟಗಾರರು ಭಾಗವಹಿಸುತ್ತಿದ್ದಾರೆ. ಅದರಲ್ಲಿ 250 ಮಂದಿ ನಿಧಿಸಂಗ್ರಹಕಾರರು ₹ 3.40 ಕೋಟಿಯನ್ನು ಸಂಗ್ರಹಿಸಿದ್ದಾರೆ.

ಚಿನ್ನಸ್ವಾಮಿ ಅಂಗಳದಲ್ಲಿ ದ್ರಾವಿಡ್



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ರಾಜಸ್ಥಾನ ರಾಯಲ್ಸ್ ತಂಡದ ನೆರವು ಸಿಬ್ಬಂದಿ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಆಟಗಾರರ ಅಭ್ಯಾಸದ ಮೇಲೆ ನಿಗಾ ವಹಿಸಿದ್ದರು ಆರ್‌ಆರ್ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದ ಅಂಗವಾಗಿ ಸ್ವಯಂ ಸೇವಾ ಸಂಘಟನೆಗಳಿಗೆ ನೀಡಲು ₹ 3.40 ಕೋಟಿ ದೇಣಿಗೆ ಸಂಗ್ರಹಿಸಲಾಗಿದೆ.

‘ಪ್ರತಿ ವರ್ಷವೂ ಓಟದ ರೋಮಾಂಚನ ಮತ್ತು ಆರೋಗ್ಯಯುತ ಜೀವನದ ಸಂದೇಶ ನೀಡುವಲ್ಲಿ ಟೆನ್ ಕೆ ಯಶಸ್ವಿಯಾಗಿದೆ. ಅದರ ಜೊತೆಗೆ ಸಾಮಾಜಿಕ ಬದ್ಧತೆಯನ್ನೂ ಪ್ರದರ್ಶಿಸುತ್ತಿದೆ. ಈ ಬಾರಿ 35 ಸಾವಿರ ಓಟಗಾರರು ಭಾಗವಹಿಸುತ್ತಿದ್ದಾರೆ. ಅದರಲ್ಲಿ 250 ಮಂದಿ ನಿಧಿಸಂಗ್ರಹಕಾರರು ₹ 3.40 ಕೋಟಿಯನ್ನು ಸಂಗ್ರಹಿಸಿದ್ದಾರೆ.

ಶಿಕ್ಷಣ, ಮಕ್ಕಳ ಕಲ್ಯಾಣ, ಪರಿಸರ ಸಂರಕ್ಷಣೆ, ಮಹಿಳೆಯರ ಕಲ್ಯಾಣ ಹಾಗೂ ಅಂಧ ಕ್ರಿಕೆಟಿಗರ ಟಿ20 ಟೂರ್ನಿಯನ್ನು ಆಯೋಜಿಸಲು ವಿವಿಧ ಎನ್‌ಜಿಒಗಳಿಗೆ ಈ ಹಣವನ್ನು ನೀಡಲಾಗುವುದು’ ಎಂದು ಏಡ್‌ಬೀಸ್ ಸಂಸ್ಥೆಯ ಸಿಇಒ ಝುಮ್ರೂದಾ ಖಾಂಡೆ ಅವರು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಥ್ಲೀಟ್‌ಗಳಿಗೆ ಪ್ರೋತ್ಸಾಹಧನ ಘೋಷಿಸಿದ ದುಬೆ

ಚೆನ್ನೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಪ್ರತಿನಿಧಿಸುವ ಶಿವಂ ದುಬೆ ಅವರು ಉದಯೋನ್ಮುಖ ಅಥ್ಲೀಟ್‌ಗಳಿಗೆ ನೆರವಿನ ಹಸ್ತ ಚಾಚಿದ್ದಾರೆ. ತಮಿಳುನಾಡಿನ 10 ಮಂದಿ ಉದಯೋನ್ಮುಖ ಅಥ್ಲೀಟ್‌ಗಳಿಗೆ ತಲಾ ₹ 70 ಸಾವಿರ ಪ್ರೋತ್ಸಾಹಧನ ನೀಡುವುದಾಗಿ ದುಬೆ ಘೋಷಿಸಿದ್ದಾರೆ.



ತಮಿಳುನಾಡು ಕ್ರೀಡಾ ಪತ್ರಕರ್ತರ ಸಂಘವು ಆಯೋಜಿಸಿದ್ದ ಕ್ರೀಡಾಪಟುಗಳಗೆ ಪ್ರಶಸ್ತಿ ಮತ್ತು ಸ್ಕಾಲರ್‌ಷಿಪ್ ಪ್ರದಾನ ಕಾರ್ಯಕ್ರಮದಲ್ಲಿ ದುಬೆ ಮಾತನಾಡಿದರು. ಸಂಘವು ಕ್ರೀಡಾ ಪಟುಗಳಿಗೆ ತಲಾ ₹ 30 ಸಾವಿರ ಸ್ಕಾಲರ್‌ಷಿಪ್ ನೀಡಿ ಗೌರವಿಸಿತು. ಇದಲ್ಲದೇ ದುಬೆ ಪ್ರತ್ಯೇಕವಾಗಿ ₹70 ಸಾವಿರ ನೀಡುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ಪಿ.ಬಿ. ಅಭಿನಂದನ್ (ಟೇಬಲ್ ಟೆನಿಸ್), ಕೆ.ಎಸ್. ವೆನಿಸಾ ಶ್ರೀ (ಆರ್ಚರಿ), ಮುತ್ತುಮೀನಾ ವೆಲ್ಲಾಸಾಮಿ (ಪ್ಯಾರಾ ಅಥ್ಲೆಟಿಕ್ಸ್), ಶಮೀನಾ ರಿಯಾಜ್ (ಸ್ಕ್ವಾಷ್), ಆರ್.ಕೆ. ಜಯಂತ್, ಎಸ್. ನಂದನ್ (ಇಬ್ಬರೂ ಕ್ರಿಕೆಟ್), ಪಿ. ಕಮಲಿ (ಸರ್ಫಿಂಗ್), ಆರ್. ಅಭಿನಯ, ಆರ್. ಸಿ. ಜಿತಿನ್ ಅರ್ಜುನನ್ (ಇಬ್ಬರೂ ಅಥ್ಲೆಟಿಕ್ಸ್), ಎ. ತಕ್ಷಾಂತ್ (ಚೆಸ್).

ಗ್ರ್ಯಾನ್‌ಪ್ರಿ ಚೆಸ್: ಜಂಟಿ ಮುನ್ನಡೆಯಲ್ಲಿ ಹಂಪಿ, ಜಿನರ್

ಪುಣೆ (ಪಿಟಿಐ): ಭಾರತದ ಕೋನೇರು ಹಂಪಿ ಮತ್ತು ಚೀನಾದ ಝು ಜಿನೆರ್ ಅವರು ಫಿಡೆ ಮಹಿಳಾ ಗ್ರ್ಯಾನ್‌ಪ್ರಿ (ಪುಣೆ ಲೆಗ್) ಚೆಸ್ ಟೂರ್ನಿಯ ಎಂಟನೇ ಸುತ್ತಿನ ನಂತರ ತಲಾ ಆರು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಬುಧವಾರ ಕೊನೆಯ ಸುತ್ತಿನ ಪಂದ್ಯಗಳು ನಡೆಯಲಿದೆ.

ಗ್ರ್ಯಾಂಡ್‌ಮಾಸ್ಟರ್ ಹಂಪಿ ಎಂಟನೇ ಸುತ್ತಿನಲ್ಲಿ ಪೋಲೆಂಡ್‌ಗೆ ಆಡುತ್ತಿರುವ ರಷ್ಯ ಸಂಜಾತೆ ಅಲಿನಾ ಕಶ್ಲಿನ್‌ಸ್ಕಾಯಾ (2.5) ಅವರೊಡನೆ ಆಡುವಾಗ ಒಮ್ಮೆ ಇಕ್ಕಟ್ಟಿಗೆ ಸಿಲುಕಿದರೂ ಅಂತಿಮವಾಗಿ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿ ಆದರು. ಗ್ರ್ಯಾಂಡ್‌ಮಾಸ್ಟರ್ ಜಿನೆರ್ ಇನ್ನೊಂದು ಪಂದ್ಯದಲ್ಲಿ ಭಾರತದ ಐಎಂ ದಿವ್ಯಾ ದೇಶಮುಖ್ (5) ಅವರನ್ನು ಮಣಿಸಿದರು. ಸೋಲಿನ ಹೊರತಾಗಿಯೂ ದಿವ್ಯಾ ಮೂರನೇ ಸ್ಥಾನದಲ್ಲಿದ್ದಾರೆ.

ಹತ್ತು ಆಟಗಾರ್ತಿಯರು ಕಣದಲ್ಲಿರುವ ಈ ಟೂರ್ನಿಯಲ್ಲಿ ಪೊಲಿನಾ ಶುವಲೋವಾ (4.5) ನಾಲ್ಕನೇ ಸ್ಥಾನದಲ್ಲಿದ್ದಾರೆ.

ಹಂಪಿ ಕೊನೆಯ ಸುತ್ತಿನಲ್ಲಿ ಬಲ್ಗೇರಿಯಾದ ನುರ್ಗ್ಯುಲ್ ಸಲೀಮೊವಾ (3.5) ಅವರನ್ನು ಎದುರಿಸಲಿದ್ದಾರೆ.

ದ್ರೋಣವಲ್ಲಿ ಹಾರಿಕಾ (4) ಮತ್ತು ಜಾರ್ಜಿಯಾದ ಮೆಲಿಯಾ ಸಲೋಮೆ (2.5) ನಡುವಣ ಪಂದ್ಯ 100 ನಡೆಗಳನ್ನು ದಾಟಿತು. ಆದರೆ ನಿರ್ಣಾಯಕ ಫಲಿತಾಂಶ ಬರದೇ ಡ್ರಾ ಆಯಿತು. ವೈಶಾಲಿ ರಮೇಶ್ ಬಾಬು (3.5), ಸಲಿಮೋವಾ ಎದುರು ಪಾಯಿಂಟ್ ಹಂಚಿಕೊಂಡರು.



ಕ್ಯಾಥೊಲಿಕ್ ಚರ್ಚ್ ಮುಖ್ಯಸ್ಥನಿಗೆ ಗೌರವ ನಮನಗಳು!

ಶೂಟಿಂಗ್: ಭಾರತಕ್ಕೆ ಮೂರನೇ ಸ್ಥಾನ

ಲಿಮಾ (ಪೆರು), (ಪಿಟಿಐ): ಭಾರತದ ಶೂಟಿಂಗ್ ಸ್ಪರ್ಧಿಗಳು ಐಎಸ್‌ಎಸ್‌ಎಫ್ ವಿಶ್ವ ಕಪ್‌ನ ಅಂತಿಮ ದಿನವಾದ ಸೋಮವಾರ ಟ್ರ್ಯಾಪ್ ಮಿಶ್ರ ವಿಭಾಗದಲ್ಲಿ ಪದಕದ ಸುತ್ತಿಗೇರಲು ವಿಫಲರಾದರು. ಆದರೆ ಒಟ್ಟಾರೆ ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆಯಿತು.

ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಸೋಮವಾರ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದು ಭಾರತಕ್ಕೆ ಕೊನೆಯ ಪದಕ ಗಳಿಸಿಕೊಟ್ಟಿದ್ದರು. ಭಾರತ ಒಟ್ಟಾರೆ ಈ ವಿಶ್ವಕಪ್‌ನಲ್ಲಿ ಏಳು ಪದಕಗಳನ್ನು ಗೆದ್ದುಕೊಂಡಿದೆ. ಇದರಲ್ಲಿ ಎರಡು ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಒಳಗೊಂಡಿದೆ.

ಅಮೆರಿಕ ಸಹ ಏಳು ಪದಕಗಳನ್ನು ಗೆದ್ದರೂ, ಭಾರತಕ್ಕಿಂತ ಒಂದು ಚಿನ್ನ ಹೆಚ್ಚು ಗೆದ್ದಕಾರಣ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯಿತು. ಚೀನಾ ನಾಲ್ಕು ಚಿನ್ನ, ಮೂರು ಬೆಳ್ಳಿ ಮತ್ತು ಆರು ಕಂಚಿನ ಪದಕಗಳೊಡನೆ ಅಗ್ರಸ್ಥಾನ ಪಡೆಯಿತು.

ಮಿಂಚಿದ ಸುರುಚಿ: ಈ ಕೂಟದಲ್ಲಿ 18 ವರ್ಷ ವಯಸ್ಸಿನ ಸುರುಚಿ ಇಂದರ್ ಸಿಂಗ್ ಅವರು ಎರಡು ಚಿನ್ನ ಗೆದ್ದು ಭಾರತದ ಪರ ಅಮೋಘ ಸಾಧನೆ ತೋರಿದರು. ಅವರು 10 ಮೀ. ಏರ್ ಪಿಸ್ತೂಲ್‌ನಲ್ಲಿ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ಅವರನ್ನು ಹಿಂದೆಹಾಕಿದ್ದರು. ನಂತರ ಮಿಶ್ರ ವಿಭಾಗದಲ್ಲಿ ಸೌರಭ್ ಚೌಧರಿ ಅವರೊಂದಿಗೆ ದೇಶಕ್ಕೆ ಎರಡನೇ ಚಿನ್ನ ಗೆದ್ದುಕೊಟ್ಟಿದ್ದರು.

ವಂತಿಕಾ, ಚಾರ್ವಿಗೆ ಚೆಸ್ ಫೆಲೋಷಿಪ್

ಹೈದರಾಬಾದ್ (ಪಿಟಿಐ): ಇಂಟರ್‌ನ್ಯಾಷನಲ್ ಮಾಸ್ಟರ್ ವಂತಿಕಾ ಅಗರವಲ್, ಕರ್ನಾಟಕದ ಚಾರ್ವಿ ಅನಿಲಕುಮಾರ್ ಸೇರಿದಂತೆ ಐವರು ಆಟಗಾರ್ತಿಯರನ್ನು ₹1 ಕೋಟಿ ಮೊತ್ತದ ಫೆಲೋಷಿಪ್‌ಗೆ ಮಂಗಳವಾರ ಆಯ್ಕೆ ಮಾಡಲಾಗಿದೆ.



ಚಾರ್ವಿ ಅನಿಲಕುಮಾರ್

ಭಾರತದಲ್ಲಿ ಮಹಿಳಾ ಚೆಸ್‌ಗೆ ಉತ್ತೇಜನ ನೀಡಲು ಹೈದರಾಬಾದ್ ಮೂಲದ ಪ್ರವಾಹ್ ಪ್ರತಿಷ್ಠಾನ ಮತ್ತು ಚೆಸ್ ಸ್ಟಾರ್ಟಪ್ ಎಂಜಿಡಿ1 ಸೇರಿ ಜಂಟಿಯಾಗಿ ಸ್ಥಾಪಿಸಿರುವ ‘64 ಸ್ಕ್ವೇರ್ಸ್’ ಸಂಸ್ಥೆ ಈ ಫೆಲೊಷಿಪ್ ನೀಡುತ್ತಿದೆ.

ವಂತಿಕಾ, ಮಹಿಳಾ ಫಿಡೆ ಮಾಸ್ಟರ್‌ಗಳಾದ (ಡಬ್ಲ್ಯುಎಫ್‌ಎಂ) ಶುಭಿ ಗುಪ್ತಾ, ಚಾರ್ವಿ ಜೊತೆ ಉದಯೋನ್ಮುಖ ಆಟಗಾರ್ತಿಯರಾದ ಸರಯೂ ವೆಲ್ಪುಲ ಮತ್ತು ಸಾಹಿತಿ ವರ್ಷಿಣಿ ಅವರು ಈ ಫೆಲೊಷಿಪ್‌ಗೆ ಆಯ್ಕೆಯಾಗಿದ್ದಾರೆ

ಈ ಆಟಗಾರ್ತಿಯರ ತರಬೇತಿ, ಟೂರ್ನಿಯ ಪಾಲ್ಗೊಳ್ಳುವಿಕೆ, ಅವರಿಗೆ ಅಂತರರಾಷ್ಟ್ರೀಯ ಟೂರ್ನಿಗಳ ಅನುಭವ ಪಡೆಯಲು ತಗಲುವ ಒಂದು ವರ್ಷದ ಖರ್ಚುವೆಚ್ಚಗಳನ್ನು ಈ ಫೆಲೋಷಿಪ್ ಅಡಿ ಭರಿಸಲಾಗುತ್ತದೆ.

ವಂತಿಕಾ ಈ ಹಿಂದೆ 2023ರಲ್ಲೂ ಈ ಫೆಲೋಷಿಪ್‌ಗೆ ಆಯ್ಕೆಯಾಗಿದ್ದರು. 2024ರ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನ ಗೆದ್ದ ಮಹಿಳಾ ತಂಡದಲ್ಲಿದ್ದರು. ತಮ್ಮ ಬೋರ್ಡ್‌ನ ಉತ್ತಮ ಪ್ರದರ್ಶನಕ್ಕಾಗಿ ವೈಯಕ್ತಿಕ ಚಿನ್ನವನ್ನೂ ಗೆದ್ದಿದ್ದರು.